
ಸ್ವಾತಂತ್ರ್ಯ
ಹೋರಾಟಗಾರ

ವಿದ್ಯಾಧರ ಗುರೂಜಿ

ಲೇಖಕರು ಎ.ಕೆ. ರಾಮೇಶ್ವರ





ಸ್ವಾತಂತ್ರ್ಯ ಹೋರಾಟಗಾರ

ವಿದ್ಯಾಧರ ಗುರೂಜಿ

ಸ್ವಾತಂತ್ರ್ಯ ಹೋರಾಟಗಾರ

ವಿದ್ಯಾಧರ ಗುರೂಜಿ

ಲೇಖಕರು

ಎ.ಕೆ. ರಾಮೇಶ್ವರ

ಪ್ರಕಾಶಕರು

ವಿದ್ಯಾಧರ ಗುರೂಜಿ ಅವರ ಜನ್ಮಶತಮಾನೋತ್ಸವ

ಆಚರಣಾ ಸಮಿತಿ

ಗುಲಬರ್ಗಾ

Freedomfighter Vidyadhara Guruji
(Autobiography of Vidyadhara Guruji)

by
A. K. Rameshwar

Published by
Vidyadhara Guruji Birth Centunary Celebration Committee
Gulbarga

FIRST IMPRESSION: 2013

Book size: 1/8 Demy

Paper Used: 80 GSM N.S. Maplitho

PAGES: xvi + 272 + 24 pgs. Photo = 312

PRICE: Rs. 250

Page Layout: Sreedhar

PRINTED AT: Shubhodaya Printers, Bangalore

*

ಸ್ವಾತಂತ್ರ್ಯ ಹೋರಾಟಗಾರ ವಿದ್ಯಾಧರ ಗುರೂಜಿ
(ವಿದ್ಯಾಧರ ಗುರೂಜಿ ಜೀವನ ಚರಿತ್ರೆ)

ಲೇಖಕರು
ಎ.ಕೆ.ರಾಮೇಶ್ವರ

ಮೊದಲ ಮುದ್ರಣ: 2013
ಪ್ರಕಾಶಕರು
ವಿದ್ಯಾಧರ ಗುರೂಜಿ ಅವರ ಜನ್ಮಶತಮಾನೋತ್ಸವ ಆಚರಣಾ ಸಮಿತಿ
ಗುಲಬರ್ಗಾ

ಪುಟಗಳು: xvi + 272 + 24 pgs. Photo = 312

ಬೆಲೆ: ರೂ. 250

ಪುಸ್ತಕ ವಿನ್ಯಾಸ: ಆರ್. ಎಸ್. ಶ್ರೀಧರ್

ಮುದ್ರಣ: ಶುಭೋದಯ ಪ್ರಿಂಟರ್ಸ್
ಚಾಮರಾಜಪೇಟೆ
ಬೆಂಗಳೂರು



ಸಮರ್ಪಣೆ



ಸ್ವತಂತ್ರತಾಕೇಲಿಯೇ
ಜೀವನ್ ಭರ್
ಕಿಲ್ ಕಿಲ್ ಜಲೆ
ಉನ್ ಕ್ರಾಂತಿಕಾರಿಯೋಂ
ಔರ್
ಜನಸೇವಕೊಂಕೊ
ಸಾದರ್ ಸಮರ್ಪಿತ ಹೈ

ಜೋ ರುಕೆ ನಹೀಂ
ಝುಕೆ ನಹೀಂ
ಥಕೆ ನಹೀಂ
ಮಿಟೆ, ಪರ್
ಬಿಕೆ ನಹೀಂ.

ನನ್ನ ಮಾತು

ಇಂದು ನೂರು ವರುಷ ತುಂಬುತ್ತಿರುವ ವಿದ್ಯಾಧರ ಗುರೂಜಿ ಅವರ ಹೋರಾಟದ ಬದುಕು ನಿಜವಾಗಿಯೂ ಪವಾಡ ಸದೃಶ್ಯ. ಅವರು ಹುಟ್ಟಿ ಬೆಳೆದುದು ಗುರುಮಠಕಲ್ಲ ಗ್ರಾಮದ ಅತ್ಯಂತ ಬಡ ಕುಟುಂಬದಲ್ಲಿ. ಅಭಾವವೇ ಅವರ ಮನೆಯ ಅಪೂರ್ವ ಆಸ್ತಿ. ಇವರು ಶಾಲೆಯಲ್ಲಿ ಓದುತ್ತಿದ್ದಾಗಲೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಗಲ್ಲುಶಿಕ್ಷೆಗೆ ಗುರಿಯಾದ ಭಗತ್‌ಸಿಂಗ್, ಸುಖದೇವ, ರಾಜಗುರು ಅವರ ಕರ್ಣಕಠೋರವಾದ ಮರಣ ವಾರ್ತೆ ಇವರ ಹೃದಯವನ್ನೇ ಹಿಂಡಿತು. ಮನಸ್ಸನ್ನು ಕಲಕಿತು. ಮನೆಯಲ್ಲಿದ್ದ ತಂದೆ-ತಾಯಿ, ತಮ್ಮ-ತಂಗಿಯರನ್ನು ಮರೆತರು. ಮುಂದೆ ಓದಬೇಕೆಂಬ ಹವ್ಯಾಸವನ್ನು ಕಳೆದುಕೊಂಡರು. ದೇಶ ಸ್ವಾತಂತ್ರ್ಯದ ಸ್ಪಷ್ಟ ನಕ್ಷೆ ಅವರ ಕಣ್ಣಮುಂದೆ ಕಟ್ಟಿದಂತಾಯಿತು. ಹೋರಾಟದ ಹಾದಿ ತನ್ನ ಸುರುಳಿ ಬಿಚ್ಚಿಕೊಂಡಿತು. ಈ ಹೋರಾಟದ ಹಾದಿಯಲ್ಲಿ ಇವರಿಗೆ ದೊರೆತವರು ಉತ್ತರ ಪ್ರದೇಶದ 'ಆರ್ಯ ಸಮಾಜ'ದ ಪ್ರಚಾರಕರು, ಪ್ರಸಾರಕರು, ಅಪ್ಪಟ ಸನ್ಯಾಸಿಗಳಾದ ಸ್ವಾಮಿ ರಾಮಗಿರಿಜಿ ಅಂತಹ ಅಪರೂಪದ ಗುರುಗಳು. ವರದಾ ಸೇವಾಗ್ರಾಮ ಆಶ್ರಮದಲ್ಲಿ ಪೂಜ್ಯ ಬಾಪೂಜಿ ಅವರ ದರ್ಶನ, ಯಾದಗಿರಿ ರೈಲು ನಿಲ್ದಾಣದಲ್ಲಿ ಕಂಡು ಕೈ ಬೀಸಿದವರು ಶೂರ ಸುಭಾಶ್ಚಂದ್ರಬೋಸರು. ಹೀಗೆ ಒಂದರ ಹಿಂದೊಂದು ಬಂದು ಸೇರಿಕೊಂಡ ಘಟನೆಗಳು ಜಾಳಿಗೆಯಂತೆ ಹೆಣೆದುಕೊಂಡವು. ವಿದ್ಯಾಧರ ಗುರೂಜಿ ಅವರಿಗೆ ಅಡಿಯ ಮುಂದಡಿ ಇಟ್ಟು ಹೋರಾಟದ ಕಣಕ್ಕಿಳಿದು ಬರಲು ಕೈ ಮಾಡಿ ಕರೆದವು.

ಭಾಯಿ ಬನ್ಸಿಲಾಲರ ಪರಿಚಯವಾಗುತ್ತಲೇ ಅವರ ಉದಾರ ಅಂತಃಕರಣದೊಂದಿಗೆ ಪರಿಶುದ್ಧ ಹಿಂದಿಭಾಷೆಯಲ್ಲಿ ಅಭ್ಯಾಸ ಮಾಡಲು ಲಾಹೋರಕ್ಕೆ ತೆರಳಿದರು. ಅಲ್ಲಿ ನಾಲ್ಕೈದು ವರುಷ ಇದ್ದು ಅಭ್ಯಾಸ ಮಾಡುತ್ತಿರುವಾಗಲೇ ಇವರಿಗೆ ಲಕ್ಷ್ಮಿನಾರಾಯಣ ಗುಪ್ತ, ಪಂಡಿತ ನರೇಂದ್ರಜಿ, ಶ್ರೀಮತಿ ಸುಶೀಲಾದೇವಿ ವಿದ್ಯಾಲಂಕೃತ, ವಿನಾಯಕರಾವ ವಿದ್ಯಾಲಂಕಾರ ಮುಂತಾದ ಘಟಾನುಘಟಿ ಸ್ವಾತಂತ್ರ್ಯ ಹೋರಾಟಗಾರರ ಪರಿಚಯ, ಆತ್ಮೀಯತೆಯೂ ಬೆಳೆಯಿತು. ಅಷ್ಟರಲ್ಲಿ 'ಭಾರತ ಬಿಟ್ಟು ತೊಲಗಿ', 'ಚಲೇಜಾವ ಚಳವಳಿ', 'ಮಾಡು ಇಲ್ಲವೆ ಮಡಿ' ಘೋಷಣೆಗಳಿಂದ ನಭೋ ಮಂಡಳವೇ ಬಿರಿಯಿತು. ಹೋರಾಟದ ಕಣದಲ್ಲಿದ್ದ ವಿದ್ಯಾಧರ ಗುರೂಜಿ ಅವರನ್ನು ಸಿಕ್ಕಲ್ಲಿ ಹಿಡಿಯಬೇಕೆಂಬ ವಾರೆಂಟ್ ಹೊರ ಬಂದಿತು. ವಿದ್ಯಾಧರ ಗುರೂಜಿ ಅವರು ಧೈರ್ಯಗೆಡಲಿಲ್ಲ. ಜೈಲಿಗೂ ಹೆದರಲಿಲ್ಲ. ಬಯಲಿಗೂ ಹೆದರಲಿಲ್ಲ. ಯಾರ ಕೈಗೂ ಸಿಗಲಿಲ್ಲ. ಸೋಲಾಪುರಕ್ಕೆ ಆಗಮಿಸಿ ಅಸಂಖ್ಯಾತ ನಿರಾಶ್ರಿತರ ರಕ್ಷಣೆಗೆ ನಿಂತರು. "ನಿರ್ವಾಸಿ ಸೇವಾಸಮಿತಿ" ರಚಿಸಿ ಹೈದರಾಬಾದ್ ಸಂಸ್ಥಾನದಿಂದ ಆತ್ಮರಕ್ಷಣೆಗಾಗಿ ಓಡಿಬಂದ ಜನರ ಕಣ್ಣೀರು ಒರೆಸಿದರು.

ದೇಶ ಸ್ವಾತಂತ್ರ್ಯ, ಹೈದರಾಬಾದ್ ಸಂಸ್ಥಾನ ವಿಮೋಚನೆ ಆಗುತ್ತಲೇ ಯಾದಗಿರಿಗೆ ಆಗಮಿಸಿ ಮಕ್ಕಳ ಶಿಕ್ಷಣಕ್ಕಾಗಿ ಶಾಲೆಗಳನ್ನು ಪ್ರಾರಂಭಿಸಿದರು. ಹಾಸ್ಟೆಲ್‌ಗಳನ್ನು ತೆರೆದರು. ಹಿಂದುಳಿದ ಬಡಮಕ್ಕಳ, ಕೂಲಿಕಾರ್ಮಿಕರ ಅಲೆಮಾರಿ ಜನಾಂಗದ ಮಕ್ಕಳಿಗೆ ಪ್ರಸಾದ ನಿಲಯ ತೆರೆದು ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿದರು.

ಅಪ್ಪಟ ಕಾಂಗ್ರೆಸ್ ನೇತಾರರಾದ ವಿದ್ಯಾಧರ ಗುರೂಜಿ ಅವರು ದೇಶದಲ್ಲಿ ಭ್ರಷ್ಟಾಚಾರ ಬೃಹದಾಕಾರವಾಗಿ ಬೆಳೆಯುತ್ತಿರುವಾಗ 'ಲೋಕ ಸೇವಕ ಸಂಘ'ದ ಧುರೀಣರಾದ ವಿಶ್ವನಾಥರೆಡ್ಡಿ ಮುದ್ನಾಳ ಅವರನ್ನು ಕೂಡಿಕೊಂಡು ಭ್ರಷ್ಟಾಚಾರ ತೊಲಗಿಸಲು ಚಳುವಳಿಯನ್ನು ಹೂಡಿದರು. 'ಅಸ್ಪೃಶ್ಯತಾ ನಿವಾರಣೆ'ಗೆ ಟೊಂಕ ಕಟ್ಟಿ ನಿಂತರು. ಅಸ್ಪೃಶ್ಯತೆ ದೇಶಕ್ಕೆ ಅಂಟಿದ ಕಪ್ಪು ಚುಕ್ಕೆ. ಈ ಕಳಂಕ ಅಳಕಿಸಲು ತಾವೇ ಹರಿಜನ ಮಹಿಳೆಯನ್ನು ಮದುವೆ ಮಾಡಿಕೊಂಡು ಮನುಕುಲದ ಮಂದಾರವೆಂದು ಕೀರ್ತಿ ಭಾಜನರಾದರು.

ಗುರುಮಠಕಲ್ಲ ಮತಕ್ಷೇತ್ರದಿಂದ ಸ್ವತಂತ್ರ ಪಾರ್ಟಿಯ ಅಭ್ಯರ್ಥಿಯಾಗಿ ಚುನಾವಣೆಯ ಕಣಕ್ಕಿಳಿದು ಪ್ರಚಂಡ ಮತದಿಂದ ಆರಿಸಿ ಬಂದರು. ತನು

ಶುದ್ಧ ಮನಶುದ್ಧ ಭಾವ ಶುದ್ಧಿಯಿಂದ ಜನಸೇವೆ ಮಾಡಿ ಕೃತಾರ್ಥರಾದರು. 'ವಿಧಾನ ಪರಿಷತ್ತು ಸದಸ್ಯರಾಗಿ', 'ಹಿಂದುಳಿದ ಆಯೋಗ್ಯದ ಸದಸ್ಯರಾಗಿ', 'ಕಿರಿಯ ಅಭಿಯಂತ ಆಯ್ಕೆ ಸಮಿತಿ ಸದಸ್ಯರಾಗಿ' ಇವರು ಮಾಡಿದ ಸೇವೆ, ಅಮೋಘ, ಅಪರೂಪ, ಆದರ್ಶ.

ಇವರು ರಾಜಕೀಯದಲ್ಲಿದ್ದರೂ ರಾಜಕೀಯ ಹೊಲಸು ಇವರಿಗೆ ತಗುಲಲಿಲ್ಲ. ಇವರು ಸಂಸಾರದಲ್ಲಿದ್ದರೂ ಪ್ರಪಂಚದ ವ್ಯಾಮೋಹ ಇವರಲ್ಲಿ ಹುಟ್ಟಲಿಲ್ಲ. ಇವರು ಕೆಸರಿನಲ್ಲಿದ್ದ ಕಮಲದಂತೆ ಅರಳಿ ಜನಮನವನ್ನು ಸೆಳೆದರು; ಅದರಂತೆ ಬಾಳಿ ಬದುಕಿದರು. ಗುರೂಜಿ ಅವರು ಹೇಳುತ್ತಾರೆ, 'ಅಭಾವ', 'ಅಸುರಕ್ಷೆ' ಅರಣ್ಯದಲ್ಲಿ ಅರಳಿದ 'ಅಲರು' ನನ್ನ ಜೀವನ." ನಿಜ ಅಕ್ಷರಶಃ ಸತ್ಯ.

ವಿದ್ಯಾಧರ ಗುರೂಜಿ ಅವರು ಹುಟ್ಟಿ ಬಂದುದು 'ಅಭಾವ'ದಲ್ಲಿ. ಅವರು ಹೋರಾಟ ಮಾಡಿದ್ದು 'ಅಸುರಕ್ಷತೆ'ಯಲ್ಲಿ. ಅವರಿಗೆ ಯಾರ ಆಶ್ರಯವೂ ಇಲ್ಲ. ಇಡೀ ಜೀವನ 'ಅರಣ್ಯ'ದಲ್ಲಿ ಅರಳಿದ 'ಅಲರು' ಹೂವಿನಂತೆ ಇವರ ಜೀವನ. ಪಾವನ, ಪವಿತ್ರ. ಇಂದು ಇವರಿಗೆ ನೂರು ವರುಷ ತುಂಬುತ್ತವೆ. ಇನ್ನೂ ಅವರು ನೂರು ವರ್ಷ ಬಾಳಲಿ, ಬದುಕಲಿ ಪರಮಾತ್ಮ ಅವರಿಗೆ ಇನ್ನೂ ಆಯುರಾರೋಗ್ಯ ಭಾಗ್ಯ ಕರುಣಿಸಿ ಕಾಪಾಡಲಿ ಎಂದು ಪರಮ ದಯಾಳು ಪರಮಾತ್ಮನಲ್ಲಿ ಪ್ರಾರ್ಥಿಸುವೆ.

ಶ್ರೀ ವಿದ್ಯಾಧರ ಗುರೂಜಿ ಅವರ ಜೀವನ ಚರಿತ್ರೆ ಬರೆಯುವಾಗ ತಂದೆಯ ಬಗ್ಗೆ ಇದ್ದ ಉಪಯುಕ್ತ ಮಾಹಿತಿ ನೀಡಿ ಬರೆಯಲು ಚಾಲನೆ ಕೊಟ್ಟು ಸಹಕರಿಸಿದ ಅವರ ಹಿರಿಯ ಪುತ್ರ ಶ್ರೀ ಅಶೋಕ ಗುರೂಜಿ ಅವರಿಗೂ, ನೀವು ಗುರೂಜಿ ಅವರ ಬಗ್ಗೆ ಬರೆದ ಚರಿತ್ರೆ ಅದು ಕೇವಲ ಚರಿತ್ರೆಯಾಗಬಾರದು ಚಾರಿತ್ರೆಯಾಗಬೇಕೆಂದು ಹೇಳಿ ಪ್ರೋತಾಹಿಸಿದ ಶ್ರೀ ನಾಗಣ್ಣ ಗಣಜಲಖೇಡ ಅವರಿಗೂ ತುಂಬ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ ಮಾಡಿರಿ ಎಂದು ಹುರಿದುಂಬಿಸಿದ ಡಾ. ಸೈಯ್ಯದ್ ಮುಜಬುರ್ ರಹಿಮಾನ ಅವರಿಗೂ, ಗುರೂಜಿ ಅವರ ಬಗ್ಗೆ ತುಂಬ ಅಭಿಮಾನ ಇಟ್ಟುಕೊಂಡಿದ್ದ ಶ್ರೀ ವಿದ್ಯಾಕುಮಾರ ತಿವಾರಿ ಅವರಿಗೂ, ಕಾರ್ಯಕ್ರಮದುದ್ದಕ್ಕೂ ಓಡಾಡಿ ಸಹಕರಿಸಿದ ಶ್ರೀ ಅರಸಯ್ಯ ಅವರಿಗೂ,

ಬಹಳ ಶಾಂತಿಯಿಂದ, ತಾಳ್ಮೆಯಿಂದ ಮುದ್ರಣಕಾರ್ಯದಲ್ಲಿ ತೊಡಗಿ ಒಳಹೊರಗಿನ ವಿನ್ಯಾಸಕ್ಕಾಗಿ ಶ್ರಮಿಸಿದ ಶ್ರೀ ಆರ್.ಎಸ್. ಶ್ರೀಧರ್ ಅವರಿಗೂ ಸಕಾಲಕ್ಕೆ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಶುಭೋದಯ ಮುದ್ರಣದ ಮಾಲಕರಿಗೂ ಅನಂತಾನಂತ ವಂದನೆಗಳನ್ನು ಹೇಳಲು ಸಂತೋಷ ವೆನಿಸುತ್ತದೆ. ಈ ಪುಸ್ತಕ ಪ್ರೀತಿಯಿಂದ ಬರ ಮಾಡಿಕೊಳ್ಳುತ್ತಾರೆಂದು ನನ್ನ ಗೆಳೆಯರಿಗೂ, ಗುರೂಜಿ ಅವರ ಅಭಿಮಾನಿಗಳಿಗೂ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಸಂಕ್ರಮಣ **ಎ.ಕೆ. ರಾಮೇಶ್ವರ**
14 ಜನವರಿ 2013 ಕಲಬುರ್ಗಿ

ಶ್ರೀ ವಿದ್ಯಾಧರ ಗುರೂಜಿ ಅವರ ಶತಮಾನೋತ್ಸವ ಹಾಗೂ ತುಲಾಭಾರ ಆಚರಣಾ ಸಮಿತಿ

ಸಾನಿಧ್ಯ

ಶ್ರೀ ಮ.ನಿ.ಪ್ರ. ಶಾಂತವೀರ ಮುರುಘರಾಜೇಂದ್ರ ಸ್ವಾಮಿಗಳು

ಖಾಸಾಮಠ, ಗುರುಮಿಠಕಲ್

ಅಧ್ಯಕ್ಷರು

ಪೂಜ್ಯ ಶ್ರೀ ಬಸವರಾಜಪ್ಪ ಅಪ್ಪಾ

ಶ್ರೀ ಶರಣಬಸವೇಶ್ವರ ಸಂಸ್ಥಾನ, ಗುಲಬರ್ಗಾ

ಉಪಾಧ್ಯಕ್ಷರು

ಶ್ರೀ ಶ್ಯಾಮ ಅ. ಜೋಶಿ, ಉದ್ಯಮಿಗಳು, ಗುಲಬರ್ಗಾ

ಶ್ರೀ ಡಾ. ಸೈಯ್ಯದ್ ಮಜಬುರ್ ರಹಮಾನ

ಕಾರ್ಯದರ್ಶಿಗಳು, ಲೋಕ ಸಾಹಿತ್ಯ ಮಂಚ, ಗುಲಬರ್ಗಾ

ಶ್ರೀ ಶ್ರೀನಿವಾಸ ತಿವಾರಿ, ಬೆಂಗಳೂರು

ಶ್ರೀ ಕಿಶನ ಮಟಮಾರಿ, ಗುಲಬರ್ಗಾ

ಶ್ರೀ ಡಿ.ವ್ಹಿ. ಪಾಟೀಲ, ಗುಲಬರ್ಗಾ

ಶ್ರೀ ಕೃಷ್ಣರಾಜು, ಬೆಂಗಳೂರು

ಕಾರ್ಯದರ್ಶಿಗಳು

ಶ್ರೀ ವಿದ್ಯಾಕುಮಾರ ತಿವಾರಿ, ಗುಲಬರ್ಗಾ

ಸಹ ಕಾರ್ಯದರ್ಶಿಗಳು

ಶ್ರೀ ಅಶೋಕ ಗುರೂಜಿ, ಗುಲಬರ್ಗಾ

ಶ್ರೀ ಜೆ.ಎಚ್. ಮಿಶ್ರಾ, ಗುಲಬರ್ಗಾ

ಕೋಶಾಧ್ಯಕ್ಷರು

ಶ್ರೀ ನಾಗಣ್ಣ ಗಣಜಲಖೇಡ

ನಿವೃತ್ತ ನೌಕರರ ಸಂಘ, ಗುಲಬರ್ಗಾ

ಕಾರ್ಯಾಧ್ಯಕ್ಷರು

ಶ್ರೀ ಎ.ಕೆ. ರಾಮೇಶ್ವರ

ಸದಸ್ಯರು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಸ್ವಾಗತ ಸಮಿತಿ ಸದಸ್ಯರು

ಶ್ರೀ ಬಸವರಾಜ ಭೀಮಳ್ಳಿ ಗುಲಬರ್ಗಾ
ಶ್ರೀ ರಾಮಗೋಪಾಲ ಮಾಲು
ಶ್ರೀ ಶಂಕರಲಾಲ ಗಿಲಡಾ
ಶ್ರೀ ಶ್ರೀಕಾಂತ ಲಾಹೋಟಿ
ಶ್ರೀ ಲಿಂಗರಾಜಪ್ಪ ಅಪ್ಪಾ
ಶ್ರೀ ಚನ್ನಾರೆಡ್ಡಿ
ಡಾ. ಸಂಪಂತಕುಮಾರ ಲೋಯಾ
ಶ್ರೀ ಶಿವಶರಣಪ್ಪಾ ಸೀರಿ
ಡಾ. ಮುರಳಿಧರ ರಾವ್
ಡಾ. ಸೂರ್ಯಕಾಂತ ಜಿ. ಪಾಟೀಲ
ಶ್ರೀ ಬಿ.ಜಿ. ಪಾಟೀಲ
ಶ್ರೀ ರಾಘವೇಂದ್ರ ಮೈಲಾಪುರ
ಶ್ರೀ ಪ್ರೇಮಚಂದ ಬಿ. ಮಾಲು
ಶ್ರೀ ಓಂಪ್ರಕಾಶ ಭಟ್ಟಡ
ಶ್ರೀ ಆನಂದ ಸಿ. ಶಹಾ
ಶ್ರೀ ಅರುಣಕುಮಾರ ಓಝಾ

ಶ್ರೀ ಎಚ್.ಎಸ್. ವೆಂಕಟೇಶ
ಶ್ರೀ ಟಿ.ಎಚ್. ಬಿರಾದಾರ
ಶ್ರೀ ಎ. ವಾಯ್. ನಾಯಕ
ಶ್ರೀ ಶರದ ರಾಂಪುರೆ
ಶ್ರೀ ವಿನಯ ಶಾಹ
ಶ್ರೀ ವೆಂಕಟರೆಡ್ಡಿ ಮುದ್ನಾಳ ಯಾದಗಿರ
ಶ್ರೀ ಅಮರನಾಥ ಮಡಿವಾಳ
ಶ್ರೀ ಕೃಷ್ಣಸ್ವಾಮಿ, ಚೆನ್ನೈ
ಶ್ರೀ ವಿಜಯಕುಮಾರ ನಾಗನಹಳ್ಳಿ
ಶ್ರೀ ಸುಭಾಷ ಪವಾರ
ಶ್ರೀ ಬಸವರಾಜ ದಿಗ್ಗಾಂವ್
ಶ್ರೀ ಸಂಜೀವ ಪಾಟೀಲ
ಶ್ರೀ ಮಚ್ಛೇಂದ್ರನಾಥ ಮೂಲಗೆ
ಶ್ರೀ ಬಾಲಕೃಷ್ಣಪ್ಪಾ ಮಡಿವಾಳ
ಶ್ರೀ ಜಗದೀಶ ಮಡಿವಾಳ
ಶ್ರೀ ವಿಜಯ ದೇಶಮುಖ

ಆಯೋಜನ ಸಮಿತಿ ಸದಸ್ಯರು

ಶ್ರೀ ಚನ್ನಬಸಪ್ಪಾ ಯರಗೋಳ
ಶ್ರೀ ಅರಸಯ್ಯ
ಶ್ರೀಮತಿ ಕಮಲಾದೇವಿ ಶುಕ್ಲಾ
ಶ್ರೀ ಸುಭಾಷ ಅಷ್ಟಿಕರ್
ಶ್ರೀ ಗೋವಿಂದ ಆರ್ಯ
ಶ್ರೀ ಎಸ್.ವಿ. ಮಾಹುರಕರ್
ಶ್ರೀ ಮಲ್ಲಣ್ಣ ಮಡಿವಾಳ
ಶ್ರೀ ವಿಪುಲ ಮಿಶ್ರಾ
ಶ್ರೀ ಸೂರಜ ತಿವಾರಿ
ಶ್ರೀ ಅಮರನಾಥ ಪಾಟೀಲ
ಶ್ರೀ ಮಹದೇವಯ್ಯಾ ಕರದಳ್ಳಿ
ಶ್ರೀ ಆನಂದ ಶೆರಿಕಾರ
ಶ್ರೀಮತಿ ಶಾಂತಾ ಜಹಾಗಿರದಾರ
ಶ್ರೀ ಸಂಗಣ್ಣಾ ಇಜೇರಿ
ಶ್ರೀ ರಾಜಶೇಖರ (ಫೈನ್ ಆರ್ಟ್)
ಶ್ರೀ ಬಿ.ಎಂ. ಕನಹಳ್ಳಿ
ಶ್ರೀ ಮಹಾದೇವಪ್ಪಾ ಕೆ.
ಶ್ರೀ ನರಸಿಂಗ ಠಾಕೂರ
ಶ್ರೀ ರಮೇಶ ಬಲದವಾ
ಶ್ರೀ ರಮೇಶ ಜೋಶಿ
ಶ್ರೀ ಅಯ್ಯಣ್ಣ ಹುಂಡೇಕಾರ
ಶ್ರೀ ಬಾಬುರಾವ ಮಡಿವಾಳ
ಶ್ರೀ ಗುರುಬಸಯ್ಯಾ
ಶ್ರೀ ರಮೇಶ ಯಾಕಾಪೂರ
ಡಾ॥ ಇಂದಿರಾ ಶಕ್ತಿ
ಶ್ರೀ ಕಲ್ಯಾಣರಾವ ಅಂಬಲಗಿ
ಶ್ರೀ ದತ್ತು ಫಡ್ನಿಸ್
ಶ್ರೀ ಪೂಣೆಕರ್
ಶ್ರೀ ಹೇಮಚಂದ್ರ ಪಾಟೀಲ
ಡಾ. ಧರ್ಮವೀರ ಸೋಪಣ್ಣ
ಶ್ರೀ ಸಾಹೇಬಗೌಡ
ಶ್ರೀ ಮಹಾದೇವ ಜಮಾದಾರ
ಶ್ರೀ ಪೂನಮಚಂದ ವರ್ಮಾ
ಶ್ರೀ ನರಸಿಂಗಪ್ಪಾ ರಾಯಚೂರು
ಶ್ರೀ ಎ. ಪ್ರಕಾಶ
ಶ್ರೀಮತಿ ನಂದರಾಣಿ ಹಮಿಲಪುರಕರ್
ಶ್ರೀಮತಿ ಶ್ಯಾಮಲಾ ಕುಲಕರ್ಣಿ
ಶ್ರೀ ರಮೇಶ ಮಡಿವಾಳ
ಶ್ರೀ ರುದ್ರಮುನಿ ಪುರಾಣಿಕ
ಡಾ. ಎ. ದಯಾನಂದ
ಶ್ರೀ ಟಿ. ದೇವೇಂದ್ರ
ಶ್ರೀ ನಾಗಶೆಟ್ಟಿ ಗಾರಂಪಳ್ಳಿ
ಶ್ರೀ ಧರ್ಮಣ್ಣಾ ದೊಡ್ಡಮನಿ
ಶ್ರೀ ಎಸ್.ವಿ. ಮಠಪತಿ
ಡಾ. ಪರಿಮಳಾ ಅಂಬೆಕರ್
ಶ್ರೀಮತಿ ನರಸಮ್ಮಾ ಖಡಕೆ
ಡಾ. ಚಿಮಕೋಡ
ಡಾ. ವೀರಣ್ಣಾ
ಶ್ರೀ ಉಮೇಶ ಶೆಟ್ಟಿ
ಶ್ರೀಮತಿ ಕೃಷ್ಣಾವೇಣಿ
ಶ್ರೀ ಮಾಣಿಕಪ್ಪಾ (ಡಿ.ಎಸ್.ಪಿ.)
ಶ್ರೀ ಚಂದ್ರಶೇಖರ
ಶ್ರೀ ಸಲಾಮ
ಶ್ರೀ ಗಣೇಶ ಕೀಲಿ
ಶ್ರೀ ಎಂ.ಕೆ. ಬೀರನೂರ
ಶ್ರೀ ಚಂದ್ರಶೇಖರ ಅವಂಟಿ
ಶ್ರೀ ಮನಮೋಹನ ಪಂಚಾಳ
ಶ್ರೀ ಕೈಲಾಸನಾಥ ದೀಕ್ಷಿತ
ಶ್ರೀ ಶಿವಪುತ್ರಪ್ಪಾ ಮಡಿವಾಳ
ಶ್ರೀ ಎಂ.ಬಿ. ಅಂಬಲಗಿ
ಶ್ರೀ ಹನುಮಂತ ಗುಡ್ಡಾ
ಶ್ರೀ ಶಿವರಾಜ ಪಾಟೀಲ ಮಹಾಗಾಂವ
ಶ್ರೀ ಕಲ್ಯಾಣಿ
ಶ್ರೀ ಹನುಮಂತ ಕಂದಳ್ಳಿ
ಶ್ರೀ ಜಗದೇವ ಗುತ್ತೇದಾರ
ಶ್ರೀ ದೇವೇಂದ್ರಪ್ಪಾ ಚಿಂಚೋಳಿ
ಡಾ. ಪ್ರತಾಪ ತಿವಾರಿ

ಅನುಕ್ರಮಣಿಕೆ

ಜಗತ್ತು ಕಂಡ
ಅಲ್ಲೋಲ, ಕಲ್ಲೋಲ

ಇಪ್ಪತ್ತನೆಯ ಶತಮಾನ ಕುಹು ಕುಹು ಎಂದು ಕಾಲಿಟ್ಟು ಮುಂಬರುವ ಅವಸರದಲ್ಲಿತ್ತು. ಇಡೀ ಜಗತ್ತು ಹಳೆಯ ಜಾಡ್ಯವನ್ನು ಹಿಮ್ಮೆಟ್ಟಿ ಹೊಸ ಆಯಾಮಕ್ಕೆ ಕೈ ಮೈ ಚಾಚುತ್ತಲಿತ್ತು. ಜಗತ್ತಿನ ಬಲಿಷ್ಟ ರಾಷ್ಟ್ರಗಳು ನಾ ಮುಂದು ತಾ ಮುಂದು ಎಂದು ಸ್ಪರ್ಧೆಗಿಟ್ಟಂತೆ ಏರಾಟದಲ್ಲಿದ್ದವು. ಯಾರಲ್ಲಿಯೂ ಸಹನೆ ಇಲ್ಲ, ತಾಳ್ಮೆ ಇಲ್ಲ, ಸಮಾಧಾನವಿಲ್ಲ; ಶಾಂತಿ ಇಲ್ಲ, ಈರ್ಷೆ, ಅಸೂಯೆ ಹೊಟ್ಟೆಕಿಚ್ಚು ಮತ್ಸರಗಳ ದಳ್ಳುರಿಯಿಂದ ಜಗತ್ತಿನ ಮೊದಲನೆಯ ಮಹಾಯುದ್ಧದ ರಣ ಕಹಳೆ ವಿಶ್ವಪಟಲದ ಮೇಲೆ ಮೊಳಗುತ್ತಲಿತ್ತು. ಎಲ್ಲಿ ನೋಡಿದಡಲ್ಲಿ ಹಾಹಾಕಾರ, ಕೋಲಾಹಲ, ಹಾಲಾಹಲ. ಇದೇ ಸಮಯಕ್ಕೆ ಪ್ಲೇಗು ಬೇನೆ ತನ್ನ ಅಟ್ಟಹಾಸ ನಡೆಸಿ ಮನುಕುಲವನ್ನು ಸದ್ದುಗದ್ದಲವಿಲ್ಲದೆ ನುಂಗುತ್ತಲಿತ್ತು. ಈ ಮಹಾಮಾರಿ ಪ್ಲೇಗು. ಇನ್‌ಫ್ಲುಯೆಂಜಾ ಬೇನೆಗಳು ಅಂಜಿಕೆಯಿಂದ ಮನುಕುಲವು ನಲಗುತ್ತಲಿತ್ತು. ಸಾಲದ್ದಕ್ಕೆ ಬರಗಾಲ ತಲೆದೋರಿ ದನ, ಕರು, ಪಶು ಪಕ್ಷಿ, ಬಡಬಗ್ಗರು ಹೇಳ ಹೆಸರಿಲ್ಲದಷ್ಟು ಸಾಯುತ್ತಿದ್ದರು. ಇಂತಹ ಭೀಕರ, ಭಯಾನಕ



ಸ್ಥಿತಿಯಲ್ಲಿ ಯಾವ ರಾಷ್ಟ್ರಗಳು ಉಳಿಯುತ್ತವೆಯೋ, ಇನ್ನಾವ ರಾಷ್ಟ್ರಗಳು ಅಳಿಯುತ್ತಿವೆಯೋ ಹೇಳುವವರ ಕೈಮೀರಿ ಹೋಗಿತ್ತು; ಪರಿಸ್ಥಿತಿ.

ಇದೇ ಸಮಯಕ್ಕೆ ಬ್ರಿಟೀಷರು ಭಾರತದಲ್ಲಿ ನಮ್ಮದು ಸೂರ್ಯ ಮುಳುಗದ ಸಾಮ್ರಾಜ್ಯವೆಂದು ಕೂಗಿ ಕೂಗಿ ಹೇಳುತ್ತಿದ್ದರು. ಇದು ಏಸು ಸ್ವಾಮಿ ನಮಗೆ ಕೊಟ್ಟ ವರದಾನವೆಂದು ಭಿಮ್ಮನೇ ಬೀಗುತ್ತಿದ್ದರು. ಬಂಗಾಲ ವಿಭಜನೆಯಾಗಿ ಭಾರತೀಯರ ಕೆಂಗಣ್ಣು ತೆರೆದಿತ್ತು. ಭಾರತೀಯರು ದೇಶ ಸ್ವಾತಂತ್ರ್ಯಕ್ಕೆ ಹೋರಾಡುತ್ತಿದ್ದರು. "ಸ್ವಾತಂತ್ರ್ಯ ನನ್ನ ಜನ್ಮ ಸಿದ್ಧ ಹಕ್ಕು" ಎಂಬ ಲೋಕಮಾನ್ಯ ತಿಲಕರ ಸಿಂಹಧ್ವನಿಗೆ ದನಿಗೂಡಿಸಿತ್ತು. ಲಾಲ, ಪಾಲ, ಬಾಲ ಹೆಸರುಗಳು ವಿಶ್ವಪಟಲದ ಮೇಲೆ ರಾರಾಜಿಸುತ್ತಿದ್ದವು. ಬ್ರಿಟಿಷರ ಕೈಗೊಂಬೆಯಂತಿದ್ದ ಹೈದರಾಬಾದ್ ಸಂಸ್ಥಾನದ ಏಳನೆಯ ನಿಜಾಮ ಆಸಫ ಜಹ ಮನೆತನದ ಮೀರ ಉಸ್ಮಾನ ಅಲಿಖಾನ ಅದೇ ಆಗ ನೈಜಾಂ ಪ್ರಾಂತದ ರಾಜ್ಯಭಾರ ವಹಿಸಿಕೊಂಡು ಸಂಸ್ಥಾನವನ್ನು ಇನ್ನೂ ಭದ್ರಗೊಳಿಸುವ ಎತ್ತುಗಡೆಯಲ್ಲಿದ್ದ. ಆಗ 1914 ಇಸವಿ ಡಿಸೆಂಬರ್ 30 ರಂದು, ಮಡಿವಾಳ ಸಮಾಜದಲ್ಲಿ ಭಿಕ್ಷಪ್ಪನೆಂಬ ಬಾಲಕ ಗುರುಮಠಕಲ್ಲ ಗ್ರಾಮದ ಒಂದು ಬಡ ಕುಟುಂಬದಲ್ಲಿ ಹುಟ್ಟಿಬಂದ. ತನ್ನ ಚಿಕ್ಕ ವಯಸ್ಸಿನಲ್ಲಿ ಶೂರ ಸುಭಾಶ್ಚಂದ್ರ ಬೋಸರನ್ನು ಕಾಣುತ್ತಲೇ 'ವಂದೇ ಮಾತರಂ' ಘೋಷಣೆಯೊಂದಿಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದ. ಇವರೊಡನೆ ಸುಮಾರು ನಲ್ವತ್ತು ಜನ ಯುವಕರು 'ವಂದೇ ಮಾತರಂ' ಘೋಷಣೆಯೊಂದಿಗೆ ಅಡಿಯ ಮುಂದಡಿ ಇಟ್ಟು ದೇಶ ಸ್ವಾತಂತ್ರ್ಯ ಪಡೆಯುವುದರೊಂದಿಗೆ ಹೈದರಾಬಾದ ಸಂಸ್ಥಾನ ವಿಮೋಚನೆಗೊಳ್ಳುವತನಕ ಒಂದೇ ಉಸಿರಿನೊಂದಿಗೆ ಹೋರಾಟ ಮಾಡುತ್ತ ಸ್ವಾತಂತ್ರ್ಯ ಹೋರಾಟಗಾರರ ಮಧ್ಯ ಧ್ರುವ ತಾರೆಯಂತೆ ಮಿನುಗುತ್ತ ಬಂದ ಮೃದು ಮನಸ್ಸಿನ ಉಕ್ಕಿನ ಹೃದಯದ ವ್ಯಕ್ತಿ **ವಿದ್ಯಾಧರ ಗುರೂಜಿಯವರು.** ವಿದ್ಯಾಧರ ಗುರೂಜಿಯವರ ಹೋರಾಟದ ಜೀವನ, ಬದುಕು ಸಿಂಹ ಸದೃಶ್ಯವಾಗಿ ಮೂಡಿಬಂದಿದೆ. ಈ ಕೃತಿ ಹೇಳಿ ಬರೆಸಿದ್ದಲ್ಲ. ಬರೆಯಬೇಕೆಂದು ಬರೆದುದೂ ಅಲ್ಲ. ಅವರ ವೀರಗಾಥೆ, ಪ್ರಾಮಾಣಿಕ ಹೋರಾಟದ ಹೆಜ್ಜೆ ಪುಟಿ ಚಂಡಿನಂತೆ ಪುಟಿಯುತ್ತ ಖೇದಿಗೆ ಬಣ್ಣದ ಹಾಳೆಯ ಮೇಲೆ ತನ್ನಷ್ಟಕ್ಕೆ ತಾನೇ ಇಳಿದು ಬಂದಿದೆ. ಬನ್ನಿ ಓದಿ ನೋಡೋಣ ಸಿಂಹಸದೃಶ್ಯ ಶತಾಯು ಪುಣ್ಯ ಪುರುಷನ ಸಾಹಸದ ವೀರ ಗೀತೆ, ರಸಭರಿತ ಕಥೆ.

ಪುಣ್ಯ ಪುರುಷನ ಜನನ, ಬಾಲ್ಯ, ಶಿಕ್ಷಣ

ಹಿಂದಿನ ಕಲಬುರ್ಗಿ ಜಿಲ್ಲೆಯ ಯಾದಗಿರಿ ತಾಲೂಕಿನ ಒಂದು ಹೆಸರು ವಾಸಿಯಾದ ದೊಡ್ಡ ಹೋಬಳಿ, ಗುರುಮಠಕಲ್ಲ. ಗುರುಮಠಕಲ್ಲ ಒಂದು ಐತಿಹಾಸಿಕ ಸ್ಥಳ. ಸಾಂಸ್ಕೃತಿಕ ಕೇಂದ್ರ ಧರ್ಮದ ನೆಲೆವೀಡು. ಒಕ್ಕಲುತನಕ್ಕೆ ಹೇಳಿ ಮಾಡಿಸಿದ ಫಲವತ್ತಾದ ಪ್ರದೇಶ. ಈ ಪ್ರದೇಶ ಕೈಗಾರಿಕೆಯಲ್ಲಿಯೂ ತುಂಬ ಹೆಸರು ಪಡೆದಿತ್ತು. ಇಲ್ಲಿಯ ಜನರ ಮುಖ್ಯ ಉದ್ಯೋಗ ಒಕ್ಕಲುತನ ವಾದರೂ ನೇಕಾರಿಕೆಯಲ್ಲಿ ಅಗ್ರಸ್ತಾನ ಪಡೆದಿತ್ತು. ಬಹಳ ಜನರು ನೇಕಾರಿಕೆಯಿಂದಲೇ ತಮ್ಮ ಬಾಳು ಸಾಗಿಸುತ್ತಿದ್ದರು.

ಗುರುಮಠಕಲ್ಲ ಗ್ರಾಮದಲ್ಲಿ ಮಡಿವಾಳ ಮನೆತನವೂ ಒಂದು. ಪೆದ್ದಣ್ಣ–ಶಿವಮ್ಮ ಈ ಮನೆತನದ ಹಿರಿಯರು. ಈ ದಂಪತಿಗಳಿಗೆ ಸಾಯಣ್ಣ ಎಂಬ ಒಬ್ಬ ಮಗ. ಅವನ ಹೆಂಡತಿ ಭೀಮಕ್ಕ. ಸಾಯಣ್ಣ–ಭೀಮಕ್ಕ ದಂಪತಿಗಳಿಗೆ ಚೊಚಲ ಮಗು, ಮರ್ಚಲ ಕೂಸು ಹುಟ್ಟಿದ ತಕ್ಷಣವೇ ಸಾವನ್ನಪುತ್ತಿದ್ದವು. ಮೂರನೆ ಮಗು



ಹುಟ್ಟಿದ ಕೂಡಲೇ ಈ ಮಗುವಿಗೆ ಭಿಕ್ಷಪ್ಪನೆಂದು ಹೆಸರಿಟ್ಟರು. ಈ ಮಕ್ಕಳು ಶಿವನ ಕೃಪೆಯಿಂದ ಹುಟ್ಟಿ ಬಂದರು, ಅವನ ಹೆಸರು ಹೇಳಿ ಭಿಕ್ಷಾಟನೆಯಿಂದಲಾದರೂ ಬದುಕಲಿ ಎಂದು ನಾಲ್ಕನೆಯ ಮಗುವಿಗೆ ಸಣ್ಣ ಭಿಕ್ಷಪ್ಪನೆಂದು ಹೆಸರಿಟ್ಟರು. ಒಬ್ಬ ಮಗಳು ಬಂದೆಮ್ಮ. ಹೀಗೆ ಈ ದಂಪತಿಗಳಿಗೆ ಮೂರು ಜನ ಮಕ್ಕಳು. ಹಿರೇ ಮಗು ಭಿಕ್ಷಪ್ಪನಿಗೆ ತಮ್ಮ ವಂಶಜ್ಯೋತಿ ಬಾಳಕುಡಿ ಎಂದು ಅಜ್ಜ ಪೆದ್ದಣ್ಣ, ಅಜ್ಜಿ ಶಿವಮ್ಮ ತುಂಬ ಅಕ್ಕರೆಯಿಂದ ಬೆಳೆಸಿದರು. ಮನೆಯಲ್ಲಿ ಕಿತ್ತು ತಿನ್ನುವ ಬಡತನವಿದ್ದರೂ ಮಗನನ್ನು ಎತ್ತಿ ಆಡಿಸುವ ಹೃದಯ ಶ್ರೀಮಂತಿಕೆ ಅವರಲ್ಲಿ ಅಪಾರವಾಗಿತ್ತು. ಹೀಗೆ ಪೆದ್ದಣ್ಣ ಶಿವಮ್ಮ ಅಜ್ಜ ಅಜ್ಜಿಯರ ಅಕ್ಕರೆಯಲ್ಲಿ ಬಾಲಕ ಭಿಕ್ಷಪ್ಪ ಬಿದಿಗೆಯ ಚಂದ್ರನಂತೆ ಬೆಳೆದು ದೊಡ್ಡವನಾಗತೊಡಗಿದ. ಮಗನ ಬೆಳವಣಿಗೆಯನ್ನು ಕಂಡು ಸಾಯಣ್ಣ ಭೀಮಕ್ಕ ಸಂತೋಷ ಸಾಗರದಲ್ಲಿ ತೇಲಿದರು.

ಭಿಕ್ಷಪ್ಪ ದೊಡ್ಡವನಾಗುತ್ತಲೇ ಸಾಯಣ್ಣ, ಭೀಮಕ್ಕ ದಂಪತಿಗಳು ಭಿಕ್ಷಪ್ಪನನ್ನು ಊರ ಶಾಲೆಗೆ ಕಳಿಸಿದರು. ಮಗುವಿನ ಮಾತೃಭಾಷೆ ತೆಲಗು. ಊರಲ್ಲಿ ಜನರು ಆಡುವ ಭಾಷೆ ಕನ್ನಡ. ಊರಲ್ಲಿ ಶಾಲೆ ನಡೆದದ್ದು ಉರ್ದು ಮಾಧ್ಯದಲ್ಲಿ. ಒಂದಕ್ಕೊಂದು ತಾಳ ಮೇಳ ಇಲ್ಲದ ಪರಿಸ್ಥಿತಿಯಲ್ಲಿ ಬಾಲಕ ಭಿಕ್ಷಪ್ಪ ಉರ್ದು ಶಾಲೆಗೆ ಹೆಸರು ದಾಖಲೆಗೊಳಿಸಿ ಎಲ್ಲ ಗೆಳೆಯರೊಡನೆ ಶಾಲೆಗೆ ಹೋಗಲು ಪ್ರಾರಂಭಿಸಿದ. ಶಾಲೆಯಲ್ಲಿ ಐಚ್ಛಿಕ ವಿಷಯ ಮರಾಠಿಯಾಗಿತ್ತು. ಬಾಲಕ ಭಿಕ್ಷಪ್ಪ ಮಾತೃಭಾಷೆಗೂ, ಊರಲ್ಲಿ ಜನರು ಆಡುವ ಭಾಷೆಗೂ ಸಂಬಂಧವಿಲ್ಲದ ಉರ್ದು ಮರಾಠಿಯಲ್ಲಿ ಅಕ್ಷರಾಭ್ಯಾಸ ಪ್ರಾರಂಭ ಮಾಡಿದ.

ಗ್ರಾಮದಲ್ಲಿ ತೆಲಗು ಭಾಷೆಯ ಜನರೊಡನೆ ಕನ್ನಡ ಮಾತನಾಡುವ ಜನರೂ ಅಧಿಕ ಪ್ರಮಾಣದಲ್ಲಿದ್ದರು. ಭಿಕ್ಷಪ್ಪ ತನ್ನ ಮಾತೃಭಾಷೆ ತೆಲಗು ಇದ್ದರೂ ಜನರಾಡುವ ಭಾಷೆ ಕನ್ನಡವೂ ಬರುತ್ತಿತ್ತು. ಈಗ ಉರ್ದು ಐಚ್ಛಿಕ ವಿಷಯ ಮರಾಠಿಯಲ್ಲಿ ಶಾಲೆ ಕಲಿಯಬೇಕಾಯಿತು. ಇದರಿಂದ ಮಕ್ಕಳಿಗೆ ಶಿಕ್ಷಣ ಅಷ್ಟು ಫಲವತ್ತಾಗಿ ಒಲಿದು ಬರಲಿಲ್ಲ. ಶಾಲೆಯೆಂದರೆ ಎಲ್ಲ ಮಕ್ಕಳೂ ಜಿಗುಪ್ಸೆ ತಾಳುತ್ತಿದ್ದರು.

ಬಾಲಕ ಭಿಕ್ಷಪ್ಪ ತನ್ನ ಓರಿಗೆಯ ಗೆಳೆಯರೊಡನೆ ಊರ ಸಮೀಪದಲ್ಲಿದ್ದ ಗಿಡ ಗಂಟೆಗಳಲ್ಲಿ ಆಡಲು ಆತುರ ಪಡುತ್ತಿದ್ದ. ಓಡುವುದೆಂದರೆ ತುಂಬ ಇಷ್ಟ ಪಡುತ್ತಿದ್ದ. ಹೀಗೆ ದಿನವಿಡಿ ಆಟ-ಓಟಗಳೊಡನೆ ದೊಡ್ಡ ದೊಡ್ಡ ಮರಗಳನ್ನು ಹತ್ತಿ ಇಳಿಯುತ್ತಿದ್ದ. ನೀಲದ ಹಣ್ಣಿನ ಗಿಡ ಏರಿ ನೀರಲು ಹಣ್ಣು ಜಾಡಿಸುತ್ತ ಕೆಳಗೆ ಉದರಿಸುತ್ತಲಿದ್ದ. ಕ್ಯಾರಾಳ ಹಣ್ಣಿನ ಗಿಡದ ಕ್ಯಾರಿ ಹಣ್ಣು ಕಾರಿಕಾಯಿ, ಬಾರಿಹಣ್ಣು, ಇಣಜಿ ಹಣ್ಣುಗಳ ಮರವನ್ನು ಹುಡುಕಿ ಹಣ್ಣು ಹರಿದು ತಾನೂ ತಿಂದು ತನ್ನ ಗೆಳೆಯರಿಗೂ ಕೊಟ್ಟು ಆನಂದ ಪಡುತ್ತಿದ್ದ. ಆದರೂ ಮನೆಯಲ್ಲಿ ತಾಯಿ-ತಂದೆ ಅಜ್ಜಿ ಶಿವಮ್ಮನ ಒತ್ತಾಯದ ಮೇರೆಗೆ ಶಾಲೆಗೆ ಹೋಗಿ ಶಾಲೆಯಲ್ಲಿಯೂ ಓದುವ ಹವ್ಯಾಸ ಬೆಳೆಸಿಕೊಳ್ಳ ತೊಡಗಿದ. ಪಠ್ಯ ಪುಸ್ತಕದೊಡನೆ ಆಟ-ಓಟದ ಕಡೆಗೂ ಲಕ್ಷ್ಯ ಕೊಟ್ಟ ಬಾಲಕ ಭಿಕ್ಷಪ್ಪ ಕ್ರಮೇಣ ಓದು-ಬರಹ ಲೆಕ್ಕ ಪತ್ರಗಳ ಕಡೆಗೂ ವಿಶೇಷ ಗಮನ ಹರಿಸಿದ. ಬೆಳೆದು ದೊಡ್ಡವನಾದಂತೆ ನನ್ನ ದೇಶ, ನನ್ನ ಜನ ಎಂಬ ಅಭಿಮಾನವೂ ಮೂಡತೊಡಗಿತು. ದೇಶಾಭಿಮಾನ ಕುದುರ ತೊಡಗಿತು. ಪಠ್ಯ ಪುಸ್ತಕಗಳ ಜೊತೆಗೆ ವರ್ತಮಾನ ಪತ್ರಗಳನ್ನು ಓದಿ ದೇಶದಲ್ಲಿ ನಡೆದ ವಿಚಾರಗಳನ್ನು ತಿಳಿದುಕೊಂಡು ಗೆಳೆಯರೊಡನೆ ಚರ್ಚಿಸುತ್ತಿದ್ದ. ಊರ ಜನರಿಗೂ ಹೇಳುತ್ತಿದ್ದ. ಇದರಿಂದ ಬಾಲಕ ಭಿಕ್ಷಪ್ಪನಿಗೆ ಅತಿ ಚಿಕ್ಕ ವಯಸ್ಸಿನಲ್ಲಿ ದೇಶ ನನ್ನದು ಜನ ನನ್ನದು. ಜನ ಸುಖಿಗಳಾಗಿರಬೇಕು ಎಂದು ಹಂಬಲಿಸತೊಡಗಿದ. ಜನಗಳ ಏಳಿಗೆಗಾಗಿ ಏನನ್ನೂ ತ್ಯಾಗಮಾಡಲು ಮನಸ್ಸು ಒಳಗೊಳಗೆ ಗಟ್ಟಿಯಾಗತೊಡಗಿತು. ಹಾಗೆಯೇ ಗೆಳೆಯರೊಡನೆ ಓದು-ಬರಹ ಆಟ-ಓಟ ಊಟ ನಡೆದೇ ಇತ್ತು.

ನಿಜಾಂ ಪ್ರಾಂತದಲ್ಲಿದ್ದ ಈ ಬಾಲಕರಿಗೆ ಭಾರತದೇಶದ ಸ್ವಾತಂತ್ರ್ಯ ಚುಳವಳಿಯ ಬಿರುಗಾಳಿಯ ಬಿಸಿ ಅಷ್ಟೊಂದು ಸ್ಪರ್ಷವಾಗುತ್ತಿದ್ದಿಲ್ಲ. ಈ ವಿಷಯ ಭಿಕ್ಷಪ್ಪ ಮತ್ತು ಅವರ ಸಂಗಡಿಗರು ಪತ್ರಿಕೆಗಳನ್ನು ಓದಿ ತಿಳಿದುಕೊಳ್ಳಲು ಹಂಬಲಿಸುತ್ತಿದ್ದರು; ಹವಣಿಸುತ್ತಿದ್ದರು.


ಇಂತಹ ಉಗ್ರ ವಿಷಯಗಳ ದಿನಚರಿ ತಮ್ಮ ಪ್ರಾಂತದ ಜನರಿಗೆ ತಿಳಿಯಬಾರದೆಂದು ನಿಜಾಂ ಸರಕಾರ ಕಟ್ಟುನಿಟ್ಟಿನ ಕಾವಲವೂ ಇಟ್ಟಿತ್ತು. ಇಂತಹ ವಿಷಯಗಳ ಮನವರಿಕೆ ಮಾಡಿಕೊಡಲು 'ಕರಡೋಗಿರಿ' ಇಲಾಖೆ

ಒಂದು ಮೊದಲೇ ತೆರೆದುಕೊಂಡಿತ್ತು. ಈ ಇಲಾಖೆಯ ಅಧಿಕಾರಿಗಳು ಹಿಂದುಗಳು ಇದ್ದರು ಅವರು ತುಂಬಾ ನಿಷ್ಠಾವಂತರಾಗಿದ್ದರು. ಉಪ್ಪು ಹಾಕಿದವರನ್ನು ಮುಪ್ಪಿನ ತನಕ ನೆನೆಯಬೇಕು ಎಂಬ ಮನೋಧರ್ಮದ ಅಧಿಕಾರಿಗಳು ಆಗ ಅಧಿಕ ಪ್ರಮಾಣದಲ್ಲಿದ್ದರು. ಅದರಿಂದ ನಿಜಾಂ ಸರಕಾರ ತುಂಬಾ ಭದ್ರವಾಗಿತ್ತು. ಇಂತಹ ಭದ್ರವಾದ ಕೋಟೆಯನ್ನು ಒಡೆದು ವಿಷಯ ಸಂಗ್ರಹಿಸುವ ಯುವಕರೂ ಆಗೇನು ಕಡಿಮೆ ಇರಲಿಲ್ಲ. ಅವರಲ್ಲಿ ಗುರುಮಠಕಲ್ಲ ಗ್ರಾಮದ ಯುವಕ ಭಿಕ್ಷಪ್ಪ.

ಭಿಕ್ಷಪ್ಪನಿಗೆ ಮೇಲಿಂದ ಮೇಲೆ ಜ್ವರಗಳು ಬಂದು ಪೀಡಿಸುತ್ತಿದ್ದವು. ಸಾಲದ್ದಕ್ಕೆ ಭೀಕರ ಬರಗಾಲ. ಎಷ್ಟೇ ಜ್ವರ ಬರಲಿ ದವಾಖಾನೆಗೆ ಹೋಗಿ ಔಷಧ ತೆಗೆದುಕೊಳ್ಳುತ್ತಿದ್ದಿಲ್ಲ. ಸೂಜಿ ಮಾಡಿಸಿಕೊಳ್ಳುತ್ತಿದ್ದಿಲ್ಲ. ಜ್ವರ ಬಂದರೆ, ನೆಗಡಿ ತಲೆದೋರಿದರೆ ಒಂದೆರಡು ದಿನ ಉಪವಾಸವಿದ್ದು ಖಾಯಿಲೆ ವಾಸಿ ಮಾಡಿಕೊಳ್ಳುತ್ತಿದ್ದ. ಇಂದು ಅವರಿಗೆ ನೂರು ತುಂಬುತ್ತಲಿದೆ. ಅವರಿಗೆ ಖಾಯಿಲೆ ಬಂದರೆ ಅದಕ್ಕೆ ಉಪವಾಸವೇ ಮದ್ದು. ಅದರಿಂದ ವಿದ್ಯಾಧರ ಗುರೂಜಿಯುವರು ಇಂದು ನೂರು ತುಂಬುತ್ತಿದ್ದರೂ ತುಂಬ ಆರೋಗ್ಯವಂತರಾಗಿದ್ದಾರೆ.

ವಿದ್ಯಾಧರ ಗುರೂಜಿಯವರ ಗೆಳೆಯ ಶ್ರೀ ಭೀಮಾಚಾರ್ಯ ಮಠದ ಅವರು ಹೇಳುತ್ತಾರೆ "ವಿದ್ಯಾಧರ ಗುರೂಜಿ ನನ್ನ ಸಹಪಾಠಿ. ಏಳನೆಯ ಇಯತ್ತೆಯವರೆಗೆ ಇಬ್ಬರೂ ಕೂಡಿಯೇ ಓದಿದೆವು. ಚಿಕ್ಕವನಿದ್ದಾಗ ಈತ ಯಾವಾಗಲೂ ನಮ್ಮ ಮನೆಯಲ್ಲಿಯೇ ಇರುತ್ತಿದ್ದ. ನಮ್ಮ ತಾಯಿ ಈತನನ್ನ ಬಹಳ ಪ್ರೀತಿಸುತ್ತಿದ್ದಳು. ಒಮ್ಮೊಮ್ಮೆ ರಾತ್ರಿ ಸಹ ನಮ್ಮ ಮನೆಯಲ್ಲಿಯೇ ಇರುತ್ತಿದ್ದ. ಈತನ ಹೆಸರು ಭಿಕ್ಷಪ್ಪ. ಅಗಸರ ಮನೆತನ. ಜಾತಿ ಭೇದ ಇಲ್ಲದ ಕಾಲ ಅದು" ಎಂದು ಹೃದಯ ತುಂಬಿ ಹೇಳುತ್ತಾರೆ.

ಹೀಗೆ ಗೆಳೆಯರೊಡನೆ ಸರಸವಾಡುತ್ತ ಬಡತನದೊಡನೆ ಸೆಣಸಾಟ ಮಾಡುತ್ತ ಏಳನೆಯ ತರಗತಿಯವರೆಗೆ ಓದಿ ಅಭ್ಯಾಸ ಮಾಡಿದ. ಆಗ ಇವರಿಗೆ ಇನ್ನೂ ಮುಖದ ಮೇಲೆ ಮೀಸೆಗಳು ಬಂದಿರಲಿಲ್ಲ. 1931ನೇ ಇಸವಿ. ಆಗ ವಿದ್ಯಾಧರ ಗುರೂಜಿಯವರಿಗೆ 16 ಇಲ್ಲವೆ 17ನೇ ವರ್ಷ. ಪತ್ರಿಕೆಗಳಲ್ಲಿ ಓದಿದ, "ಭಗತ್ ಸಿಂಗ್, ರಾಜಗುರು, ಸುಖದೇವ ಅವರನ್ನು



ಹುತಾತ್ಮ ಭಗತ್‌ಸಿಂಗ್

ಗಲ್ಲಿಗೇರಿಸಿದರು" ಎಂಬ ಕರ್ಣ ಕಠೋರ ವಾರ್ತೆ ಕೇಳಿ ತರುಣ ಭಿಕ್ಷಪ್ಪನ ಹೃದಯ ಹಿಂಡಿದಂತಾಯಿತು. ಪಿತ್ತ ನೆತ್ತಿಗೇರಿತು. ಹಸಿದ ಹುಲಿಯಂತೆ ಕೆರಳಿ ನಿಂತ. ಸಿಂಹದಂತೆ "ವಂದೇ ಮಾತರಂ" ಎಂದು ಗರ್ಜಿಸಿದ. ಬ್ರಿಟಿಷರು ಈ ಹೇಯಕೃತ್ಯದ ಎದುರು ಬಲವಾದ ಪ್ರತಿಭಟನೆ ಮಾಡಲು ತಮ್ಮ ತರುಣ ಗೆಳೆಯರನ್ನು ಒಂದುಗೂಡಿಸಿದ. ಗುರುಮಠಕಲ್ಲದಲ್ಲಿ ಒಂದು ದೊಡ್ಡ ಮೆರವಣಿಗೆಯನ್ನು ಏರ್ಪಡಿಸಿ ಬ್ರಿಟಿಷರ ವಿರುದ್ಧ ಘೋಷಣೆಗಳನ್ನು ಕೂಗುತ್ತ ಮೆರವಣಿಗೆ ತೆಗೆದರು. ಈ ಸುದ್ದಿ ಕಾಳ್ಗಿಚ್ಚಿನಂತೆ ಹರಡಿತು.

ಹೈದರಾಬಾದ್ ನಿಜಾಂರವರೆಗೂ ಹೋಯಿತು. ನಿಜಾಮ ಸರಕಾರ ಇವರನ್ನು ಶಾಲೆಯಿಂದ ಕಡ್ಡಾಯವಾಗಿ ತೆಗೆದುಹಾಕಲು ಆಜ್ಞೆ ವಿಧಿಸಿತು. ಇವರನ್ನು ಶಾಲೆಯಿಂದ ತೆಗೆದುಹಾಕಿ ಯಾವ ಶಾಲೆಯಲ್ಲಿಯೂ ಪ್ರವೇಶ ಕೊಡಬಾರದೆಂದೆ ಉಲ್ಲೇಖಿಸಿತ್ತು. ಇದನ್ನು ತಿಳಿದುಕೊಂಡು ಭಿಕ್ಷಪ್ಪ ಶೆಡ್ಡು ಹೊಡೆದು, ಮುಡ್ಡಿ ಬಾರಿಸಿ ಶಾಲೆಯಿಂದ ಹೊರಬಂದರು.

ಕೂಡಲೇ ನಿಜಾಂ ಸರಕಾರ ಶಾಲಾ ವಿದ್ಯಾರ್ಥಿ ಭಿಕ್ಷಪ್ಪನನ್ನು ಬಂಧಿಸಿ ನ್ಯಾಯಾಲಯದ ಎದುರು ನಿಲ್ಲಿಸಿತು. ನಾಬಾಲಕ ಹುಡುಗರೆಂದು ನ್ಯಾಯಾಧೀಶರು ಸಹಾನುಭೂತಿಯಿಂದ ಬಿಡುಗಡೆ ಮಾಡಿದರು.

ಶಾಲೆಯಿಂದ ತೆಗೆದು ಹಾಕಿದ ಈ ಭಿಕ್ಷಪ್ಪ ಬೇರೆ ಶಾಲೆಯನ್ನು ಹುಡುಕಿಕೊಂಡು ಹೋಗದೆ ಊರು ಊರುಗಳಿಗೆ ಅಲೆದಾಡಿ ದೇಶ ಸ್ವಾತಂತ್ರ್ಯದ ಕಹಳೆಯನ್ನು ಊದ ತೊಡಗಿದ. ತನ್ನನ್ನು ವಿನಾಕಾರಣ ಶಾಲೆಯಿಂದ ಹೊರಹಾಕಿದ ಹೈದರಾಬಾದ್ ನಿಜಾಮರನ್ನು ಮನೆಗೆ ಕಳಿಸಬೇಕೆಂದು ಪಣ ತೊಟ್ಟ. ನಿಜಾಮ ಸರಕಾರ ವಿರುದ್ಧ ಎಲ್ಲಿಯೇ ಚಳುವಳಿ, ಹರತಾಳ, ಅಭಿಯಾನ ನಡೆಯಲಿ, ಮೆರವಣಿಗೆ, ಮುಷ್ಕರ, ಸಮಾವೇಶ, ಜಾಥಾ ನಡೆಯಲಿ ಅಲ್ಲಿ ಹಸಿದ ಹುಲಿ, ಮರಿಸಿಂಹ ಭಿಕ್ಷಪ್ಪ ಹಾಜರಿರುತ್ತಿದ್ದ.

ಇವರನ್ನು ಅಕ್ಕರೆಯಿಂದ ಜೋಪಾನ ಮಾಡಿದ ಅಜ್ಜಿ ಶಿವಮ್ಮನ ನೆನಪು, ತಂದೆ ಸಾಯಣ್ಣ ತಾಯಿ ಭೀಮಕ್ಕನ ನೆನಪು, ತನ್ನ ಹಿಂದ ಭೂತದಂತೆ ಬೆನ್ನು ಹತ್ತಿದ ಬಡತನ ಯಾವುದನ್ನು ಲೆಕ್ಕಿಸದೆ ದೇಶ ಸ್ವಾತಂತ್ರ್ಯದ ದೀಕ್ಷೆ ತೊಟ್ಟು ಸಮಾಜವನ್ನು ಎಚ್ಚರಿಸುವ ಕೆಲಸದಲ್ಲಿ ತೊಡಗಿದ. ಭಿಕ್ಷಪ್ಪನ ಹಿಂದೆ ಹಿಂಡುಗಟ್ಟಲೆ ಯುವಕರ ತಂಡ ಇದ್ದೇ ಇರುತ್ತಿತ್ತು. ಈ ಸಮೂಹದ ನೇತಾರ ವಿದ್ಯಾಧರ ಗುರೂಜಿ.

ವಶಿಷ್ಟ ಕುಲೋತ್ಪನ್ನ ಪುತ್ರ ವಿದ್ಯಾಧರ ಗುರೂಜಿ

ಕಾಲಮಾನ ಪರಿಸ್ಥಿತಿಗನುಸರಿಸಿ ಹಿಂದುಗಳು ಒಂದಾಗುವ ಪ್ರಸಂಗ ಬಹಳ ಅವಶ್ಯವಿತ್ತು. ಈ ಸಂಘಟನೆಗೆ 'ಆರ್ಯಸಮಾಜ'ವು ತನ್ನನ್ನು ತಾನು ತೊಡಗಿಸಿಕೊಂಡಿತು. ಮಧ್ಯಭಾರತದ ಹರಿದ್ವಾರದ ಆರ್ಯಸಮಾಜದ ಧುರೀಣರು, ಅಪ್ಪಟ ದೇಶಾಭಿಮಾನಿಗಳು, ಶಿಸ್ತಿನ ಸಿಪಾಯಿ ಗಳು ಆದ ಶ್ರೀ ಸ್ವಾಮಿ ರಾಮಗಿರಿಜಿ ಅವರು ಆರ್ಯಸಮಾಜದ ರೂಪು-ರೇಷೆಗಳನ್ನು ಜನರಿಗೆ ತಿಳಿಸಿ ಮನದಟ್ಟು ಮಾಡಿಕೊಡುತ್ತ ಗುಲಬರ್ಗಾ ಜಿಲ್ಲೆಯ ಯಾದಗಿರಿ ತಾಲೂಕಿನ ಗುರುಮಠಕಲ್ಲ ಗ್ರಾಮಕ್ಕೆ ಆಗಮಿಸಿದ್ದರು.

ಸ್ವಾಮಿ ರಾಮಗಿರಿಜಿ ಅವರು ಆಗ ಜನರು ಅನುಭವಿಸುತ್ತಿದ್ದ ಅನಕ್ಷರತೆ, ಅಸಮಾನತೆ, ಮೂಢನಂಬಿಕೆ, ಅಸ್ಪೃಶ್ಯತೆ, ಅನ್ಯಾಯ, ಅತ್ಯಾಚಾರಗಳ ಸೂಡು ಕಟ್ಟಿ ಅವುಗಳನ್ನು ಸುಡುವುದಕ್ಕಾಗಿಯೇ ಪ್ರಯತ್ನಿಸುತ್ತಿದ್ದರು. ಜಾತಿ, ಮತ, ಪಂಥ, ಸಂಗಡ ಜಂಜಡವಿಲ್ಲದ ದೇವರು ದಿಂಡರುಗಳ ಗೊಂದಲವಿಲ್ಲದ ಸರಳತೆ,



ಸಮಾನತೆ, ಸೌಹಾರ್ದ್ರತೆ ಸಮಪಾತಳಿಯ ಮೇಲೆ ಸಮಾಜ ಕಟ್ಟುವ ಕೆಲಸವೇ ಆರ್ಯಸಮಾಜದ ತತ್ವ. ಈ ತತ್ವ ಪ್ರಣಾಳಿಕೆ ಜನರ ಮುಂದಿಟ್ಟು ಹಿಂದುಗಳ ಸಂಘಟನೆಯಲ್ಲಿ ತೊಡಗಿದ್ದರು ಸ್ವಾಮಿ ರಾಮಗಿರಿಜಿಯವರು.

ವೀರಸನ್ಯಾಸಿ ರಾಮಗಿರಿಜಿಯವರು ಗುರುಮಠಕಲ್ಲ ಗ್ರಾಮಕ್ಕೆ ಆಗಮಿಸಿದ ವಿಷಯ ಘಂಟೆಪ್ಪ ಗೊಂಗಲೆ ಅವರಿಗೆ ತಿಳಿಯಿತು. ಕೂಡಲೇ ತರುಣ ಬಾಲಕ ಭಿಕ್ಷಪ್ಪನನ್ನು ತಮ್ಮ ಸಂಗಡ ಕರೆದುಕೊಂಡುಹೋಗಿ ಈತ ದೋಬಿ ಸಮಾಜದ ತರುಣವೀರ, ಸ್ವಾತಂತ್ರ್ಯ ಪ್ರೇಮಿ ಅಪ್ಪಟ ದೇಶಾಭಿಮಾನಿ ಈತನ ಹೆಸರು ಭಿಕ್ಷಪ್ಪ ಎಂದು ವೀರತಪಸ್ವಿ ಸ್ವಾಮಿ ರಾಮಗಿರಿಜಿ ಅವರಿಗೆ ಪರಿಚಯ ಮಾಡಿಕೊಟ್ಟರು.



ಭಿಕ್ಷಪ್ಪ ಎಂಬ ಬಾಲಕನಿಗೆ
'ವಸಿಷ್ಟ ಕುಲೋತ್ಪನ್ನ ಪುತ್ರ'
ಎಂದು ಹರಸಿ ಹಾರೈಸಿ
'ವಿದ್ಯಾಧರ' ಎಂದು
ನಾಮಕರಣ ಮಾಡಿದ
ದೀಕ್ಷಾಗುರು ಹರಿದ್ವಾರದ
ಶ್ರೀ ಸ್ವಾಮಿ ರಾಮಗಿರಿಜಿ ಅವರು

ಆಗ ಆ ವೀರ ಸನ್ಯಾಸಿ ಸ್ವಾಮಿ ರಾಮಗಿರಿಜಿ ಅವರು "ಈತ ದೋಬಿ ಸಮಾಜದ ಭಿಕ್ಷಪ್ಪನಲ್ಲ **'ವಸಿಷ್ಠ ಕುಲೋತ್ಪನ್ನ ಪುತ್ರ'**" ಎಂದು ಹೃದಯ ತುಂಬಿ ಹೇಳಿ ಭಿಕ್ಷಪ್ಪನನ್ನು ಹತ್ತಿರ ಕರೆದು ಈತ ಮನುಷ್ಯರು ಉಟ್ಟ ಮಲಿನ ಬಟ್ಟೆ ತೊಳೆಯುವ ಅಗಸನಲ್ಲ, ಮಾನವರ ಮಲಿನ ಮನಸ್ಸಿನ ಮೈಲಿಗೆ ತೊಳೆಯುವ ಉದಾತ್ತ ವ್ಯಕ್ತಿ. ವಶಿಷ್ಟ ಕುಲೋತ್ಪನ್ನ ಪುತ್ರ ಎಂದು ಮೈದಡವಿ ಹರಸಿ ಹಾರೈಸಿ ಅತ್ಯಂತ ಪ್ರೀತಿ ವಿಶ್ವಾಸದಿಂದ ಈತನ ಹೆಸರು ಭಿಕ್ಷಪ್ಪನೆಂದು ತಾಯಿ-ತಂದೆಗಳ ಇಟ್ಟ ಹೆಸರು. ಇಂದು ನಾನು ಈತನಿಗೆ **'ವಿದ್ಯಾಧರ'** ಎಂದು ನಾಮಕರಣ ಮಾಡಿದ್ದೇನೆ. ಈ ತರುಣವೀರ ರಾಷ್ಟ್ರಪ್ರೇಮಿ, ಇವನ ಜೀವನ, ಬದುಕು ರಾಷ್ಟ್ರಕ್ಕೆ ಮೀಸಲು ಎಂದು ಹೇಳಿ ಕೂಡಿದ ಜನರ ಮಧ್ಯ ಇನ್ನೊಮ್ಮೆ **'ವಿದ್ಯಾಧರ'** ಎಂದು ಗಟ್ಟಿಯಾಗಿ ಕೂಗಿ ಹೇಳಿದರು.

ಅಂದಿನಿಂದ ಭಿಕ್ಷಪ್ಪ ಎಂಬ ಹೆಸರು ತೊಲಗಿ 'ವಿದ್ಯಾಧರ' ನಾಮದೊಂದಿಗೆ ಆರ್ಯಸಮಾಜ ಸದಸ್ಯನಾಗಿ ಸೇವೆ ಸಲ್ಲಿಸತೊಡಗಿದರು. ಅಂದು ಆರ್ಯಸಮಾಜ ಸಮಸ್ತ ಹಿಂದುಗಳಿಗೆ ಆಧಾರಸ್ತಂಭವಾಗಿತ್ತು. 'ವಿದ್ಯಾಧರ' ಆರ್ಯಸಮಾಜ ತತ್ವಗಳನ್ನು ಒಪ್ಪಿಕೊಂಡು, ಅಪ್ಪಿಕೊಂಡು ಜಾತ್ಯಾತೀತರಾದರು. ನೂತನ ನಾಮಕರಣದಿಂದ 1935ರಲ್ಲಿ ಭಿಕ್ಷಪ್ಪ ವಿದ್ಯಾಧರ ಆದರು. ಸ್ವಾಮಿ ರಾಮಗಿರಿಜಿ ಅವರ ಸೇವೆ ಮಾಡಿಕೊಂಡು ರಾಷ್ಟ್ರಭಕ್ತಿಯನ್ನು ಮೈಗೂಡಿಸಿಕೊಂಡರು. ಅವರೊಡನೆ ಹಿಂದಿ ಭಾಷೆಯಲ್ಲಿ ಮಾತನಾಡುತ್ತ ಹಿಂದಿ ಭಾಷಾಪ್ರೇಮಿಯಾದರು. ಎಲ್ಲರ ಬಾಯಲ್ಲಿ 'ವಿದ್ಯಾಧರ', 'ವಿದ್ಯಾಧರ' ಎಂಬ ಹೆಸರು ಮನೆ ಮಾತಾಯಿತು.

ವಿದ್ಯಾಧರ ನಿಷ್ಠಾವಂತ ಯುವಕರನ್ನು ಸಂಘಟಿಸಿ ಆರ್ಯಸಮಾಜದ ಸದಸ್ಯರನ್ನಾಗಿ ಮಾಡತೊಡಗಿದ. ಸ್ವಾತಂತ್ರ್ಯ ಹೋರಾಟಗಾರರ ಒಂದು ದೊಡ್ಡ ತಂಡವೇ ನಿರ್ಮಾಣವಾಯಿತು. ಎಲ್ಲರೂ ಸ್ವಾಮಿ ರಾಮಗಿರಿಜಿ ಅವರ ನಾಯಕತ್ವದಲ್ಲಿ ಬೆಳೆಯುತ್ತಿರುವಾಗ 1937ರಲ್ಲಿ ನೇತಾಜಿ ಸುಭಾಶ್ಚಂದ್ರ ಬೋಸರು ಮದರಾಸಿನಿಂದ ಮುಂಬಯಿಗೆ ಹೋಗುತ್ತಾರೆಂಬ ಖಚಿತ ಸಂಗತಿಯನ್ನು ಉರ್ದು ದಿನಪತ್ರಿಕೆಯಿಂದ ತಿಳಿದುಕೊಂಡು ದೇಶಭಕ್ತ 'ವಿದ್ಯಾಧರ' ಯಾದಗಿರಿ ರೈಲು ನಿಲ್ದಾಣದಲ್ಲಿ ಅವರನ್ನು ಕಾಣಬೇಕೆಂದು ತನ್ನ ಹುಟ್ಟೂರ ಗುರುಮಠಕಲ್ಲ ಗ್ರಾಮದಿಂದ ತರುಣವೀರರ ತಂಡದೊಡನೆ

ಯಾದಗಿರಿ ರೈಲು ನಿಲ್ದಾಣಕ್ಕೆ ಕಾಲ್ನಡಿಗೆಯಿಂದಲೇ ಬಂದರು. ಅಂದು ರೈಲು ನಿಲ್ದಾಣದಲ್ಲಿ ರೈಲು ನಿಲ್ಲುತ್ತಲೇ "ಸುಭಾಶ್ಚಂದ್ರ ಬೋಸಕಿ ಜೈ" ಎಂಬ ಜಯಘೋಷ ಮುಗಿಲು ಮುಟ್ಟಿತು. ಸುಭಾಶ್ಚಂದ್ರ ಬೋಸರು ರೈಲು ಭೋಗಿಯಿಂದಲೇ ತರುಣ ವೀರರೊಡನೆ ಮಾತುಕತೆ ನಡೆದಾಗ ರೈಲು ಚಲಿಸಿತು. ಸುಭಾಶ್ಚಂದ್ರ ಬೋಸರ ಒಂದು ಕೈಬೀಸಿದರೆ ರೈಲು ನಿಲ್ದಾಣದಲ್ಲಿ ಸಾವಿರಾರು ಕೈಗಳು ಬೀಸತೊಡಗಿದ್ದವು. ಅಂದು ಸುಭಾಶ್ಚಂದ್ರ ಬೋಸರ ಕಿಂಚಿತ್ ದರ್ಶನದಿಂದ ದೊರೆತ ರಾಷ್ಟ್ರಭಕ್ತಿ, ದೇಶಪ್ರೇಮ ಇಂದಿಗೂ ಅವರಲ್ಲಿ ಅಚ್ಚಳಿಯದೆ ಹಚ್ಚ ಹಸಿರಾಗಿಯೇ ಇದೆ. ಇಂದು ಶೂರ ಸುಭಾಶ್ಚಂದ್ರ ಬೋಸರನ್ನು ನೆನೆಯದೆ, ಸ್ಮರಿಸದೆ ಯಾವ ಕೆಲಸಕ್ಕೂ ಮುಂದೆ



ವಿದ್ಯಾಧರ ಗುರೂಜಿ
ಅವರ ಕ್ರಾಂತಿಕಾರಿ
ಮನೋಭಾವನೆಗೆ
ಪ್ರೇರಣೆ ನೀಡಿದ ಶೂರ
ಸುಭಾಶ್ಚಂದ್ರ ಬೋಸ್

ಹೋಗುವುದಿಲ್ಲ. ಅಂತಹ ಅಚಲ ಭಕ್ತಿ, ಶ್ರದ್ಧೆ ವಿಶ್ವಾಸ ವಿದ್ಯಾಧರ ಗುರೂಜಿಯವರದು.

ಹೀಗೆ ಆರ್ಯಸಮಾಜದ ಪ್ರಭಾವಕ್ಕೆ ಒಳಗಾಗಿ ಸ್ವಧರ್ಮ, ಸ್ವಭಾಷೆ, ಸ್ವದೇಶ, ಸ್ವರಾಜ್ಯಕ್ಕಾಗಿ ಹೋರಾಟದ ಬದುಕಿಗೆ ದೀಕ್ಷಾಬದ್ಧನಾದ ವಿದ್ಯಾಧರ. ಹುತಾತ್ಮ ಭಗತ್‌ಸಿಂಗ್ ಸುಖದೇವ ಹಾಗೂ ರಾಜಗುರು ಗಲ್ಲಿಗೇರಿಸಿದ ಆಂಗ್ಲರ ದುಷ್ಕೃತ್ಯದಿಂದ ಸಿಡಿದೆದ್ದ ವಿದ್ಯಾಧರರ ಸಿಟ್ಟು ಇನ್ನೂ ಆರಿರಲಿಲ್ಲ. ಅಷ್ಟರಲ್ಲಿ ಆರ್ಯಸಮಾಜದ ಅಧಿವೇಶನ. 1938 ಡಿಸೆಂಬರ್ 23 ರಂದು ಇಂದಿನ ಮಹಾರಾಷ್ಟ್ರ ಸೋಲಾಪುರದಲ್ಲಿ ಒಂದು ಐತಿಹಾಸಿಕ ಅಧಿವೇಶನ ಸಮಾವೇಶಗೊಂಡಿತು. ಹೈದರಾಬಾದ್ ಸಂಸ್ಥಾನದ ದೊಡ್ಡ ದೊಡ್ಡ ವ್ಯಕ್ತಿಗಳು, ಮಹಾ ಮುತ್ಸದ್ದಿಗಳು ಮಹಾನ್ ನಾಯಕರು ಆಗಮಿಸಿ ಸಮಾವೇಶದಲ್ಲಿ ಉಪಸ್ಥಿತರಿದ್ದರು. ಅವರಲ್ಲಿ ಪ್ರಮುಖರೆಂದರೆ ಪಂಡಿತ ನರೇಂದ್ರ ಜಿ, ಶ್ರೀ ವಿನಾಯಕರಾವ ವಿದ್ಯಾಲಂಕಾರ, ನಾರಾಯಣರಾವ ಪಿತ್ತಿ ಇತ್ಯಾದಿ. ಇವರಲ್ಲದೆ ರಾಷ್ಟ್ರದ ಮಹಾನ್ ನಾಯಕರು ಐತಿಹಾಸಿಕ ಅಧಿವೇಶನದಲ್ಲಿ ಭಾಗವಹಿಸಿದ್ದರು.

ಅವರಲ್ಲಿ ಶ್ರೀ ವೀರಸಾವರಕರ, ಭಾಯಿ ಪರಮಾನಂದಜಿ, ಡಾ॥ ಮುಂಜೆ, ಶ್ರೀ ಸೇನಾಪತಿ ಬಾಪಟ, ಮಹಾತ್ಮ ನಾರಾಯಣ ಸ್ವಾಮಿಜಿ, ಶ್ರೀ ಸ್ವಾಮಿ ಸ್ವತಂತ್ರಾನಂದಜಿ, ಶ್ರೀ ಘನಶ್ಯಾಮಸಿಂಗಜಿ ಗುಪ್ತ, ಸಂಯುಕ್ತ ಪ್ರಾಂತದ ಸ್ಪೀಕರ್ ಸರ್ವಾನಂದಜಿ ಮಹಾರಾಜ, ರಾಜಗುರು ದುರೇಂದ್ರ ಶಾಸ್ತ್ರಿ ಮಹಾತ್ಮಾ ಕುಶಾಲ ಚಂದಜಿ ಮೊದಲಾದವರನ್ನು ನೋಡಿ ವಿದ್ಯಾಧರನಿಗೆ ಹೊಸ ಹುರುಪು, ಹೊಸ ಹುಮ್ಮಸ್ಸು ಮೂಡಿತು. ತಾನು ಆರ್ಯಸಮಾಜದ ಪ್ರತಿನಿಧಿಯಾಗಿ ಬಂದುದ್ದಕ್ಕೂ ಸಾರ್ಥಕವಾಯಿತು ಎಂದು ಆನಂದ ಸಾಗರದಲ್ಲಿ ತೇಲಾಡತೊಡಗಿದ.


ಅಷ್ಟರಲ್ಲಿ ಇನ್ನೊಂದು ಕರ್ಣಕಠೋರವಾದ ರೋಮಾಂಚನಕಾರಿ ಪ್ರಸಂಗ ವಿದ್ಯಾಧರ ಕೇಳಿ ದಂಗಾಗಿ ನಿಂತುಕೊಂಡ. ಅದೇ ದಿನ ಬೀದರ ಕಾರಾಗೃಹದಲ್ಲಿ ಆರ್ಯಸಮಾಜದ ಬಹುದೊಡ್ಡ ನಾಯಕ ಶ್ರೀ ಶಾಮಲಾಲಜಿ ಅವರಿಗೆ ವಿಷ ಕೊಟ್ಟು ಸಾಯಿಸಿದ ಕರಾಳ ಸುದ್ದಿ. ಅವರ ಪಾರ್ಥೀವ ಶರೀರವನ್ನು ಶ್ರೀ ದತ್ತಾತ್ರೇಯ ಪ್ರಸಾದ್ ವಕೀಲರು ಅತ್ಯಂತ ಚಾಣಾಕ್ಷತನ

ದಿಂದ ಅಧಿವೇಶನ ನಡೆದ ಸ್ಥಳಕ್ಕೆ ತಂದಿದ್ದರು. ಈ ಸ್ವಾತಂತ್ರ್ಯ ಹೋರಾಟಗಾರ ಮಹಾನಾಯಕನ ಪಾರ್ಥೀವ ಶರೀರ ನೋಡುತ್ತಲೇ ಅಧಿವೇಶನಕ್ಕೆ ಬಂದ ಪ್ರತಿನಿಧಿಗಳೆಲ್ಲರೂ ಆಕಾಶವೇ ಇಬ್ಭಾಗವಾಗುವಂತೆ ಚೀತ್ಕರಿಸಿದರು. ರೋಷ, ಆವೇಶಗಳಿಗೆ ಮೇರೆಯೇ ಇರಲಿಲ್ಲ. ಅಧಿವೇಶನದುದ್ದಕ್ಕೂ ನಿಜಾಮರ ಅಮಾನುಷ ಆಡಳಿತದ ವಿರುದ್ಧ ಘೋಷಣೆಯ ಸುರಿಮಳೆ ಮುಗಿಲು ಮುಟ್ಟಿತ್ತು. ವಿದ್ಯಾಧರ ಅಂದೇ ನಿಜಾಮರ ನೀರಿಳಿಸುವ ನಿರ್ಣಯ ತೆಗೆದುಕೊಂಡರು.

ಈ ಮೊದಲೇ ವಿದ್ಯಾಧರ ಗುರೂಜಿ ಅವರು 1935ರಲ್ಲಿ ರಾಷ್ಟ್ರಭಾಷಾ ಪ್ರಚಾರ ಸಮಿತಿ ವರದಾ ಸೇವಾಗ್ರಾಮ ಆಶ್ರಮದಲ್ಲಿ ಪೂಜ್ಯ ಮಹಾತ್ಮಾ

ಉದ್ಗೀರ ಪಟ್ಟಣದ ಆರ್ಯ ಸಮಾಜದ ಬಹುದೊಡ್ಡ ನಾಯಕ
ಶ್ರೀ ಶ್ಯಾಮಲಾಲಜಿ ಅವರು

ಇವರಿಗೆ ಬೀದರ್ ಜೈಲಿನಲ್ಲಿ ವಿಷ ಕೊಟ್ಟು ಕೊಲ್ಲಲಾಗಿತ್ತು. ಇವರ ಪಾರ್ಥೀವ ಶರೀರವನ್ನು ಶ್ರೀ ದತ್ತಾತ್ರೆಯ ಪ್ರಸಾದ ವಕೀಲರು ಬಹಳ ಚಾಣಾಕ್ಷತನದಿಂದ ಇವರ ಶವವನ್ನು ಅಧಿವೇಶನ ನಡೆದ ಸೋಲಾಪುರಕ್ಕೆ ತಂದಿದ್ದರು. ಮಹಾನ್ ನಾಯಕ, ಹುತಾತ್ಮ ಶ್ಯಾಮಲಾಲಜಿ ಅವರ ಪಾರ್ಥೀವ ಶರೀರದ ಮೇಲೆ ಪುಷ್ಪಗುಚ್ಛ ಏರಿಸಿ ಸಮಾವೇಶಕ್ಕೆ ಆಗಮಿಸಿದ ಅತಿರಥ ಮಹಾರಥರು ಕಣ್ಣೀರು ಹಾಕಿದರು.





ಆರ್ಯ ಸಮಾಜದ
ಧುರೀಣರಾದ
ಭಾಯಿ ಶ್ರೀ ಬನ್ಸಿಲಾಲರು
1938ರಲ್ಲಿ ವಿದ್ಯಾಧರ ಗುರೂಜಿ
ಅವರನ್ನು ಪರಿಶುದ್ಧ ಹಿಂದಿ
ಭಾಷೆಯನ್ನು ಕಲಿಯಲು
ಇಂದು ಪಾಕಿಸ್ತಾನದಲ್ಲಿರುವ
ಲಾಹೋರಿಗೆ ಕಳಿಸಿಕೊಟ್ಟ
ಮಹನೀಯರು

ಗಾಂಧಿಜಿಯವರನ್ನು ಭೇಟಿಯಾಗಿದ್ದರು. ಆಗ ಗುರೂಜಿಯವರು ಹಿಂದೀ ಭಾಷೆಯಲ್ಲಿ ಮಾತನಾಡುವುದನ್ನು ಕೇಳಿ ಗಾಂಧೀಜಿ ಅವರು "ಗುರೂಜಿ ನೀವು ಇಂದಿನಿಂದ ಹಿಂದಿ ಭಾಷೆಯಲ್ಲಿಯೇ ಮಾತನಾಡಬೇಕೆ"ಂದು ಬಹಳ ಪ್ರೀತಿಯಿಂದ ಹೇಳಿದರು. ಅಂದಿನಿಂದ ಗುರೂಜಿ ಅವರು ತಮ್ಮ ಮಾತೃಭಾಷೆ ತೆಲುಗನ್ನು, ರಾಜ್ಯಭಾಷೆ ಕನ್ನಡವನ್ನು ಕೂಡಿಸಿಕೊಂಡು ಹಿಂದಿ ಭಾಷೆಯಲ್ಲಿ ಮಾತನಾಡುತ್ತ ದೇಶದ ಸ್ವಾತಂತ್ರ್ಯಕ್ಕಾಗಿ ಹೈದರಾಬಾದ್ ವಿಮೋಚನೆಗಾಗಿ ಹೋರಾಡುತ್ತ ಗಣ್ಯರ ಗಮನ ಸೆಳೆದರು.

ಅದು 1936ನೆಯ ಇಸವಿ ವಿದ್ಯಾಧರ ಗುರೂಜಿ ಅವರಿಗೆ ಆಗ ಇಪ್ಪತ್ತೆರಡರ ಯುವಕ. 'ಆರ್ಯಸಮಾಜ'ದ ಪ್ರಣಾಳಿಕೆಯನು ಮೈಗೂಡಿಸಿಕೊಳ್ಳುತ್ತ ಸ್ವಾತಂತ್ರ್ಯ ಹೋರಾಟಗಾರರನ್ನು, ಆರ್ಯ ಸಮಾಜದ ಮೇಧಾವಿಗಳನ್ನು ಸಂಪರ್ಕಿಸುತ್ತ 1935ರಲ್ಲಿ 'ರಾಷ್ಟ್ರಭಾಷಾ ಪ್ರಚಾರ ಸಮಿತಿ' ವರದಾ ಸೇವಾಶ್ರಮಕ್ಕೆ ಹೋಗಿ ಗಾಂಧೀಜಿ ಅವರನ್ನು ಭೇಟಿಯಾದ ಮೇಲೆ ಇನ್ನಷ್ಟು ಇವರಲ್ಲಿ ವೈಚಾರಿಕತೆ ಮೈದಳೆಯಿತು. ತಮ್ಮ ಊರು ಗುರುಮಠಕಲ್ಲ

ಗ್ರಾಮಕ್ಕೆ ಬರುತ್ತಲೇ ಗುರುನಾಥರೆಡ್ಡಿ ಮಾಲಿ ಪಾಟೀಲರೊಡನೆ ಸಮಾಲೋಚಿಸಿ 'ಅಸ್ಪೃಶ್ಯತಾ ನಿವಾರಣ ಅಭಿಯಾನ ಗುರುಮಠಕಲ್ಲ' ಎಂಬ ಒಂದು ಸಂಸ್ಥೆ ಕಟ್ಟಿ 'ಆರ್ಯ ಸಮಾಜ' ಮಂದಿರದಲ್ಲಿ ಅದರ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿದರು.

ಮೊದಲು ಅವರು ಕೈಗೆತ್ತಿಕೊಂಡುದು 'ಅಸ್ಪೃಶ್ಯತಾ ನಿವಾರಣೆ' 'ಅಸ್ಪೃಶ್ಯತೆ' ಕೇವಲ ಮೆರವಣಿಗೆ ಮಾಡಿದರೆ, ಭಾಷಣ ಬಿಗಿದರೆ ಹೋಗತಕ್ಕ 'ಕಲಂಕ' ಅದು ಅಲ್ಲ. ಅದನ್ನು ನಾವು ಅರ್ಥವತ್ತಾಗಿ ಆಚರಣೆಯಲ್ಲಿ ತರಬೇಕು. ಅದಕ್ಕೆ ಮೊದಲನೆಯ ಕ್ರಮ ಹರಿಜನರ ಮನೆಗಳಲ್ಲಿಯೇ ಅಡುಗೆ ಮಾಡಿಸುವುದು. ಊರಲ್ಲಿ ಪ್ರತಿಯೊಂದು ಮನೆಯಿಂದ ಅಂದು ತಯಾರಿಸಿದ ರೊಟ್ಟಿ, ಪಲ್ಲೆ ತರಿಸುವುದು. ಇಡೀ ಊರ ಜನರೆಲ್ಲರೂ 'ಆರ್ಯ ಸಮಾಜ' ಮಂದಿರದಲ್ಲಿ ಸಾಮೂಹಿಕ ಸಹಭೋಜನ ಏರ್ಪಡಿಸಿ ಭೋಜನ ಮಾಡುವುದೆಂದು ನಿರ್ಧರಿಸಲಾಯಿತು.

ಅಂದು ಹರಿಜನರ ಓಣಿಯಲ್ಲಿಯೇ ಅವರ ಹೆಣ್ಣುಮಕ್ಕಳಿಂದಲೇ ಸಜ್ಜೆ ರೊಟ್ಟಿ ಬದನೆಕಾಯಿ ಎಣ್ಣೆಗಾಯಿ ಪಲ್ಲೆ. ಮುದ್ದಿ ಪಲ್ಲೆ ತಯಾರಿಸುವುದರೊಡನೆ 'ಮಾದಲಿ' ಮಾವಿನಕಾಯಿ ಶೀಕರಣಿ, ಉಪ್ಪಿನ ಕಾಯಿ, ಹಪ್ಪಳ ಸಂಡಿಗೆ ತಯಾರಿಸಿದ್ದರು. ಮನೆ ಮನೆಗಳಿಂದಲೂ ಬಂದ ರೊಟ್ಟಿ ಪಲ್ಲೆ ಎಲ್ಲವನ್ನು ಒಂದುಕಡೆ ಸೇಕರಿಸಿದರು. ಸಹಭೋಜನ ಪ್ರಾರಂಭವಾಯಿತು. ಗುರುನಾಥರೆಡ್ಡಿ ಮಾಲಿ ಪಾಟೀಲರು, ವಿದ್ಯಾಧರ ಗುರೂಜಿ ಅವರು ನೇತೃತ್ವ ವಹಿಸಿ ಕೊಂಡಿದ್ದರು. ಊರಲ್ಲಿದ್ದ ಅರಬರು, ಮುಸಲ್ಮಾನರು, ಬ್ರಾಹ್ಮರು, ಲಿಂಗಾಯತರು, ಹಟಗಾರರು, ಕುರುಬರು, ಕಬ್ಬಲಿಗರು, ಬೇಡರು ಹರಿಜನರು ಕೊರವರು ಇನ್ನಿತರ ಅಲೆಮಾರಿ ಜನರು ಸ್ವಾಮಿಗಳು ಆಚಾರ್ಯರು ಕೂಡಿ ಸಹಭೋಜನ ಪ್ರಾರಂಭ ಮಾಡಿದರು. ಐದಾರು ಗಂಟೆಗಟ್ಟಲೆ ನಡೆದ ಈ ಸಹಭೋಜನದಲ್ಲಿ 'ಕ್ಷ' ಕಿರಣ ಹಾಕಿ ನೋಡಿದಾಗ 'ಕಂಬರ ಶೇಷಪ್ಪ', 'ಗಂಜಿ ಗಿರೆಪ್ಪ' ಅವರ ಎರಡು ಮನೆತನಗಳು ಈ ಸಹಭೋಜನದಲ್ಲಿ ಭಾಗಿಯಾಗಿರಲಿಲ್ಲ. ಅಂದು ಗುರುಮಠ ಕಲ್ಲ ಗ್ರಾಮದಲ್ಲಿ ಸೋಮವಾರ ಸಂತೆ. ಸಂತೆಗೆ ಆಗಮಿಸಿದ ಜನರೂ ಈ ಸಹಭೋಜನದಲ್ಲಿ ಪಾಲುಗೊಂಡು 'ಅಸ್ಪೃಶ್ಯತಾ ನಿವಾರಣೆ' ಗೆ ನಾಂದಿ ಹಾಡಿದರು. ಈ ಅಸ್ಪೃಶ್ಯತಾ ನಿವಾರಣಾ ಅಭಿಯಾನ ಕೈಕೊಂಡ ಈ 'ಸಹ ಭೋಜನ' ಎಲ್ಲ ಊರುಗಳಲ್ಲಿಯೂ

ಏರ್ಪಡಿಸಿ 'ಮುಟ್ಟಿ ತಟ್ಟಿ' ಎಂಬ ಶಬ್ದ ಅಳಿಕಿಸಬೇಕೆಂದು ಒಕ್ಕೊರಲಿನಿಂದ ಹೇಳಿ 'ಅಸ್ಪೃಶ್ಯತಾ ಅಭಿಯಾನ' ಯಶಸ್ವಿಗೊಳಿಸಿದರು. ಅಂದಿನಿಂದ ಊರ ಮಾಲಿ ಪಾಟೀಲ ಗುರುನಾಥರೆಡ್ಡಿ ಅವರು ತೋರಿದ ಧೈರ್ಯಕ್ಕೆ ಸುತ್ತ ಮುತ್ತಲಿನ ಜನರು ಮೆಚ್ಚಿಗೆ ವ್ಯಕ್ತಪಡಿಸಿದರು. ವಿದ್ಯಾಧರಗುರೂಜಿ ಅವರು 'ವಿದ್ಯಾಧರ' ಹೆಸರಿನಿಂದ ಪ್ರಖ್ಯಾತರಾಗುತ್ತ ಬಂದರು. ಅವರಿಗೆ ಇವರ ರಾಜಕೀಯ ಗುರುಗಳಾದ ಸ್ವಾಮಿ ರಾಮಗಿರಿಜಿ ಅವರ ಕೃಪೆ, ಆಶೀರ್ವಾದ, ಅಂತಃಕರಣ ದಿನೇ ದಿನೇ ಬೆಳೆಯುತ್ತ ಬಂದಿತು.

ಇದೇ ಸಮಯಕ್ಕೆ ಇನ್ನು ಬಾಲಕನಾದ ವಿದ್ಯಾಧರ ಗುರೂಜಿ ಅವರಿಗೆ ಅಭ್ಯಾಸ ಮುಂದುವರಿಸಲು ಆರ್ಯ ಸಮಾಜದ ಹಿರಿಯ ಧುರೀಣ ಭಾಯಿ ಬನ್ಸಿಲಾಲರರು ಸೂಚಿಸಿದರು. ಆಗ ವಿದ್ಯಾಧರ ಗುರೂಜಿ ಅವರು ನನಗೆ ಇನ್ನೂ ಓದಬೇಕೆಂಬ ಹಂಬಲವಿದೆ, ದೇಶವನ್ನು ತಿಳಿದುಕೊಳ್ಳಬೇಕೆಂಬ ಮನಸ್ಸಿದೆ. ಅಂತಹ ಅವಕಾಶ ನನಗೆ ತಮ್ಮಿಂದಲೇ ಆಗಬೇಕೆಂದು ಅತ್ಯಂತ ವಿನಯದಿಂದ ಕೇಳಿಕೊಂಡರು. ಆಗ ಸಹೃದಯಿಗಳಾದ ಭಾಯಿ ಬನ್ಸಿಲಾಲಜಿ ಅವರು ಲಾಹೋರದ ಗುರುದತ್ತ ಭವನ ಉಪದೇಶಕರ ಮಹಾವಿದ್ಯಾಲಯ ದಲ್ಲಿ ಪ್ರವೇಶ ಪಡೆದು ಅಭ್ಯಾಸ ಮಾಡಲು ಶಿಫಾರಸ್ಸು ಪತ್ರ ನೀಡಿ ಹಾದಿಯ ಖರ್ಚಿಗೆಂದು ಒಂದಿಷ್ಟು ಹಣವನ್ನು ಕೊಟ್ಟು ಲಾಹೋರಕ್ಕೆ ಕಳಿಸಿಕೊಟ್ಟರು. ವಿದ್ಯಾಧರ ಗುರೂಜಿ ಅವರು ಭಾಯಿ ಬನ್ಸಿಲಾಲರ ಶಿಫಾರಸ್ಸು ಪತ್ರ ತೆಗೆದುಕೊಂಡು ಲಾಹೋರಕ್ಕೆ ಬಂದು ಲಾಹೋರ ಗುರುದತ್ತ ಭವನ ಉಪದೇಶಕ ಮಹಾವಿದ್ಯಾಲಯದಲ್ಲಿ ಪ್ರವೇಶ ಪಡೆದರು. ಅಲ್ಲಿ 1938ರಿಂದ 1942ರವರೆಗೆ ಸತತ ಐದು ವರುಷಗಳವರೆಗೆ ಇದ್ದು ಅತ್ಯಂತ ನಿಷ್ಠೆ, ಶ್ರದ್ಧೆಯಿಂದ ಅಭ್ಯಾಸ ಮಾಡಿದರು.

ಈಗಿನ ಪಾಕಿಸ್ತಾನದಲ್ಲಿರುವ 'ಲಾಹೋರ' ಅಂದಿನ ಸ್ವಾತಂತ್ರ್ಯ ಹೋರಾಟಗಾರರ ಚಳವಳಿಯ ಕೇಂದ್ರವಾಗಿತ್ತು. ಸ್ವಾತಂತ್ರ್ಯ ಪ್ರೇಮಿಯಾದ ವಿದ್ಯಾಧರ ಗುರೂಜಿ ಅವರು ದೇಶದ ಸ್ವಾತಂತ್ರ್ಯಕ್ಕಾಗಿ ನಿತ್ಯ ನಡೆಯುತ್ತಿದ್ದ ಚಳವಳಿಯನ್ನು ಚಟುವಟಿಕೆಗಳನ್ನು ಪತ್ರಿಕೆಗಳ ಮೂಲಕ ಓದಿ ತಿಳಿದು ಕೊಳ್ಳುತ್ತಿದ್ದರು. ತಮ್ಮ ಜೊತೆಯಲ್ಲಿ ಓದುತ್ತಿದ್ದ ಸ್ನೇಹಿತರೊಡನೆ ಚರ್ಚಿಸುತ್ತಿದ್ದರು. ಹೀಗೆ ದೇಶಪ್ರೇಮವನ್ನು, ಭಾಷಾಭಿಮಾನವನ್ನು ಅಳವಡಿಸಿಕೊಳ್ಳುತ್ತ ಹಿಂದಿ ಭಾಷೆಯನ್ನು ಚೆನ್ನಾಗಿ ಓದಿಕೊಂಡು ಹಿಂದಿ

ಭಾಷೆಯಲ್ಲಿ ಪಾರಂಗತರಾದರು. 1942ರಲ್ಲಿ ಲಾಹೋರ್ ಗುರುದತ್ತ ಭವನ ಉಪದೋಶಕ ಮಹಾವಿದ್ಯಾಲಯದಿಂದ ಸ್ನಾತಕೋತ್ತರ ಪದವಿ, ಶಾಸ್ತ್ರಿಪದವಿ ಪಡೆದು ಹೊರಬಂದರು. ಈ ಪದವಿಗಳು ಎಂ.ಎ., ಪಿ.ಎಚ್‌ಡಿ ಪದವಿಗಳಿಗೆ ಸಮವೆಂದು ಹೇಳುತ್ತಾರೆ. ಆಗ 'ಚಲೇಜಾವ ಚಳವಳಿ' ಪ್ರಾರಂಭವಾಯಿತು. 'ಮಾಡು ಇಲ್ಲವೆ ಮಡಿ' ಘೋಷಣೆ ತರುಣ ಭಾರತೀಯರನ್ನು ಬಡಿದೆಬ್ಬಿಸುತ್ತಿತ್ತು.

'ಲಾಹೋರ ಗುರುದತ್ತ ಭವನ ಉಪದೇಶಕ' ಮಹಾವಿದ್ಯಾಲಯದಲ್ಲಿ ಓದುವ ಹವ್ಯಾಸ ಬೆಳೆಸಿಕೊಂಡ ವಿದ್ಯಾಧರ ಗುರೂಜಿ ಅವರು ಹಿಂದಿ ಭಾಷೆಯಲ್ಲಿ ಹೊರಬರುತ್ತಿದ್ದ ಸ್ವಾತಂತ್ರ್ಯವೀರರ ಜೀವನ ಚರಿತ್ರೆಗಳನ್ನು, ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಸ್ವಾತಂತ್ರ್ಯಕ್ಕೆ ದೇಶದಲ್ಲಿ ನಡೆಯುತ್ತಿದ್ದ ಚಟುವಟಿಕೆಗಳನ್ನು ಹಿಂದಿ ಭಾಷೆಯಲ್ಲಿ ಹೊರ ಬರುತ್ತಿದ್ದ ದಿನಪತ್ರಿಕೆ, ವಾರಪತ್ರಿಕೆ, ಮಾಸಿಕ, ತ್ರೈಮಾಸಿಕ ಪತ್ರಿಕೆಗಳನ್ನು ತರಿಸಿಕೊಂಡು ಓದಿ ತಿಳಿದುಕೊಳ್ಳತೊಡಗಿತು. ಹೀಗೆ ನಿತ್ಯ ಓದುವ ಹವ್ಯಾಸ ಬೆಳೆಸಿಕೊಂಡರು. ಹಿಂದೀ ಭಾಷೆ ವಿದ್ಯಾಧರ ಗುರೂಜಿ ಅವರಿಗೆ ಪಂಚಪ್ರಾಣವಾಯಿತು. ಜೀವ ಜೀವಾಳವಾಯಿತು. ಈಗ ಅವರಿಗೆ ಒಂದು ನೂರು ವರ್ಷ ತುಂಬುತ್ತಲಿವೆ. ಆದರೂ ಅವರಿಗೆ ಓದುವ ಹವ್ಯಾಸ ಕಡಿಮೆಯಾಗಿಲ್ಲ. ಇನ್ನು ಓದಬೇಕು, ತಿಳಿದುಕೊಳ್ಳಬೇಕು ಎಂಬ ಲವಲವಿಕೆಯಲ್ಲಿಯೇ ಇರುತ್ತಾರೆ.

ವಿದ್ಯಾಧರ ಗುರೂಜಿ ಅವರ ಹಿಂದಿ ಭಾಷೆಯಲ್ಲಿ ಪರಿಣಿತಿಯನ್ನು ಪಡೆದುಕೊಂಡು ಬಂದ ಮೇಲೆ 1942ರಲ್ಲಿಯೇ ಯಾದಗಿರಿಯಲ್ಲಿ 'ಹೈದರಾಬಾದ್ ಹಿಂದಿ ಪ್ರಚಾರ ಸಭಾ' ಅಡಿಯಲ್ಲಿ ನಡೆಯುತ್ತಿದ್ದ ಪರೀಕ್ಷಾ ಕೇಂದ್ರಗಳನ್ನು ಪ್ರಾರಂಭಿಸಿ ಹಿಂದಿಭಾಷೆಯಲ್ಲಿ ನಾಗರೀಕ ಭೋದ ಪ್ರವೇಶ ಪ್ರಥಮ ಮಧ್ಯಮ ಮತ್ತು ಉತ್ತಮಾ ಮುಂತಾದ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಕೂಡ್ರಿಸಿ ಅಭ್ಯಾಸ ಮಾಡಿಸತೊಡಗಿದರು. ಈ ಕೇಂದ್ರವನ್ನು ಅತ್ಯಂತ ಯಶಸ್ವಿ ಪಥದಲ್ಲಿ ನಡೆಸಿಕೊಂಡು ಬಂದರು.

1935ರಲ್ಲಿ ದಕ್ಷಿಣ ಭಾರತದ ಹೈದರಾಬಾದ್ ಕೇಂದ್ರ ಸ್ಥಳ ನಾಮ್‌ಪಲ್ಲಿಯಲ್ಲಿ ಪ್ರಾರಂಭಿಸಿದ 'ಹಿಂದಿ ಪ್ರಚಾರಸಭಾ' ಇಂದು ಹೆಮ್ಮರವಾಗಿ ಬೆಳೆದಿದೆ. ಹಿಂದಿ ಇಂದು ರಾಷ್ಟ್ರಭಾಷೆ, ಸಂಪರ್ಕ ಭಾಷೆಯಾಗಿ ಮಾನ್ಯತೆ


ಪಡೆದಿದೆ. ಹಿಂದಿ ಭಾಷೆ ಅಭಿವೃದ್ಧಿಗಾಗಿ ಪ್ರಚಾರ, ಪ್ರಸಾರಕ್ಕೆ ಅಹರ್ನಿಶಿ ದುಡಿದ ಡಾ. ಬಿ. ಗೋಪಾಲರೆಡ್ಡಿ, ಕೆ. ಅಚ್ಯುತ ರೆಡ್ಡಿ ಶ್ರೀರಾಮಶರ್ಮಾ, ಲಕ್ಷ್ಮೀನಾರಾಯಣ ಗುಪ್ತ, ಪಂಡಿತ ನರೇಂದ್ರ ಜಿ, ಶ್ರೀಮತಿ ಸುಶೀಲಾ ದೇವಿ ವಿದ್ಯಾಲಂಕೃತ, ವಿನಾಯಕರಾವ್ ವಿದ್ಯಾಲಂಕಾರ, ಕಮಲ ಪ್ರಸಾದ, ಬ್ರಿಜ್‌ಲಾಲ, ಬಿಹಾರಿ ಗಯಾಪ್ರಸಾದಶಾಸ್ತ್ರಿ ಈ ಎಲ್ಲ ಮಹನೀಯರು ಹೈದರಾಬಾದ್ ಸ್ಥಳೀಯರು. ಮಹಾರಾಷ್ಟ್ರದವರಾದ ವೆಂಕಟರಾವ ಗಜಾನನ, ಮಾಡಬೋಲಕರ, ಗೋಪಾಲರಾವ ಏಕಬೋಟೆ, ಸೇತುಮಾಧವರಾವ ಪಗಡಿ, ಶುಭಕರಣ ಧಾನುಕಾ, ಶಾಮಲಾ ರಾಠೋಡ ಚಂದ್ರಗುಪ್ತ ಆರ್ಯ, ಸಂಗ್ರಾಮ ಸಿಂಹ ಚವ್ಹಾಣ ಶಿವ ನಾರಾಯಣರಾವ ಲಾಹೋಟಿಗಳಂತಹವರು ಹಿಂದಿ ಭಾಷೆಯನ್ನು ಕಟ್ಟಿ ಬೆಳೆಸುವಲ್ಲಿ ಟೊಂಕ ಕಟ್ಟಿ ನಿಂತಿದ್ದರು. ನಮ್ಮ ಹೈದರಾಬಾದ್ ಕರ್ನಾಟಕ ಕೋಲೂರು ಮಲ್ಲಪ್ಪ ಜಗನ್ನಾಥರಾವ ಚಂಡರಕಿ ದತ್ತಾತ್ರೇಯರಾವ ಅವರಾಧಿ, ವಿದ್ಯಾಧರ ಗುರೂಜಿ, ಶಂಕರರಾವ ಮಾಂಜ್ರೆ ತುಕಾರಾಮ ಕುಲಕರ್ಣಿ, ಇವರೆಲ್ಲರೂ ಹಿಂದಿ ಭಾಷೆಯನ್ನೇ ತಮ್ಮ ಜೀವ ಜೀವಾಳವನ್ನಾಗಿಸಿಕೊಂಡಿದ್ದರು. ಇವರೆಲ್ಲರ ಒಡನಾಟ ವಿದ್ಯಾಧರ ಗುರೂಜಿ ಅವರಿಗೆ ಇತ್ತು.

1964ರಲ್ಲಿ ಶ್ರೀ ದತ್ತಾತ್ರೆಯ ರಾವ ಅವರಾಧಿ ಅವರು ಹೈದರಾಬಾದ್ ಹಿಂದಿ ಪ್ರಚಾರ ಸಭಾ, ಗುಲಬರ್ಗಾದ ಅಧ್ಯಕ್ಷರಾಗಿದ್ದರು. ಆಗ ಶ್ರೀಮಂತರಾವ್ ಕೊಂಡೇದ ಮಂತ್ರಿಗಳಾಗಿ ಸೇವೆ ಸಲ್ಲಿಸುತ್ತಿದ್ದರು. ಇವರಿಬ್ಬರೂ ಗುಲಬರ್ಗಾದವರೆ. ಮುಂದೆ 1965ರಲ್ಲಿ ಸಂಸತ್ ಸದಸ್ಯರಾಗಿದ್ದ ಜಗನ್ನಾಥರಾವ ಚಂಡರಕಿ ಅವರು ಅಧ್ಯಕ್ಷರಾಗಿದ್ದರು. ಈ ಸಂದರ್ಭದಲ್ಲಿ ಗುರುಮಠಕಲ್ಲ ಮತಕ್ಷೇತ್ರದ ಶಾಸಕರಾಗಿದ್ದ ವಿದ್ಯಾಧರ ಗುರೂಜಿ ಅವರು ಮಂತ್ರಿಗಳಾಗಿದ್ದರು. ಆಗ ವಿದ್ಯಾಧರ ಗುರೂಜಿ ಅವರ ಹಿಂದಿ ಭಾಷೆಯ ಮೇಲೆ ಇದ್ದ ಹಿಡಿತ ಪ್ರಭುತ್ವ ಅವರ ಕಾರ್ಯ ಚಟುವಟಿಕೆ ಮುಂತಾದವುಗಳನ್ನು ಗಮನಿಸಿದ 'ಕೇಂದ್ರೀಯ ಹಿಂದಿ ಪ್ರಚಾರಸಭಾ ಕಾರ್ಯಕಾರಿ ಸಮಿತಿ' ಮುಂದಿನ ಅಧ್ಯಕ್ಷರು ಇವರೇ ಆದರೆ ನಮ್ಮ ಹಿಂದಿ ಪ್ರಚಾರಸಭಾ ರಾಷ್ಟ್ರದಾದ್ಯಂತ ಬೆಳೆಯುತ್ತದೆ ಎಂದು ಲೆಕ್ಕ ಹಾಕತೊಡಗಿದರು. ಆಗ ವಿದ್ಯಾಧರ ಗುರೂಜಿ ಅವರು ಈಗ ನಾನು ತುಂಬಾ ಕೆಲಸದಲ್ಲಿದ್ದೇನೆ ಅದಕ್ಕೂ ಕಾಲ ಬರುತ್ತದೆ. ಆಗ ನೋಡೋಣ ಎಂದು ಹೇಳುತ್ತಿದ್ದರು.

ತಂದೆ ಮಕ್ಕಳಲ್ಲಿ ನವಿರಾದ ವಿರಸ

1942ರ ಆಸುಪಾಸು, ವಿದ್ಯಾಧರನಿಗೆ 26 ವಯಸ್ಸು. ಮಗ ಬೆಳೆದು ದೊಡ್ಡವನಾದ. ಶಿಕ್ಷಣ ಮುಗಿಸಿದ್ದೂ ಆಯಿತು ಸ್ವಾತಂತ್ರ್ಯ ಸಂಗ್ರಾಮದ ಹುಚ್ಚು ದಿನೇ ದಿನೇ ಏರುತ್ತಲೇ ಇತ್ತು. ಒಟ್ಟಿನಲ್ಲಿ ವಿದ್ಯಾಧರ ಮನೆಗೆ ಹತ್ತದಂತಾಯಿತು. ಒಂದು ಕಡೆ ಬ್ರಿಟಿಷರ ವಿರುದ್ಧ ಘೋಷಣೆ. ಇನ್ನೊಂದು ಕಡೆ ನಿಜಾಮರ ವಿರುದ್ಧ ಸಮರ. ಅತ್ಯಂತ ಬಡವರ ಮಕ್ಕಳು ಇಂತಹ ಸಾಹಸಕ್ಕೆ ಇಳಿಯುವುದೆಂದರೆ ತಮ್ಮ ಸಾವನ್ನು ತಾವೇ ನೆನೆದುಕೊಂಡಂತೆ ಎಂದು ತಂದೆ ಸಾಯಣ್ಣ ತಾಯಿ ಭೀಮಕ್ಕ ತುಂಬ ಗಾಬರಿಯಾದರು. ಮಗನಿಗೆ ಸುಂದರ ಕನ್ಯಾ ತೆಗೆದು ಮದುವೆ ಮಾಡಿದರೆ ಮನೆಗೆ ಹತ್ತ ಬಹುದೆಂದು ಲೆಕ್ಕ ಹಾಕಿ ತಾಯಿ ತಂದೆ ಇಬ್ಬರೂ ಮಗನನ್ನ ಹತ್ತಿರ ಕರೆದು ತುಂಬ ಶಾಂತ ಮನಸ್ಸಿನಿಂದ ಮಗನ ಮನ ಒಲಿಸುತ್ತ "ಮಗು, ನೀನು ತುಂಬಾ ದೊಡ್ಡವನಾದಿ. ಈಗ ಮದುವೆಯ ವಯಸ್ಸು ನಿನಗೆ. ಒಂದು ಉತ್ತಮ ಮನೆತನದ ಕನ್ಯಾ ತೆಗೆದು ಲಗ್ನ ಮಾಡಬೇಕೆಂದು ನಾವಿಬ್ಬರೂ





ಬಿಸಿರಕ್ತದ ತರುಣ ವಯಸ್ಸಿನಲ್ಲಿ
ವಿದ್ಯಾಧರ ಗುರೂಜಿ

ವಿಚಾರ ಮಾಡಿಕೊಂಡಿದ್ದೇವೆ. ನೀನು ನಮ್ಮ ಮಾತಿಗೆ ಒಪ್ಪಿಕೊಂಡು ಮದುವೆ ಮಾಡಿಕೊಂಡು ಮನೆ ಹಿಡಿದುಕೊಂಡು ಇರಬೇಕೆಂದು" ಹಿತವಚನ ಹೇಳಿದರು. ತಾಯಿ ತಂದೆಗಳ ಮಾತಿಗೆ "ಅಪ್ಪಾ ತಾವು ತಪ್ಪು ತಿಳಿದುಕೊಳ್ಳಬಾರದು ದೇಶ ಸ್ವತಂತ್ರವಾಗಬೇಕು. ಹೈದರಾಬಾದ್ ನಿಜಾಮರು ಗಾದೆಯಿಂದ ಕೆಳಗೆ ಇಳಿಯಬೇಕು. ಇದು ನಾನು ತೊಟ್ಟ ಹಟ. ಈ ಹಟದಿಂದ ನಾನು ಅಚಲನಾಗಲಾರೆ. ದಯವಿಟ್ಟು ತಾವು ಒತ್ತಾಯ ಮಾಡಬಾರದು" ಎಂದು ತಂದೆ-ತಾಯಿಗಳಿಬ್ಬರಿಗೂ ಗಟ್ಟಿಯಾಗಿ ಹೇಳಿದ.

ಆಗ ತಂದೆ "ಮಗು, ನೀನು ದೊಡ್ಡ ಗುಡ್ಡಕ್ಕೆ ತಲೆಯನ್ನು ಅಪ್ಪಳಿಸುತ್ತಲಿದ್ದಿ. ಜನಬಲವಿಲ್ಲ, ಧನ ಬಲವಿಲ್ಲದ ನೀನು ವ್ಯರ್ಥ ಸಂಕಟಕ್ಕೆ ಗುರಿಯಾಗುತ್ತಿ. ನಿನ್ನ ಛಲ ಬಿಡು. ಮನೆ ಹಿಡಿದು ನಮ್ಮನ್ನು ನೋಡಿಕೊಂಡು ಹೋದರೆ ಸಾಕು ನಮಗೆ ಸ್ವಾತಂತ್ರ್ಯ ಸಿಕ್ಕಂತೆ" ಎಂದು ತಂದೆ ಸಾಯಣ್ಣ ಮನಕರಗಿ ನೀರಾಗುವಂತೆ ಹೇಳಿದ.

ಹೀಗೆ ತಂದೆ ಮಕ್ಕಳ ನಡುವೆ ವಾಗ್ವಾದ ನಡೆದು ಕೊನೆಗೆ ವಿದ್ಯಾಧರ ತಂದೆ-ತಾಯಿಗಳನ್ನು ಬಿಟ್ಟು ಸ್ವಾತಂತ್ರ್ಯಕ್ಕಾಗಿ ತನ್ನ ಪ್ರಾಣ ಕೊಡಲು ಸಿದ್ಧನಾಗಿ ಮನೆ ಬಿಟ್ಟು ಹೊರಗೆ ಬಂದ. ಸ್ವಾತಂತ್ರ್ಯ ಚಳುವಳಿಯ ಪ್ರಣಾಳಿಕೆಯನ್ನು ಜನರಿಗೆ ತಿಳಿಸಿ ಜನ ಜಾಗೃತಗೊಳಿಸತೊಡಗಿದ. ಆರ್ಯಸಮಾಜದ ಪ್ರಚಾರ ರಾಷ್ಟ್ರಭಾಷೆ ಹಿಂದಿಯ ಪ್ರಸಾರಕ್ಕೆ ಹೆಣಗಾಡತೊಡಗಿದ.



ಅಷ್ಟರಲ್ಲಿ 1942ರಲ್ಲಿ ಆಗಸ್ಟ್ 8 ರಂದು ಮುಂಬಯಿ ಅಧಿವೇಶನದ ಜವಾಹರ ಲಾಲ ನೆಹರೂಜಿ ಅವರು **ಭಾರತ ಬಿಟ್ಟು ತೊಲಗಿ 'ಚಲೇಜಾವ್ ಚಳುವಳಿ'**ಯುನ್ನು ಘೋಷಿಸಿದರು. ಆಗಸ್ಟ್ 9ರಂದು ಪೂಜ್ಯ ಮಹಾತ್ಮಾಗಾಂಧೀಜಿ ಅವರ **"ಮಾಡು ಇಲ್ಲವೆ ಮಡಿ"** ಎಂಬ ವೀರ ಘೋಷಣೆ ಹೊರಹೊಮ್ಮಿ ಬಂದಿತು. ಈ ಘೋಷಣೆಗಳನ್ನು ಕೇಳಿದ ವಿದ್ಯಾಧರ ಈದ ಹುಲಿಯಂತೆ ಆರ್ಭಟಿಸತೊಡಗಿದ. ನಿಜಾಮ ಸರ್ಕಾರ ಎಷ್ಟೇ ಪ್ರತಿಬಂಧ ಹೇರಿದ್ದರೂ ತರುಣ ವಿದ್ಯಾಧರ ತನ್ನ ಹಿಂದಿ ಭಾಷೆ ವಿದ್ಯಾರ್ಥಿಗಳೊಡನೆ ಚಲೇಜಾವ್ ಚಳುವಳಿಯಲ್ಲಿ ಧುಮುಕಿ ಹೋರಾಟದ ಮುಂಚೂಣಿಯಲ್ಲಿ ನಿಂತು ಮಿಂಚತೊಡಗಿದ.

ನಿಜಾಮರ ವಿರುದ್ಧವೂ, ಬ್ರಿಟಿಷರ ವಿರುದ್ಧವೂ ಘೋಷಣೆಗಳು ಮೊಳಗತೊಡಗಿದವು. ಜನರಿಗೂ ಹೆದರಲಿಲ್ಲ. ಪೋಲಿಸರಿಗೂ ಹೆದರಲಿಲ್ಲ. ಜೈಲಿಗೂ ಹೆದರಲಿಲ್ಲ. ಬಯಲಿಗೂ ಹೆದರಲಿಲ್ಲ. ತರುಣ ವಿದ್ಯಾಧರನ ಕಣ್ಣು ಮುಂದೆ ಭಾರತಮಾತೆ ಕಂಗೊಳಿಸತೊಡಗಿದಳು.

ಮನೆ ಮಾರು ತೊರೆದಿದ್ದ ತರುಣ ವೀರ ವಿದ್ಯಾಧರ ಯಾದಗಿರಿಯ ಮಾರವಾಡಿಯ ಧರ್ಮಶಾಲೆಯಲ್ಲಿ ವಾಸ. ಯಾರಾದರೂ ಕರೆದರೆ ಊಟ ಇಲ್ಲವಾದರೆ ಉಪವಾಸ. ಹಸಿವೆ ಎಂದು ಯಾರ ಮುಂದೂ ಹೇಳುತ್ತಿರಲಿಲ್ಲ. ನೀರಡಿಕೆ ಎಂದು ಬಾಯಿ ಬಿಚ್ಚಿ ಮಾತಾಡುತ್ತಿರಲಿಲ್ಲ. ಮನೆಯ ಅನ್ನ, ನೀರು ಮರೆತುಹೋಗಿತ್ತು. ಮಾತೃಭಾಷೆ ಹೇಳ ಹೆಸರಿಲ್ಲದಂತಾಗಿತ್ತು. ಹಿಂದಿ ಭಾಷೆಯ ಮೇಲಿನ ಅಭಿಮಾನ ರಾಷ್ಟ್ರಪ್ರೇಮ ಹೃದಯ ತುಂಬಿಕೊಂಡಿತ್ತು, ಮನವನ್ನು ಆವರಿಸಿತ್ತು. ಮಾರವಾಡಿ ಧರ್ಮಶಾಲೆಯಲ್ಲಿ ತಾನು ಬೋಧಿಸುತ್ತಿದ್ದ ಹಿಂದಿ ಭಾಷೆ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಅಚ್ಚುಮೆಚ್ಚಿನ ಗುರುಗಳಾಗಿದ್ದರು. ಈ ವಿದ್ಯಾರ್ಥಿಗಳು ವಿದ್ಯಾಧರನಿಗೆ **'ಗುರೂಜಿ'** ಎಂದು ಹೃದಯ ತುಂಬಿ ಕರೆಯುತ್ತಿದ್ದರು. ವಿದ್ಯಾರ್ಥಿಗಳು ಕರೆದ ಈ ಗುರೂಜಿ ಗೌರವ ಸೂಚಕ ಮಾತು **'ವಿದ್ಯಾಧರ ಗುರೂಜಿ'**ಗೆ ಸೇರಿಕೊಂಡು ವಿದ್ಯಾಧರ ಗುರೂಜಿ ಎಂದು ಸ್ವಾತಂತ್ರ್ಯ ಚಳುವಳಿಗಾರರಿಗೆ ಅಚ್ಚುಮೆಚ್ಚಿನ ಹೆಸರಾಯಿತು. ಅಂದಿನಿಂದ **'ವಿದ್ಯಾಧರ ಗುರೂಜಿ'** ಎಂಬ ಹೆಸರು ಪ್ರಚಾರಕ್ಕೆ ಬಂದಿತು. ಪ್ರಸಿದ್ಧಿಯನ್ನು ಪಡೆಯಿತು.

ಗುಲಬರ್ಗಾ ನಗರದಲ್ಲಿ ಆರ್ಯಸಮಾಜದ ಸಮಾವೇಶ

ಅದು 1945ನೆಯ ಇಸವಿ. ಆರ್ಯಸಮಾಜದ ನಾಲ್ಕನೆಯ ಸಮಾವೇಶ ಗುಲಬರ್ಗಾ ನಗರದ ಫಿಲ್ಟರ್ ಬೆಡ್ ರಸ್ತೆಯ ಸಮೀಪದ ಛಪ್ಪರ ಬಂದಿಯ ಹೊಲದಲ್ಲಿ ಏರ್ಪಡಿಸಲಾಗಿತ್ತು. ಈ ಸ್ಥಳ ನೆಹರು ಗಂಜ ಪಕ್ಕದಲ್ಲಿಯೇ ಇದೆ. ಇದೇ ಸ್ಥಳ ಸುರಕ್ಷಿತವೆಂದು ಈ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಸಮಾವೇಶದ ಅಧ್ಯಕ್ಷರಾಗಿ ಜನಾನುರಾಗಿ, ಜನನಾಯಕ, ಶ್ರೀ ನಾರಾಯಣ ಲಾಲ ಪಿತ್ತಿ ಅವರು ಆಗಮಿಸಿದ್ದರು. ಹಿಂದು ಗಳನ್ನು ಒಟ್ಟುಗೂಡಿಸುವ ಈ ಸಮ್ಮೇಳನ ಅತ್ಯಂತ ಮಹತ್ವ ಪಡೆದಿತ್ತು. ಇಲ್ಲಿ ಅಸಂಖ್ಯಾತ ಹಿಂದುಗಳು ತಮ್ಮ ಬಲ, ಛಲ, ಒಗ್ಗಟ್ಟು ತೋರಿಸಬೇಕಿತ್ತು. ಅಷ್ಟರೊಳಗೆ 'ಕಾಶಿಂ ರಜವಿಯ' ರಜಾಕಾರ ಸ್ಥಾಪನೆಯಾಗಿತ್ತು. ಹಿಂದು ಗಳು ನಡೆಸುವ ಈ ಸಮ್ಮೇಳನ ಅಷ್ಟು ಸುಲಭ ಸಾಧ್ಯವಿಲ್ಲ ಎಂಬಂತಹ ಭೀಕರ ಭಯಾನಕ ವಾತಾವರಣವೂ ಅಲ್ಲಿ ಮೂಡ ತೊಡಗಿತ್ತು. ಹೈದರಾಬಾದ್ ನಿಜಾಮು ಸರಕಾರದಿಂದಲೂ, ಕಾಶಿಂ ರಜವಿ ಕಟ್ಟಿದ



ರಜಾಕಾರರಿಂದಲೂ ಪ್ರತಿಭಟನೆ ತೋರುವ ಸೂಚನೆಯೂ ಕಾಣುತ್ತಿತ್ತು. ಇದನ್ನು ಅರಿತು ರಾಜ್ಯದ ಮೂಲೆ ಮೂಲೆಗಳಿಂದಲೂ ಪ್ರತಿಷ್ಠಿತ ಹಿಂದುಗಳು ಈ ಸಮಾವೇಶಕ್ಕೆ ಬರಲು ಸಜ್ಜಾಗುತ್ತಲಿದ್ದರು. ಕಲಬುರ್ಗಿಯ ಛಪ್ಪರ ಬಂದಿಯ ಹೊಲದಲ್ಲಿ ಸಮಾವೇಶದ ಸಿದ್ಧತೆ ಭರದಿಂದ ನಡೆದಿತ್ತು. ಬಹುಸಂಖ್ಯೆಯಲ್ಲಿ ಹಿಂದುಗಳು ಬಂದು ಸಮಾವೇಶದಲ್ಲಿ ಪಾಲುಗೊಂಡಿದ್ದರು. ಎಲ್ಲಿ ಏನಾಗುತ್ತದೆಯೋ ಎಂಬ ಅಂಜಿಕೆಯಿಂದ ಹಿಂದುಗಳು ತುಂಬಾ ಎಚ್ಚರಿಕೆಯಿಂದ ಇದ್ದರು. ಶ್ರೀ ವಿದ್ಯಾಧರ ಗುರೂಜಿಯವರು ಈ ಅಧಿವೇಶನಕ್ಕೆ ಯಾದಗಿರಿಯಿಂದ ಸುಮಾರು ನಾಲ್ವತ್ತು ವಿದ್ಯಾರ್ಥಿಗಳನ್ನು ಕರೆದುಕೊಂಡು ಬಂದಿದ್ದರು. ಗುರೂಜಿಯುವರ ಜತೆ ಅಂದಿನ ಆರ್ಯಸಮಾಜದ ಧುರೀಣ ಶ್ರೀ ಈಶ್ವರಲಾಲ ಭಟ್ಟಡ ಅವರು, ಅವರ ಧರ್ಮಪತ್ನಿಯವರೂ ಆಗಮಿಸಿದ್ದರು.

ನಿರೀಕ್ಷೆಯಂತೆ ಕಾಶಿಂ ರಜವಿ ಕಟ್ಟಿದ 'ರಜಾಕಾರ' ತಂಡದ ದಾಳಿಯೂ ಪ್ರಾರಂಭವಾಯಿತು. ಇವರಿಗೆ ನಿಜಾಮ ಸರಕಾರದ ಪೋಲಿಸ್ ಅಧಿಕಾರಿಗಳ ಬೆಂಬಲವೂ ದೊರಕಿತ್ತು. ಗಣ್ಯ, ಮಾನ್ಯ ಹಿಂದು ಧುರಿಣರನ್ನು ಮೋಸಗೊಳಿಸಿ



ಆರ್ಯಸಮಾಜದ
ಸಂಸ್ಥಾಪಕರಾದ
ಶ್ರೀ ಸ್ವಾಮಿ ದಯಾನಂದ ಸರಸ್ವತಿ
ಅವರು

ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಿ ದನಗಳಿಗೆ ಬಡಿಯುವ ರೀತಿಯಲ್ಲಿ ಹೊಡೆಯಲಾರಂಭಿಸಿತು. ಪಂಡಿತ ನರೇಂದ್ರಜಿ ಅವರಿಗೆ ಈ ಹೊಡೆತದಲ್ಲಿ ಅವರ ಕಾಲು ಮುರಿದುಹೋಗಿತ್ತು. ಪಂಡಿತ ವಿನಾಯಕರಾವ ವಿದ್ಯಾಲಂಕಾರ ಅವರ ಬೆನ್ನ ಮೇಲೆ ಬಾರಕೋಲಿನಿಂದ ಹೊಡೆದ ಧರಿಗಳು ಮೂಡಿ ಅಲ್ಲಿಂದಲೇ ರಕ್ತ ಚಿಮ್ಮತೊಡಗಿತ್ತು. ಶ್ರೀ ಗಣಪತಿ ಶಾಸ್ತ್ರಿ ಮತ್ತು ಹೀರಾಲಾಲ ಅವರ ತಲೆಯ ಮೇಲೆ ಹೊಡೆದು ತಲೆ ಛಿದ್ರಗೊಳಿಸಿದ್ದರು. ಯಾದಗಿರಿಯಿಂದ ಕರೆದುಕೊಂಡು ಬಂದಿದ್ದ ಪ್ರತಿನಿಧಿಗಳನ್ನು ಸುರಕ್ಷಿತವಾಗಿ ಅವರ ಮನೆಗೆ ಸಾಗಿಸುವುದರಲ್ಲಿ ಶ್ರೀ ವಿದ್ಯಾಧರ ಗುರೂಜಿ ಅವರಿಗೆ ಸಾಕು ಬೇಕಾಗಿತ್ತು.

ಸಮಾವೇಶದ ಆವರಣದಲ್ಲಿ ಉಳಿದುಕೊಂಡಿದ್ದ ಅಸಹಾಯಕ ಮಹಿಳೆಯರಿಗೂ, ಮಕ್ಕಳಿಗೂ ಎಲ್ಲಿಯೂ ಧಕ್ಕೆಯಾಗದಂತೆ ಇಡೀ ರಾತ್ರಿ ಬಂದೂಕು, ಬಡಿಗೆ ಹತಿಯಾರು ಹಿಡಿದುಕೊಂಡು ಸರ್ಪಗಾವಲಿನಲ್ಲಿ ಅವರನ್ನು ರಕ್ಷಿಸಲಾಯಿತು. ಈ ಸಂದರ್ಭದಲ್ಲಿ ಲಾತೂರ್ ಜಿಲ್ಲೆಯ ನಿಲಂಗಾದ ಶ್ರೀ ಶೇಷರಾವ ವಾಘಮಾರೆ ಅವರ ಧೈರ್ಯ, ಸ್ಥೈರ್ಯ ಸಾಹಸಗಳನ್ನು ಇಲ್ಲಿ ಎಷ್ಟು ಸ್ಮರಿಸಿದರೂ ಕಡಿಮೆಯೇ ಸರಿ. ಈ ಅಧಿವೇಶನದ ಸಮಯದಲ್ಲಿ ವಿದ್ಯಾಧರ ಗುರೂಜಿಯವರು ಪಾರಜದಂತೆ ಓಡಾಡಿ ಸಮಾವೇಶಕ್ಕೆ ಬಂದಿದ್ದ ಅಸಂಖ್ಯಾತ ಜನರಿಗೆ ರಕ್ಷಣೆ ಒದಗಿಸಿದರು. ಗುರೂಜಿಯವರ ಧೈರ್ಯ ಸ್ಥೈರ್ಯ ನೋಡಿದ ಜನರು ಬೆರಗಾಗಿ ಬೆರಳು ಕಚ್ಚಿಕೊಂಡರು.

ಈ ಸಮಾವೇಶದಲ್ಲಿ ರಜಾಕಾರ ತಂಡ ಎಸಗಿದ ಕ್ರೂರ ಕೃತ್ಯ ನೋಡಿ ವಿದ್ಯಾಧರ ಗುರೂಜಿ ಪೊರೆ ಬಿಟ್ಟ ಉರಗದಂತೆ ಒಂದೇ ಸಮನೆ ಬುಸುಗೊಡ ತೊಡಗಿದರು. ಭಾರತದಲ್ಲಿ ಇಂಗ್ಲಿಷರು ನಿಜಾಂ ಪ್ರಾಂತದಲ್ಲಿ ಮುಸ್ಲಿಂರ ಹಾವಳಿಯಿಂದ ರೊಚ್ಚಿಗೆದ್ದ ವಿದ್ಯಾಧರ ಗುರೂಜಿಯವರು ಹಿಂದುಗಳ ಸಂಘಟನೆಯಲ್ಲಿ ತೊಡಗಿದರು. ಯಾದಗಿರಿಯ ಸುತ್ತಮುತ್ತಲಿನ ಹಳ್ಳಿಗಳಿಗೆ ಹೋಗಿ ಜನ ಜಾಗೃತಗೊಳಿಸತೊಡಗಿದರು. ಹಿಂದುಗಳು ಒಗ್ಗಟ್ಟಾದರೆ ಉಳಿವು. ಇಲ್ಲವಾದರೆ ಅಳಿವು ಕಟ್ಟಿಟ್ಟ ಬುತ್ತಿಯೊಂದು ಹೇಳಿ ಜನ ಜಾಗೃತೆಯಲ್ಲಿ ತೊಡಗಿದರು. ಈ ಹೋರಾಟದಲ್ಲಿ ಹಗಲು-ರಾತ್ರಿಗಳ ಅರಿವು ಉಳಿಯಲಿಲ್ಲ; ವಿದ್ಯಾಧರ ಗುರೂಜಿ ಅವರಿಗೆ.

ವಜ್ರ ಹೃದಯದ ಈ ತರುಣ ವೀರನ ಹೋರಾಟವನ್ನು ಗಮನಿಸಿದ ಇತ್ತ ಆಂಗ್ಲರು ಅತ್ತ ನಿಜಾಮರು ಮತ್ತಷ್ಟು ರೊಚ್ಚಿಗೆದ್ದರು. ಆಗಲೋ ಈಗಲೋ ಬಂಧಿಸಲು ಪ್ರಯತ್ನಿಸಿತು. ಆದರೂ ಈ ದಿಟ್ಟ ಹೋರಾಟಗಾರ ಎದೆಗುಂದಲಿಲ್ಲ. ತನ್ನ ಸೇವಾ ಕಾರ್ಯವನ್ನು ನಿಲ್ಲಿಸಲಿಲ್ಲ. ಜನ ಜಾಗೃತಿ, ಹಿಂದಿ ಭಾಷಾ ಬೋಧನೆ ಹಾಗೆಯೇ ಮುಂದುವರಿದಿತ್ತು. ಸಮಾಜದ ಕೆಳವರ್ಗದ ಬಾಲಕರನ್ನು, ಹದಿಹರೆಯದ ತರುಣರನ್ನು ಗುರುತಿಸಿ ಅವರಿಗೆ ಸರಿಯಾದ ತಿಳುವಳಿಕೆ ನೀಡಿ ರಾಷ್ಟ್ರಪ್ರೇಮ ಸಮಾಜ ಸೇವೆಯ ಸಂಸ್ಕಾರ ನೀಡುವ ಕಾರ್ಯ ಭರದಿಂದ ನಡೆಯಿತು. ಇದರ ಜೊತೆ ಜೊತೆಗೆ ನಿಜಾಮ ಸರಕಾರದ ಕೃಪಾಪೋಷಿತ ರಜಾಕಾರರ ದಂಡು ಇರುವೆಯಂತೆ–ಸಾಲಗಟ್ಟಿತು. ದಿನೆ ದಿನೆ ಬಲಶಾಲಿಯಾಗ ತೊಡಗಿತು. ಸರಕಾರಿ ಅಧಿಕಾರಿಗಳಿಂದಲೂ ಶಸ್ತ್ರ ಹಾಗೂ ಪ್ರಶಿಕ್ಷಣ ನೀಡಿಕೆ–ಪ್ರಾರಂಭವಾಯಿತು. ಇದರಿಂದ ಜನಸಾಮಾನ್ಯ ರಲ್ಲಿ ಕರಾಳ ಭವಿಷ್ಯದ ಹಾಗೂ ಅಭದ್ರತೆಯ ಹೆದರಿಕೆ ಮೂಡತೊಡಗಿತು. ಶ್ರೀ ವಿದ್ಯಾಧರ ಗುರೂಜಿಯವರು ಈ ಭೀಕರ ಸಮಯದಲ್ಲಿ ಯಾದಗಿರಿ ಪಟ್ಟಣದಲ್ಲಿ ಅಷ್ಟೇ ಅಲ್ಲ ಸುತ್ತಲಿನ ಹಳ್ಳಿಗಳಲ್ಲಿ ಕಾಲು ನಡಿಗೆಯಲ್ಲಿಯೇ ಅಡ್ಡಾಡಿ ಜನರಲ್ಲಿ ಧೈರ್ಯ ತುಂಬುವುದನ್ನು ತೀರ ಸಮೀಪದಿಂದ ನೋಡಿದ ಸರಕಾರ ಇವರನ್ನು ಬಂಧಿಸಲು ಮುಂದಾಯಿತು. ಈ ಸುಳಿವು ಸಿಕ್ಕ ಕೂಡಲೇ ಚಾಣಾಕ್ಷರಾದ ಶ್ರೀ ವಿದ್ಯಾಧರ ಗುರೂಜಿ ಯಾದಗಿರಿ ಪಟ್ಟಣವನ್ನು ಬಿಟ್ಟು ಟಣ್ಣನೆ ಚಿಗರಿಯ ಮರಿಯಂತೆ ಹಾರಿ ಸೋಲಾಪುರ ಪಟ್ಟಣವನ್ನು ಸೇರಿದರು. ಕೆಲವು ದಿವಸ ಯಾರ ಕಣ್ಣಿಗೂ ಬೀಳಲಿಲ್ಲ. ಸಂಪೂರ್ಣ ಭೂಗತರಾದರು.

1946ರಲ್ಲಿ ವಿದ್ಯಾಧರ ಗುರೂಜಿಯವರಿಗೆ ವಾರೆಂಟ್ ಜಾರಿ

ನಿಜಾಮ ಸರಕಾರದ ವಿರುದ್ಧ ಜನರನ್ನು ಎತ್ತಿ ಕಟ್ಟಲಾಗುತ್ತಿದೆ ಎಂಬ ಪ್ರಬಲ ಆರೋಪದ ಮೇರೆಗೆ ವಿದ್ಯಾಧರ ಗುರೂಜಿ ಅವರ ವಿರುದ್ಧ ಎಲ್ಲಿ ಸಿಕ್ಕಲ್ಲಿ ಹಿಡಿಯಬೇಕೆಂಬ ವಾರೆಂಟ್ ಜಾರಿಯಾಯಿತು. ಸಜೀವ ಇಲ್ಲವೆ ನಿರ್ಜೀವ ಹಿಡಿದು ತರಬೇಕೆಂಬ ಉಗ್ರ ಉಲ್ಲೇಖವಿದ್ದಿತು. ಇಂತಹ ಸರಕಾರಿ ಆಜ್ಞೆಯೊಡನೆ ಅವರು ವಾಸಿಸುತ್ತಿದ್ದ ಮಾರವಾಡಿ ಧರ್ಮಶಾಲೆಗೆ ಅವರನ್ನು ಹುಡುಕಿಕೊಂಡು ಬಂದಿದ್ದ ಪೋಲಿಸ್ ಅಧಿಕಾರಿಗಳು "ಈ ಮಾರವಾಡಿ ಧರ್ಮಶಾಲೆ ಯಲ್ಲಿ ವಿದ್ಯಾಧರ ಗುರೂಜಿ ಇರುತ್ತಾರಂತೆ. ಈಗ ಅವರು ಎಲ್ಲಿ ಇದ್ದಾರೆ" ಎಂದು ಆ ಪೋಲಿಸ್ ಪೇದೆಗಳು ಗುರೂಜಿಯವರನ್ನೇ ಕೇಳುತ್ತಾರೆ. ತುಂಬ ಚಾಣಾಕ್ಷರಾದ ವಿದ್ಯಾಧರ ಗುರೂಜಿ ತಮ್ಮನ್ನು ಹಿಡಿಯಲು ಬಂದ ಪೋಲಿಸರೇ ಇವರು ಎಂದು ಗುರುತಿಸಿ "ಶ್ರೀ ವಿದ್ಯಾಧರ ಗುರೂಜಿಯವರು ಇದೇ ಈಗ ರೇಲ್ವೆ ಸ್ಟೇಷನ್ನಿಗೆ ಹೋದರು ಇಲ್ಲೇ ಮುಂದೆ ಹೋಗುತ್ತಿರಬಹುದು. ತಾವು ಬೇಗನೆ ಹೋದರೆ



ಅವರು ಸಿಗಬಹುದು" ಎಂದು ಅತ್ಯಂತ ಸಹಜವಾಗಿ ಹೇಳಿದರು. ಅಲ್ಲಿಂದ ಪೋಲಿಸರು ಹೋಗುವುದೊಂದೇ ತಡ ಗುರೂಜಿ ಅವರು ತಮ್ಮ ಸಾಮಾನು ಬಟ್ಟೆ ಬರೆ ಹಿಂದಿನಿಂದ ತೆಗೆದುಕೊಂಡು ಬರಲು ತಮ್ಮ ವಿದ್ಯಾರ್ಥಿಗಳಿಗೆ ಹೇಳಿ ತಾವು ಜಾಗರೂಕತೆಯಿಂದ ಆ ಸ್ಥಳ ಬಿಟ್ಟು ಯಾದಗಿರಿ ಹೊರವಲಯದಲ್ಲಿರುವ ಶಂಕರ ಸಂಸ್ಕೃತ ಕಾಲೇಜಿನಲ್ಲಿ ಅಡಗಿಕೊಂಡರು. ಇದು ಸಹ ಸುರಕ್ಷಿತ ಸ್ಥಳ ಅಲ್ಲವೆಂದು ಅಲ್ಲಿಂದ ಬೆಳಗೇರಿ ಗ್ರಾಮದ ದಟ್ಟವಾದ ಅರಣ್ಯದಲ್ಲಿ ಅಡಗಿಕೊಂಡರು. ಈ ಅರಣ್ಯ ಪ್ರದೇಶದಲ್ಲಿದ್ದ ಕಾಡು ಪ್ರಾಣಿಗಳಿಗೆ ಹುಳು ಹುಪ್ಪಡಿಗಳಿಗೆ ಇನ್ನಿತರ ವಿಷ ಜಂತುಗಳಿಗೆ ಅಂಜದೆ ಈ ಅರಣ್ಯದಲ್ಲಿ ಒಂದು ತಿಂಗಳು ಒಬ್ಬಂಟಿಯಾಗಿ ಕಾಲ ಕಳೆದರು. ಅದು ಬೆಳಗೇರಿ ಗ್ರಾಮ ಅತ್ಯಂತ ದೊಡ್ಡ ಅರಣ್ಯ ಪ್ರದೇಶವಾಗಿತ್ತು. ಆಗ ಇವರ ಊಟಕ್ಕೆ ಯಾದಗಿರಿಯಿಂದ ರಾತ್ರಿಯ ಹೊತ್ತು ಯಾರೂ ಇಲ್ಲದ ಸಮಯ ನೋಡಿಕೊಂಡು ಶ್ರೀಯುತರಾದ ನರಸಣ್ಣ, ರುದ್ರಣ್ಣ ಮತ್ತು ಮಾರವಾಡಿಯ ಆಗರ್ಭ ಶ್ರೀಮಂತರಾದ ಸೂರಜ ಮಲ್ಲರ ಮಗ ದ್ವಾರಕ ಲಾಲ ಜಿತಾಣಿ ಧರ್ಮಪ್ರಕಾಶ ಮುಂತಾದವರೆಲ್ಲರೂ ಕೂಡಿಕೊಂಡು ಆ ಅರಣ್ಯ ಪ್ರದೇಶಕ್ಕೆ ಬಂದು ರೊಟ್ಟಿ ಬುತ್ತಿ ತಂದು ಕೊಟ್ಟು ಹೋಗುತ್ತಿದ್ದರು. ಕೆಲದಿವಸದ ಮೇಲೆ ಇದು ಸಹ ಅಷ್ಟು ಸುರಕ್ಷಿತ ಸ್ಥಳವಲ್ಲ ಎಂದು ಅವರಿಗೆ ಭಾಸವಾಗತೊಡಗಿತು. ಅಲ್ಲಿಂದ ಗುರೂಜಿಯವರು ಹೈದರಾಬಾದ್ ಹತ್ತಿರ ಇರುವ ಆರ್ಯಸಮಾಜದ ಕೇಂದ್ರವಾದ ಘಟಕೇಶ್ವರಕ್ಕೆ ರುದ್ರಣ್ಣನೆಂಬ ವಿದ್ಯಾರ್ಥಿಯೊಡನೆ ಯರಗೋಳದಿಂದ ನಾಲ್ವಾರ ರೈಲು ನಿಲ್ದಾಣಕ್ಕೆ ನಡೆದುಕೊಂಡು ಬಂದ ರೈಲು ಹಿಡಿದು ಹೊರಟರು. ಅಲ್ಲಿ ಕೆಲವು ದಿವಸ ಇರುವುದರೊಳಗೆ ಆ ಸ್ಥಳವೂ ಅವರಿಗೆ ಅಷ್ಟು ಸುರಕ್ಷಿತ ಸ್ಥಳವೆಂದು ಅನಿಸಲಿಲ್ಲ. ನಿಜಾಂ ಪ್ರಾಂತದಲ್ಲಿದ್ದರೆ ತಮ್ಮ ಬಂಧನ ಖಚಿತವೆಂದು ತಿಳಿದುಕೊಂಡು ಆಗ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟ ಸೋಲಾಪುರಕ್ಕೆ ಬಂದು ಯಾರಿಗೂ ಗುರುತಿಸದಂತಹ ಸ್ಥಳದಲ್ಲಿ ಅಡಗಿಕೊಂಡರು.

ಇವರು ಸೋಲಾಪುರಕ್ಕೆ ಬಂದು ತಲೆಮರೆಸಿಕೊಂಡು ಕೂಡ್ರಲು ಸಾಧ್ಯವಾಗಲಿಲ್ಲ. ಅಷ್ಟರಲ್ಲಿ ನಿಜಾಂ ಸರಕಾರದ ಅಮಾನುಷ ಕೃತ್ಯಗಳಿಂದಲೂ ರಜಾಕಾರರ ಉಪಟಳದಿಂದಲೂ ಬೇಸತ್ತ ಅನೇಕ ಕುಟುಂಬಗಳು ತಮ್ಮ ತಮ್ಮ ಊರುಗಳನ್ನು ಬಿಟ್ಟು ಸುರಕ್ಷಿತ ಸ್ಥಳವೆಂದು ಸೋಲಾಪುರಕ್ಕೆ

ಬಂದುಬಿಟ್ಟಿದ್ದರು. ಹೀಗೆ ಮನೆ, ಮಾರು, ದನ ಕರುಗಳನ್ನು ಬಿಟ್ಟು ಬಂದ ನಿರಾಶ್ರಿತ ಜನರಿಗೆ ವಾಸಕ್ಕೆ ಸ್ಥಳ, ಊಟಕ್ಕೆ ಆಹಾರವಿಲ್ಲದ್ದಕ್ಕೆ ಕಂಗಾಲಾಗಿದ್ದರು. ಈ ದುಸ್ಥಿತಿಯನ್ನು ಕಂಡು ವಿದ್ಯಾಧರ ಗುರೂಜಿ ತಮ್ಮ ಜೀವದ ಹಂಗು ತೊರೆದು ಈ ನಿರಾಶ್ರಿತರಿಗೆ ಆಶ್ರಯ ದೊರಕಿಸಿ ಕೊಡಲು ಶ್ರೀ ಪೂಲಚಂದ ಗಾಂಧಿ ಮತ್ತು ಪಂಡಿತ ಮನೋಹರ ಲಾಲಜಿ ಮೊದಲಾದವರನ್ನು ಕೂಡಿಕೊಂಡು **'ನಿರ್ವಾಸಿ ಸೇವಾಸಮಿತಿ'**ಯನ್ನು ಸ್ಥಾಪಿಸಿದರು. ಶ್ರೀ ಪೂಲಚಂದ ಗಾಂಧೀಜಿಯವರು ಆ ಸಮಿತಿಯ ಅಧ್ಯಕ್ಷರಾದರು. ವಿದ್ಯಾಧರ ಗುರೂಜಿ ಆ ಸಮಿತಿಯ ಪ್ರಬಂಧಕ ಮಂತ್ರಿಗಳಾಗಿ ಸೇವೆ ಸಲ್ಲಿಸಿದರು. ಈ ಸಮಿತಿಯ ಮೂಲಕ ನಿರಾಶ್ರಿತರು ಇರಲಿಕ್ಕೆ ಮನೆ ಅವರಿಗೆ ಊಟದ ವ್ಯವಸ್ಥೆ ಮಾಡಲು ಹೆಣಗಾಡತೊಡಗಿದರು.

ಹೀಗೆ ಎಲ್ಲಿಯೇ ಹೋಗಲಿ ಅವರು ತಮ್ಮ ಹೋರಾಟದ ಹೆಜ್ಜೆ ಗುರುತುಗಳನ್ನು ಅಲ್ಲಿ ಬಿಟ್ಟುಬಂದರು. ಕೆಲವು ದಿವಸ ಕಳೆದ ಮೇಲೆ ಹೀಗೆ ಅಡಗಿ ಕುಳಿತುಕೊಳ್ಳುವುದರಿಂದ ಎಲ್ಲಿಯೋ ಒಂದು ಕಡೆ ಹಾನಿಯಾಗ ಬಹುದೆಂದು ತಿಳಿದು ಏನಾದರೂ ಆಗಲಿ ಏನಾದರೂ ಸರಿ ಎಂದು ಸೋಲಾಪುರ ಬಿಟ್ಟು ಯಾದಗಿರಿಗೆ ಬಂದರು. ಅಂದು ವಿದ್ಯಾಧರ ಗುರೂಜಿ ಅವರಿಗೆ ಯಾದಗಿರಿಯ ಯುವಕರು ನಾಗರಿಕರು ಹೂಹಾರಗಳಿಂದ ಭವ್ಯ ಸ್ವಾಗತ ಕೋರಿ ಯಾದಗಿರಿಗೆ ಬರಮಾಡಿಕೊಂಡರು.



'ನಿರ್ವಾಸಿ ಸೇವಾ ಸಮಿತಿ' ಸೋಲಾಪುರ ಸ್ಥಾಪನೆ

ವಿದ್ಯಾಧರ ಗುರೂಜಿ, ಈಶ್ವರಲಾಲ ಭಟ್ಟಡ, ಕೌಶಲ್ಯಾ ಭಟ್ಟಡ, ಪಂಡಿತ ಮನೋಹರ ಲಾಲಾ, ಪಂಡಿತ ಕೃಷ್ಣದತ್ತ, ಪಂ. ಗಂಗಾರಾಮ ಆರ್ಯ, ಸಂಭಾಜಿರಾವ್ ಸಿಂಧೆ ಇತರರು

ವಂದೇ ಮಾತರಂ

ವಂದೇ ಮಾತರಂ, ವಂದೇಮಾತರಂ
ಸುಜಲಾಂ ಸುಫಲಾಂ ಮಲಯಜ ಶೀತಲಾಂ
ಸಸ್ಯ ಶ್ಯಾಮಲಾಂ ಮಾತರಂ ॥
ವಂದೇಮಾತರಂ

ಶುಭ್ರ ಜ್ಯೋತ್ಸ್ನಾ ಪುಲಕಿತ ಯಾಮಿನೀಂ
ಪುಲ್ಲ ಕುಸುಮಿತ ಧ್ರುಮದಲ ಶೋಭಿನೀಂ
ಸುಹಾಸೀನೀಂ ಸುಮಧುರ ಭಾಷಿಣಿಂ
ಸುಖದಾಂ ವರದಾಂ ಮಾತರಂ ॥
ವಂದೇ ಮಾತರಂ

ಬಂಗಾಲದ ಕವಿ ಸ್ವಾತಂತ್ರ್ಯ ಹೋರಾಟಗಾರ ಬಂಕಿಮಚಂದ್ರ ಚಟೋಪಾಧ್ಯಾಯರು ರಚಿಸಿದ 'ಆನಂದ ಮಠ' ಕಾದಂಬರಿಯಲ್ಲಿ ಮೂಡಿ ಬಂದ **"ವಂದೇ ಮಾತರಂ"** ಕ್ರಾಂತಿಗೀತೆ ಇಡೀ ಭಾರತೀಯರ ಗಮನ ಸೆಳೆದಿತ್ತು. ರಾಷ್ಟ್ರಭಕ್ತಿ, ದೇಶಪ್ರೇಮ, ಭಾಷಾಭಿಮಾನವನ್ನು ಮೂಡಿಸುವ ಈ ಕ್ರಾಂತಿ ಗೀತೆ ಸಕಲ ಭಾರತೀಯರ ಮನೆ



ಮಾತಾಗಿತ್ತು. ಈ ಗೀತೆಯನ್ನು ಮುಟ್ಟುಗೋಲು ಹಾಕಲು ಬ್ರಿಟಿಷ್ ಸರಕಾರ ಮುಂದೆ ಬಂದಾಗ ಬ್ರಿಟಿಷ್ ಸರಕಾರವನ್ನು ಪ್ರತಿಭಟಿಸಲು ಸ್ವಾತಂತ್ರ್ಯ ಹೋರಾಟಗಾರರು ಟೊಂಕ ಕಟ್ಟಿ ನಿಂತರು.

"ವಂದೇ ಮಾತರಂ" ಗೀತೆ ಇಡೀ ಭಾರತದಲ್ಲಿ ಹರಡಿದಂತೆ ನಿಜಾಂ ಪ್ರಾಂತಕ್ಕೂ ನುಗ್ಗಿ ಬಂದಿತು. ಈ ಗೀತೆಯನ್ನು ಮೊಟ್ಟಮೊದಲು ಉಸ್ಮಾನಿಯಾ ವಿಶ್ವವಿದ್ಯಾಲಯದ ಹಿಂದೂ ವಿದ್ಯಾರ್ಥಿಗಳು ಪ್ರಾರ್ಥನೆಯ ಗೀತೆಯೆಂದು ಏಕಕಂಠದಿಂದ ಸುಶ್ರಾವ್ಯವಾಗಿ ಹಾಡಿದರು. ಕೂಡಲೇ ವಿಶ್ವವಿದ್ಯಾಲಯದ ಕುಲಪತಿಗಳು ಈ ಗೀತೆಯನ್ನು ಹಾಡಬಾರದೆಂದು ವಿದ್ಯಾರ್ಥಿಗಳಿಗೆ ಹೇಳಿದರು. ಸ್ವಾತಂತ್ರ್ಯ ಪ್ರೇಮಿ ವಿದ್ಯಾರ್ಥಿಗಳು ಕುಲಪತಿಗಳ ಮಾತನ್ನು ಉಲ್ಲಂಘಿಸಿ ಕಡ್ಡಾಯವಾಗಿ ಮರುದಿನ ಪ್ರಾರ್ಥನಾ ಗೀತೆಯಲ್ಲಿ ವಂದೇ ಮಾತರಂ ಗೀತೆಯನ್ನು ಹಾಡಿದರು. ಅದರಿಂದ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡುತ್ತಿದ್ದ ಹಿಂದು ವಿದ್ಯಾರ್ಥಿಗಳ ಹೆಸರನ್ನು ತೆಗೆದು ಹಾಕಿದರು. ಆದರೂ ವಿದ್ಯಾರ್ಥಿಗಳು ಸೊಪ್ಪು ಹಾಕಲಿಲ್ಲ. ಉಸ್ಮಾನಿಯಾ ವಿಶ್ವವಿದ್ಯಾಲಯವನ್ನು ಬಿಟ್ಟು ಬೇರೆ ಬೇರೆ ವಿಶ್ವವಿದ್ಯಾಲಯದಲ್ಲಿ ತಮ್ಮ ಹೆಸರು ನೊಂದಾಯಿಸಿ ಕೊಂಡು ಅಭ್ಯಾಸ ಮುಂದುವರಿಸಿದರು. ಹಾಗೇ ಹೊರಗೆ ಬಂದ ವಿದ್ಯಾರ್ಥಿಗಳಲ್ಲಿ ಜಗನ್ನಾಥರಾವ್ ಚಂಡರಕಿಯುವರೂ ಇದ್ದರು. ಜಗನ್ನಾಥರಾವ್ ಚಂಡರಕಿ ಅವರೊಡನೆ ಶಾಲಾಕಾಲೇಜುಗಳಲ್ಲಿ ಹಾಡಿಸಲು ವಿದ್ಯಾಧರ ಗುರೂಜಿಯವರು ಸಜ್ಜಾಗಿಯೇ ನಿಂತಿದ್ದರು.

ಉಸ್ಮಾನಿಯೂ ವಿಶ್ವವಿದ್ಯಾಲಯದಲ್ಲಿ ನಡೆದ ಈ ಘಟನೆ ಇಡೀ ಹೈದರಾಬಾದ್ ಪ್ರಾಂತದಲ್ಲಿ ಹರಡಿತು 'ವಂದೇ ಮಾತರಂ' ಗೀತೆಯನ್ನು ಯಾರೂ ಹಾಡಬಾರದೆಂದು ರಜಾಕಾರರು ಪ್ರತಿಭಟಿಸತೊಡಗಿದರು. ಕಟ್ಟಾ ಮುಸಲ್ಮಾನರು ಅಲ್ಲಲ್ಲಿ ವಿರೋಧಿಸತೊಡಗಿದರು. ವಿದ್ಯಾಧರ ಗುರೂಜಿ ಅಂತಹ ನಿಷ್ಠಾವಂತ ಹೋರಾಟಗಾರರು ಸುಮ್ಮನಿರುವುದು ಸಾಧ್ಯವೇ? ಎಂದೂ ಆಗದ ಮಾತು. ವಿದ್ಯಾಧರ ಗುರೂಜಿ ಅವರು ಗೆಳೆಯರ ಗುಂಪು ಕಟ್ಟಿಕೊಂಡು ಶಾಲೆ, ಕಾಲೇಜು ನಡೆದ ಊರುಗಳಿಗೆ ಹೋಗಿ ಶಾಲೆಗಳಲ್ಲಿ 'ವಂದೇ ಮಾತರಂ' ಗೀತೆಯನ್ನು ಕಡ್ಡಾಯವಾಗಿ ಹಾಡಬೇಕೆಂದು 'ವಂದೇ ಮಾತರಂ' ಗೀತೆಯ ಪ್ರತಿ ಮಾಡಿಕೊಟ್ಟು ಹಾಡಿಸತೊಡಗಿದರು. 'ವಂದೇ ಮಾತರಂ' ಹೈದರಾಬಾದ್ ಪ್ರಾಂತದ ಮುಸಲ್ಮಾನ ಜನರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿತು.



ವಿದ್ಯಾಧರ ಗುರೂಜಿ
ಅವರಿಗೆ ಸ್ವಾತಂತ್ರ್ಯ
ಹೋರಾಟದಲ್ಲಿ ಸ್ಫೂರ್ತಿ
ನೀಡಿದ ಮತ್ತೊಬ್ಬ
ವೀರಮಹಿಳೆ
ಲಕ್ಷ್ಮೀ ಸೆಹಗಲ್

'ವಂದೇ ಮಾತರಂ' ಗೀತೆ ಹಿಂದುಗಳ ಒಗ್ಗಟ್ಟಿಗೆ ಹಿಂದುಗಳು ಬ್ರಿಟಿಷರ ವಿರುದ್ಧ, ನಿಜಾಮರ ವಿರುದ್ಧ ಸಿಡಿದೇಳಲು ದಾರಿ ಮಾಡಿಕೊಟ್ಟಿತು. ಹೆಣ್ಣುಮಕ್ಕಳು 'ವಂದೇ ಮಾತರಂ' ಗೀತೆಯನ್ನು ಬೀಸುವಾಗ, ಕುಟ್ಟುವಾಗ ದನಿ ತೆಗೆದು ಹಾಡತೊಡಗಿದರು. ಶಾಲಾ ಮಕ್ಕಳ ಬಾಯಲ್ಲಿ 'ವಂದೇ ಮಾತರಂ' ಗೀತೆ ಚಾಕಲೇಟಿನಂತೆ ಪ್ರಿಯವಾಯಿತು. ರೈತರು ಹರಗುವಾಗ, ಉತ್ತುವಾಗ, ಬಿತ್ತುವಾಗ ಬೇರೆ ಬೇರೆ ಧಾಟಿ ಹಾಕಿ ಹಾಡತೊಡಗಿದರು. ಹಿಂದುಗಳ ಈ ಒಗ್ಗಟ್ಟು ರಜಾಕಾರರಿಗೆ ನುಂಗಲಾರದ ತುತ್ತಾಯಿತು. ಬ್ರಿಟಿಷರಿಗೆ ಭಾರತೀಯರ ಜಾಗೃತಿ ಸಹಿಸದಷ್ಟು ಸಿಟ್ಟು ಉಕ್ಕಿ ಬರತೊಡಗಿತು. ಸ್ವಾತಂತ್ರ್ಯ ಹೋರಾಟಗಾರರಿಗೆ 'ಲಾಠಿ' ಏಟು ಮೈಮೇಲೆ ಬಿದ್ದರೆ ಸಾಕು 'ವಂದೇ ಮಾತರಂ' ಎಂಬ ಘೋಷಣೆ ಹೊರಬರುತ್ತಿತ್ತು. ಅಷ್ಟು ಗಟ್ಟಿಯಾಗಿದ್ದರು ಭಾರತೀಯರು. ಭಾರತಕ್ಕೆ ಸ್ವಾತಂತ್ರ್ಯ ಲಭಿಸದ ಮುನ್ಸೂಚನೆ ಕಾಯ್ದು ಕುಳಿತಿದ್ದಿತು.

ಭಾರತ ದೇಶಕ್ಕೆ ಸ್ವಾತಂತ್ರ್ಯ ಲಭಿಸಿತು

1947 ಆಗಸ್ಟ್ 15 ರಂದು ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು. "ಮಹಾತ್ಮಾ ಗಾಂಧೀಜಿ ಕಿ – ಜೈ" ಎಂಬ ಪ್ರಚಂಡ ಜಯಘೋಷಣೆಯ ಮಧ್ಯೆ ಸ್ವತಂತ್ರ ಭಾರತವು ಸರ್ವತಂತ್ರ ಸ್ವತಂತ್ರ ಸಾರ್ವಭೌಮಾಧಿಕಾರವನ್ನು ವಹಿಸಿಕೊಂಡಿತು. ಆಗ ಪ್ರಧಾನಮಂತ್ರಿ ಪಂಡಿತ ಜವಾಹರಲಾಲ ನೆಹರೂಜಿ ಅವರು ದಿಲ್ಲಿಯ ಐತಿಹಾಸಿಕ ಕೆಂಪು ಕೋಟೆಯ ಮೇರೆ ತ್ರಿವರ್ಣ ಧ್ವಜವನ್ನು ಹಾರಿಸಿದರು. ಅಲ್ಲಿ ಸೇರಿದ್ದ ಅಸಂಖ್ಯಾತ ಭಾರತೀಯರು ಜಯಘೋಷ ಕರತಾಡನೆ ಗಳೊಂದಿಗೆ ಪಂಡಿತ ಜವಾಹರಲಾಲ ನೆಹರೂಜಿ ಅವರು ಹರ್ಷ ಪುಲಕಿತರಾದರು. ಆಗ ಅವರು ಭಾವಪರವಶರಾಗಿ ಕಂಠ ತುಂಬಿ ಮಾತನಾಡುತ್ತ "ಸಮಸ್ತ ಪ್ರಪಂಚವು ನಿದ್ರಿಸುತ್ತಿದ್ದಂತೆ ಭಾರತವು 1947 ಆಗಸ್ಟ್ 14 ರಂದು ಮಧ್ಯರಾತ್ರಿ ಸ್ವಾತಂತ್ರ್ಯವನ್ನು ಘೋಷಿಸಿತು. ಭಾರತವು ತನ್ನದೇ ಆದ ಭವ್ಯ ವ್ಯಕ್ತಿತ್ವವನ್ನು ಇನ್ನು ರೂಪಿಸಿಕೊಳ್ಳಲಿದೆ" ಎಂದು ಹೃದಯ ತುಂಬಿ ಹೇಳುತ್ತ "ಸಮಸ್ತ ಭಾರತೀಯರು



ದೇಶಸೇವೆಗೆ ಕಂಕಣ ಬದ್ಧರಾಗಬೇಕೆಂದು ಭಿನ್ನವಿಸಿಕೊಂಡರು. ಇದುವರೆಗೂ ಭಾರತ, ಗುಲಾಮಗಿರಿಯಿಂದ ತಲೆ ತಗ್ಗಿಸಿತ್ತು. ಅಪಮಾನದಿಂದ ಮುಖ ಮುಚ್ಚಿಕೊಂಡಿತ್ತು. ಬಡತನ, ಹಸಿವೆ, ಅಜ್ಞಾನ, ಅನಾರೋಗ್ಯದಿಂದ ಬಳಲಿತು. ನಿರುದ್ಯೋಗ, ನಿರಾಶದಿಂದ ತತ್ತರಿಸಿತು. ಈಗ ಆ ಕಾಲ ಹಿಂದಾಯಿತು. ಬಡವರ ಶೋಷಣೆಯನ್ನು ನಿಲ್ಲಿಸಿ ಜನಜೀವನವನ್ನು ಸುಧಾರಿಸುತ್ತೇವೆ" ಎಂದು ಗಟ್ಟಿಯಾಗಿ ಹೇಳಿ ದೇಶ ಸೇವೆಗೆ ಕಂಕಣ ಬದ್ಧರಾಗಿ ನಿಂತರು.

ಪ್ರಥಮ ಪ್ರಧಾನಿ ಪಂಡಿತ ಜವಾಹರಲಾಲ ನೆಹರೂಜಿಯವರು ತಮ್ಮ ಆಡಳಿತ ವ್ಯವಸ್ಥೆಯಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಸುಮಾರು 564ಕ್ಕೂ ಹೆಚ್ಚು ಇದ್ದ ಸಣ್ಣಪುಟ್ಟ, ಹಾಗೂ ದೊಡ್ಡ ದೊಡ್ಡ ರಾಜ್ಯ, ಪ್ರಾಂತ, ಸಂಸ್ಥಾನಗಳನ್ನು ಭಾರತದ ಒಕ್ಕೂಟಕ್ಕೆ ತರುವುದು ಭಾರತಕ್ಕೆ ಬಹುದೊಡ್ಡ ಸವಾಲಾಗಿತ್ತು. ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲರ ಸಮರ್ಥ ನೇತೃತ್ವದಲ್ಲಿ ಭಾರತದ ಏಕತೆಯನ್ನು ಸಾಧಿಸಲಾಯಿತು. ಒಂದು ಕಡೆ ಮುಸಲ್ಮಾನರಿಗೆ ರಕ್ಷಣೆ ನೀಡುವ ಸವಾಲು ಎದುರಾಗದೆ ಇನ್ನೊಂದು ಕಡೆ ಕಾಶ್ಮೀರದ ಸಮಸ್ಯೆ ಎದುರಾಯಿತು. ಭಾರತ ಅನೇಕ ಭಾರಿ ಮತ ಪಂಥ ಪಂಗಡ ವರ್ಣ ವರ್ಗಗಳಿಂದ ಕೂಡಿದ ದೇಶ. ಈ ದೇಶ ಎಲ್ಲ ಧರ್ಮದ ಜನರಿಗೆ ಸೇರಿದ ಜಾತ್ಯಾತೀತ ರಾಷ್ಟ್ರವಾಗಬೇಕೆಂದು ಬಯಸಿ ಅನೇಕತೆಯಲ್ಲಿ ಏಕತೆಯನ್ನು ಸಾಧಿಸಿ ತೋರಿಸಿದರು. ಇಂದು ಭಾರತ ಅನೇಕತೆಯಲ್ಲಿ ಏಕತೆಯನ್ನು ಮೆರೆಯುತ್ತಲಿದೆ. ನಮ್ಮದು ಜ್ಯಾತ್ಯಾತೀತ ರಾಷ್ಟ್ರ. 'ಸತ್ಯಮೇವ ಜಯತೆ' ನಮ್ಮ ಘೋಷಣೆ. ಈ ಘೋಷಣೆಯಡಿಯಲ್ಲಿ ಪಂಡಿತ ಜವಾಹರಲಾಲ ನೆಹರೂಜಿ ಅವರು ದಿನಕ್ಕೆ 15 ರಿಂದ 18 ಗಂಟೆಗಳವರೆಗೆ ಎಡಬಿಡದೆ ಕಾರ್ಯ ನಿರ್ವಹಿಸತೊಡಗಿದರು. ಸಮಸ್ತ ಭಾರತೀಯರು ಮಹಾತ್ಮಾ ಗಾಂಧೀಜೀ ಕೀ ಜೈ. ಪಂಡಿತ ಜವಾಹರಲಾಲ ನೆಹರೂ ಕಿ ಜೈ. ಸರದಾರ ವಲ್ಲಭಬಾಯಿ ಪಟೇಲ ಕೀ ಜೈ ಎಂದು ಜಯಘೋಷ ಮಾಡತೊಡಗಿದರು. ನಿಜಾಮ ಸಂಸ್ಥಾನದ ಜನರೂ ಸ್ವಾತಂತ್ರ್ಯವನ್ನು ಬಯಸ ತೊಡಗಿದರು. ಅದಕ್ಕಾಗಿ ಅಹೋರಾತ್ರಿ ಹೋರಾಡಲು ಸಿದ್ಧರಾದರು.

ಸ್ವತಂತ್ರ ಸಾರಿಕೊಂಡ ಹೈದರಾಬಾದ್ ನಿಜಾಮ ಮೀರ ಉಸ್ಮಾನ ಅಲಿಖಾನ ಬಹದ್ದೂರ

ಭಾರತದ ಸ್ವಾತಂತ್ರ್ಯ ಚಳುವಳಿಯೊಂದಿಗೆ ಹೈದರಾಬಾದ್ ನಿಜಾಮ ಸಂಸ್ಥಾನವು ವಿಮೋಚನೆಗೊಳ್ಳಬೇಕೆಂದು ನಿಜಾಂ ಪ್ರಾಂತದ ಜನರೂ ಹೋರಾಡುತ್ತಿದ್ದರು. ನಿಜಾಮರ ದಬ್ಬಾಳಿಕೆಯಿಂದ ಹೈದರಾಬಾದ್ ಸಂಸ್ಥಾನ ವಿಮೋಚನೆಗೊಳ್ಳಲಿಲ್ಲ. ಜಗತ್ತಿನ ಏಳನೆಯ ಶ್ರೀಮಂತನೆಂದು ಹೆಸರು ಪಡೆದಿದ್ದ ನಿಜಾಮ ಮೀರ ಉಸ್ಮಾನ್ ಅಲಿಖಾನ ಬಹದ್ದೂರ ಅವರು ಭಾರತದಿಂದ ಪ್ರತ್ಯೇಕ ರಾಷ್ಟ್ರವಾಗಿ ಹೈದರಾಬಾದ್ ಸಂಸ್ಥಾನ ಉಳಿಸಿಕೊಳ್ಳಲು ಬಲವಾದ ಆಶೆ ಪಟ್ಟರು. ಏಕೆಂದರೆ ಬ್ರಿಟಿಷರು ಭಾರತ ದೇಶವನ್ನು ಬಿಟ್ಟು ಹೋಗುವಾಗ ದೇಶಿ ರಾಜರಿಗೆ ನೀವು ಭಾರತದ ಒಕ್ಕೂಟದಲ್ಲಾದರೂ ಸೇರಬಹುದು, ಪಾಕಿಸ್ತಾನದಲ್ಲಾದರೂ ಸೇರ ಬಹುದು, ತೋಳಬಲವಿದ್ದರೆ ಸ್ವತಂತ್ರವಾಗಿಯೂ ಇರಬಹುದು ಈ ಆಯ್ಕೆ, ತೀರ್ಮಾನ ನಿಮಗೆ ಬಿಟ್ಟುಕೊಟ್ಟದ್ದು ಎಂದು ಹೇಳಿಹೋದರು.



ಇದರರ್ಥ ಭಾರತ ಛಿದ್ರ ಛಿದ್ರವಾಗಲಿ, ಅದು ಮೂರಾಬಟ್ಟೆಯಾಗಿ ಹೋಗಲಿ ಎಂಬುವುದೇ ಅವರ ಕುಟಿಲ ನೀತಿಯಾಗಿತ್ತು.


ಬ್ರಿಟಿಷರ ಕುಟಿಲ ನೀತಿಯ ಲಾಭ ಪಡೆಯಲು ಹೈದರಾಬಾದ್ ನಿಜಾಮರು ಭಾರತದಿಂದ ಬ್ರಿಟಿಷರು ಎಂದು ಕಾಲ್ತೆಗೆಯುವರೋ ಅಂದಿನಿಂದ ತನ್ನನ್ನು ಸ್ವತಂತ್ರನೆಂದು ಘೋಷಿಸುವ ಅಧಿಕಾರ ಇರುವುದಾಗಿ ಸಾರಿದನು. ಖಾಸಿಂ ರಜ್ವಿ ನಾಯಕತ್ವದಲ್ಲಿ "ಇತ್ತೇಹಾದ್-ಉಲ್-ಮುಸಲ್ಮಾನ್" ಪಕ್ಷ ಬಹಿರಂಗವಾಗಿ ನವಾಬನ ಪರವಾಗಿ ಪ್ರದರ್ಶನಗಳನ್ನು, ಮೆರವಣಿಗೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ನಡೆಸಹತ್ತಿತು. ಅದಕ್ಕೆ ಜಾತಿಯ ಬಣ್ಣವನ್ನು ಬಳಿಯಿತು. ಆಗ ಕಾಂಗ್ರೆಸ್ ಪಕ್ಷ, ಆರ್ಯಸಮಾಜ, ಪಿ.ಎಸ್.ಪಿ. ಮತ್ತು ಕಮ್ಯುನಿಸ್ಟ್ ಪಕ್ಷದಿಂದ ಉಗ್ರವಾಗಿ ನಡೆಯುತ್ತಿದ್ದ ಚಳುವಳಿಗಳನ್ನು ಹತ್ತಿಕ್ಕಲು ಇತ್ತೇಹಾದ್-ಉಲ್-ಮುಸಲ್ಮಾನ್ ಪಕ್ಷವು 'ರಜಾಕಾರ' (ಅರೆಸೈನಿಕರು) ಎಂಬ ಒಂದು ಸಹ ಸೈನಿಕ ಸಂಘಟನೆಯನ್ನು ಸ್ಥಾಪಿಸಿತು.

ಈ ಮಧ್ಯ ಮೇ 3, 1943ರಂದು ಪ್ರಜಾಸಮಾಜವಾದಿ ಪಕ್ಷದ ಜನರಲ್ ಸೆಕ್ರೆಟರಿ ಜಯಪ್ರಕಾಶ ನಾರಾಯಣ ಅವರು ಹೈದರಾಬಾದಿಗೆ ಭೇಟಿ ನೀಡಿ ಕರ್ಬಲಾ ಮೈದಾನದಲ್ಲಿ ಭಾರಿ ಸಭೆಯನ್ನು ಉದ್ದೇಶಿಸಿ ಅತ್ಯಂತ ಉಗ್ರವಾಗಿ ಭಾಷಣ ಮಾಡಿದರು. "ನಿಜಾಮನು ಪ್ರಜೆಗಳ ಅಭಿಪ್ರಾಯವನ್ನು ಮನ್ನಿಸಿ ಗೌರವಿಸುವುದಾದರೆ ಜನರು ನಿಜಾಮನನ್ನು ಗೌರವಿಸುತ್ತಾರೆ. ಇಲ್ಲದೆ ಹೋದರೆ ಇತರ ನಿರಂಕುಶ ರಾಜರಂತೆ ಈತನು ಖಂಡಿತವಾಗಿ ನಾಶವಾಗುತ್ತಾನೆ" ಎಂದು ಹೇಳಿ ತಾವೂ ಸಹ ತಮ್ಮ ಭಾಷಣದಲ್ಲಿ ಹೈದರಾಬಾದ್ ಸಂಸ್ಥಾನದ ಜನರ ಅಭಿಪ್ರಾಯಗಳಿಗೆ ಮನ್ನಣೆ ನೀಡಬೇಕೆಂದು ಸಭೆಯಲ್ಲಿ ಆಗ್ರಹಪೂರ್ವಕ ಒತ್ತಾಯಿಸಿದರು. ಇದರಿಂದ ಹಸಿದ ಹುಲಿಯಂತೆ ಆರ್ಭಟಿಸುತ್ತಿದ್ದ ಸ್ವಾತಂತ್ರ್ಯ ಹೋರಾಟಗಾರರು ಇನ್ನೂ ಹೂಂಕರಿಸ ತೊಡಗಿದರು. 'ಜವಾಬ್ದಾರಿ ಸರಕಾರ ಇಲ್ಲಿ ಇರಬೇಕೆಂದು' ಜನರನ್ನು ಇನ್ನೂ ಹುರಿದುಂಬಿಸಿದರು. ಇದರಿಂದ ನಿಜಾಮ ಸರಕಾರ ಇಂಗು ತಿಂದ ಮಂಗನಂತೆ ಆಯಿತು. ಇಡಿ ಹೈದರಾಬಾದ್ ಪ್ರಾಂತವೇ ಜಯಪ್ರಕಾಶ್ ನಾರಾಯಣರ ಭಾಷಣದಿಂದ ಪ್ರಚೋದನೆಗೊಂಡಿತು. ಕಾಂಗ್ರೆಸ್ ಪಕ್ಷ, ಆರ್ಯಸಮಾಜದ ಹುರಿಯಾಳುಗಳು ಕಮ್ಯುನಿಸ್ಟ್ ಬಂಧುಗಳು ತ್ರಿವರ್ಣ

ಧ್ವಜ ಹಿಡಿದು ಜಯಪ್ರಕಾಶ್ ನಾರಾಯಣ ಜಿಂದಾಬಾದ್ ಎಂದು ಘೋಷಣೆ ಕೂಗುತ್ತ ಓಣಿ, ಓಣಿಗಳಲ್ಲಿ 'ವಂದೇ ಮಾತರಂ' ಘೋಷಣೆ ಮುಗಿಲು ಮುಟ್ಟಿತು.

ಇಡೀ ಹೈದರಾಬಾದ್ ಸಂಸ್ಥಾನದ ಜನರು ಸ್ವಾತಂತ್ರ್ಯಕ್ಕಾಗಿ ರುಧೀರ ಮೂರ್ತಿಗಳಾಗಿ ನಿಂತುಕೊಂಡರು. ಏನಾದರೂ ಮಾಡಿ ಸ್ವಾತಂತ್ರ್ಯ ಪಡೆಯಲೇಬೇಕು ಎಂದು ಪಣ ತೊಟ್ಟು ನಿಂತರು. ಅದಕ್ಕಾಗಿ ತಮ್ಮ ಪ್ರಾಣಕೊಡಲು ಹಿಂಜರಿಯಲಿಲ್ಲ. ಆಗ ನಿಜಾಮ ಸರಕಾರ ತನ್ನ ಪ್ರಾಂತದಾದ್ಯಂತ 'ತ್ರಿವರ್ಣ ಧ್ವಜ ಹಿಡಿದು ವಂದೇ ಮಾತರಂ' ಹಾಕುವ ಘೋಷಣೆ ನಿಲ್ಲಿಸಬೇಕೆಂದು ಹೇಳಿತು. ರೊಚ್ಚಿಗೆದ್ದ ಜನರು ನಿಜಾಮರ ಮಾತಿಗೆ ಧಿಕ್ಕಾರ ಹಾಕಿದರು. ಆಗ ರಜಾಕಾರರು ಬಹಿರಂಗವಾಗಿ ಪ್ರಕಟವಾಗಿ ಜನರನ್ನು ಸಿಕ್ಕಲ್ಲಿ ಹಿಡಿದು ಕೊಲ್ಲತೊಡಗಿದರು. ಬಹು ಸಂಖ್ಯಾತರಾಗಿದ್ದ ಹಿಂದುಗಳಿಗೆ ವಿಪರೀತ ತೊಂದರೆ ಕೊಟ್ಟರು. ಅತ್ಯಾಚಾರ, ಅನ್ಯಾಯಗಳ ಸರಮಾಲೆಯನ್ನೇ ಕಟ್ಟಿ ಜನಸಾಮಾನ್ಯರನ್ನು, ಹೆಣ್ಣುಮಕ್ಕಳನ್ನು, ಮಕ್ಕಳನ್ನು ಮಣ್ಣು ಮುಕ್ಕಿಸತೊಡಗಿದರು. ರಜಾಕಾರರ ಸೊಕ್ಕನ್ನು ಅಡಗಿಸಲು ಪ್ರಾಣದ ಹಂಗುದೊರೆದು ನಿಂತಿದ್ದ ತರುಣ ವೀರರನ್ನು ಸದೆಬಡೆದು ಜೈಲಿಗೆ ಅಟ್ಟತೊಡಗಿದರು ಈ ಕ್ರಾಂತಿಯಲ್ಲಿ ಅನೇಕ ಜನರು ತಮ್ಮ ಹೆಂಡರು ಮಕ್ಕಳನ್ನು ಕಳೆದುಕೊಂಡು ಕಂಗಾಲಾದರು. ಕೆಲವರು ತಮ್ಮ ಜೀವ ಕೈಯಲ್ಲಿ ಹಿಡಿದುಕೊಂಡು ಆಗ ಸ್ವತಂತ್ರವಾಗಿದ್ದ ಭಾರತದ ಗಡಿ ಪ್ರದೇಶಗಳಾದ ದುಧನಿ, ತಾಳಿಕೋಟಿ, ಸೋಲಾಪುರ ಮುಂತಾದ ಕಡೆ ಓಡಿ ಹೋಗಿ ತಮ್ಮ ಮಾನ ಪ್ರಾಣ ಕಾಪಾಡಿಕೊಳ್ಳತೊಡಗಿದರು. ಈ ಬಿಕ್ಕಟ್ಟಿನ ಸಮಯದಲ್ಲಿ ವಿದ್ಯಾಧರ ಗುರೂಜಿ ಅವರು ಸೋಲಾಪುರಕ್ಕೆ ಹೋಗಿ ವಲಸೆ ಬಂದ ನಿರಾಶ್ರಿತರ ರಕ್ಷಣೆಗೆ ನಿಂತರು. ಅನ್ನ, ನೀರು, ವಸತಿ ಬಟ್ಟೆ ಬರೆಗಳಿಲ್ಲದ ಜನರಿಗೆ, ಅಲ್ಲಿಯ ಜನರ ಸಹಕಾರ ಪಡೆದು ಅವರಿಗೆ ತಕ್ಕ ನೆರವು ನೀಡಿ ನಿಜವಾದ ಆತ್ಮೀಯ ಬಂಧು ವೆಂಬ ಪ್ರೀತಿಗೆ ಪಾತ್ರರಾದರು.

ನಿಜಾಮ ಪ್ರಾಂತದ ಹಿಂದುಗಳ ಪೂರ್ವಜನ್ಮದ ಪುಣ್ಯದ ಬಲದಿಂದ ವಜ್ರದ ಹೃದಯದ, ಭಾರತದ ಗೃಹಮಂತ್ರಿ ಸರ್ದಾರ್ ವಲ್ಲಭಬಾಯಿ ಪಟೇಲ ಮುತ್ಸದ್ದಿತನ, ಚಾಣಾಕ್ಷತನದಿಂದ ನಡೆದ ಸೇನಾ ಕಾರ್ಯಾಚರಣೆ



ಯುವಕರ ಹೃದಯ ಸಾಮ್ರಾಟ
ಪಂಡಿತ ನರೇಂದ್ರ ಜಿ
ಹೈದರಾಬಾದ್ ವಿಮೋಚನಾ
ಸಂಗ್ರಾಮದ ಧುರಿಣ ವಿದ್ಯಾಧರ
ಗುರೂಜಿ ಅವರಿಗೆ ವರದ ಹಸ್ತ
ನೀಡಿದ ಮಹನೀಯರು

ಯಲ್ಲಿ ನಿಜಾಮರು 1948ರ ಸೆಪ್ಟೆಂಬರ್ 17 ರಂದು ಶರಣಾಗತರಾಗಿ ನಿಜಾಂ ಪ್ರಾಂತವನ್ನು ಬಿಟ್ಟುಕೊಟ್ಟರು.

ಹೈದರಾಬಾದ್ ಸಂಸ್ಥಾನ ವಿಮೋಚನೆಯ ನಂತರ ಶ್ರೀ ವಿದ್ಯಾಧರ ಗುರೂಜಿಯವರು ಸೋಲಾಪುರದಿಂದ ಯಾದಗಿರಿಗೆ ಆಗಮಿಸಿದರು. ಅವರ ಸಂಗಡ ವಲಸೆ ಹೋಗಿದ್ದ ಅಸಂಖ್ಯಾತ ಜನರೂ ಆಗಮಿಸಿದರು. ಆಗ ಯಾದಗಿರಿ ರೈಲು ನಿಲ್ದಾಣದಲ್ಲಿ ವಿದ್ಯಾಧರ ಗುರೂಜಿಯವರಿಗೆ ಭವ್ಯ ಸ್ವಾಗತ ನೀಡಿ ಬರಮಾಡಿಕೊಳ್ಳಲಾಯಿತು. ಆಗ ರಾಷ್ಟ್ರನಾಯಕರು ವಿದ್ಯಾಧರ ಗುರೂಜಿಯವರ ಸಾಹಸ, ತಾಳ್ಮೆ, ಜಾಣ್ಮೆಯನ್ನು ಹೊಗಳಿದ್ದೇ ಹೊಗಳಿದ್ದು. ನಿಗರ್ವಿಗಳಾದ ವಿದ್ಯಾಧರ ಗುರೂಜಿಯವರು ಎಂದಿನಂತೆ ತಮ್ಮ ವಿನಯವನ್ನು ತೋರಿಸಿ ಎಲ್ಲರೊಳಗೊಂದಾಗಿ ಆರ್ಯಸಮಾಜದ ಕಟ್ಟಡಕ್ಕೆ ಆಗಮಿಸಿದರು.

ಜನ ನಾಯಕ ವಿದ್ಯಾಧರ ಗುರೂಜಿ

ಮೂವತ್ಮೂರು, ಮೂವತ್ನಾಲ್ಕು ವರುಷದ ಏರು ಜವ್ವನದ ಯುವಕ, ಕೆಂಪು ಬಣ್ಣದ ಗುರೂಜಿ ತುಂಬ ಎತ್ತರದ ನಿಲುವು. ಹರವಾದ ಹಣೆ ನೀಟಾದ ಮೂಗು ಕೇದಿಗೆಯ ಗರಿಯಂತೆ ಆಕರ್ಷಕವಾದ ಮುಖಮಂಡಲ. ತಿದ್ದಿ ತೀಡಿದ ಗದ್ದ, ತುಟಿ ಹೊಳಪುಳ್ಳ ಕಣ್ಣುಗಳು. ಎತ್ತರದ ಹುಬ್ಬುಳ್ಳ ಗುರೂಜಿ ಅಪ್ಪಟ ದೇಶಭಕ್ತ. ಸ್ವಾತಂತ್ರ್ಯ ಪ್ರೇಮಿ, ಮಾನವತಾವಾದಿ. ಶ್ರೇಷ್ಠ ಅಧ್ಯಾಪಕ. ಹಿಂದಿ ಭಾಷಾ ತಜ್ಞ, ಅಪ್ರತಿಮ ಹೋರಾಟಗಾರ. ನಿಷ್ಠಾವಂತ ಬ್ರಹ್ಮಚಾರಿ. ಹಿಂದಿನ ಋಷಿ, ಮುನಿಗಳು ತುಳಿದ ದಾರಿಯಲ್ಲಿ ಮಿರ್ರನೆ ಮಿಂಚುವ ವಿದ್ಯಾಧರ ಗುರೂಜಿ ಅವರು ದೇಶಕ್ಕೆ ಸ್ವಾತಂತ್ರ್ಯ ದೊರಕಿತು. ಹೈದಾರಾಬಾದ್ ವಿಮೋಚನೆಗೊಂಡಿತು ಎಂದು ಇಷ್ಟಕ್ಕೆ ಇವರು ಸಮಾಧಾನ ಪಟ್ಟುಕೊಳ್ಳಲಿಲ್ಲ. ದೇಶದಲ್ಲಿದ್ದ ಬಡತನ, ದಾರಿದ್ರ್ಯ, ಅನಾರೋಗ್ಯ, ನಿರುದ್ಯೋಗ, ಸೋಮಾರಿತನ, ಅಸಮಾನತೆ, ಅಸ್ಪೃಶ್ಯತೆ, ಜೂಜು, ಕುಡಿತಗಳ ಕಂದಕದಲ್ಲಿ ಬಿದ್ದು ಹೊರಳಾಡುತ್ತಿದ್ದ ಭಾರತೀಯರನ್ನು ಕಂಡು



ಇವರ ಮನ ಮರ ಮರ ಮರುಗತೊಡಗಿತು. ಒಂದುಕಡೆ ಶ್ರೀಮಂತರ ಅಟ್ಟಹಾಸ. ಇನ್ನೊಂದು ಕಡೆ ಬಡವರು ಅನುಭವಿಸುತ್ತಿದ್ದ ಉಪವಾಸ. ಅಲೆಮಾರಿ ಜನರ ವನವಾಸ. ಅಸಹಾಯಕರ ನರಳಾಟ. ಕೈಲಾಗದವರ ಹೊರಳಾಟ ಇವರ ಮೃದು ಮನಸ್ಸನ್ನು ಹಿಂಡತೊಡಗಿದವು.

ನಮ್ಮದು ಭಾರತದಲ್ಲಿ ಸೂರ್ಯ ಮುಳುಗದ ಸಾಮ್ರಾಜ್ಯವೆಂದು ಬಿಮ್ಮನೇ ಬೀಗುತ್ತಿದ್ದ ಬ್ರಿಟಿಷ್‌ರ ವಿರುದ್ಧ, ಜಗತ್ತಿನ ಏಳನೇ ಶ್ರೀಮಂತನೆಂದು ಖ್ಯಾತವೆತ್ತ ಹೈದರಾಬಾದ್ ನಿಜಾಮರ ವಿರುದ್ಧ ಸೆಟೆದೆದ್ದ ವಿದ್ಯಾಧರ ಗುರೂಜಿ ಬಡವ-ಬಲ್ಲಿದರ ನಡುವೆ ಇದ್ದ ಕಂದಕವನ್ನು ಮುಚ್ಚಲು ಉಪಾಯ ಹುಡುಕ ತೊಡಗಿದ್ದರು. ಹೈದರಾಬಾದ್ ಸಂಸ್ಥಾನದ ವಿಮೋಚನೆಯಲ್ಲಿ ರಜಾಕಾರರ ಕ್ರೂರ ದಬ್ಬಾಳಿಕೆಯಿಂದ ನುಚ್ಚುನೂರಾಗಿ ಹೋಗಿದ್ದ ಕುಟುಂಬಗಳಿಗೆ ಸಾಂತ್ವನ ನೀಡಲು ಬಹುವಾಗಿ ಶ್ರಮಿಸತೊಡಗಿದರು.

ಹೈದರಾಬಾದ್ ಸಂಸ್ಥಾನದ ವಿಮೋಚನೆಯಲ್ಲಿ ಹೆಂಡರು-ಮಕ್ಕಳನ್ನು ಕಳೆದುಕೊಂಡವರನ್ನು, ತಾಯಿ-ತಂದೆ ಕಳೆದುಕೊಂಡ ಮಕ್ಕಳನ್ನು ಗುರುಹಿರಿಯರನ್ನು ಕಳೆದುಕೊಂಡ ಸಮಾಜದ ಅಸ್ತವ್ಯಸ್ತ ನೋಡಿ ಅದರ ಪರಿಹಾರಕ್ಕೆ ಹೆಣಗತೊಡಗಿದರು.

ಹಿಂದಿ ಭಾಷೆಯಲ್ಲಿ ಪಾಂಡಿತ್ಯ ಪಡೆದ ವಿದ್ಯಾಧರ ಗುರೂಜಿಯವರಿಗೆ ಭಾರತದಲ್ಲಿದ್ದ ದೊಡ್ಡ ದೊಡ್ಡ ದೇಶಭಕ್ತರೊಡನೆ ಒಳ್ಳೆಯ ಸಂಬಂಧ ಬೆಳೆದಿತ್ತು. ಅವರೆಲ್ಲರ ಅಪಾರವಾದ ಸಹಾಯ, ಸಹಕಾರ ಇವರಿಗೆ ಇತ್ತು. ಅದರಿಂದ ಹಳ್ಳಿ ಹಳ್ಳಿಗೆ ಸಂಚರಿಸಿ ಶಾಂತಿ ಸಭೆಗಳನ್ನು ಏರ್ಪಡಿಸಿ ಜನರಿಗೆ ಧೈರ್ಯ ಹೇಳಿ ಸ್ಥೈರ್ಯ ತುಂಬತೊಡಗಿದರು. 'ವಿಧವಾ' ವಿವಾಹಕ್ಕೆ ಅವಕಾಶ ಕಲ್ಪಿಸಿಕೊಟ್ಟು ವಿಧವೆಯರಿಗೆ ಬಾಳು ಕೊಡಲು ಯುವಕರು ಮುಂದೆ ಬರಬೇಕೆಂದು ಹೇಳಿ ವಿಧವಾ ವಿವಾಹಕ್ಕೆ ಅವಕಾಶ ಕಲ್ಪಿಸಿಕೊಟ್ಟರು 'ಬಾಲ್ಯ ವಿವಾಹ' ತಡೆಗಟ್ಟಿ ಸಣ್ಣ ಮಕ್ಕಳಿಗೆ ಹೆಣ್ಣಿರಲಿ, ಗಂಡಿರಲಿ ಭೇದವೆಣಿಸದೆ ಶಿಕ್ಷಣ ಕೊಡಬೇಕೆಂದು ಜನರಿಗೆ ತಿಳಿವಳಿಕೆ ನೀಡಿ ಅವರ ಮಕ್ಕಳಿಗೆ ಓದುವ ಶಾಲೆಗೆ ಕಳಿಸಲು ದಾರಿ ಮಾಡಿಕೊಟ್ಟರು. ಹರಿಜನರ ಓಣಿಗಳಲ್ಲಿ ಅಡ್ಡಾಡಿ ಅವರಿಗೆ ತಿಳಿ ಹೇಳಿ ಶಿಕ್ಷಣಕ್ಕಾಗಿ ನಿಮ್ಮ ಮಕ್ಕಳನ್ನು ಶಾಲೆಗೆ ಕಳಿಸಿರಿ. ಅವರು ಓದಿ ವಿದ್ಯಾವಂತರಾದರೆ ಮುಟ್ಟಿ-ತಟ್ಟಿ ಅನ್ನುವ ಭೇದ ಭಾವ

ತಾನಾಗಿಯೇ ಹೋಗಿಬಿಡುತ್ತದೆ ಎಂದು ಧೈರ್ಯ ಹೇಳತೊಡಗಿದರು. ಹಿಂದುಳಿದ ಬಡ ಕುಟುಂಬದವರಿಗೆ, ಕೂಲಿ ಕಾರ್ಮಿಕರಿಗೆ ಒಗ್ಗಟ್ಟಿನಿಂದ ದುಡಿದು ಸಂಘಟಿತರಾಗಬೇಕೆಂದು ಹೇಳಿ ಅವರಲ್ಲಿ ಮೈತ್ರಿಯನ್ನು ಬೆಳೆಸಲು ಅವರನ್ನು ಹತ್ತಿರ ಕರೆದು ಅವರ ಒಡನಾಟ ಬೆಳೆಸಿದರು.

ವಿದ್ಯಾಧರ ಗುರೂಜಿ ಮಾತೃಭಾಷೆ ತೆಲುಗು, ವ್ಯವಹಾರಿಕ ಭಾಷೆ ಕನ್ನಡ ಇವೆರಡನ್ನು ದೂರವಿಟ್ಟು ರಾಷ್ಟ್ರ ಭಾಷೆ ಹಿಂದಿಯಲ್ಲಿ ಮಾತಾಡುತ್ತ ಹಳ್ಳಿಯ ಜನರ ಬಾಂಧವ್ಯ ಬೆಳೆಸಿದರು. ಆತ್ಮೀಯ ಮುಂದಾಳು, ಅಪ್ಪಟ ದೇಶಭಕ್ತ ಗುರೂಜಿ ಎಂದು ಹೆಸರು ಗಳಿಸಿದರು.

ಇವರು 1944ರಲ್ಲಿಯೇ ಯಾದಗಿರಿಯಲ್ಲಿ ಪ್ರಾರಂಭ ಮಾಡಿದ ರಾತ್ರಿಯ ಶಾಲೆಗಳು ಈಗ ಮತ್ತಷ್ಟು ಉತ್ತೇಜನ ಪಡೆದವು. ರಾತ್ರಿ ಶಾಲೆಯಲ್ಲಿ ಬೋಧಿಸುತ್ತಿದ್ದ ಹಿಂದಿ ರಾಷ್ಟ್ರಭಾಷೆ, ಗುಡಿಸಲು ಗುಡಿಸಲುಗಳಲ್ಲಿಯೂ ಪ್ರಜ್ವಲಿಸತೊಡಗಿತು. ಜನಪ್ರಿಯವಾಗತೊಡಗಿತು. ಇವರು ಪ್ರಾರಂಭಿಸಿದ ಪಾಠ ಶಾಲೆಗಳು–

- ಪಂಡಿತ ರಾಯಬಾರಿ ಪಾಠಶಾಲೆ
- ಪಂಡಿತ ನರೇಂದ್ರಜಿ ಪಾಠಶಾಲೆ
- ಸ್ವಾಮಿ ರಾಮ ಪಾಠಶಾಲೆ
- ಸ್ರಾಮಿ ಶ್ರದ್ಧಾನಂದ ಪಾಠಶಾಲೆ
- ವಿನಾಯಕರಾವ ವಿಠ್ಠಲರಾವ ಪಾಠಶಾಲೆ
- ಬಾಯಿ ಬನ್ಸಿವಾಲ ಪಾಠಶಾಲೆ

ಹೀಗೆ ಪ್ರಾರಂಭಿಸಿದ ಆರು ರಾತ್ರಿ ಶಾಲೆಗಳಲ್ಲಿ ಯುವಕರು, ಯುವತಿಯರು ಓದಿ ಅಕ್ಷರದ ಅರಿವು ಸಮಾಜದ ಬಗ್ಗೆ ತಿಳುವಳಿಕೆ ದೇಶದ ಬಗ್ಗೆ ಅಭಿಮಾನ ಭಾಷಾ ಅಭಿಮಾನ ಮೂಡಿಸಿಕೊಳ್ಳತೊಡಗಿದರು. ಈ ಆರು ರಾತ್ರಿ ಪಾಠಶಾಲೆಗಳಲ್ಲಿ ಓದಿ ಅಭ್ಯಾಸ ಮಾಡಿದ ಆಗಿನ ಸುಮಾರು 8,000 ವಿದ್ಯಾರ್ಥಿಗಳಿಗೆ ಹಿಂದಿ ಭಾಷಾ ಪ್ರಮಾಣ ಪತ್ರ ಹಂಚಿ ಗುರೂಜಿ ಎಂಬ ಅವರ ಅನ್ವರ್ಥಕ ನಾಮಕ್ಕೆ ಮುದ್ರೆ ಒತ್ತಿಕೊಂಡರು.



ಜನ ನಾಯಕ
ವಿದ್ಯಾಧರ ಗುರೂಜಿ

ಯಾದಗಿರಿ ಪಟ್ಟಣದಲ್ಲಿ ಇವರು ಬಡ ಕೂಲಿಕಾರರಿಗಾಗಿ ಸುಮಾರು 15 ಬೀಡಿ ಕಾರ್ಖಾನೆಗಳನ್ನು ಪ್ರಾರಂಭಿಸಿದರು. ಈ ಕಾರ್ಖಾನೆಗಳಲ್ಲಿ ದಿನಾಲು 20,000 ಜನರು ಕೆಲಸ ಮಾಡತೊಡಗಿದರು. ಊರಲ್ಲಿ ಯಾರೂ ನಿರುದ್ಯೋಗಿಗಳಾಗಿ, ಸೋಮಾರಿಗಳಾಗಿ ಕಾಲ ಕಳೆಯಬಾರದು. ನಿಮ್ಮ ಕಾಲ ಮೇಲೆ ನೀವು ನಿಂತು ನಿಮ್ಮ 'ಬಾಳು' ಬಂಗಾರಗೊಳಿಸಿಕೊಳ್ಳಬೇಕು. ಬೀಡಿಗಳನ್ನು ಕಟ್ಟುವುದರಲ್ಲಿಯೇ ನಿಮ್ಮ ಬದುಕನ್ನು ಕಟ್ಟಿಕೊಳ್ಳಬೇಕೆಂದು ಕೈಗಾರಿಕೆ ಉದ್ಯೋಗಕ್ಕೆ ತುಂಬ ಉತ್ತೇಜನ ನೀಡಿದರು. ಆ ಕಾಲದಲ್ಲಿ ದಿಕ್ಕಿಲ್ಲದವರ ಬಾಳಿಗೆ ದಿಕ್ಕಾಗಿ ನಿಂತವರು ದಿಟ್ಟ ಹೃದಯದ ಧೀರನಾಯಕ ವಿದ್ಯಾಧರ ಗುರೂಜಿ ಅವರು.


ಇದೇ ಸಮಯಕ್ಕೆ 'ಖಾದಿ ವಿಲೇಜ್ ಇಂಡಸ್ಟ್ರೀಟ್ ಬೋರ್ಡ್' ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಈ ಬೋರ್ಡಿನ ಅಧ್ಯಕ್ಷರೆಂದು ಖ್ಯಾತ ಕಾಂಗ್ರೆಸ್ ಧುರಿಣ ಕೋಲೂರು ಮಲ್ಲಪ್ಪನವರು ಆಯ್ಕೆಯಾಗಿ ಕಾರ್ಯ ನಿರ್ವಹಿಸತೊಡಗಿದರು. ಕೊಂಡಾ ನಾರಣಪ್ಪ ಅವರು ಕೋಶಾಧ್ಯಕ್ಷರಾಗಿ,

ವಿದ್ಯಾಧರ ಗುರೂಜಿ ಅವರು ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸತೊಡಗಿದರು. ಈ ಖಾದಿ ಬೋರ್ಡಿನ ಅಡಿಯಲ್ಲಿ ಹತ್ತಿಯಿಂದ ಅರಳಿ, ಅರಳಿಯಿಂದ ಹಂಜಿ ತಯಾರಿಸಿ ತಕಲಿ ಮೇಲೂ, ಚರಕಗಳ ಮೂಲಕ ನೂತು ನೂಲು ತೆಗೆಯುವ ಕೆಲಸ ಪ್ರಾರಂಭ ಮಾಡಿದರು. ನೂಲುವುದು ಕುಕ್ಕಡಿ ತೆಗೆಯುವುದು ಲಡಿ ಸಿದ್ಧ ಮಾಡುವುದು ಬಟ್ಟೆ ನೇಯುವ ಕೆಲಸ ಪ್ರಾರಂಭ ಮಾಡಿದರು. ಈ ಕೆಲಸ ಗುರೂಜಿ ಅವರ ಹುಟ್ಟೂರು 'ಗುರುಮಠಕಲ್ಲ' ಗ್ರಾಮದಲ್ಲಿ ತುಂಬ ಚುರುಕಾಗಿ ನಡೆಯಿತು. ಬಡವರ ಕೈಗೆ ಕೆಲಸ ಕೊಟ್ಟು ದುಡಿಯಲು ಹಚ್ಚಿದರು. ಪ್ರತಿಯೊಂದು ಊರುಗಳಲ್ಲಿ ಅರ್ಧದಷ್ಟು ಜನರು ದುಡಿಮೆಯಿಲ್ಲದೆ ಉಪವಾಸ ಬೀಳುತ್ತಿದ್ದರು ಅವರು ಕೈ ತುಂಬ ಕೆಲಸ ಮಾಡಿ ಹೊಟ್ಟೆ ತುಂಬ ಊಟ ಮಾಡುವಂತಾಯಿತು. ಯಾದಗಿರಿ 'ಖಾದಿ ವಿಲೇಜ ಇಂಡಸ್ಟ್ರೀಜ್ ಬೋರ್ಡ್' ಎಂಬ ಬೃಹತ್ತಾದ ಸಂಸ್ಥೆಯಲ್ಲಿ 'ಚರ್ಮ ಹದ' ಮಾಡುವ ಕೆಲಸಕ್ಕೆ ಅವಕಾಶ ಕಲ್ಪಿಸಿ ಕೊಡಲಾಯಿತು. ಈ ಸಂಸ್ಥೆಯು ಚೆನ್ನಾಗಿ ಕೆಲಸ ಮಾಡುವುದಕ್ಕಾಗಿ ಸಂಪೂರ್ಣ ಒಂದು ಎಕರೆ ಭೂಮಿ ಖರೀದಿಸಲಾಯಿತು. ಎಲ್ಲರಿಗೂ ಕುಡಿಯಲಿಕ್ಕೂ ಕೆಲಸ ಮಾಡಲಿಕ್ಕೂ ಅನುಕೂಲವಾಗಲು ಒಂದು 'ಬಾವಿ'ಯನ್ನು ತೆಗೆಯಿಸಲಾಯಿತು. ಅವರು ನಡೆಸುತ್ತಿರುವ ಶಾಲೆಗಳಲ್ಲಿ, ಬೀಡಿ ಕಾರ್ಖಾನೆಗಳಲ್ಲಿ ಖಾದಿ ಬೋರ್ಡಿನಲ್ಲಿ ವಿದ್ಯಾಧರ ಗುರೂಜಿ ಅಪ್ಪಟ ಮಹಾತ್ಮಾಗಾಂಧಿಜಿಯಂತೆ ಕಾಣುತ್ತಿದ್ದರು. ಗಾಂಧೀವಾದಿಗಳಾದ ಇವರು ಅಪ್ಪಟ 'ಅಹಿಂಸಾ ಪರಮೋಧರ್ಮ' ಎಂಬ ತತ್ವವನ್ನು ಎತ್ತಿ ಹಿಡಿದು ಪ್ರತಿಯೊಬ್ಬರಲ್ಲಿದ್ದ ಸ್ವಧರ್ಮ ಜಾಗೃತಗೊಳಿಸಿ ಮನುಷ್ಯರನ್ನಾಗಿ ಮಾಡ ತೊಡಗಿದರು.

ಯಾದಗಿರಿ ತಾಲೂಕಾ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಗಳು

ಆರ್ಯಸಮಾಜದ ಸಕ್ರಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಾ ಬಂದ ವಿದ್ಯಾಧರ ಗುರೂಜಿ ಅವರು ಅತ್ಯಂತ ಸರಳ ಸೌಮ್ಯ ಸ್ವಭಾವದ ವ್ಯಕ್ತಿ. ಎಲ್ಲರನ್ನು ಸಮಾನವಾಗಿ ಕಾಣುವ ಅವರ ದೊಡ್ಡ ಗುಣ ಮೆಚ್ಚಿಕೊಂಡಿದ್ದರು. ಅದರಲ್ಲಿ ವಿದ್ಯಾಧರ ಗುರೂಜಿ ಅವರು ಹಿಂದುಳಿದ ಕೆಳವರ್ಗದ ಜನರನ್ನು ಕಂಡು ಕನಿಕರ ಪಡುತ್ತಿದ್ದರು ಅವರ ಸಂಘಟನೆಗಾಗಿ ಅಹೋರಾತ್ರಿ ಹೋರಾಟ ಮಾಡುತ್ತಿದ್ದರು ಈ ಎಲ್ಲ ಗುಣಗಳನ್ನು ಗಮನಿಸಿ ವಿದ್ಯಾಧರ ಗುರೂಜಿ ಅವರನ್ನು 1949ರಲ್ಲಿ ಯಾದಗಿರಿ ತಾಲೂಕ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳೆಂದು ಆಯ್ಕೆ ಮಾಡಿದರು. ಅಪ್ಪಟ ಗಾಂಧೀವಾದಿಗಳು ಕಟ್ಟಾ ಕಾಂಗ್ರೆಸಿಗರೂ ಆದ ವಿದ್ಯಾಧರ ಗುರೂಜಿ ಅವರನ್ನು ಕಾಂಗ್ರೆಸ್ಸಿನ ಪಕ್ಷದ ಪ್ರಸಿದ್ಧ ಮುಖಂಡರಾದ ಶ್ರೀ ಮಲ್ಲಪ್ಪ ಕೋಲೂರು ಶ್ರೀ ವಿರೂಪಾಕ್ಷಪ್ಪ ಎಕ್ಕಳ್ಳಿ, ಜಗನ್ನಾಥರಾವ ಚಂಡರಕಿ ಅಂದಿನ ಹೈದರಾಬಾದ್ ಸಂಸ್ಥಾನದ ನಡುಗಾಲ ಸರಕಾರದ ಮುಖ್ಯಮಂತ್ರಿಗಳಾಗಿದ್ದ





ಶ್ರೀ ಬಿ. ರಾಮಕಿಶನ್‌ರಾವ ಅವರು ತುಂಬ ಗೌರವದಿಂದ ಕಾಣುತ್ತಿದ್ದರು. ವಿದ್ಯಾಧರ ಗುರೂಜಿ ಅವರ ಸೇವಾ ಜೀವನಕ್ಕೆ ತುಂಬ ಅನುಕೂಲತೆ ಒದಗಿಸಿಕೊಟ್ಟರು. ಖಾದಿ ಬಟ್ಟೆ ಉಟ್ಟು ಮೇಲೆ ಖಾದಿ ಜಾಕೀಟು ತೊಟ್ಟು ಹೊರ ಹೊರಟರೆ ವಿದ್ಯಾಧರ ಗುರೂಜಿ ಅವರು ಹೊರಟರೆಂದು ಎಲ್ಲರೂ ಅತ್ಯಂತ ಗೌರವದಿಂದ ಕಾಣುತ್ತಿದ್ದರು.

ಇಷ್ಟಾಗಿ ವಿದ್ಯಾಧರ ಗುರೂಜಿ ಅವರದು ಆಡಂಬರ ಜೀವನವಲ್ಲ. ಅವರು ಆಶ್ರಮವಾಸಿ ಸಂನ್ಯಾಸಿಗಳಂತೆ ಕಾಣುತ್ತಿದರು. ಸಂನ್ಯಾಸಿಯೆಂದರೆ ಕಾವಿ ಉಟ್ಟು ಜಪಮಣಿ ಹಿಡಿದ ಸನ್ಯಾಸಿ ಅಲ್ಲ. ಶುಭ್ರ ಖಾದಿ ಬಟ್ಟೆ ಧರಿಸಿ ಕೈಯಲ್ಲಿ ಹಿಂದಿ ಭಾಷೆಯ ಪತ್ರಿಕೆಗಳನ್ನು ಹಿಡಿದು ಸಮಾಜದಲ್ಲಿದ್ದು ತುಳಿಯಲ್ಪಟ್ಟವರ, ಕಣ್ಣಿಗೆ ಕಾಣದವರ ಚಿಂತನೆಯಲ್ಲಿ ತೊಡಗಿದ ಮಹಾನ್ ದೇಶಭಕ್ತ. ಅವರ ಕಣ್ಣು ಮುಂದೆ ಭಾರತಮಾತೆ–ಸದಾ ಕಂಗೊಳಿಸುತ್ತಿದ್ದಳು.

ವಿದ್ಯಾಧರ ಗುರೂಜಿಯವರಿಗೆ ಬಲ್ಲಿದವರರೊಡನೆ ಒಡನಾಟವಿದ್ದರೂ ಬಲವಿಲ್ಲದವರ ಚಿಂತನೆಯೇ ಅವರ ಎದೆಯಲ್ಲಿ ಕಟೆಯುತ್ತಿತ್ತು.

ಹೈದರಾಬಾದ್ ಸಂಸ್ಥಾನ ವಿಮೋಚನೆಗೊಂಡಿದ್ದರೂ ಹೈದರಾಬಾದ್ ನಿಜಾಮರು ಮೂಲೆಗುಂಪಾಗಿದ್ದರೂ ನಿಜಾಮಶಾಹಿ ಮನಸುಳ್ಳ ಜಮೀನ್ದಾರರು, ಶ್ರೀಮಂತರು, ಸಾಹುಕಾರರು ಅಧಿಕಾರಿಗಳು ನಿಜಾಮಶಾಹಿ ಗುಂಗಿನಿಂದ ಇನ್ನೂ ಹೊರಬಂದಿರಲಿಲ್ಲ. ಇಲ್ಲಿದ್ದ ಗೌಡರು, ಕುಲಕರ್ಣಿ ಅವರು ದೇಶಪಾಂಡೆ, ದೇಶಮುಖ, ಜಮಾದಾರ, ಸುಬೇದಾರರು ತಮ್ಮ ಹಳೆಯ ಶೇರವಾನಿ ರೂಮಿ ಟೋಪಿಯಲ್ಲಿಯೇ ಇದ್ದರು. ಇವರೆಲ್ಲರೂ ಇನ್ನೂ ಹೊಸ ಜಗತ್ತಿನ ಕನಸು ಕಂಡಿರಲಿಲ್ಲ. ಎಚ್ಚೆತ್ತ ಭಾರತೀಯರು ಎತ್ತ ಸಾಗಬೇಕೆಂಬ ಕನಸು ಕಂಡವರು ಗುಡಿಸಿಲಿನಿಂದ ಹೊರಬಂದ ವಿದ್ಯಾಧರ ಗುರೂಜಿ ಅವರು, ಜೇಲು ವಾಸ ಅನುಭವಿಸಿದ ಜಗನ್ನಾಥರಾವ ಚಂಡರಕಿ ಯವರು, ತುಳಿಯಲ್ಪಟ್ಟ ಸಮಾಜದಿಂದ ಮೇಲೆದ್ದುದರಿಂದ ಕೋಲೂರ ಮಲ್ಲಪ್ಪನವರು ಕಂಡ ಕನಸು ಜನಸಾಮಾನ್ಯರಲ್ಲಿ ಹಂಚಿಕೊಳ್ಳಬೇಕಾಗಿತ್ತು. ಅದಕ್ಕಾಗಿ ಅಲ್ಲಲ್ಲಿ ನಡೆದ ಜಾಗೃತಿ ಸಭೆಗಳು ಉಳ್ಳವರಿಗೆ ಮುಳುವಾಗುತ್ತಿದ್ದವು. ಪ್ರತಿಯೊಂದು ಹಳ್ಳಿ ಪಟ್ಟಣಗಳಲ್ಲಿ ಮೇಲು–ಕೀಳುತನ ಮನೆ ಮಾಡಿ ಕೊಂಡಿದ್ದವು. ಜಾತಿಯ ವಿಷಮತೆ ಎಲ್ಲರನ್ನೂ ಕಾಡುತ್ತಲಿತ್ತು. ಅನಕ್ಷರತೆ, ಮೂಢನಂಬಿಕೆ ಅಂಧಾನುಕರುಣೆಯಲ್ಲಿ ಸಿಕ್ಕಿಕೊಂಡಿದ್ದ ಜನರನ್ನು ಎಳೆದು ಹೊರ ತೆಗೆಯುವ ಕೆಲಸ ಅಷ್ಟು ಸುಲಭವಾಗಿರಲಿಲ್ಲ. ದುಶ್ಚಟದಿಂದ ಜನರನ್ನು ದೂರವಿರಿಸುವುದು ಅಸ್ಪೃಶ್ಯತೆ ನಿವಾರಣೆ ಮಾಡುವುದು ಎಂದರೆ ಅಂದಿನ ವಾಸ್ತವ ಪ್ರಪಂಚದ ವಿರುದ್ಧ ನಡೆಸಿದ ಹೋರಾಟವೇ ಆಗಿತ್ತು. ಇಂತಹ ಜಟಿಲವಾದ ಕೆಲಸಗಳಲ್ಲಿ ವಿದ್ಯಾಧರ ಗುರೂಜಿ ಅವರು ತಮ್ಮನ್ನು ತಾವು ತೊಡಗಿಸಿಕೊಂಡರು. ಅತ್ಯಂತ ಮೃದು ಮನಸ್ಸಿನ ವಿದ್ಯಾಧರ ಗುರೂಜಿ ಅವರು ತಾವು ಮಾತಾಡುತ್ತಲಿದ್ದ ಹಿಂದಿ ಭಾಷೆಯಲ್ಲಿ ಮಾತನಾಡಿ ಜನಮನವನ್ನು ಗೆದ್ದು ಬರುತ್ತಿದ್ದರು. ವಿದ್ಯಾಧರ ಗುರೂಜಿ ಅವರಲ್ಲಿ ಜನ ಮನವನ್ನು ಸೆಳೆಯುವ ನಾಯಕತ್ವದ ಗುಣವಿತ್ತು. ಶುಭ್ರ ನಡೆ–ನುಡಿಯುಳ್ಳ ವ್ಯಕ್ತಿತ್ವವಿತ್ತು. ಇದರಿಂದ ವಿದ್ಯಾಧರ ಗುರೂಜಿ ಅವರು **"ಹೈದರಾಬಾದ್ ಪ್ರಾಂತ ಸುಧಾರಣಾ ಸಮಿತಿ"**ಯ ಸದಸ್ಯರಾಗಿಯೂ ನೇಮಕಗೊಂಡರು. ಆಗಿನ ಕಾಂಗ್ರೆಸ್ ಸಮಿತಿಯಲ್ಲಿ ಮುಂದುವರಿದ ಜನಾಂಗದ ಪ್ರಾಬಲ್ಯವೇ

ಹೆಚ್ಚಾಗಿ ಇದ್ದಿತು. ಅತ್ಯಂತ ತುಳಿಯಲ್ಪಟ್ಟ ಹಿಂದುಳಿದ ಜನಾಂಗದವರಾಗಿದ್ದ ಶ್ರೀ ವಿದ್ಯಾಧರ ಗುರೂಜಿ ಅವರು ಬಹು ಸಂಖ್ಯೆಯಲ್ಲಿರುವ ಹಿಂದುಳಿದ ಜನಾಂಗದ ಜನರು ರಾಷ್ಟ್ರದ ಪ್ರಮುಖ ವಾಹಿನಿಯಲ್ಲಿ ಬಂದು ಸೇರಬೇಕು. ಅವರಲ್ಲಿ ರಾಷ್ಟ್ರೀಯ ಜಾಗೃತಿ ಮೂಡಬೇಕು. ಅದಕ್ಕಾಗಿ ಅವರು ಸಂಘಟನೆಯಾಗುವುದು ತುಂಬ ಅವಶ್ಯವಿದೆ ಎಂದು ಅಂತಹ ಸಂಘಟನೆಗಾಗಿ ತಮ್ಮನ್ನು ತಾವು ತೊಡಗಿಸಿಕೊಂಡರು.

ಗುರೂಜಿ ಅವರ ಮನೋಬಯಕೆಯನ್ನು ಅರಿತು ಅವರ ಸಂಘಟನೆಯ ಸಾಮರ್ಥ್ಯವನ್ನು, ಜನಪ್ರಿಯತೆಯನ್ನು ಸಮಕ್ಷ ತಿಳಿದುಕೊಂಡು ಆಗಿನ ಹೈದರಾಬಾದ್ ಸಂಸ್ಥಾನದ ಮುಖ್ಯಮಂತ್ರಿ ಶ್ರೀ ಬಿ. ರಾಮ ಕಿಶನ್‌ರಾವ್ ಅವರು ವಿದ್ಯಾಧರ ಗುರೂಜಿಯವರನ್ನು 'ಸಾರಿಗೆ ಪ್ರಾಧಿಕಾರದ ಸದಸ್ಯ'ರನ್ನಾಗಿ ನೇಮಕ ಮಾಡಿಕೊಂಡರು ಹೀಗೆ ವಿವಿಧ ಪ್ರಕಾರದ ಸೇವೆಯಲ್ಲಿ ತೊಡಗಿಸಿಕೊಂಡ ವಿದ್ಯಾಧರ ಗುರೂಜಿ ಅವರು 1952ರಲ್ಲಿ ಪ್ರಥಮ ಸಾರ್ವಜನಿಕ ಚುನಾವಣೆ ಹಣಿಕೆ ಹಾಕಿತು. ಅಷ್ಟರೊಳಗೆ ವಿದ್ಯಾಧರ ಗುರೂಜಿ ಅವರು ಗುಲಬರ್ಗಾ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಚಾರ ಕಾರ್ಯದರ್ಶಿ ಗಳಾಗಿ ಪದೋನ್ನತಿ ಪಡೆದು ಗುಲಬರ್ಗಾ ಜಿಲ್ಲೆಯಾದ್ಯಂತ ಸೇವಾ ನಿರತರಾದರು.

ಅವರು ಯಾವುದೇ ಸ್ಥಾನ–ಮಾನಕ್ಕೆ ಏರಲಿ ದೇಶ ಸೇವೆಯೇ ತಮ್ಮ ಗುರಿಯೆಂದು ನಂಬಿಕೊಂಡಿದ್ದ ಅವರಲ್ಲಿ ಅಹಂಕಾರವಿರಲಿಲ್ಲ. ಹಮ್ಮು ಬಿಮ್ಮುಗಳು ಇರಲಿಲ್ಲ. ಅವರದು ಎಂದಿನಂತೆ ಸರಳ ಸಾದಾಜೀವನ. ಸಂಪೂರ್ಣ ಶಾಖಾಹಾರಿಗಳಾದ ಅವರ ಊಟವೂ ಅಷ್ಟೆ ಸಾದಾ ಸರಳ. ಅದು ಬೇಕು ಇದು ಬೇಡ ಎಂದೂ ಅಂದವರಲ್ಲ. ಅವರಿಗೆ ಹಸಿವೇ ರುಚಿಯಾಗಿತ್ತು. ಶುಚಿಯೇ ಅಮೃತವಾಗಿತ್ತು. ಕಾಯಕವೇ ಕೈಲಾಸವಾಗಿತ್ತು.

ದೇಶ ಭಕ್ತ ಗುರೂಜಿ

ದೇಶದ ಸ್ವಾತಂತ್ರ್ಯಕ್ಕೆ ಹೀಗೆ ಪ್ರಾಣವನ್ನೇ ಪಣಕ್ಕೆ ಹಚ್ಚಿ ಹುತಾತ್ಮರಾದ ವೀರ ತರುಣರ ದಾರುಣಕತೆಯನ್ನು ಸ್ವತಂತ್ರಭಾರತದ ತರುಣ ಜನಾಂಗಕ್ಕೆ ತಿಳಿಸಿ ದೇಶಾಭಿಮಾನ ಹುಟ್ಟಿಸ ತೊಡಗಿದರು– ರಾಷ್ಟ್ರಭಾಷೆ ಹಿಂದಿ ಕಲಿಯ ಬೇಕೆಂದು ಮಕ್ಕಳಿಗೆ ಪ್ರಚೋದನೆ ನೀಡ ತೊಡಗಿದರು. ಸೇಂದಿ, ಸೆರೆ ಕುಡಿದು ಹಾಳಾಗ ಬೇಡಿರೆಂದು ಜನರಲ್ಲಿ ತಿಳಿವಳಿಕೆ ಹುಟ್ಟಿಸತೊಡಗಿದರು.

ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಂಘಟನಾ ಕಾರ್ಯದರ್ಶಿಗಳಾದ ಮೇಲೆ ಜಿಲ್ಲೆಯ ಹತ್ತು ತಾಲೂಕುಗಳಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡು ಜನ ಜಾಗೃತಿ ಮಾಡತೊಡಗಿದರು. ಹಿಂದಿ ಭಾಷೆಯಲ್ಲಿ ಪಾಂಡಿತ್ಯ ಪಡೆದ ವಿದ್ಯಾಧರ ಗುರೂಜಿ ಅವರಿಗೆ ದೇಶದುದ್ದಗಲಕ್ಕೂ ಸ್ನೇಹಿತರು, ಹಿತೈಷಿಗಳು ಅಭಿಮಾನಿಗಳ ತಂಡವೇ ಬೆಳೆದಿತ್ತು. ಬೆಳೆಯ ತೊಡಗಿತು.

ವೀರ ಸೇನಾನಿ ಸಾವರಕರ, ಬಾಯಿ ಪರಮಾನಂದಜಿ, ಡಾ. ಮುಂಜೆ, ಸೇನಾಪತಿ



ಬಾಪಟ. ಮಹಾತ್ಮಾ ನಾರಾಯಣ ಸ್ವಾಮೀಜಿ, ಸ್ವಾಮಿ ಸ್ವತಂತ್ರ್ಯಾನಂದಜಿ. ಘನಶಾಮ ಸಿಂಹಜಿ ಗುಪ್ತ, ಸರ್ವಾನಂದಜೀ ಮಹಾರಾಜರು, ರಾಜಗುರು ಧುರೇಂದ್ರ ಶಾಸ್ತ್ರಿ, ಮಹಾತ್ಮಾ ಸುಶೀಲ ಚಂದ್ರಜಿ. ಖುರ್ಸದ ಕುವರ, ಶ್ರೀ ಚಾಂದ ಕರಣಜಿ – ಶಾರದಾ ಪಂಡಿತ, ವಿನಾಯಕರಾವ ವಿದ್ಯಾಲಂಕಾರ, ಬ್ಯಾರಿಸ್ಟರ್ ಶ್ರೀ ಧನಶ್ಯಾಮ ಸಿಂಹಜಿ. ಸಂಯುಕ್ತ ಪ್ರಾಂತ ಮೇಲ್ಮನೆಯ ಸ್ಪೀಕರ್ ಶ್ರೀ ಸರ್ವದಾನಂದ ಮಹಾರಾಜ ಜಿ. ಮಹಾತ್ಮಾ ಕುಶಾಲ ಚಂದಜಿ ಕುಂವರ, ಪಂಡಿತ ನರೇಂದ್ರ ಜಿ. ವಿಠ್ಠಲರಾವ ದೇವಳಗಾಂವಕರ, ಶರಣ ಕವಿಗಳೆಂದು ಪ್ರಖ್ಯಾತರಾಗಿದ ಶರಣಯ್ಯ ಸಾಯಿ ಮಹಾಗಾಂವ, ಸ್ವಾಮಿ ರಮಾನಂದ ತೀರ್ಥ, ಚೆನ್ನಬಸಪ್ಪ ಕುಳಗೇರಿ, ಜನಾರ್ಧನ ರಾವ್ ದೇಸಾಯಿ, ಕೋಲೂರ ಮಲ್ಲಪ್ಪ, ಸರ್ದಾರ್ ಶರಣ ಗೌಡ ಇನಾಮದಾರ, ಕಕ್ಕೇರಿ ಹಣಮಂತರಾವ, ಹಕೀಕತರಾವ ಚಿಟಗುಪ್ಪಕರ ಮುಂತಾದ ಸ್ವಾತಂತ್ರ್ಯ ಹೋರಾಟಗಾರರೊಡನೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದರು. ಇವರೆಲ್ಲರೊಡನೆ ಆಗಾಗ ರಾಷ್ಟ್ರೀಯ ಸಮಸ್ಯೆಗಳ ಕುರಿತು ಚರ್ಚಿಸಲು ಒಂದು ಕಡೆ ಬಂದು ಸೇರುತ್ತಿದ್ದರು. ಶುಭ್ರ ಖಾದಿ ವಸ್ತ್ರಧಾರಿಗಳಾದ ವಿದ್ಯಾಧರ ಗುರೂಜಿ ಅಪ್ಪಟ ದೇಶಭಕ್ತರೆಂದು ಎಲ್ಲರೂ ಅವರ ನಿರ್ಮಲ ಚರಿತ್ರೆ, ಚಟುವಟಿಕೆಗಳನ್ನು ಕುರಿತು ಮೆಚ್ಚುಗೆ ವ್ಯಕ್ತ ಪಡಿಸುತ್ತಿದ್ದರು.

ವಿದ್ಯಾಧರ ಗುರೂಜಿ ಅವರು ಅಪ್ಪಟ ಗಾಂಧೀವಾದಿಗಳು. ಕಾಂಗ್ರೆಸ್ಸಿನ ಕಟ್ಟಾ ಹುರಿಯಾಳು. ಗಾಂಧೀಜಿ ಅವರ ತತ್ವಕ್ಕೆ ಭಂಗ ಬರುತ್ತಿದ್ದರೆ ಅವರೂ ಎಂದೂ ಸಹಿಸಿಕೊಳ್ಳುತ್ತಿರಲಿಲ್ಲ. "ಅಹಿಂಸಾ ಪರಮೋಧರ್ಮ" ಅವರ ತತ್ವವನ್ನು ಗುರೂಜಿ ಅವರು ತಂಬ ಭಕ್ತಿಯಿಂದ ಪಾಲಿಸಿ ಆಚರಣೆಯಲ್ಲಿ ತರುತ್ತಿದ್ದರು. ಅಸ್ಪೃಶ್ಯೋದ್ಧಾರ ಅವರ ಮುಖ್ಯ ಗುರಿಯಾಗಿತ್ತು. ಕೆಳವರ್ಗದ ಬಡವರ ಮಕ್ಕಳು ಶಿಕ್ಷಣವನ್ನು ಪಡೆದು ಸಮಾಜದ ಮುಖ್ಯ ವಾಹಿನಿಗೆ ಬರಬೇಕು. ಬಡವ–ಬಲ್ಲಿದ ಮಧ್ಯದಲ್ಲಿದ್ದ ಕಂದಕ ಮುಚ್ಚಬೇಕು. ಹೆಣ್ಣುಮಕ್ಕಳು ಶಿಕ್ಷಣ ಪಡೆದರೆ ಈಗ ಅನುಭವಿಸುತ್ತಿದ್ದ ಸಂಕಟದಿಂದ ಮುಕ್ತರಾಗಲು ಸಾಧ್ಯವಿದೆ. ಅದಕ್ಕಾಗಿ ಹೆಣ್ಣುಮಕ್ಕಳು ವಿದ್ಯಾವಂತರಾಗಬೇಕೆಂದು ಬಯಸುತ್ತಿದ್ದರು. ವಿದ್ಯಾಧರ ಗುರೂಜಿ ಅವರ ದೃಷ್ಟಿಯಲ್ಲಿ ಹಿಂದು, ಮುಸ್ಲಿಂ, ಕ್ರೈಸ್ತ ಬೌದ್ಧ ಜೈನ ಪಾರ್ಸಿಗಳೆಂಬ ಭೇದ ಭಾವಗಳೇ ಇರಲಿಲ್ಲ. ಮಾನವ

ಜಾತಿ ಒಂದು ಎಂದು ಅವರ ವಿಶಾಲವಾದ ಭಾವನೆ. ಅದರಂತೆ ವಿಶಾಲ ದೃಷ್ಟಿಕೋನ ಇಟ್ಟುಕೊಂಡು ಬಾಳಿ ಬದುಕಿದರು.

ತನು ಶುದ್ಧ, ಮನ ಶುದ್ಧ, ಭಾವ ಶುದ್ಧವುಳ್ಳ ವಿದ್ಯಾಧರ ಗುರೂಜಿ ಅವರು ಅಪ್ಪಟ ದೇಶಭಕ್ತರು. ಕೇವಲ ದೇಶಸೇವೆ, ಜನ ಸೇವೆಯೇ ಗುರಿಯಾಗಿಟ್ಟುಕೊಂಡು ಓಡಾಡುತ್ತಿದ್ದ ವಿದ್ಯಾಧರ ಗುರೂಜಿಯವರು ನಿಜವಾದ ಅರ್ಥದಲ್ಲಿ ಓರ್ವ ಸಂನ್ಯಾಸಿಯಂತೆ ಜೀವನ ಸಾಗಿಸುತ್ತಿದ್ದರು. ಅವರಿಗೆ ಮನೆ ಮಾರುಗಳೇ ಇರಲಿಲ್ಲ. ತಾಯಿ ತಂದೆ, ಅಣ್ಣ ತಮ್ಮ ಅಕ್ಕ ತಂಗಿಯರನ್ನು ಮರೆತುಬಿಟ್ಟಿದ್ದರು. ಆರ್ಯಸಮಾಜವೇ ಇವರಿಗೆ ಗುರುಮನೆ, ಅರಮನೆ, ಅಲ್ಲಿಯೇ ವಾಸ. ತಮ್ಮ ಹುಟ್ಟೂರು ಗುರುಮಠಕಲ್ಲದ ಸ್ವಾತಂತ್ರ್ಯ ಯೋಧರ ಸಂಗಡ ನಿಕಟ ಸಂಬಂಧ ಇಟ್ಟುಕೊಂಡು, ಗುರುಮಠಕಲ್ಲ ಗ್ರಾಮಕ್ಕೆ ಹೋಗಿ ಬರುತ್ತಿದ್ದರು. ಅಲ್ಲಿಗೆ ಹೋದಾಗ ಅವರ ವಸತಿ ಆರ್ಯಸಮಾಜ ಭವನದಲ್ಲಿಯೇ ಇರುತ್ತಿತ್ತು. ಹೀಗೆ ವಿದ್ಯಾಧರ ಗುರೂಜಿ ಅವರು ದೇಶ ಸೇವೆಗೆ ತಮ್ಮನ್ನು ತಾವು ಸಂಪೂರ್ಣ ಅರ್ಪಿಸಿಕೊಂಡು ಬಿಟ್ಟಿದ್ದರು.

ಕರ್ನಾಟಕ ಏಕೀಕರಣ

ದೇಶಕ್ಕೆ ಸ್ವಾತಂತ್ರ್ಯ ದೊರಕಿತು ಹೈದರಾಬಾದ್ ಸಂಸ್ಥಾನ ವಿಮೋಚನೆಗೊಂಡಿತು. ಇಷ್ಟಕ್ಕೆ ದೇಶದ ಮುಂದಾಳುಗಳ ಸಮಸ್ಯೆಗಳು ದೂರಾದವು ಎಂದು ಯಾರೂ ಭಾವಿಸಿಕೊಳ್ಳಲಿಲ್ಲ. ಭಾಷಾವಾರು ಪ್ರಾಂತಗಳ ರಚನೆ ದೇಶದ ಮುಂದಾಳುಗಳು ತಲೆ ಕೆಡಿಸಿತು ಹೈದರಾಬಾದ್ ಸಂಸ್ಥಾನದಲ್ಲಿ ಐದು ಜಿಲ್ಲೆಗಳು ಮರಾಠವಾಡಕ್ಕೆ ಸಂಬಂಧಪಟ್ಟ ಜಿಲ್ಲೆಗಳು. ಎಂಟು ಜಿಲ್ಲೆಗಳು ಆಂಧ್ರಪ್ರದೇಶಕ್ಕೆ ಸೇರಿದ ಜಿಲ್ಲೆಗಳು. ಬೀದರ ಗುಲಬರ್ಗಾ, ರಾಯಚೂರು ಅಚ್ಚಕನ್ನಡ ಭಾಷೆಯ ಜಿಲ್ಲೆಗಳು. ಹೈದರಾಬಾದ್ ಕರ್ನಾಟಕ ಎಂದು ಕರೆಯಿಸಿಕೊಳ್ಳುತ್ತಿದ್ದವು. ಆಗ ಸೊಲ್ಲಾಪುರ, ಅಕ್ಕಲಕೋಟ, ಜತ್ತ, ಬಾರಿಸಿ, ಲಾತೂರು ಉಮರ್ಗ, ನಳದುರ್ಗ ಈ ಎಲ್ಲ ಕಡೆಗೆ ಕನ್ನಡ ಭಾಷೆಯಲ್ಲಿ ಮಾತನಾಡುವ ಜನರೇ ಇದ್ದರು. ಅದರಂತೆ ಜಹಿರಾಬಾದ, ಉಸ್ಮಾನಾಬಾದ, ತಾಂಡೂರು, ಕೃಷ್ಣಾ, ಆದವಾನಿಗಳಲ್ಲಿ ಕನ್ನಡ ಮಾತನಾಡುವ ಜನಸಂಖ್ಯೆಯೇ ಇತ್ತು. ಈಗಲೂ ಕನ್ನಡ ಶಾಲೆಗಳು ಇವೆ. ಕನ್ನಡ ಮಾತನಾಡುವ



ಜನರು ಇದ್ದಾರೆ. ಈ ಎಲ್ಲ ಊರುಗಳನ್ನೊಳಗೊಂಡು ಕರ್ನಾಟಕ ಏಕೀಕರಣವಾಗಬೇಕೆಂದು ಇಲ್ಲಿಯ ಜನರು ಹೋರಾಟದ ಕಣಕ್ಕೆ ಇಳಿದರು. ಸರ್ದಾರ್ ಶರಣಗೌಡರು, ಚನ್ನಬಸಪ್ಪ, ಕುಳಗೇರಿ ಜಗನ್ನಾಥರಾವ್ ಚಂಡರಗಿ ಕೋಲೂರು ಮಲ್ಲಪ್ಪ. ವಿಶ್ವನಾಥರೆಡ್ಡಿ ಮುದ್ನಾಳ, ವಿದ್ಯಾಧರ ಗುರೂಜಿ ಶಿವಮೂರ್ತಿಸ್ವಾಮಿ ಅಳವಂಡಿ, ಆರ್.ಟಿ. ಬಿಡಪ್ಪ, ಸಿದ್ಧನಾಥ ಬಳ್ಳಾರಿ, ಶ್ರೀ ಚನ್ನಬಸವ ಪಟ್ಟದ್ದೇವರು, ಪೂಜ್ಯ ದೊಡ್ಡಪ್ಪ ಅಪ್ಪಾ, ಸಂಗಮೇಶ ಸರ್ದಾರ, ಜಯದೇವಿ ತಾಯಿ ಲಿಗಾಡೆ ಮುಂತಾದವರು ಕರ್ನಾಟಕ ಏಕೀಕರಣಕ್ಕಾಗಿ ಟೊಂಕಕಟ್ಟಿ ನಿಂತರು. ಆಗಿನ ಮುಖ್ಯಮಂತ್ರಿ ಕೆಂಗಲ್ಲ ಹನುಮಂತಯ್ಯನವರಿಗೆ ಈ ಪ್ರದೇಶದ ಬಗ್ಗೆ ಅರಿವು ಮೂಡಿಸಿದರು. ಆದರೂ ಅಚ್ಚ ಕನ್ನಡ ಪ್ರದೇಶವಾದ ಜಹಿರಾಬಾದ, ತಾಂಡೂರು ಕೃಷ್ಣಾ, ಆದೋನಿ ಕೈಬಿಟ್ಟು ಹೋಗಿ ಆಂಧ್ರಪ್ರದೇಶಕ್ಕೆ ಸೇರಿದವು. ಅದರಂತೆ ಜತ್ತ, ಅಕ್ಕಲಕೋಟ, ಸೊಲ್ಲಾಪೂರ, ಭಾರ್ಷಿ, ಲಾತೂರು ಉದ್ಗೀರಗಳು ಮಹಾರಾಷ್ಟ್ರಕ್ಕೆ ಸೇರಿದವು. ಇಂದಿಗೂ ಈ ಪ್ರದೇಶದ ಜನರ ಬವಣೆ ಹೇಳತೀರದಷ್ಟು. ಹಿಂದೀ ಭಾಷೆಯಲ್ಲಿ ಪ್ರಾವೀಣ್ಯತೆಯನ್ನು ಪಡೆದು ಹಿಂದಿಯಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದ ವಿದ್ಯಾಧರ ಗುರೂಜಿ ಅವರು ಕನ್ನಡ ನಾಡು, ಕನ್ನಡ ಭಾಷೆ, ಕನ್ನಡಿಗರ ಮೇಲೆ ಎಲ್ಲಿಲ್ಲದ ಪ್ರೀತಿ, ಅಭಿಮಾನ, ಅವರ ಮಾತೃಭಾಷೆ ತೆಲುಗು. ಮೈಗೂಡಿಸಿಕೊಂಡು ಬಂದದ್ದು ರಾಷ್ಟ್ರ ಭಾಷೆ ಹಿಂದಿ. ಅಚ್ಚ ಕನ್ನಡ ನಾಡಿನ ಸಮಾಜ ಸೇವಕ, ಚಿಂತಕ ಗುರೂಜಿ ಅವರು ತೆಲುಗು, ಕನ್ನಡ, ರಾಷ್ಟ್ರ ಭಾಷೆ ಹಿಂದಿಯಲ್ಲಿ ನಿರರ್ಗಳವಾಗಿ ಮಾತನಾಡುತ್ತಾರೆ. ಕನ್ನಡ ನಾಡನ್ನು ಅಪಾರವಾಗಿ ಪ್ರೀತಿಸುತ್ತಾರೆ. ಕನ್ನಡಿಗರು ಒಂದಾಗಬೇಕೆಂದು ಅವರು ಆ ಕಾಲದಲ್ಲಿ ತುಂಬ ಹೋರಾಟ ಮಾಡಿದರು. ಅವರ ಹಿಂದಿನ ಹೋರಾಟ ಫಲಕಾರಿಯಾಗಲಿಲ್ಲ. ಅಚ್ಚಕನ್ನಡ ಪ್ರದೇಶಗಳು ಹೊರಗುಳಿದವು ಎಂಬ ಕೊರಗೂ ಇಂದಿಗೂ ಅವರ ಮನವನ್ನು ಕೊರೆಯುತ್ತಲಿದೆ.

ಗುರೂಜಿ ಅವರು ಕನ್ನಡ, ಹಿಂದಿ, ಮರಾಠಿ, ಉರ್ದು, ಇಂಗ್ಲಿಷ್ ಭಾಷೆಯ ಪತ್ರಿಕೆಗಳನ್ನು ತಪ್ಪದೇ ಓದಿ ಜಗತ್ತಿನ ರಾಜಕೀಯ, ಸಾಮಾಜಿಕ, ಆಧ್ಯಾತ್ಮಿಕ, ಧಾರ್ಮಿಕ ವಿದ್ಯಮಾನವನ್ನು ತಿಳಿದುಕೊಳ್ಳುತ್ತಾರೆ. ಹಿತೈಷಿಗಳೊಡನೆ ಚರ್ಚಿಸುತ್ತಾರೆ.

ಬ್ಯಾಕ್ವರ್ಡ್ ಕ್ಲಾಸ್ ವಿದ್ಯಾರ್ಥಿ ವಸತಿ ಗೃಹ

ದೇಶ ಸ್ವಾತಂತ್ರ್ಯವಾದ ಮೇಲೆ ವಿದ್ಯಾಧರ ಗುರೂಜಿ ಅವರ ಒಂದು ದೃಷ್ಟಿ ಗಾಂಧೀಜಿ ಅವರ ಮೇಲೆ. ಇನ್ನೊಂದು ದೃಷ್ಟಿ ಅಜ್ಞಾನ, ಅನಕ್ಷರತೆ, ಅನಾರೋಗ್ಯ, ಬಡತನದಲ್ಲಿ ಬಳಲುತ್ತಿದ್ದ ಅಸಂಖ್ಯಾತ ಹಳ್ಳಿಯ ಬಡವರ ಮೇಲೆ. ಹಳ್ಳಿಗಳ ಉದ್ಧಾರವಾದರೆ ದೇಶಕ್ಕೆ ನಿಜವಾಗಿಯೂ ಸ್ವಾತಂತ್ರ್ಯ ಲಭಿಸಿದಂತೆ–ಎಂಬ ಭಾವನೆ ವಿದ್ಯಾಧರ ಗುರೂಜಿ ಅವರದು.

ಗಾಂಧೀಜಿ ಅವರು ಮಾತು ಮಾತಿಗೊಮ್ಮೆ ಹೇಳುತ್ತಿದ್ದರು. 'ಹಳ್ಳಿಗಳಿಗೆ ಹಿಂದಿರುಗಿ' ಎಂದು. ಗಾಂಧೀಜಿಯವರು ಹೇಳಿದ ಈ 'ಮಾತು' ವಿದ್ಯಾಧರ ಗುರೂಜಿ ಅವರು 'ಮಂತ್ರ' ವೆಂದು ಭಾವಿಸಿದರು. ಹಳ್ಳಿಗಳು ಉದ್ಧಾರವಾಗಬೇಕಾದರೆ ಮೊದಲು ಹಳ್ಳಿಯಲ್ಲಿ ವಾಸಿಸುತ್ತಿದ್ದ ಬಡ ರೈತರ, ಕೂಲಿಕಾರ್ಮಿಕರ, ಜನಪದ ಕಲಾವಿದರ ಹಳ್ಳಿಯ ಆಯಗಾರರ, ಅಲೆಮಾರಿ ಜನಾಂಗ ದವರ ಮಕ್ಕಳು ವಿದ್ಯಾವಂತರಾಗಬೇಕು. ಬುದ್ಧಿವಂತರಾಗಬೇಕು. ಅವರು ತಮ್ಮ ಕಾಲ



ಮೇಲೆ ತಾವು ನಿಲ್ಲಬೇಕು ಎಂದು ಭಾವಿಸಿದರು. ಅಂಥವರ ಮಕ್ಕಳು ಹಳ್ಳಿಯಲ್ಲಿ ಶಿಕ್ಷಣ ಮುಗಿಸಿ ಮುಂದಿನ ಶಿಕ್ಷಣ ಪಡೆಯಲು ತಾಲೂಕು ಸ್ಥಳಗಳಿಗೆ ಬರುವ ಬಡ ಹಿಂದುಳಿದ ಮಕ್ಕಳ ಸಲುವಾಗಿ 1950ರಲ್ಲಿ 'ಬ್ಯಾಕ್ವರ್ಡ್‌ಕ್ಲಾಸ್ ವಿದ್ಯಾರ್ಥಿ ವಸತಿ ಗೃಹ' ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯ ಅಧ್ಯಕ್ಷರೆಂದು ಆಗಿನ ಕಾಲದ ಹಿಂದುಳಿದ ಜನಾಂಗದ ಧುರೀಣರೆಂದು ಪ್ರಖ್ಯಾತರಾಗಿದ್ದ ಶ್ರೀ ಕೋಲೂರು ಮಲ್ಲಪ್ಪ ನವರನ್ನು ಆಯ್ಕೆ ಮಾಡಿಕೊಂಡರು. ವಿದ್ಯಾಧರ ಗುರೂಜಿ ಅವರು ಜನರಲ್ ಸೆಕ್ರೆಟರಿ ಆಗಿ ಆಯ್ಕೆಗೊಂಡರೆ ಕಲಕುಂದಿ ಹನುಮಂತಯ್ಯನವರು ಕೋಶಾಧ್ಯಕ್ಷರಾಗಿ ಸೇವಾ ನಿರತರಾದರು. ವೀರಣ್ಣ ಚಟ್ನಳ್ಳಿ, ಕೊಂಡಾ ನಾರಣಪ್ಪ, ಮಲ್ಲಣ್ಣ ಅಂಬಿಗೇರ ಮುಂತಾದ ಘಟಾನುಘಟಿ ವ್ಯಕ್ತಿಗಳು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಒಮ್ಮನಿಸ್ಸಿನಿಂದ ಸೇವೆ ಸಲ್ಲಿಸ ತೊಡಗಿದರು. ಆ ಕಾಲದಲ್ಲಿ ವೀರಣ್ಣ ಚಟ್ನಳ್ಳಿ ಯಾದಗಿರಿ ಮುನ್ಸಿಫಲ ಅಧ್ಯಕ್ಷರಾಗಿದ್ದರು. ಇವರೆಲ್ಲರೂ ಹಳ್ಳಿಗಳ ಉದ್ಧಾರಕ್ಕಾಗಿ ಹೆಗಲಿಗೆ ಹೆಗಲು ಕೊಟ್ಟು ದುಡಿಯುತಿದ್ದ ಕಾಂಗ್ರೆಸ್ ಕಾರ್ಯಕರ್ತರಾಗಿದ್ದರು.

'ಬ್ಯಾಕ್ವರ್ಡ್ ಕ್ಲಾಸ್ ವಿದ್ಯಾರ್ಥಿ ವಸತಿಗೃಹ' ಸ್ಥಾಪನೆಯಾದ ವಿಷಯ ಯಾದಗಿರಿ ವಿಭಾಗ ಮಟ್ಟದ ತಾಲೂಕುಗಳಾದ ಶಹಾಪುರ, ಸುರಪುರ, ಯಾದಗಿರಿ ತಾಲೂಕಿನ ಪ್ರತಿಯೊಂದು ಹಳ್ಳಿಗಳ ಬಡ-ಹಿಂದುಳಿದ ಜನಾಂಗದ ಮಕ್ಕಳಿಗೆ ತಿಳಿಯಿತು. ತಮ್ಮ ತಮ್ಮ ಹಳ್ಳಿಗಳ ಶಾಲೆಯಲ್ಲಿ ಚೆನ್ನಾಗಿ ಓದಿ ಅಭ್ಯಾಸ ಮಾಡಿ ಒಳ್ಳೆಯ ಅಂಕಗಳನ್ನು ಪಡೆದು ಮಿಡ್ಲ್ ಸ್ಕೂಲ್‌ಗಳಿಗಾಗಲಿ, ಪ್ರೌಢಶಾಲೆಗಳಿಗೆ ಆಗಲಿ ಯಾದಗಿರಿಗೆ ಬಂದು 'ಬ್ಯಾಕ್ವರ್ಡ್ ಕ್ಲಾಸ್ ವಸತಿ ಗೃಹ'ದಲ್ಲಿ ಆಶ್ರಯ ಪಡೆದು ಓದಿ ಮುಂದೆ ಬರಲು ಹಂಬಲಿಸತೊಡಗಿದರು. ವಿದ್ಯಾಧರ ಗುರೂಜಿ ಅವರು ಇವರ ಹಂಬಲಕ್ಕೆ ಮುಂಬಲ ಕೊಡಲು ಒಂಟಿಗಾಲ ಮೇಲೆ ನಿಂತುಕೊಂಡಿದ್ದರು.

ವಿದ್ಯಾಧರ ಗುರೂಜಿ ಅವರು ದೈವೀಪುರುಷರು ನಿಜವಾದ ಅರ್ಥದಲ್ಲಿ ಅವರೊಬ್ಬರು ಸಂತರು, ಶರಣರು, ಸಾಧುಗಳು, ಶುಭ್ರ ಖಾದಿ ವಸ್ತ್ರದಲ್ಲಿ ಎದ್ದು ಕಾಣುವ ದೇಶಭಕ್ತರು ಎಂದು ಹೇಳಬಹುದು. ಅವರು ಇರುವ ಮನೆಯಲ್ಲಿ ಮಾಡಿ ಉಣ್ಣಲು ಒಂದು ಕಾಳು ಧಾನ್ಯವಿಲ್ಲ. ಕೈಯಲ್ಲಿ ಕಾಸಿಲ್ಲ. ಅವರು ತಮಗಾಗಿ ಒಂದು ದಿನವೂ ಚಿಂತಿಸಲಿಲ್ಲ. ಅವರ ಮನದಲ್ಲಿ

ಪರರ ಚಿಂತೆ, ಪರೋಪಕಾರದ ಚಿಂತೆ. ಅಂತೆಯೇ ಈ ಎಲ್ಲ ಕಾರ್ಯಕರ್ತರ ಮಧ್ಯದಲ್ಲಿದ್ದ ಒಬ್ಬ 'ಸಂತ' ಎಂದು ಹೇಳಬಹುದು. ಆರ್ಯಸಮಾಜದ ಸೇವಕರೆಲ್ಲರೂ, ಸಾಧಕರೆಲ್ಲರೂ ಧುರೀಣರೆಲ್ಲರೂ ಬ್ರಹ್ಮಚಾರಿಗಳು ಸೇವಾನಿಷ್ಠ ಸಮಾಜ ಸುಧಾರಕರಾಗಿದ್ದರು. ಅವರ ಸಾಲಿನಲ್ಲಿ ವಿದ್ಯಾಧರ ಗುರೂಜಿ ಅವರೂ ಒಬ್ಬರು.


'ಬ್ಯಾಕ್ವರ್ಡ್ ಕ್ಲಾಸ್ ವಿದ್ಯಾರ್ಥಿ ವಸತಿ ಗೃಹ' ನಿರ್ಮಾಣವಾಯಿತು ಹಳ್ಳಿ ಹಳ್ಳಿಗೂ ಪ್ರಚಾರವಾಯಿತು. ಏಪ್ರಿಲ್, ಮೇ ತಿಂಗಳು ಬಿಡುವು ಮುಗಿಯುತ್ತಲೇ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಪ್ರಾರಂಭವಾಗುತ್ತದೆ. ವಸತಿ ಗೃಹ ಅಪೇಕ್ಷಿಸಿ ಬರುವ ಮಕ್ಕಳಿಗೆ ಉತ್ತಮ ಊಟ, ವಸತಿ, ಕಲ್ಪಿಸಿಕೊಡಲು ವಿದ್ಯಾಧರ ಗುರೂಜಿ ಅವರು ಯೋಚಿಸತೊಡಗಿದರು. ಫೆಬ್ರುವರಿ, ಮಾರ್ಚ್ ತಿಂಗಳಲ್ಲಿ ಸುಗ್ಗಿಯ ಕಾಲ. ಈ ಸುಗ್ಗಿ ಕಾಲದಲ್ಲಿ ರೈತರು ತಮ್ಮ ಹೊಲಗಳಲ್ಲಿ ಬೆಳೆದು ತರುವ ದವಸ ಧಾನ್ಯಗಳಲ್ಲಿ ಹೊಸದಾಗಿ ಪ್ರಾರಂಭಿಸಿದ 'ಬ್ಯಾಕ್ವಡ್ ಕ್ಲಾಸ್ ವಿದ್ಯಾರ್ಥಿ ವಸತಿ ಗೃಹ'ಕ್ಕೆ ದಾನವಿತ್ತು ಸಹಕರಿಸಬೇಕೆಂದು ವಿನಂತಿಸಿಕೊಳ್ಳತೊಡಗಿದರು. ಇವರ ಸಂಗಡ ಸುಂದರ ದೃಢಕಾಯದ ಮಲ್ಲಣ್ಣ ಅಂಬೇಗರ ಸದಾ ಇರುತ್ತಿದ್ದರು. ಉಳ್ಳವರು ಈ ಪುಣ್ಯದ ಕಾರ್ಯಕ್ಕೆ ಮುಕ್ತ ಮನಸ್ಸಿನಿಂದ ದಾನವಿತ್ತು ಸಹಕರಿಸತೊಡಗಿದರು. ಹೊಲದಲ್ಲಿ, ತೋಟದಲ್ಲಿ, ಗದ್ದೆಯಲ್ಲಿ ಬೆಳೆದು ಬರುವ ಜೋಳ, ಗೋಧಿ, ಅಕ್ಕಿ ಮೆಣಸಿನ ಕಾಯಿ, ಉಳ್ಳಾಗಡ್ಡೆ, ಬೆಳ್ಳೊಳ್ಳಿ ಹುಣಸೆ ಹಣ್ಣು ಇತ್ಯಾದಿ ಪ್ರಸಾರ ನಿಲಯಕ್ಕೆ ಬೇಕಾಗುವ ವಸ್ತುಗಳನ್ನು ಸಂಗ್ರಹಿಸತೊಡಗಿದರು. ಇನ್ನು ಕೆಲವರು ಹಾಲು, ಮೊಸರು ಸಕ್ಕರೆ ಬೆಲ್ಲ ಬ್ಯಾಳಿ ಕೊಂಡುಕೊಳ್ಳಲು ಹಣ ಕೊಟ್ಟು ಪ್ರೋತ್ಸಾಹಿಸತೊಡಗಿದರು. ಕೊಡುಗೈ ದೊರೆಗಳ ಸಹಕಾರದಿಂದ 'ಬ್ಯಾಕ್ವರ್ಡ್ ಕ್ಲಾಸ್ ವಿದ್ಯಾರ್ಥಿ ವಸತಿ ಗೃಹ' ಯಾವ ಅಡಚಣೆಯಿಲ್ಲದೆ ನಡೆಯತೊಡಗಿತು. 'ವಸತಿ ಗೃಹ'ಕ್ಕೆ ಬರುವ ವಿದ್ಯಾರ್ಥಿಗಳು ಮಹಾ ದಯಾಳು ವಿದ್ಯಾಧರ ಗುರೂಜಿ ಅವರನ್ನು ನೆನೆಸಿಕೊಂಡು ಬರುತ್ತಿದ್ದರು. ಬಂದ ಮಕ್ಕಳಿಗೆ ಆಶ್ರಯ ಸಿಕ್ಕೇ ಸಿಗುತ್ತಿತ್ತು. ಪ್ರತಿವರ್ಷ 'ವಸತಿ ಗೃಹ'ದಲ್ಲಿ ಒಂದು ನೂರು ವಿದ್ಯಾರ್ಥಿಗಳಿಂದ ನೂರಾ ಇಪ್ಪತ್ತರವರೆಗೆ ವಿದ್ಯಾರ್ಥಿಗಳು 'ವಸತಿ ಗೃಹ'ದಲ್ಲಿ ಇದ್ದು ಊಟ ಮಾಡಿ ಅಭ್ಯಾಸ ಮಾಡುತ್ತಿದ್ದರು. ಈ ಎಲ್ಲ ವಿದ್ಯಾರ್ಥಿಗಳಿಗೆ ವಿದ್ಯಾಧರ ಗುರೂಜಿ ಅವರು ಉತ್ತಮ ಮಾರ್ಗದರ್ಶನ

ನೀಡಿ ಶಿಕ್ಷಣದೊಡನೆ ಸಂಸ್ಕಾರವನ್ನು, ಸಭ್ಯತೆಯನ್ನು ನೀಡಿ ಪ್ರೋತ್ಸಾಹಿಸುತ್ತಿದ್ದರು.

ಸುಮಾರು ಎರಡು ನೂರಾ ಐವತ್ತು ವರ್ಷಗಳಿಂದ ನಮ್ಮ ದೇಶ ಪರಕೀಯರ ಕಪಿಮುಷ್ಠಿಯಲ್ಲಿ ಸಿಲುಕಿ ವಿಲಿ ವಿಲಿ ಒದ್ದಾಡಿದ ರೋಮಾಂಚನಕಾರಿ ಕಥೆಯನ್ನು ಹೇಳಿ ಮಕ್ಕಳಲ್ಲಿ ದೇಶಾಭಿಮಾನವನ್ನು ಸ್ವಾಭಿಮಾನವನ್ನು ಹುಟ್ಟಿಸುತ್ತಿದ್ದರು. ತಾಯಿ-ತಂದೆಗಳು ನಮಗೆ ಜನ್ಮಕೊಟ್ಟಿದ್ದಾರೆ. ನೀವು ಕಲಿಯುವ ಭಾಷೆ ಒಳ್ಳೆಯ ಬದುಕನ್ನು ಕಟ್ಟಿಕೊಡುತ್ತದೆ. ಪರಸ್ಪರರಲ್ಲಿ ಪ್ರೀತಿ, ವಿಶ್ವಾಸ ಒಳ್ಳೆಯ ಸಂಪರ್ಕ ಕಲ್ಪಿಸಿಕೊಡುತ್ತದೆ. ಅದಕ್ಕಾಗಿ ನೀವೆಲ್ಲರೂ ಭಾಷಾಭಿಮಾನಿಗಳಾಗಿ ಬೆಳೆಯಬೇಕೆಂದು ಹೇಳುತ್ತಿದ್ದರು. ಕನ್ನಡ ನಿಮಗೆ ಮಾತೃಭಾಷೆ, ಹಿಂದಿ ರಾಷ್ಟ್ರಭಾಷೆ. ಇಂಗ್ಲೀಷು ಇಂದಿನ ಬದುಕಿನ ಸಂಪರ್ಕ ಭಾಷೆ. ನೀವು ಈ ಮೂರು ಭಾಷೆಯನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಓದು, ಬರಹ, ಲೆಕ್ಕ ಪತ್ರದಲ್ಲಿ ನಿಷ್ಣಾತರಾಗಬೇಕೆಂದು ತಿಳಿಹೇಳುತ್ತಿದ್ದರು. ಸಮಾಜದಲ್ಲಿ ಗೊಡ್ಡು ಆಚರಣೆ, ಮೂಢನಂಬಿಕೆ, ಅಂಧಾನುಕರಣೆ ಮನೆ ಮಾಡಿಕೊಂಡಿವೆ. ನೀವು ವೈಜ್ಞಾನಿಕ ದೃಷ್ಟಿ ಇಟ್ಟುಕೊಂಡು ವೈಚಾರಿಕ ಮನೋಭಾವನೆವುಳ್ಳವರಾಗಬೇಕೆಂದು ತಿಳಿಸಿ ಹೇಳುತ್ತಿದ್ದರು.

ವಿದ್ಯಾಧರ ಗುರೂಜಿ ಅವರ ಕೈಯಲ್ಲಿ ಸದಾ ಹಿಂದಿ, ಕನ್ನಡ, ಇಂಗ್ಲಿಷ್ ಪತ್ರಿಕೆಗಳು ಇರುತ್ತಿದ್ದವು. ಗುರೂಜಿ ಅವರು ಸಮಾಜ ಬಾಂಧವರೊಡನೆ, ಸ್ನೇಹಿತರೊಡನೆ, ಹಿತೈಷಿಗಳೊಡನೆ ಹಿಂದಿಯಲ್ಲಿಯೇ ಮಾತಾಡುತ್ತಿದ್ದರು. ಹಿಂದಿಯಲ್ಲಿಯೇ ಬರೆಯುತ್ತಿದ್ದರು. 'ಹಿಂದಿ ಅಂದರೆ ಗುರೂಜಿ, ಗುರೂಜಿ ಅಂದರೆ ಹಿಂದಿ'. ಹಿಂದಿ ಭಾಷೆ ಅವರ ಜೀವನದಲ್ಲಿ ಹಾಸು ಹೊಕ್ಕಾಗಿತ್ತು.

ಯಾದಗಿರಿಯಲ್ಲಿ 'ಬ್ಯಾಕ್ವರ್ಡ್ ಕ್ಲಾಸ್ ವಿದ್ಯಾರ್ಥಿ ವಸತಿ ಗೃಹ' ಹತ್ತು ವರ್ಷದಲ್ಲಿ ತುಂಬ ಹೆಸರನ್ನು ಪಡೆಯಿತು. ಸಾಕಷ್ಟು ಹಳ್ಳಿಯ ಮಕ್ಕಳಿಗೆ ಅನ್ನ, ವಸತಿ ಕೊಟ್ಟು ಪ್ರೋತ್ಸಾಹಿಸಿತು. ಇದುವರೆಗೂ ಸಾರ್ವಜನಿಕರ ಬೆಂಬಲದಿಂದ ನಡೆದ ಈ ವಸತಿ ಗೃಹ ಸ್ವಂತಕಟ್ಟಡ ಮಾಡಿಕೊಳ್ಳಲು 1960ರಲ್ಲಿ ಮೈಸೂರು ಸರಕಾರದಿಂದ ಏಳು ಲಕ್ಷ ರೂಪಾಯಿ ಮಂಜೂರಾಗಿ ಬಂದಿತು. ಹೀಗೆ ಬಂದ ಪತ್ರದ ಸಂಗಡ ಸರಕಾರ ಒಂದು ಕರಾರು ಹಾಕಿತ್ತು. ನೀವು ನಡೆಸುವ ಈ ವಸತಿ ಗೃಹಕ್ಕೆ ಯಾರಾದರೊಬ್ಬರ ಮಹಾತ್ಮರ ಹೆಸರಿಡಬೇಕೆಂದು ತಿಳಿಸಿತ್ತು. ಈ ವಿಷಯ 'ಬ್ಯಾಕ್ವರ್ಡ್ ಕ್ಲಾಸ್ ವಿದ್ಯಾರ್ಥಿ



ವಸತಿ ಗೃಹ' ಸಂಸ್ಥೆಯ ಪದಾಧಿಕಾರಿಗಳ ಒಂದು ಸಭೆ ಕರೆದು ಸರಕಾರದಿಂದ ಬಂದ ಪತ್ರ ಓದಿ ಹೇಳಿ ಓರ್ವ ಮಹಾತ್ಮರ ಹೆಸರಿಡಲು ಸೂಚಿಸಿದರು.

ಈ ಸಂಸ್ಥೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಲಿದ್ದ ಕೋಲೂರು ಮಲ್ಲಪ್ಪನವರು ನಾವು ಇದುವರೆಗೂ ನಡೆಸಿಕೊಂಡು ಬರುವ 'ಬ್ಯಾಕ್ವರ್ಡ್ ಕ್ಲಾಸ್ ವಿದ್ಯಾರ್ಥಿ ವಸತಿ ಗೃಹ' ತುಂಬ ಒಳ್ಳೆಯ ಹೆಸರನ್ನು ಪಡೆದಿದೆ. ಈ ಸಂಸ್ಥೆ ಹಿಂದುಳಿದ, ಬಡವರ, ತುಳಿಯಲ್ಪಟ್ಟವರ ಪ್ರತೀಕವಾಗಿ ನಡೆದುಕೊಂಡು ಬಂದಿದೆ. ಅದು ಒಳ್ಳೆಯ ಹೆಸರನ್ನೂ ಮಾಡಿದೆ. ಈ ಹೆಸರನ್ನು ಬದಲಿಸುವುದೂ ಬೇಡ. ಸರಕಾರದ ಅನುದಾನವೂ ಬೇಡ ಎಂದು ಸ್ಪಷ್ಟವಾಗಿ ಹೇಳಿದರು.

ನಾವು ಬೇರೆ ಯಾವ ಮಹಾತ್ಮರ ಹೆಸರನ್ನು ಇಡುವುದು ಬೇಡ ನಮ್ಮ ದೃಷ್ಟಿಯಲ್ಲಿ ಕೋಲೂರು ಮಲ್ಲಪ್ಪನವರೇ ಮಹಾತ್ಮರು. ಹತ್ತು ವರ್ಷಗಳವರೆಗೆ ಸಾರ್ವಜನಿಕರ ಬೆಂಬಲ ಪಡೆದ ಈ ಭಾಗದ ಬಡವರ, ಹಿಂದುಳಿದವರ ತುಳಿಯಲ್ಪಟ್ಟವರ ಮಕ್ಕಳಿಗೆ ಅನ್ನ, ವಸತಿ ನೀಡಿ ಅವರ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟಿರುವರು ಕೋಲೂರು ಮಲ್ಲಪ್ಪನವರೇ. "ನಮ್ಮ ದೃಷ್ಟಿಯಲ್ಲಿ ನೀವೇ ಪುಣ್ಯವಂತರು ಮಹಾತ್ಮರು. ನಾವು ಈ ವಿದ್ಯಾರ್ಥಿ ವಸತಿ ಗೃಹಕ್ಕೆ ನಿಮ್ಮ ಹೆಸರನ್ನೇ ಇಡುತ್ತೇವೆ. ಸರಕಾರದ ಸಾರ್ವಜನಿಕರ ಸಹಕಾರ ಪಡೆದು ಇನ್ನೂ ಈ ವಿದ್ಯಾರ್ಥಿ ವಸತಿ ಗೃಹ ಅರ್ಥಪೂರ್ಣವಾಗಿ ನಡೆಸುತ್ತೇನೆ" ಎಂದು ವಿದ್ಯಾಧರ ಗುರೂಜಿ ಅವರು ತಮ್ಮ ಹಿಂದಿ ಭಾಷೆಯಲ್ಲಿ ಗಟ್ಟಿಯಾಗಿ ಹೇಳಿದರು. ಇವರ ಮಾತಿಗೆ ಸಭೆ ಒಮ್ಮತದ ಅಭಿಪ್ರಾಯದ ವ್ಯಕ್ತಪಡಿಸಿದರೂ ಕೋಲೂರು ಮಲ್ಲಪ್ಪನವರು ಒಪ್ಪಲಿಲ್ಲ. ಕೋಲೂರು ಮಲ್ಲಪ್ಪನವರ ಮನದ ಇಂಗಿತ ಅರಿತುಕೊಂಡು ಕೂಡಲೇ ವಿದ್ಯಾಧರ ಗುರೂಜಿ 'ಬ್ಯಾಕ್ವರ್ಡ್ ಕ್ಲಾಸ್ ವಿದ್ಯಾರ್ಥಿ ವಸತಿ ಗೃಹ' ಸಂಸ್ಥೆಯ ಜನರಲ್ ಸೆಕ್ರೆಟರಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊರಬಂದರು. ಅವರ ಹಿಂದೆ ಅವರ ಅಭಿಮಾನಿಗಳೂ ಹೊರಬಂದರು. ಮಲ್ಲಪ್ಪ ಕೋಲೂರು ಅವರು ತಾವು ಅಧ್ಯಕ್ಷರಾಗಿದ್ದ 'ಬ್ಯಾಕ್ವರ್ಡ್ ಕ್ಲಾಸ್ ವಿದ್ಯಾರ್ಥಿ ವಸತಿ ಗೃಹ' ಅಧ್ಯಕ್ಷರಾಗಿ ಮುಂದುವರಿದು ಬೇರೆ ಸದಸ್ಯರನ್ನು, ಜನರಲ್ ಸೆಕ್ರೆಟರಿಗಳನ್ನು ಆಯ್ಕೆ ಮಾಡಿಕೊಂಡು 'ಬ್ಯಾಕ್ವರ್ಡ್ ಕ್ಲಾಸ್ ವಿದ್ಯಾರ್ಥಿ ವಸತಿ ಗೃಹ' ಸಂಸ್ಥೆಯ ಚಟುವಟಿಕೆಯನ್ನು ಮುಂದುವರಿಸಿಕೊಂಡು ಬಂದರು.



ವಿದ್ಯಾಧರ ಗುರೂಜಿ ಅವರು ತಮ್ಮ ಜನರಲ್ ಸೆಕ್ರೆಟರಿ ಸ್ಥಾನಕ್ಕೆ ರಾಜಿನಾಮೆ ಕೊಟ್ಟು ಹೊರಬಂದ ಸುದ್ದಿ ಕೇಳಿ ವಿಶ್ವನಾಥರೆಡ್ಡಿ ಮುದ್ನಾಳ ಅವರು ತುಂಬ ಸಂತೋಷಪಟ್ಟರು. ಇನ್ನು ವಿದ್ಯಾಧರ ಗುರೂಜಿ ಸಹಜವಾಗಿಯೇ ನಮ್ಮ ಕಡೆ ಬರುತ್ತಾರೆಂದು ಅವರ ದಾರಿ ಕಾಯ ತೊಡಗಿದರು.

ನಿಜವಾಗಿಯೂ ಇದೊಂದು ವಿಷ ಘಳಿಗೆಯೆಂದು ಭಾವಿಸಿ ವಿದ್ಯಾಧರ ಗುರೂಜಿ ಅವರು ಕೆಲ ದಿವಸ ತಟಸ್ಥರಾದರು. ಕೋಲೂರು ಮಲ್ಲಪ್ಪನವರಿಂದ ಯಾವ ಸೂಚನೆಯೂ ಬರಲಿಲ್ಲ. ತಾವು ರಾಜಿನಾಮೆ ಕೊಟ್ಟು ಹೊರಬಂದ ಮೇಲೆ 'ಬ್ಯಾಕ್ವರ್ಡ್ ಕ್ಲಾಸ್ ವಿದ್ಯಾರ್ಥಿ ವಸತಿ ಗೃಹ'ದ ಕಡೆಗೂ ಹೋಗಲಿಲ್ಲ. ಒಳಗೊಳಗೆ ವಿರಸದ ಹೊಗೆಯಾಡುತ್ತಿತ್ತು. ಆ ಹೊಗೆ ಹೊರಬರತೊಡಗಿತು. ವಿದ್ಯಾಧರ ಗುರೂಜಿ ಅವರು ದೂರಾದವರೇ ಕೋಲೂರು ಮಲ್ಲಪ್ಪನವರಿಂದ ದೂರಾಗಿಯೇಬಿಟ್ಟರು.

ಗಾಂಧಿ ಜನರಲ್ ಹಾಸ್ಟೆಲ್

ಕೆಲವು ದಿನ ಕಳೆಯುತ್ತಲೇ ವಿದ್ಯಾಧರ ಗುರೂಜಿ ಅವರು ತಮ್ಮ ಕೆಲವು ಹಿತೈಷಿಗಳನ್ನು ಕರೆದು ಒಂದು ಸಭೆ ಮಾಡಿದರು. ಈ ಸಭೆಯಲ್ಲಿ ಸರಕಾರದ ಆದೇಶದಂತೆ ಹಳ್ಳಿಯ ಬಡಮಕ್ಕಳ ಶಿಕ್ಷಣಕ್ಕಾಗಿ 'ಒಂದು ವಸತಿ ಗೃಹ ಪ್ರಾರಂಭಿಸು ವುದು ಬಹಳ ಅವಶ್ಯವಿದೆ. ತಮ್ಮೆಲ್ಲರ ಅಭಿಪ್ರಾಯ ಒಪ್ಪಿಗೆ ಪಡೆದು ಪ್ರಾರಂಭಿಸಲು ಈ ಸಭೆ ಕರೆಯಲಾಗಿದೆ' ಎಂದು ಸಭೆಯ ಮುಂದೆ ತಮ್ಮ ಅಭಿಪ್ರಾಯ ಮಂಡಿಸಿದರು. ನೀವು ಯಾವುದೇ ನಿರ್ಣಯ ಕೈಗೊಳ್ಳಿರಿ ಅದಕ್ಕೆ ನಮ್ಮ ಒಪ್ಪಿಗೆ ಇದೆ ಎಂದು ಸಭೆಯು ಒಮ್ಮತ ದಿಂದ ಸೂಚಿಸಿತು.

ಆಗ ವಿದ್ಯಾಧರ ಗುರೂಜಿ ಅವರು ನಾವು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮ ಗಾಂಧೀಜಿ ಅವರ ಹೆಸರಿನಲ್ಲಿ ಒಂದು ಹಾಸ್ಟೆಲ್ ಪ್ರಾರಂಭಿಸೋಣ ಎಂದು 'ಗಾಂಧಿ ಜನರಲ್ ಹಾಸ್ಟೆಲ್' ಎಂಬ ಒಂದು ಸಂಸ್ಥೆಯನ್ನು ಕಟ್ಟಿ ದರು. ಈ ಸಂಸ್ಥೆಗೆ ಶ್ರೀ ವೀರಣ್ಣ ಚಟ್ನಳ್ಳಿ ಅವರು ಅಧ್ಯಕ್ಷರಾಗಬೇಕೆಂದು ಸೂಚಿಸಿದರು. ಸಭೆಯ



ಒಮ್ಮತದ ಅಭಿಪ್ರಾಯದಂತೆ ಶ್ರೀ ವೀರಣ್ಣ ಚಟ್ನಳ್ಳಿ ಅವರು ಅಧ್ಯಕ್ಷರಾದರು. ವಿದ್ಯಾಧರ ಗುರೂಜಿ ಅವರು ಈ ಸಂಸ್ಥೆಯ ಜನರಲ್ ಸೆಕ್ರೆಟರಿಯಾದರು. ಶ್ರೀ ಹನುಮಂತಯ್ಯ ಕಲಕುಂದಿ ಅವರು ಕೋಶಾಧ್ಯಕ್ಷರಾಗಿ ಆಯ್ಕೆಯಾದರು. ವಿಶ್ವನಾಥರೆಡ್ಡಿ ಮುದ್ನಾಳ ಅವರು ಸದಸ್ಯರಾಗಿ ಆಯ್ಕೆಯಾದರು. ಅಂದಿನ ಸಭೆಯಲ್ಲಿ 'ಗಾಂಧಿ ಜನರಲ್ ಹಾಸ್ಟೆಲ್' ನಡೆಸಲು ಬೇಗನೆ ಮುಂದಾಗ ಬೇಕೆಂದು ಅಂದು ಅಲ್ಲಿ ನೆರೆದ ಸದಸ್ಯರೆಲ್ಲರೂ ಕೂಡಿ ಸಂಸ್ಥೆಗೆ ದೇಣಿಗೆ ನೀಡಿದರು. ಸದಸ್ಯರು ನೀಡಿದ ದೇಣಿಗೆ ಹಣ ಎಣಿಸಿ ನೋಡುತ್ತಲೇ ಈ ಹಣ ನಾಲ್ವತ್ತು ಸಾವಿರಕ್ಕೂ ಮಿಕ್ಕಿತ್ತು. 'ಗಾಂಧಿ ಜನರಲ್ ಹಾಸ್ಟೆಲ್' ನಡೆಸಲು ಒಂದು ವಿಶಾಲವಾದ ಬಾಡಿಗೆ ಮನೆ ಹಿಡಿಯಲಾಯಿತು. ಸೊಗಸಾದ ಕನ್ನಡ ಭಾಷೆಯಲ್ಲಿ ಕರಪತ್ರ ಮುದ್ರಿಸಿ ಹಂಚಿ ಹಳ್ಳಿಯ ಬಡಮಕ್ಕಳ ಮನೆಗೆ ತಲುಪುವಂತೆ ಪ್ರಚಾರ ಕಾರ್ಯವೂ ನಡೆಯಿತು. ಅತ್ಯಂತ ಜಿದ್ದಿನ ಮನುಷ್ಯ ವಿದ್ಯಾಧರ ಗುರೂಜಿ ಅವರು ಅಂದಿನ ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ನಿಜಲಿಂಗಪ್ಪನವರನ್ನು ಯಾದಗಿರಿಗೆ ಬರಮಾಡಿಕೊಂಡು ಅವರ ಅಮೃತ ಹಸ್ತದಿಂದ 'ಗಾಂಧಿ ಜನರಲ್ ಹಾಸ್ಟೆಲ್' ಉದ್ಘಾಟನೆಗೊಳಿಸಿದರು. ಅಂದು ಯಾದಗಿರಿಯಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಈ 'ಗಾಂಧಿ ಜನರಲ್ ಹಾಸ್ಟೆಲ್'ಕ್ಕೆ ಸರಕಾರದಿಂದ ಪ್ರತಿವರ್ಷ ಒಂದು ಲಕ್ಷ ರೂ. ಅನುದಾನ ದೊರಕತೊಡಗಿತು. ಸಾರ್ವಜನಿಕರ ವಂತಿಗೆಯೂ ಬರುತ್ತಿತ್ತು. ಈ ಹಾಸ್ಟೆಲ್ ಯಾವ ದೃಷ್ಟಿಯಿಂದಲೂ ಕಡಿಮೆಯಾಗದಂತೆ ತುಂಬ ದಕ್ಷತೆ ವಹಿಸಿ ಪದಾಧಿಕಾರಿಗಳು ನೋಡಿಕೊಂಡು ಹೋಗತೊಡಗಿದರು. ಜನರಲ್ ಸೆಕ್ರೆಟರಿ ಆಗಿ ವಿದ್ಯಾಧರ ಗುರೂಜಿ ಅವರು ಮೈ ತುಂಬ ಕಣ್ಣಾಗಿ ಈ ಹಾಸ್ಟೆಲ್ ನಡೆಸಿಕೊಂಡು ಬರತೊಡಗಿದರು.

ಹಾಸ್ಟೆಲ್‌ಕ್ಕೆ ಬರುವ ಮಕ್ಕಳ ಸಂಖ್ಯೆ ನೋಡಿ ವಿದ್ಯಾಧರ ಗುರೂಜಿ ಅವರು ತುಂಬ ಸಂತಸ ಪಡುತ್ತಿದ್ದರು. ಅವರು ವಿದ್ಯಾವಂತರಾಗಿ ಉತ್ತಮ ನಾಗರೀಕರಾಗಿ ಹೊರಬಂದರೆ ತಮ್ಮ ಶ್ರಮ ಸಾರ್ಥಕವೆಂದು ಭಾವಿಸಿ ಕೊಳ್ಳುತ್ತಿದ್ದರು.

ಬಾಳ ಸಂಗಾತಿಯನ್ನು ಆರಿಸಿಕೊಂಡರು


ಮಹಾತ್ಮಾ ಗಾಂಧೀಜಿ ಅವರು ಹಿಂದಿ ಭಾಷೆಯಲ್ಲಿ ಮಾತಾಡಬೇಕು. ಹಿಂದಿ ರಾಷ್ಟ್ರಭಾಷೆಯನ್ನು ಪ್ರಚಾರ ಮಾಡಬೇಕೆಂದು ಹೇಳಿದ ಮಾತು ಕೇವಲ ಮಾತಲ್ಲ. ಅದು ಮಂತ್ರವೆಂದು ತಿಳಿದು ವಿದ್ಯಾಧರ ಗುರೂಜಿಯವರು ಹಿಂದಿ ಭಾಷೆ ಪ್ರಚಾರದಲ್ಲಿ ತೊಡಗಿದ್ದರು. 'ಹಿಂದಿ ಪ್ರಚಾರ ಸಭಾ ಹೈದರಾಬಾದ್ ಕೇಂದ್ರ' ದಿಂದ ನಡೆಯುತ್ತಿದ್ದ ಹಿಂದೀ ಪರೀಕ್ಷೆಗಳಿಗೆ ಮಕ್ಕಳನ್ನು, ಯುವಕರನ್ನು ಕೂಡ್ರಿಸಿ ಅವರಿಗೆ ಅಭ್ಯಾಸ ಮಾಡಿಸುವ ಕ್ರಮವನ್ನು ಕೈಕೊಂಡರು ಅನೇಕ ಜನ ಯುವಕರು, ಯುವತಿಯರು, ಆಗ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಲಿದ್ದ ಶಿಕ್ಷಕರು ಪರೀಕ್ಷೆಗಳಿಗೆ ಕುಳಿತು ಅಭ್ಯಾಸ ಮಾಡತೊಡಗಿದರು. ವಿದ್ಯಾಧರ ಗುರೂಜಿ ಅವರು ಅವರೆಲ್ಲರಿಗೂ ಮಾರ್ಗದರ್ಶನ ಮಾಡುತ್ತಿದ್ದರು.

ಆಗ ಬೀಡಿ ಕಾರ್ಖಾನೆಯಲ್ಲಿ ಕೆಲಸ ಮಾಡುವವರಿಗೆ ಜೈಲಿನಲ್ಲಿದ್ದ ಕೈದಿಗಳಿಗೆ ಪ್ರತ್ಯೇಕ ಹಿಂದಿ ಕಲಿಯಲು ವ್ಯವಸ್ಥೆ ಮಾಡಿದ್ದರು. ಓಣಿ ಓಣಿಗಳಲ್ಲಿ ರಾತ್ರಿ ಪಾಠಶಾಲೆಗಳನ್ನು ಪ್ರಾರಂಭಿಸಿ

ಶಾಲೆಗೆ ಹೋಗದೆ ಕೂಲಿ ಕುಂಬಳಿ ಮಾಡಿ ಉಪಜೀವಿಸುವ ಯುವಕರಿಗೆ ಯುವತಿಯರಿಗೆ ಹಿಂದಿ ಭಾಷೆಯೊಡನೆ ಮಾತೃಭಾಷೆಗೂ ಆದ್ಯತೆ ನೀಡಿ ಹಿಂದಿ, ಕನ್ನಡ ಭಾಷೆಯನ್ನು ಕಲಿಸುವ ವ್ಯವಸ್ಥೆ ಮಾಡಿದರು. ಹಿಂದಿ ಬಾರದ ದೊಡ್ಡ ದೊಡ್ಡ ಅಧಿಕಾರಿಗಳಿಗೂ ಶಿಕ್ಷಕರಿಗೂ ಕಚೇರಿಗಳಲ್ಲಿ ಕೆಲಸ ಮಾಡುವ ಆಫೀಸರರಿಗೂ, ವೈದ್ಯರಿಗೂ, ವ್ಯಾಪಾರಿಗಳಿಗೂ ಹಿಂದಿ ಭಾಷೆಯನ್ನು ತಾವೇ ಸ್ವತಃ ಹೋಗಿ ಕಲಿಸಿ ಬರುತ್ತಿದ್ದರು. ಆಗಿನ ಕಾಲಕ್ಕೆ ಕೇವಲ ಏಳನೆಯ ಇಯತ್ತೆ ಪಾಸು ಮಾಡಿ ಶಿಕ್ಷಕರಾಗಿದ್ದ ಶಿಕ್ಷಕರಿಗೆ ಹಿಂದಿ ಭಾಷೆಯಲ್ಲಿ ಪರೀಕ್ಷೆಗಳಿಗೆ ಕೂಡ್ರಿಸಿ ಪದವೀಧರರನ್ನಾಗಿ ಮಾಡಿ ವೃತ್ತಿಯಲ್ಲೂ ಭಡ್ತಿ ಪಡೆಯುವಂತೆ ಮಾಡಿದರು.

ಇದು ಅಲ್ಲದೆ ತಾವೂ ಒಂದು ಹಿಂದಿ ಪಾಠಶಾಲೆಯನ್ನು ಪ್ರಾರಂಭಿಸಿದರು. ತಾವು ಪ್ರಾರಂಭಿಸಿದ ಶಾಲೆಯಲ್ಲಿ ಐದು ಜನ ಶಿಕ್ಷಕರು ಸೇವೆ ಸಲ್ಲಿಸುತ್ತಿದ್ದರು. ಅವರಿಗೆ ಗುರೂಜಿ ಅವರು ಯೋಗ್ಯ ಸಂಬಳ ಕೊಟ್ಟು ಉತ್ತಮ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿಕೊಟ್ಟಿದ್ದರು.

ಇದು ಒಂದು ಆಶ್ರಮ ಪಾಠಶಾಲೆ. ಮಕ್ಕಳು ಇಲ್ಲಿಯೇ ಇದ್ದು ಓದಲು ಬರೆಯಲು ಕಲಿಸುವುದಲ್ಲದೆ ಎಲ್ಲ ಮಕ್ಕಳನ್ನು ತಮ್ಮ ಆಶ್ರಮದಲ್ಲಿಟ್ಟುಕೊಂಡು ಬೆಳಗ್ಗೆ ನಾಲ್ಕು ಗಂಟೆಗೆ ಎದ್ದು ಭೀಮಾನದಿಗೆ ಓಡುತ್ತ ಹೋಗಿ ಸ್ನಾನ ಮಾಡಿ ಮತ್ತೆ ಓಡುತ್ತ ಬರಬೇಕೆಂದು ಹೇಳಿಕೊಡುತ್ತಿದ್ದರು. ಇದರಿಂದ ಮಕ್ಕಳಿಗೆ ವ್ಯಾಯಾಮವಾಗುತ್ತಿತ್ತು. ಸ್ನಾನ ಮುಗಿಸಿಕೊಂಡು ಬಂದ ನಂತರ ಆಶ್ರಮದ ಪಾಠಶಾಲೆಗೆ ಹೋಗಬೇಕು. ರಾತ್ರಿಯಲ್ಲಿ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ಪಣಕಿಟ್ಟು ಹೋರಾಡಿದ ಮಹಾತ್ಮರ, ಹುತಾತ್ಮರ ಜೀವನದ ಘಟನೆಗಳನ್ನು ಹೇಳಿ ಮಕ್ಕಳಲ್ಲಿ ದೇಶಾಭಿಮಾನ, ಸ್ವಾಭಿಮಾನ, ಭಾಷಾಭಿಮಾನ ಮೂಡಿಸುತ್ತಿದ್ದರು. ಇದರಿಂದ ಗುರೂಜಿಯವರ ಹೆಸರು ಹಳ್ಳಿ ಹಳ್ಳಿಗಳಲ್ಲಿ ಪ್ರಚಾರವಾಯಿತು. ಹಳ್ಳಿಯ ಮಕ್ಕಳು ಹೆಣ್ಣುಮಕ್ಕಳು ಹಿಂದಿ ಪರೀಕ್ಷೆಗೆ ಕುಳಿತು ಅಭ್ಯಾಸ ಮಾಡಲು ಗುರೂಜಿ ಅವರ ಹತ್ತಿರ ಬರತೊಡಗಿದರು. ಹಾಗೇ ಬಂದವರಲ್ಲಿ ಯಾದಗಿರಿ ತಾಲೂಕಿನ ಹೊಸಳ್ಳಿ (ಕೆ) ಹರಿಜನ ಬಾಲಕಿ ಸವಿತಾ ದೇವಿಯೂ ಒಬ್ಬಳು.





ರೌಢ ಶಾಲೆಯಲ್ಲಿ ಓದುತ್ತಿದ್ದ
ಕುಮಾರಿ ಸವಿತಾ ದೇವಿ

ಈ ಹಳ್ಳಿಯ ಬಾಲಕಿ ಸವಿತಾದೇವಿ ತಾನು ಮೊದಲು ಅಭ್ಯಾಸ ಮಾಡಿದ ಶಾಲೆಗೆ ಹೋಗಿ ತನಗೆ ಶಿಕ್ಷಣ ನೀಡಿದ ಶಿಕ್ಷಕರಿಗೆ ಭೇಟಿಯಾದಳು. ಹಳ್ಳಿಯಲ್ಲಿದ್ದ ಈ ಬಾಲಕಿಯನ್ನು ಕಂಡು ಅಲ್ಲಿಯ ಶಿಕ್ಷಕರು ತುಂಬ ಅಭಿಮಾನ ಪಟ್ಟುಕೊಂಡರು. ಅದೇ ಸಮಯಕ್ಕೆ ಒಬ್ಬ ಶಿಕ್ಷಕರು "ಸವಿತಾದೇವಿ ಹೇಗೂ ನೀನು ಎಸ್.ಎಸ್.ಎಲ್.ಸಿ.ವರೆಗೂ ಓದಿದ್ದಿ. ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣಳಾಗದಿದ್ದರೂ ನಿನಗೆ ನೌಕರಿ ಸಿಗುತ್ತದೆ. ನಮ್ಮ ಶಾಲೆಯಲ್ಲಿ ಒಂದು ಸ್ಥಳ ಖಾಲಿ ಇದೆ. ನೀನು ತುಸು ಪ್ರಯತ್ನಿಸಿದರೆ ನಿನಗೆ ಇಲ್ಲಿಯೇ ನೌಕರಿ ಸಿಗುತ್ತದೆ. ನೌಕರಿ ಮಾಡುತ್ತ ಅಭ್ಯಾಸ ಮಾಡಿಕೊಳ್ಳುತ್ತ ನೀನು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕಟ್ಟಿ ಉತ್ತೀರ್ಣಳಾಗಬಹುದು ಪ್ರಯತ್ನಿಸು" ಎಂದು ಹೇಳಿ ಕಳಿಸಿದರು.

ಹೇಗೂ ಸವಿತಾದೇವಿಗೆ ವಿದ್ಯಾಧರ ಗುರೂಜಿಯವರ ಪರಿಚಯವಾಗಿತ್ತು. ಸವಿತಾದೇವಿ ಗುರೂಜಿಯವರಿಗೆ ಈ ವಿಷಯ ಹೇಳಿ ನನಗೆ ನೌಕರಿ ಕೊಡಿಸಬೇಕೆಂದು ವಿನಯದಿಂದ ಕೇಳಿಕೊಂಡಳು. ಹಳ್ಳಿಯ ಹರಿಜನ ಬಾಲಿಕೆಯ ಮಾತು ಕೇಳಿ ಗುರೂಜಿಯವರು ಪ್ರಯತ್ನಿಸಿ ಸವಿತಾ ದೇವಿಗೆ ನೌಕರಿ ಕೊಡಿಸಿಯೇ ಬಿಟ್ಟರು. ಆಗ ಸವಿತಾದೇವಿ ಹಿರಿ ಹಿರಿ ಹಿಗ್ಗಿ ನಾನು ಕಲಿತ ಶಾಲೆಯಲ್ಲಿಯೇ ನನಗೆ ಕಲಿಸಿದ ಗುರುಗಳ ಸಂಗಡ ಸೇವೆ ಸಲ್ಲಿಸುವ ಭಾಗ್ಯ ನನ್ನದಾಯಿತು. ಇಂತಹ ಒಂದು ಉಪಕಾರ ಮಾಡಿದ ವಿದ್ಯಾಧರ ಗುರೂಜಿ ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಸೇವೆಗೆ ಅಣಿಯಾದಳು ಸವಿತಾದೇವಿ.

ಭಾರತ ದೇಶದ ಸ್ವಾತಂತ್ರ್ಯ, ಹೈದರಾಬಾದ ಪ್ರಾಂತದ ವಿವೇಚನೆಯಲ್ಲಿ ನಿರತರಾಗಿ ಮುಂದೆ ಸಮಾಜ ಸೇವೆಗೆ ಟೊಂಕ ಕಟ್ಟಿನಿಂತ ವಿದ್ಯಾಧರ ಗುರೂಜಿ ಅವರಿಗೆ ತಮ್ಮ ವೈಯಕ್ತಿಕ ಜೀವನ, ಬದುಕಿನ ಬಗ್ಗೆ ಯಾವ ಆಸಕ್ತಿಯೂ ಇರಲಿಲ್ಲ. ಆಗ ಅವರಿಗೆ 40 ವರ್ಷ. ಯಾವುದೋ ಒಂದು ಸಂದರ್ಭದಲ್ಲಿ ಕಾಂಗ್ರೆಸ್ಸಿನ ಬಹು ಪ್ರಭಾವಿ ನಾಯಕ ಶ್ರೀ ರಂಗಾರೆಡ್ಡಿ



ಅವರನ್ನು ಕಾಣಲು ವಿದ್ಯಾಧರ ಗುರೂಜಿ ಹೋದಾಗ "ಗೂರೂಜಿ, ನೀವು ಲಗ್ನ ಮಾಡಿಕೊಂಡು ನನ್ನ ಬಳಿಗೆ ಬರಬೇಕೆಂದು" ತುಸು ಸಲುಗೆಯಿಂದ ಹೇಳಿದರು. ಶ್ರೀ ರಂಗಾರೆಡ್ಡಿಯವರ ಈ ಮಾತು ಕೇಳುತ್ತಲೇ ಗುರೂಜಿ ಅವರಿಗೆ ದಾಂಪತ್ಯ ಜೀವನದ ಅರಿವು ಮೂಡಿದ್ದು.

ಅಷ್ಟರಲ್ಲಿ ಹೊಸಳ್ಳಿ ನಾಟಕಾರ ಹನುಂತಪ್ಪ, ಮತ್ತು ಕರೆಮ್ಮ ದಂಪತಿಗಳು ತಮ್ಮ ಊರಲ್ಲಿ ಶ್ರೀ ಮಲರೆಡ್ಡಿ ಗೌಡರ ಮುಂದೆ ತಮ್ಮ ಮಗಳ ಮದುವೆಯ ವಿಷಯ ಪ್ರಸ್ತಾಪ ಮಾಡಿದರು. ಆಗ ಗೌಡರು ನಿಮ್ಮ ಮಗಳು ಈಗ ಹೇಗೂ ಸರಕಾರಿ ಶಾಲೆಯಲ್ಲಿ ಶಿಕ್ಷಕಳಾಗಿ ಕೆಲಸ ಮಾಡುತ್ತಿದ್ದಾಳೆ. ಗುರೂಜಿ ಅವರಿಗೂ ಅವಳ ಪರಿಚಯವಿದೆ. ಗುರೂಜಿಯವರಿಗೆ ಸಾಕಷ್ಟು ಜನರ ಸಂಪರ್ಕವಿದೆ. ಅವರ ಮುಂದೆ ಈ ವಿಷಯ ಹೇಳಿ ಮದುವೆಯ ಏರ್ಪಾಡು ಮಾಡೋಣ ಎಂದು ಗೌಡರು ಆ ದಂಪತಿಗಳಿಗೆ ಹೇಳಿದರು. ಮುಂದೆ ಒಂದೆರಡು ದಿನಗಳಲ್ಲಿಯೇ ಗೌಡರಿಗೆ ಯಾದಗಿರಿಗೆ ಹೋಗುವ ಪ್ರಸಂಗ ಬಂದಿತು. ಆಗ ಮಲರೆಡ್ಡಿ ಗೌಡರು "ಸರಕಾರಿ ಶಾಲೆಯಲ್ಲಿ ಶಿಕ್ಷಕಳಾಗಿ ಸೇವೆ ಸಲ್ಲಿಸುತ್ತಲಿರುವ ಸವಿತಾದೇವಿಗೆ ತಾವೇ ನೌಕರಿ ಕೊಡಿಸಿದ್ದೀರಿ, ಅವಳ ಮದುವೆಯನ್ನು ಮಾಡಿ ಮುಗಿಸಿದರೆ ನಿಮಗೆ ಪುಣ್ಯ ಬರುತ್ತದೆ" ಎಂದು ಹೇಳಿದರಂತೆ.

ಆಗ ವಿದ್ಯಾಧರ ಗುರೂಜಿಯವರು ಮಲರೆಡ್ಡಿಗೌಡರೇ, ದೇಶದ ಸ್ವಾತಂತ್ರ್ಯಕಾಗಿ ಹೈದರಾಬಾದ್ ಸಂಸ್ಥಾನದ ವಿವೇಚನೆಗಾಗಿ ಹೋರಾಡುತ್ತ ಬಂದ ನಾನು ನನ್ನ ಜೀವನದ ಬಗ್ಗೆ ಇದುವರೆಗೂ ವಿಚಾರ ಮಾಡಿಯೇ ಇಲ್ಲ. ಆರ್ಯಸಮಾಜದ ಪ್ರಣಾಳಿಕೆಯನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಅದನ್ನು ಜೀವನದಲ್ಲಿ ಅಳವಡಿಸಿಕೊಂಡವ. ಅದರಲ್ಲಿಯೂ ಕಟ್ಟಾ ಗಾಂಧೀವಾದಿ. ನನಗೆ ಜಾತಿ ಮತ ಪಂಥ ಪಂಗಡಗಳಲ್ಲಿ ವಿಶ್ವಾಸವಿಲ್ಲ. ನನ್ನ ದೃಷ್ಟಿಯಲ್ಲಿ ಮಾನವರೆಲ್ಲರೂ ಒಂದು. ಮಾನವ ಕುಲ ಅದೊಂದೇ ನನಗೆ ಗೊತ್ತು. ದೇಶ ಸೇವೆಯೇ ನನ್ನ ಗುರಿ. ದೇಶ ಸ್ವಾತಂತ್ರ್ಯವಾದ ಮೇಲೆ ನಾನು ಮದುವೆ ಮಾಡಿಕೊಳ್ಳುತ್ತೇನೆ. ಮದುವೆ ಮಾಡಿಕೊಂಡರೆ ಹರಿಜನ ಬಾಲಕಿಯನ್ನೇ ಮದುವೆ ಮಾಡಿಕೊಳ್ಳುತ್ತೇನೆಂದು ನಿರ್ಧರಿಸಿದ್ದು ನಿಜ. ಸವಿತಾದೇವಿಯ ಬಗ್ಗೆ ನನಗೆ ಚೆನ್ನಗಿ ಗೊತ್ತಿದೆ. ತಮ್ಮ ಮನದ ಇಂಗಿತವನ್ನು ಹೊಸಳ್ಳಿ ಮಲರೆಡ್ಡಿಗೌಡರ ಮುಂದೆ ಬಿಚ್ಚಿ ಇಟ್ಟರು.

ಈ ವಿಷಯ ಮಲರೆಡ್ಡಿಗೌಡರು ಸವಿತಾದೇವಿ ತಾಯಿ ತಂದೆಗಳ ಮುಂದೆ ಹೇಳಿದಾಗ ಹನುಮಂತಪ್ಪ ಕರೆಮ್ಮ ದಂಪತಿಗಳು "ಗೌಡರೇ, ಗುರೂಜಿಯವರಿಗೆ ತುಂಬಾ ವಯಸ್ಸಾಗಿದೆ. ಅದರಲ್ಲಿಯೂ ನಮ್ಮ ಜಾತಿ ಬೇರೆ ಅವರ ಜಾತಿ ಬೇರೆ. ನೀವು ತುಸು ಯೋಚನೆ ಮಾಡಿರಿ. ಯಾವುದಕ್ಕೂ ನಿಮ್ಮ ಮಾತು ಮೀರುವುದಿಲ್ಲ. ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಲ್ಲಿದ್ದ ಸವಿತಾದೇವಿಯೂ ತುಂಬಾ ಪ್ರಜ್ಞಾವಂತಳು. ಅವಳಿಗೂ ಒಂದು ಮಾತು ಕೇಳಬೇಕು" ಎಂದು ಹೇಳಿದರು.

ಗುರೂಜಿಯವರಿಗೆ ಜಾತಿಯ ಬಗ್ಗೆ ಅಭಿಮಾನವಿಲ್ಲ. ಮಾನವಜಾತಿ ಒಂದೇ ಎಂದು ಅವರ ಸ್ಪಷ್ಟ ಅಭಿಪ್ರಾಯ. ದೇಶದ ಸ್ವಾತಂತ್ರ್ಯ ಹೈದರಾಬಾದ್ ಸಂಸ್ಥಾನದ ವಿಮೋಚನೆಯಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡು ಸಮಾಜ ಸೇವೆಯಲ್ಲಿ ನಿರತರಾದ ಅವರು ಸಮಾಜದಲ್ಲಿ ಒಳ್ಳೆಯ ಸ್ಥಾನ ಮಾನ



19-07-1954 ಮದುವೆಯ ಭಾವಚಿತ್ರ :
ಶ್ರೀ ವಿದ್ಯಾಧರ ಗುರೂಜಿ ಮತ್ತು ಶ್ರೀಮತಿ ಸವಿತಾ ದೇವಿ. ಯಾದಗಿರಿಯಲ್ಲಿ

ಪಡೆದವರು. ಅವರಿಗೆ ಮುಂದೆ ಭವ್ಯ ಭವಿಷ್ಯ ಕಾಯ್ದಿದೆ. ಸವಿತಾದೇವಿಯನ್ನು ಅವರಿಗೆ ಕೊಡುವುದರಲ್ಲಿ ಯಾವ ಅಭ್ಯಂತರವೂ ಇಲ್ಲ ಎಂದು ಗೌಡರು ಇನ್ನೂ ನಿಚ್ಚಳವಾಗಿಯೇ ಹೇಳಿದರು. ತಾಯಿ-ತಂದೆಗಳು ವಿಚಾರಿಸಲು ಸವಿತಾದೇವಿಯೂ ಒಪ್ಪಿಗೆ ನೀಡಿದಳು.

ಈ ವಿಷಯ ತಿಳಿದು ಸಂತೋಷಭರಿತರಾಗಿ ಯಾದಗಿರಿಯ ಜಾಲೇಜರ ಗೋಟ್ಲಾ ಎಂಬ ಫಾರಸಿ ಶ್ರೀಮಂತ ವ್ಯಕ್ತಿ "ಗುರೂಜಿಯವರ ಮದುವೆ ಖರ್ಚು ವೆಚ್ಚ ನಾನೊಬ್ಬನೇ ನೋಡಿಕೊಳ್ಳುತ್ತೇನೆ" ಎಂದು ಹೇಳಿ 1954ರಲ್ಲಿ ಅತ್ಯಂತ ಸರಳ ಸುಂದರವಾಗಿ ಮದುವೆಯನ್ನು ಮಾಡಿ ಮುಗಿಸಿದರು. ಕೇವಲ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಪಾಸಾಗಿದ್ದ ಸವಿತಾ ದೇವಿ ಗುರೂಜಿಯವರ ಮಾಗದರ್ಶನದಲ್ಲಿ ಅಧ್ಯಾಪನದೊಡನೆ ಅಧ್ಯಯನ ಮಾಡುತ್ತಾ ಹಿಂದಿ ವಿಷಯ ಮುಖ್ಯವಾಗಿಟ್ಟುಕೊಂಡು ಬಿ.ಎ., ಎಂ.ಎ, ಪರೀಕ್ಷೆಗಳನ್ನು ಮುಗಿಸುತ್ತ ಹಂತಹಂತವಾಗಿ ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆ, ಪ್ರೌಢಶಾಲೆಯಿಂದ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತಾ ಕ್ರಾಂತಿಕಾರಿ ಲೇಖಕ ಮನ್ಮಥ ನಾಥ ಗುಪ್ತ ಅವರ ಮೇಲೆ ಸಂಶೋಧನಾತ್ಮಕ ಮಹಾಪ್ರಬಂಧ ಬರೆದು ಪಿ.ಎಚ್‌ಡಿ ಪದವಿಯನ್ನೂ ಪಡೆದರು.

ಹೀಗೆ ಗುರೂಜಿಯವರು ಹರಿಜನ ಮಹಿಳೆಯನ್ನು ತಮ್ಮ ಬಾಳ ಸಂಗಾತಿಯನ್ನಾಗಿ ಆಯ್ಕೆ ಮಾಡಿಕೊಂಡು ಅಸ್ಪೃಶ್ಯೋದ್ಧಾರಕ್ಕೆ ದಾರಿ ಮಾಡಿಕೊಟ್ಟ ನಿಜವಾದ ಮಾರ್ಗದರ್ಶಕರಲ್ಲವೆ?

ಜನಸೇವೆಯೇ ಜೀವನದ ಗುರಿ

ಸವಿತಾ ದೇವಿಯನ್ನು ಬಾಳ ಸಂಗಾತಿಯನ್ನಾಗಿ ಆಯ್ಕೆ ಮಾಡಿಕೊಂಡ ವಿದ್ಯಾಧರ ಗುರೂಜಿ ಅವರಿಗೆ ಆನೆ ಬಲ ಬಂದಂತಾಯಿತು. ತಮಗೂ ಒಂದು ಬದುಕು ಇದೆ ಎಂಬ ಅರಿವು ಮೂಡಿತು. ಈ ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳಬೇಕೆಂಬ ಒಲವು ಅವರಲ್ಲಿ ಬರಲಿಲ್ಲ. ಜನ ಸೇವೆಯೇ ತಮ್ಮ ಗುರಿ ಎಂಬ ಅವರ ನಿಲುವು ಬದಲಾಗಲಿಲ್ಲ. ಓರ್ವ ಸುಶಿಕ್ಷಿತ, ಸುಸಂಸ್ಕೃತ ಹರಿಜನ ಮಹಿಳೆಯ ಕೈಹಿಡಿದು ನನ್ನ ಜನ್ಮ ಸಾರ್ಥಕವಾಯಿತು ಎಂಬ ಭಾವನೆ ಇವರಲ್ಲಿ ತುಂಬಿಕೊಂಡಿತು.

ಹುಟ್ಟು ಹೋರಾಟಗಾರ ವಿದ್ಯಾಧರ ಗುರೂಜಿಯವರ ತೋಳೆದ ಮುತ್ತಿನಂತಹ ವ್ಯಕ್ತಿಯ ಬಾಳಸಂಗಾತಿಯಾದ ನನ್ನ ಜೀವನವೂ ಸಾರ್ಥಕವಾಯಿತು ಎಂದು ಶಾಲಾ ಶಿಕ್ಷಕಿಯಾದ ಸವಿತಾ ದೇವಿ ಅವರೂ ಸಂತಸ ಪಟ್ಟರು. ಒಬ್ಬರು ಸರಕಾರಿ ಶಾಲೆಯ ಶಿಕ್ಷಕರಾಗಿ ಅಚ್ಚುಕಟ್ಟಾದ ಸೇವೆ ಸಲ್ಲಿಸುತ್ತಿದ್ದರು. ಇನ್ನೊಬ್ಬರು ಜನಸೇವೆಯೇ ಜನಾರ್ಧನ ಸೇವೆ ಎಂದು ಅಪ್ಪೇ



ಪವಿತ್ರ ಹೃದಯದಿಂದ ಸಮಾಜ ಸೇವೆಯಲ್ಲಿ ನಿರತರಾಗಿದ್ದರು. ಇಬ್ಬರ ದಾರಿ ಬೇರೆ ಬೇರೆ ಆದರೂ ಗುರಿ ಒಂದೇ ಆಗಿತ್ತು. ಶಾಲಾಶಿಕ್ಷಕಿಯಾದ ಸವಿತಾ ದೇವಿಯವರು ತಾವು ಮಕ್ಕಳಿಗೆ ಓದಿಸುತ್ತ ತಾವು ಓದಿ ಅಭ್ಯಾಸ ಮಾಡಿ ಮುಂದೆ ಬರಬರಬೇಕೆಂಬ ಹಂಬಲವೂ ಪ್ರಬಲವಾಗಿತ್ತು. ಸಮಾಜ ಸೇವೆಯಲ್ಲಿ ತೊಡಗಿದ ವಿದ್ಯಾಧರ ಗುರೂಜಿ ಅವರಿಗೂ ಅಂತಸ್ಫೂರ್ತಿ, ಪ್ರೇರಕಶಕ್ತಿ ನೀಡಿ ಮುನ್ನಡೆಸಬೇಕೆಂಬ ಛಲವೂ ಅವರಲ್ಲಿತ್ತು. ಈ ಇಬ್ಬರೂ ದಂಪತಿಗಳು ಸಮಾಜದಿಂದ ಯಾವುದನ್ನೂ ಅಪೇಕ್ಷಿಸದೆ ಬರುವ ಸಂಬಳದಲ್ಲಿ ಬದುಕುವ ಕಲೆಯನ್ನು ಕರಗತಮಾಡಿಕೊಂಡಿದ್ದರು. ಆಶೆ ಕಡಿಮೆ ಇದ್ದಷ್ಟು ಬದುಕು ಸರಳ. ಜೀವನವೂ ಸುಂದರ. ಇಂತಹ ಸರಳ ಸುಂದರ ಬದುಕಿನ ರೂವಾರಿಗಳಾಗಿದ್ದರು ಈ ದಂಪತಿಗಳು.



'ವಂದೇ ಮಾತರಂ' ಗೀತೆಯ ಘೋಷಣೆಯ ಅಡಿಯಲ್ಲಿ ಅಡಿ ಇಟ್ಟು ಹೋರಾಡಿ ಸ್ವಾತಂತ್ರ್ಯ ಪಡೆದ ಲೋಕನಾಯಕರು ದೇಶಕ್ಕೆ ಸ್ವಾತಂತ್ರ್ಯ ದೊರಕಿದ ಮೇಲೆ ಬೇರೆಬೇರೆ ಪಕ್ಷ, ಸಂಘ, ಸಂಸ್ಥೆಯಲ್ಲಿ ಕಾಣಿಸಿಕೊಳ್ಳ ತೊಡಗಿದರು. ಕೆಲವರಲ್ಲಿ ರಾಜಕೀಯ ಆಶೆ ಮೂಡಿತು. ನೊಗ ಹೊತ್ತ

ಜೋಡೆತ್ತಿನ ಕಾಂಗ್ರೆಸ್ ಪಕ್ಷ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿತು. ಸಹಜವಾಗಿಯೇ ಕಾಂಗ್ರೆಸ್ ಪಕ್ಷಕ್ಕೆ ಜನರ ಒಲವು ದೊರಕಿತು. ಈ ಕಾಂಗ್ರೆಸ್ ಪಕ್ಷಕ್ಕೆ ಸ್ಪರ್ಧಿಯಾಗಿ 'ಸ್ವತಂತ್ರ ಪಕ್ಷ', 'ಕಮ್ಯುನಿಸ್ಟ್ ಪಕ್ಷ', 'ಲೋಕ ಸೇವಾ ಸಂಘ'ಗಳು ಟೊಂಕ ಕಟ್ಟಿ ನಿಂತುಕೊಂಡವು.


1952ರಲ್ಲಿ ಮೊದಲನೆಯ ಸಾರ್ವತ್ರಿಕ ಚುನಾವಣೆಗಳು ಆದವು. ಆಗ ಹೈದರಾಬಾದ್ ರಾಜ್ಯದ ಸನ್ಮಾನ್ಯ ಶ್ರೀ ಬಿ. ರಾಮಕಿಶನ್‌ರಾವ್ ಅವರು ರಾಜ್ಯದ ಮುಖ್ಯಮಂತ್ರಿಗಳಾಗಿ ಮುಂದುವರಿದರು. ಆಗ ವಿಶ್ವನಾಥರೆಡ್ಡಿ ಅವರು ಅವರ ಸಂಗಡಿಗರು ಬೆಂಬಲಿಗರು ವಿರೋಧ ಪಕ್ಷದಲ್ಲಿದ್ದರು. ಶ್ರೀ ಶಿವಮೂರ್ತಿ ಸ್ವಾಮಿ ಅಳವಂಡಿ ಅವರ ನೇತೃತ್ವದಲ್ಲಿದ್ದ 6–7 ಜನ ಸ್ವತಂತ್ರ (Independent) ಶಾಸಕರು ಆಗಿನ ಪೀಪಲ್ಸ್ ಫ್ರಂಟಿನಲ್ಲಿ ಸಹ ಭಾಗಿಗಳಾಗಿದ್ದರು. ಆಗ ವಿಶ್ವನಾಥರೆಡ್ಡಿ ಅವರು ಈ ಎಲ್ಲ ಶಾಸಕರ ನಿಕಟವರ್ತಿಗಳಾಗಿದ್ದರು. ಅಷ್ಟೇ ಅಲ್ಲ ಇವರೆಲ್ಲರಿಗೂ ಮುಖಂಡರೂ ಎನಿಸಿಕೊಂಡಿದ್ದರು.


ಆಗ ವಿದ್ಯಾಧರ ಗುರೂಜಿ ಅವರು ಕಟ್ಟಾ ಕಾಂಗ್ರೆಸ್ ನಾಯಕರೆನಿಸಿಕೊಂಡು ಜನಾನುರಾಗಿಗಳಾಗಿದ್ದರು. ಆ ಕಾಲದಲ್ಲಿ ಕಾಂಗ್ರೆಸ್ ಮುಖಂಡರೆಂದು ಖ್ಯಾತಿಪಡೆದ ಶ್ರೀ ಕೋಲೂರು ಮಲ್ಲಪ್ಪ, ವಿರೂಪಾಕ್ಷಪ್ಪ ಎಕ್ಕೆಳ್ಳಿ, ಜಗನ್ನಾಥರಾವ್ ಚಂಡರಕಿ, ಹೈದರಾಬಾದ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಬಿ. ರಾಮಕಿಶನ್‌ರಾವ್ ಅವರು ಇವರೆಲ್ಲರಿಗೂ ಅತ್ಯಂತ ನಿಕಟವರ್ತಿಗಳಾಗಿದ್ದರು. ವಿದ್ಯಾಧರ ಗುರೂಜಿಯವರು ಸ್ವಾತಂತ್ರ್ಯ ಹೋರಾಟಗಾರರು, ನಿರ್ಮಲ ಹೃದಯದ ಸಮಾಜಸೇವಕರು ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರು ಎಂಬ ಅಭಿಮಾನ ರಾಜಕೀಯ ಮುತ್ಸದ್ಧಿಗಳಿಗೂ ಗೊತ್ತು. ಸಮಾಜಕ್ಕೂ ಗೊತ್ತಿತ್ತು. ನಿಜವಾಗಿಯೂ ಗುರೂಜಿ ಅವರಿಗೆ ಯಾವ ಆಶೆ ಆಕಾಂಕ್ಷೆಗಳೂ ಇರಲಿಲ್ಲ.

ರಾಜಕೀಯದಲ್ಲಿ ಇರುಸು ಮುರುಸು ತಲೆದೋರಿದವು

ಅದು 1952-53ನೆಯ ಇಸವಿ.

ಶ್ರೀ ಚಂದ್ರಶೇಖರ ಎಜ್ಯುಕೇಷನ್ ಸೊಸಾಯಿಟಿಯ ಶಂಕರ ಆರ್ಟ್ಸ್ ಮತ್ತು ಕಾಮರ್ಸ್ ಕಾಲೇಜಿನ ಒಂದು ಸಮಾರಂಭಕ್ಕೆ ಹೈದರಾಬಾದ ರಾಜ್ಯದ ಮುಖ್ಯಮಂತ್ರಿ ಬಿ. ರಾಮಕಿಶನ್‌ರಾವರನ್ನು ಸೊಸಾಯಿಟಿಯ ಪದಾಧಿಕಾರಿಗಳು ಆಮಂತ್ರಿಸಿದ್ದರು. ಈ ಸೊಸಾಯಿಟಿಯ ಪದಾಧಿಕಾರಿಗಳಲ್ಲಿ ಶ್ರೀ ಲಿಂಗೇರಿ ಕೋನಪ್ಪನವರು, ಶ್ರೀ ಎಕ್ಕೆಳ್ಳಿ ವಿರೂಪಾಕ್ಷಪ್ಪನವರು, ಶ್ರೀ ಚಟ್ನಳ್ಳಿ ವೀರಣ್ಣ ನವರು, ಶ್ರೀ ಜಗನ್ನಾಥರಾವ ಚಂಡರಕಿ, ವಿಶ್ವನಾಥ ರೆಡ್ಡಿ ಮುದ್ನಾಳ್ ಅವರು ಇದ್ದರು. ಈ ಎಲ್ಲ ಸದಸ್ಯರು ರಾಜ್ಯದ ಮುಖ್ಯಮಂತ್ರಿ ಗಳನ್ನು ಸುಸಜ್ಜಿತವಾದ ತೆರೆದ ಜೀಪಿನಲ್ಲಿ ವರ್ಣರಂಜಿತ ಮೆರವಣಿಗೆಯಲ್ಲಿ ಕಾಲೇಜಿಗೆ ಕರೆದುಕೊಂಡು ಬರಬೇಕೆಂದು ನಿರ್ಧರಿಸಿದರು. ಆಗ ಯಾದಗಿರಿಯಲ್ಲಿ ವಿಶ್ವನಾಥರೆಡ್ಡಿ ಮುದ್ನಾಳ ಅವರದೊಂದೇ ಜೀಪು ಇತ್ತು. ಈ ಜೀಪಿನ ಟಾಪ್ ತೆಗೆದು





ಲೋಕಸೇವಕ ಸಂಘದ
ಧುರೀಣ
ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ

ಸುಂದರವಾಗಿ ಅಲಂಕರಿಸಲು ವಿಶ್ವನಾಥ ರೆಡ್ಡಿ ಮುದ್ನಾಳ್ ಅವರ ಆಫೀಸಿನ ಗೋದಾಮದಿಂದ ಸುಮಾರು ಒಂದು ಫರ್ಲಾಂಗ್ ಅಂತರದಲ್ಲಿ ಇದ್ದ ಸನ್ಮಾನ್ಯ ಶ್ರೀ ಎಕ್ಕೆಳ್ಳಿ ವಿರೂಪಾಕ್ಷಪ್ಪನವರ ಮನೆಯ ಮುಂದೆ ನಿಲ್ಲಿಸಲಾಗಿತ್ತು. ವಿರುಪಾಕ್ಷಪ್ಪನವರು ಕಟ್ಟಾ ಕಾಂಗ್ರೆಸ್ಸಿಗರು ಈ ಭಾಗದ ದೊಡ್ಡ ಮುಖಂಡರು. ವಿಶ್ವನಾಥರೆಡ್ಡಿ ಅವರು ವಿರೋಧ ಪಕ್ಷದಲ್ಲಿದ್ದರೂ ಇವರ ಬಗ್ಗೆ ವಿರೂಪಾಕ್ಷಪ್ಪ ನವರಿಗೆ ತುಂಬ ಆತ್ಮೀಯ ಭಾವನೆ ಇತ್ತು. ವಿರೂಪಾಕ್ಷಪ್ಪನವರ ಬಗ್ಗೆ ವಿಶ್ವನಾಥ ರೆಡ್ಡಿ ಅವರಿಗೂ ಒಳ್ಳೆಯ ಗೌರವವಿತ್ತು. ವಿಶ್ವಾಸವೂ ಇತ್ತು.

ಮುಖ್ಯಮಂತ್ರಿಗಳ ಮೆರವಣಿಗೆ ಎಲ್ಲಿಂದ ಹೊರಡಬೇಕೆಂಬ ಚರ್ಚೆ ಪ್ರಾರಂಭವಾಯಿತು. ಮುನ್ಸಿಪಲ್ ಆಫೀಸಿನಿಂದ ಆಗಲಿ ಅಥವಾ ಊರಿನ




ಹೊರಗಿನ ಮೈಲಾಪುರ ಅಗಸಿಯಿಂದಾಗಲಿ ಹೊರಡಿಸಬೇಕೆಂಬ ಅಭಿಪ್ರಾಯ ವಿಶ್ವನಾಥರೆಡ್ಡಿಯವರದಾಗಿತ್ತು. ಕಾಂಗ್ರೆಸ್ಸಿನ ಹಲವಾರು ಜನರು ಅವರಲ್ಲಿ ವಿಶೇಷವಾಗಿ ಶ್ರೀ ವಿದ್ಯಾಧರ ಗುರೂಜಿ, ಶ್ರೀ ಚಟ್ನಳ್ಳಿ ವೀರಣ್ಣ ಮೊದಲಾದವರು ಆಗ ಶಹಾಪುರ ಕ್ಷೇತ್ರದ ಶಾಸಕರಾಗಿದ್ದ ಶ್ರೀ ವಿರೂಪಾಕ್ಷಪ್ಪ ಎಕ್ಕೆಳ್ಳಿ ಅವರ ಮನೆಯಿಂದ ಆಗಲಿ ಇಲ್ಲವೆ ಕಾಂಗ್ರೆಸ್ ಆಫೀಸಿನಿಂದಾಗಲಿ ಈ ಮೆರವಣಿಗೆ ಹೊರಡಲಿ ಎಂದು ಒತ್ತಾಯ ಪೂರ್ವಕ ಹೇಳಿದರು.

ಮುಖ್ಯಮಂತ್ರಿಗಳು ಕಾಂಗ್ರೆಸ್ಸಿನವರಾಗಿದ್ದರಿಂದ ಅವರು ಇಲ್ಲಿಗೆ ಬಂದಾಗ ಇದು ಕಾಂಗ್ರೆಸ್ಸಿನ ಮೆರವಣಿಗೆಯಾಗಬೇಕೆಂದು ಅವರೆಲ್ಲರ ಅಭಿಪ್ರಾಯ ವಾಗಿತ್ತು. ಇದಕ್ಕೆ ಬಹು ಜನರ ಒಪ್ಪಿಗೆಯೂ ದೊರಕಿತು. ಹೀಗೆ ವಾದ-ವಿವಾದಗಳು ನಡೆದಾಗ ಎರಡೂ ಪಕ್ಷದಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿದವು.

ಅದು 1954ರಲ್ಲಿ ಯಾದಗಿರಿಯ ಪುರಸಭೆಯ ಚುನಾವಣೆಗಳು ಬಂದವು. ಈ ಚುನಾವಣೆಯಲ್ಲಿ ನೇರವಾಗಿ ಕಾಂಗ್ರೆಸ್ ಮತ್ತು ಲೋಕ ಸೇವಕ ಸಂಘದ ನಡುವೆ ಸ್ಪರ್ಧೆಗಳು ಏರ್ಪಡುವ ಸಂಭವ ಹೆಚ್ಚಾಗಿ ಕಾಣಬರಹತ್ತಿತು. ಈ ಪುರಸಭೆಯ ಹುರಿಯಾಳುವಾಗಿ ವಿದ್ಯಾಧರ ಗುರೂಜಿ ಅವರು ಸ್ಪರ್ಧಿಸಿದರು. ಈ ಪುರಸಭೆಯ ಚುನಾವಣೆಯಲ್ಲಿ ವಿದ್ಯಾಧರ ಗುರೂಜಿ ಅವರನ್ನು ಸೋಲಿಸುವ ಪಣ ವಿಶ್ವನಾಥರೆಡ್ಡಿ ಅವರು ತೊಟ್ಟರು. ಆಗ ದ್ವಿಸದಸ್ಯ ಮತ ಕ್ಷೇತ್ರಗಳಿದ್ದವು. ವಿದ್ಯಾಧರ ಗುರೂಜಿ ಅವರು ಸ್ಪರ್ಧಿಸಿದ್ದು, ದ್ವಿಸದಸ್ಯ ಮತ ಕ್ಷೇತ್ರದಲ್ಲಿ ಒಂದು ಕಾಂಗ್ರೆಸ್ ಹುರಿಯಾಳು ಸುಣಗಾರ ಮರೆಪ್ಪ ಅವರು ಅಲ್ಲಿ ಸೋಲನ್ನಪ್ಪಿದರು. ವಿದ್ಯಾಧರ ಗುರೂಜಿ ಗೆದ್ದರು. ವಿದ್ಯಾಧರ ಗುರೂಜಿ ಅವರನ್ನು ಸೋಲಿಸಬೇಕೆಂದು ನಮ್ಮ ಹಠ ಇತ್ತು. ಅದು ಸಾಧಿಸಲಿಲ್ಲ. ಗುರೂಜೀ ಅವರು ಬಂದರು. ಒಂದು ಲೋಕ ಸೇವಕ ಸಂಘದ ಹುರಿಯಾಳು ಗೆದ್ದು ಬಂದು ನಮಗೆ ನೆಮ್ಮದಿ ನೀಡಿತು ಎಂದು ವಿಶ್ವನಾಥರೆಡ್ಡಿ ಅವರು ಸಂತಸಪಟ್ಟರು.

ವಿದ್ಯಾಧರ ಗುರೂಜಿ ಅವರಿಗೂ ವಿಶ್ವನಾಥರೆಡ್ಡಿ ಮುದ್ನಾಳ ಅವರ ನಡುವೆ ಮಸೆದಾಡುತ್ತಿದ್ದ ಸೆಣಸಾಟಕ್ಕೆ ಮತ್ತಿಷ್ಟು ಪುಟು ಕೊಟ್ಟಂತಾಯಿತು; ಈ ಚುನಾವಣೆಯಲ್ಲಿ ಸೋಲು ಗೆಲುವುಗಳು ಸಹಜ. ಜನತೆಯ ತೀರ್ಮಾನಕ್ಕೆ



ನಾವು ತಲೆ ಬಾಗಲೇ ಬೇಕು ಎಂದು ಎರಡೂ ಪಕ್ಷದವರು ಸಮಾಧಾನ ಪಟ್ಟುಕೊಂಡರು. ಮುಖ್ಯವಾಗಿ ನಾವು ಜನ ಸೇವಕರು. ನಾವು ಜನಸೇವೆ ಮಾಡಿದಾಗ ಜನರು ತೃಪ್ತಿ ಪಟ್ಟುಕೊಂಡರೆ ಅದೇ ನಮಗೆ ದೊರೆತ ಸಂಭಾವನೆ ಎಂಬ ವಿಶ್ವ ವಿಶಾಲಭಾವನೆ ವಿದ್ಯಾಧರ ಗುರೂಜಿಯವರಲ್ಲಿತ್ತು. ಅದಕ್ಕಾಗಿ ಅವರು ಜನಸೇವೆಯೇ ನಮಗೆ ಮುಖ್ಯ. ರಾಜಕೀಯ ಆಶೆ–ಆಮಿಷೆಗಳು ಮುಖ್ಯವಲ್ಲವೆಂದು ಬಲವಾಗಿ ನಂಬಿಕೊಂಡಿದ್ದರು. ಅಂತೆಯೇ ಅವರು ರಾಜಕೀಯದಲ್ಲಿ ಮುಂದುವರಿದರು.

ವಿದ್ಯಾಧರ ಗುರೂಜಿ ಅವರಿಗೆ ಯಾರ ಮೇಲೂ ಹೊಟ್ಟೆಕಿಚ್ಚು ಈರ್ಷೆ, ಅಸೂಯೆಗಳು ಇರಲಿಲ್ಲ. ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ಮಹತ್ವದ ಪಾತ್ರ ವಹಿಸುತ್ತವೆ. ತಮ್ಮ ತಮ್ಮ ಪಕ್ಷದ ಹುರಿಯಾಳುಗಳನ್ನು ಗೆಲ್ಲಿಸುವುದರಲ್ಲಿ ಪಕ್ಷದ ನಾಯಕರು ಹೋರಾಡುತ್ತಾರೆ. ಈ ಹೋರಾಟದಲ್ಲಿ ಸೋಲು-ಗೆಲುವು ಸರಿ ಸಮ. ಜನತೆಯ ತೀರ್ಮಾನಕ್ಕೆ ತಲೆ ಬಾಗುವುದು ನಾಯಕರ ಆದ್ಯ ಕರ್ತವ್ಯವಲ್ಲವೆ? ಇದು ರಾಜ ನೀತಜ್ಞ ವಿದ್ಯಾಧರ ಗುರೂಜಿ ಅವರ ಅಭಿಪ್ರಾಯ!



ಚುನಾವಣೆಯಲ್ಲಿ ನಡೆದ ಏರಾಟ

ಗುರೂಜಿ ಅವರ ಧರ್ಮಪತ್ನಿ ಶ್ರೀಮತಿ ಸವಿತಾ ದೇವಿ ತುಂಬಾ ಬುದ್ಧಿವಂತಳು ಕುಶಲಮತಿ ಯುಳ್ಳವಳೂ, ಬದುಕು ಸಾಗಿಸುವ ಗುಟ್ಟನ್ನು ಬಲ್ಲವರು ಆಗಿದ್ದರು. ತಮಗಿದ್ದ ಸಣ್ಣ ಸಂಬಳ ದಲ್ಲಿ ನೆಮ್ಮದಿಯಿಂದ ಬದುಕುವ ಕಲೆಯನ್ನು ಸಣ್ಣ ವಯಸ್ಸಿನಲ್ಲಿಯೇ ಕರಗತ ಮಾಡಿಕೊಂಡಿದ್ದರು. ತಾವು ಕೆಲಸ ಮಾಡುವ ಶಾಲೆಯಲ್ಲಿ ಸಹ ಶಿಕ್ಷಕರೊಡನೆ ಸ್ನೇಹದಿಂದ ಇದ್ದು ಎಲ್ಲರೊಡನೆ ಸಹಕಾರ ಮನೋಭಾವದಿಂದ ಇದ್ದು ಕೆಲಸ ಮಾಡಿಕೊಂಡು ಹೋಗುತ್ತಿದ್ದರು. ಅದು 1956ನೆಯ ಇಸವಿ. ಚೊಚ್ಚಲ ಮಗು ಅಶೋಕನ ಜನನವಾಗಿತ್ತು. ಸವಿತಾ ದೇವಿ ಅವರು ಬಾಣಂತಿ ಶಾಲೆಗೆ ರಜೆ ಹಾಕಿದ್ದರು. ಆಗ ವಿದ್ಯಾಧರ ಗುರೂಜಿ ಅವರು ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಮುಂಚೂಣಿ ಯಲ್ಲಿದ್ದವರ ಜೊತೆ ಹೋರಾಟ ಮಾಡುತ್ತಿದ್ದರು. 1956ರು ನವ್ಹೆಂಬರ್ ಒಂದರಂದು ಕರ್ನಾಟಕ ಏಕೀಕರಣ ವಾಯಿತು. ಇಂದಿನ ಗಡಿ ಪ್ರದೇಶದಲ್ಲಿದ್ದ ಜಹಿರಾಬಾದ, ತಾಂಡೂರು



ಮೆಹೆಬೂಬ ನಗರ ಕೃಷ್ಣಾ ಕೋಸಗಿ ಆದೋನಿಗಳು ಹೊರಗೆ ಉಳಿದವು ಎಂದು ಅವುಗಳನ್ನು ಪಡೆದುಕೊಳ್ಳಲು ಪುನಃ ಹೋರಾಟ ಪ್ರಾರಂಭವಾಯಿತು. ಅಷ್ಟರಲ್ಲಿ 1957ರಲ್ಲಿ ಎರಡನೆಯ ಮಹಾ ಚುನಾವಣೆ ಹಣಿಕಿ ಹಾಕಿತು. ಆಗ ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳು ಮೈಸೂರು ರಾಜ್ಯದಲ್ಲಿ ವಿಲೀನಗೊಂಡಿದ್ದವು. ಆಗ ವಿಶ್ವನಾಥ ರೆಡ್ಡಿ ಮುದ್ನಾಳ ಅವರು ಯಾದಗಿರಿ ಮತ ಕ್ಷೇತ್ರವನ್ನು ಬೇರೆ ಅವರಿಗೆ ಬಿಟ್ಟು ಸೇಡಂ ದ್ವಿಮತ ಸದಸ್ಯತ್ವದ ಕ್ಷೇತ್ರದಲ್ಲಿ ವಿಧಾನಸಭೆಗೆ ಹುರಿಯಾಳು ಆಗಿ ನಿಂತುಕೊಂಡರು. ಈ ಮತಕ್ಷೇತ್ರದಲ್ಲಿ ಸೇಡಂ ಮತ್ತು ಗುರುಮಠಕಲ್ಲ ಎರಡು ಮತ ಕ್ಷೇತ್ರಗಳು ಸೇರಿದ್ದವು.

ವಿಶ್ವನಾಥರೆಡ್ಡಿ ಮುದ್ನಾಳ ಅವರು ತಮ್ಮ ಜೊತೆಗೆ ಎಸ್.ಸಿ. ಮೀಸಲು ಕ್ಷೇತ್ರದ ಅಭ್ಯರ್ಥಿಗಾಗಿ ಶ್ರೀ ಜೆ.ಪಿ. ಸರ್ವೇಶ ಅವರನ್ನು ಆಯ್ಕೆ ಮಾಡಿಕೊಂಡಿದ್ದರು. ಆಗ ಕಾಂಗ್ರೆಸ್ಸಿನ ಹುರಿಯಾಳು ಕೋಲೂರು ಮಲ್ಲಪ್ಪನವರಾಗಿದ್ದರು. ಕಾಂಗ್ರೆಸ್ ಪಕ್ಷ ಕಾಯ್ದಿರಿಸಿದ ಸ್ಥಳಕ್ಕೆ ವಿದ್ಯಾಧರ ಗುರೂಜಿ ಅವರ ಧರ್ಮಪತ್ನಿ ಶ್ರೀಮತಿ ಸವಿತಾದೇವಿ ಅವರನ್ನು ಆಯ್ಕೆ ಮಾಡಲು ಪ್ರಯತ್ನಿಸಿದರು. ಯಾರು ಎಷ್ಟು ಹೇಳಿದರೂ ಒತ್ತಾಯ ಮಾಡಿದರೂ ನಾನು ಓರ್ವ ಆದರ್ಶ ಶಿಕ್ಷಕಿಯಾಗಲು ಪ್ರಯತ್ನಿಸುತ್ತಿದ್ದೇನೆ ನನಗೆ ರಾಜಕೀಯ ಬೇಡ. ನಮ್ಮಂತಹವರಿಗೆ ಮತ ನೀಡಲು ಜನ ಮುಂದೆ ಬರುವುದಿಲ್ಲ. ನನಗಾಗಲಿ, ಗುರೂಜಿಯವರಿಗಾಗಲಿ ಚುನಾವಣೆಯ ಕಣಕ್ಕಿಳಿದು ಸ್ಪರ್ಧಿಸುವುದು ಬೇಡವೆಂದು ಎಷ್ಟು ವಿನಂತಿಸಿಕೊಂಡರೂ ಸವಿತಾ ದೇವಿಯವರನ್ನು ಎಸ್.ಸಿ. ಮೀಸಲು ಕ್ಷೇತ್ರಕ್ಕೆ ಅಭ್ಯರ್ಥಿ ಎಂದು ಆಯ್ಕೆ ಮಾಡಿ ಶಿಕ್ಷಕ ಹುದ್ದೆಗೆ ತ್ಯಾಗ ಪತ್ರ ನೀಡಿ ಬಿ. ಫಾರ್ಮ್ ಭರ್ತಿ ಮಾಡಿ ಚುನಾವಣೆಯ ಅಧಿಕಾರಿಗಳಿಗೆ ಕಳಿಸಿ ಕೊಡಲಾಯಿತು.

ಇದೇ ಸಂಧಿಯನ್ನು ಸಾಧಿಸುತ್ತ ಕುಳಿತಿದ್ದ ಲೋಕಸೇವಕ ಸಂಘದ ಅಭ್ಯರ್ಥಿ ವಿಶ್ವನಾಥರೆಡ್ಡಿ ಮುದ್ನಾಳ ಅವರು ಈ ಕಾಯ್ದಿರಿಸಿದ ಮೀಸಲು ಕ್ಷೇತ್ರದಿಂದ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅನರ್ಹರು ಎಂಬ ಮಾತನ್ನು ದಾಖಲೆ ಸಮೇತ ಒದಗಿಸಿ ಸವಿತಾ ದೇವಿ ಅವರ ನಾಮಪತ್ರ ತಿರಸ್ಕರಿಸುವಂತೆ ಬಲವಾಗಿ ವಿರೋಧಿಸಿದರು. ಸವಿತಾ ದೇವಿಯವರ ನಾಮಪತ್ರ

ಪರಿಶೀಲನೆಯಲ್ಲಿ ತಿರಸ್ಕಾರಗೊಂಡಿತು. ಆಗ ಲೋಕಸೇವಾ ಸಂಘದ ಅಭ್ಯರ್ಥಿ ಶ್ರೀ ಜೆ.ಪಿ ಸರ್ವೇಶ ಅವರು ಅನಾಯಾಸವಾಗಿ ಅವಿರೋಧವಾಗಿ ಆಯ್ಕೆಯಾದರೆಂದು ಚುನಾವಣೆಯ ಅಧಿಕಾರಿ ಸರ್ವೇಶ ಅವರ ಫಲಿತಾಂಶ ಅದನ್ನು ಪ್ರಕಟಿಸಿದರು. ಇದರಿಂದ ವಿದ್ಯಾಧರ ಗುರೂಜಿ ಅವರ ವಿಶ್ವನಾಥರೆಡ್ಡಿ ಮುದ್ನಾಳ ಮಧ್ಯ ಬೆಳೆದುಕೊಂಡು ಬಂದಿದ್ದ ವೈಷಮ್ಯಕ್ಕೆ ಇನ್ನಷ್ಟು ಪುಟ ಕೊಟ್ಟಂತಾಯಿತು.

ವಿದ್ಯಾಧರ ಗುರೂಜಿ ಅವರು ಅವರ ಆಪ್ತಮಿತ್ರ ಶ್ರೀ ಲಕ್ಷ್ಮಿನಾರಾಯಣ ಶರ್ಮಾ ಅವರು ವಿಶ್ವನಾಥರೆಡ್ಡಿ ಮುದ್ನಾಳ ಅವರನ್ನು ಸೋಲಿಸಲು ಅಹೋರಾತ್ರಿ ಹೋರಾಟ ಮಾಡಿದರು. ಅವರ ನಡುವೆ ನಡೆದ ಈ ಜಿದ್ದಾಜಿದ್ದಿ ಹಾವು–ಮುಂಗಲಿಗೆ ಬಿದ್ದ ಸ್ಪರ್ಧೆಯಂತಿದ್ದು ಇವರಿಬ್ಬರ ಮಧ್ಯ ಎಲ್ಲಿ ಏನಾಗುತ್ತಿದೆಯೋ ಎಂದು ಭಯಭೀತರಾಗಿದ್ದರು ಅತ್ಯಂತ ನಿಸ್ಪ ೃಹ, ನಿಷ್ಠಾವಂತ ವ್ಯಕಿ ಎದೆಗುಂದದೆ ಹೋರಾಡಿದರು. ಈ ಸ್ಪರ್ಧೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕೋಲೂರು ಮಲ್ಲಪ್ಪನವರು ಜಯಭೇರಿ ಬಾರಿಸಿದರು. ವಿಶ್ವನಾಥರೆಡ್ಡಿ ಮುದ್ನಾಳ ಅವರು ಸೋಲನ್ನಪ್ಪಿದರು. ಯಾದಗಿರಿ ಮತಕ್ಷೇತ್ರದಿಂದ ಜಗನ್ನಾಥರಾವ್ ಚಂಡರಕಿ ಅವರನ್ನೂ ಸೋಲಿಸಿ ಲೋಕ ಸೇವಕ ಸಂಘದ ಅಭ್ಯರ್ಥಿ ಒಡಗೇರಿ ಬಸವಂತ ರಾಯಗೌಡ ಜಯಭೇರಿ ಬಾರಿಸಿದರು.

ವಿಶ್ವನಾಥರೆಡ್ಡಿ ಮುದ್ನಾಳ ಅವರು ದ್ವಿಮತ ಅಸೆಂಬ್ಲಿ ಸೇಡಂ ಮತಕ್ಷೇತ್ರದಿಂದಲೂ, ರಾಯಚೂರು ಲೋಕಸಭೆಯ ಕ್ಷೇತ್ರದಿಂದಲೂ ಸ್ಪರ್ಧಿಸಿದ್ದರು. ರಾಯಚೂರು ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಡಾ. ಜಿ.ಎಸ್. ಮೇಲ್ಕೋಟೆ ಅವರು ಚುನಾವಣೆಯ ಕಣಕ್ಕಿಳಿದಿದ್ದರು. ಅಲ್ಲಿಯೂ ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ ಅವರು ಸೋತು ಮೇಲ್ಕೋಟೆ ಅವರು ವಿಜಯಭೇರಿ ಬಾರಿಸಿದ್ದರು. "ವಿದ್ಯಾಧರ ಗುರೂಜಿ ಅವರ ಧರ್ಮಪತ್ನಿ ಸವಿತಾ ದೇವಿಯನ್ನು ಪರಾಭವಗೊಳಿಸಿದ ಸಂತೋಷ ಲೋಕಸೇವಕ ಸಂಘದ ಅಧ್ಯಕ್ಷರದಾಗಿತ್ತು. ನನ್ನನ್ನು ಪರಾಭವಗೊಳಿಸಿದ ಸಂತೋಷ ಗುರೂಜಿಯುವರಿಗಾಗಿತ್ತು. ಹೀಗೆ ನಮ್ಮಿಬ್ಬರ ನಡುವೆ ಭಿನ್ನಾಭಿಪ್ರಾಯ ಮುಂದುವರಿದು ವಿರೋಧ ಬೆಳೆಯುತ್ತಲೇ ಹೋಯಿತು" ಎಂದು ವಿಶ್ವನಾಥರೆಡ್ಡಿ ಅವರು ಒಂದುಕಡೆ ಹೇಳಿದ್ದಾರೆ.

ಶ್ರೀಮತಿ ಸವಿತಾ ದೇವಿ ನನಗೆ ಹೀಗಾಯಿತಲ್ಲ ಎಂದು ಮನಸ್ಸಿಗೆ ಹಚ್ಚಿಕೊಳ್ಳಲೇ ಇಲ್ಲ. ಅಷ್ಟರಲ್ಲಿ ಅವರು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕಟ್ಟಿದ ಫಲಿತಾಂಶ ಪ್ರಕಟವಾಯಿತು. ಸವಿತಾ ದೇವಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಉತ್ತೀರ್ಣರಾಗಿದ್ದರು. ಈ ಸಂತಸದಲ್ಲಿ ತಮ್ಮನ್ನು ಹೀಗೆ ವಂಚಿಸಿದರಲ್ಲ ಎಂಬ ನೋವು ಮರೆತು ಶಿಕ್ಷಕ ಹುದ್ದೆಗೆ ಅರ್ಜಿ ಹಾಕಿ ಸಂದರ್ಶನ ನೀಡಿ ಮತ್ತೆ ಶಿಕ್ಷಕಿಯಾಗಿ ಸೇವಾನಿರತರಾದರು. ವಿದ್ಯಾಧರ ಗುರೂಜಿ ಅವರಿಗೆ ಸವಿತಾ ದೇವಿಯ ಬಳಗಕ್ಕೂ ಸಂತೋಷವಾಯಿತು. ಶ್ರೀಮತಿ ಸವಿತಾ ದೇವಿ ಅವರಿಗೆ ಮೊದಲಿದ್ದ ನೆಮ್ಮದಿ, ಸಂತಸ ಮರುಕಳಿಸಿತು.

ಕಾಲ ಕೂಡಿ ಬಂದಿತು

1959 ಇಸವಿ ವಿಶ್ವನಾಥರೆಡ್ಡಿ ಮುದ್ನಾಳ ಅವರ ತಂದೆ ರಾಚನಗೌಡ ಮುದ್ನಾಳ ಅವರು ಶಿವಾಧೀನರಾದರು. ವಿಶ್ವನಾಥರೆಡ್ಡಿ ಮುದ್ನಾಳ ಸೋದರಮಾವ ರಾಮರೆಡ್ಡಿ ಅವರು ಇವರ ಮನೆಯ ಎಲ್ಲ ಕಾರುಬಾರು ನೋಡಿಕೊಳ್ಳುತ್ತಿದ್ದರು. ಹೈದರಾಬಾದ್ ನಗರದ 'ನಟರಾಜ ಆ್ಯಂಡ್ ಕಂಪನಿ' ಅವರು ಮುದ್ನಾಳ ಅವರ ಲೆಕ್ಕಪರಿಶೋಧನಾ ಕೆಲಸ ಇವರದೇ ಆಗಿತ್ತು. ಹೈದರಾಬಾದ್ ಕರ್ನಾಟಕ ಜಿಲ್ಲೆಗಳು ಮೈಸೂರು ರಾಜ್ಯಕ್ಕೆ ಬಂದು ಸೇರಿಕೊಂಡಿರುವುದರಿಂದ ಈಗ ನಮ್ಮ ರಾಜ್ಯವೇ ಬೇರೆಯಾಯಿತು, ನಿಮ್ಮ ರಾಜ್ಯವೇ ಬೇರೆಯಾಯಿತು. ಮೈಸೂರು ರಾಜ್ಯದ ತಾಲೂಕು ಸ್ಥಳ ಯಾದಗಿರಿಯ ಲೆಕ್ಕಪತ್ರ ನಮಗೆ ನೋಡುವುದಾಗುವುದಿಲ್ಲ. ಈ ಭಾಗದ ಟ್ಯಾಕ್ಸು ಪ್ರಾಕ್ಟಿಸ್ ಮಾಡುತ್ತಿದ್ದ ಶ್ರೀ ಪಿ.ಎಸ್. ಮೂರ್ತಿ ಅವರು ನಿಮ್ಮ ಮನೆತನದ ಲೆಕ್ಕಪತ್ರಗಳ ನೋಡಿಕೊಳ್ಳಬಹುದೆಂದು ವಿಶ್ವನಾಥರೆಡ್ಡಿ ಮುದ್ನಾಳ ಅವರಿಗೆ ತಿಳಿಸಿದರು.



ಶ್ರೀ ಪಿ.ಎಸ್. ಮೂರ್ತಿ ಅವರು ಕಾಂಗ್ರೆಸ್ಸಿನವರು, ನಾವು ಲೋಕಸೇವಕ ಸಂಘದವರು. ನಮಗೂ ಅವರಿಗೂ ಸರಿಹೊಂದಲಿಕ್ಕಿಲ್ಲ ಬೇಡವೆಂದು ಹೇಳಿದರು. ಇಲ್ಲ ನಮ್ಮ ನಟರಾಜ ಆ್ಯಂಡ್ ಕಂಪನಿಯ ಜೊತೆ ಅವರ ವ್ಯವಹಾರ ಚೆನ್ನಾಗಿದೆ. ನಾವು ಅವರಿಗೆ ತಿಳಿಸುತ್ತೇವೆ ಎಂದು ಹೇಳಿದರು. ಅಷ್ಟಕ್ಕೆ ವಿಶ್ವನಾಥರೆಡ್ಡಿ ಮುದ್ನಾಳ ಅವರು ಸುಮ್ಮನಾದರು.

'ನಟರಾಜ ಆ್ಯಂಡ್ ಕಂಪನಿ'ಯ ಮಾಲಕರು ಶ್ರೀ ಪಿ.ಎಸ್. ಮೂರ್ತಿ ಅವರಿಗೆ ಈಗ ರಾಜ್ಯ ಬೇರೆ ಆಗಿದ್ದರಿಂದ ನಿಮ್ಮ ಭಾಗದ ಲೆಕ್ಕಪತ್ರಗಳನ್ನು ನೋಡುವುದಾಗುವುದಿಲ್ಲ. ಅದಕ್ಕಾಗಿ ಈ ಹಿಂದೆ ನಾವು ಮಾಡುತ್ತ ಬಂದ ಶ್ರೀ ಮುದ್ನಾಳ ಅವರ ಲೆಕ್ಕಪತ್ರಗಳನ್ನು ನೀವು ನೋಡಿಕೊಂಡು ಹೋಗಬೇಕೆಂದು ಕಂಪನಿಯ ಸಂಪರ್ಕ ಅಧಿಕಾರಿಗಳಾದ ಶ್ರೀ ರಾಮನಾಥ ಅವರು ಶ್ರೀ ಮೂರ್ತಿ ಅವರಿಗೆ ತಿಳಿಸಿರಬಹುದು. ಅವರ ಮಾತಿಗೆ ಶ್ರೀ ಮೂರ್ತಿ ಅವರು ಒಪ್ಪಿಗೆ ಸೂಚಿಸಿರಬಹುದು ಆಗ ಶ್ರೀ ರಾಮನಾಥ ಅವರು ಶ್ರೀ ಪಿ.ಎಸ್. ಮೂರ್ತಿ ಅವರಿಗೆ ಶ್ರೀ ಮುದ್ನಾಳ ಅವರು ಬಹು ಸೂಕ್ಷ್ಮ ಜನರು ತಾವು ತುಂಬ ಎಚ್ಚರಿಕೆ ವಹಿಸಿ ವ್ಯವಹರಿಸಿ ಎಂದು ಹೇಳಿದ್ದು ವಿಶ್ವನಾಥರೆಡ್ಡಿ ಅವರಿಗೆ ಪರೋಕ್ಷವಾಗಿ ಗೊತ್ತಾಯಿತು.

ಶ್ರೀ ರಾಮನಾಥರ ಮಾತಿನ ಪ್ರಕಾರ ಶ್ರೀ ಪಿ.ಎಸ್. ಮೂರ್ತಿ ಅವರು ಶ್ರೀ ಮುದ್ನಾಳ ವಿಶ್ವನಾಥರೆಡ್ಡಿ ಅವರ ಸಂಪರ್ಕ ಬೆಳೆಸಲು ಪ್ರಯತ್ನಿಸಿದರು. ಶ್ರೀ ಪಿ.ಎಸ್. ಮೂರ್ತಿ ಅವರು ವಿಶ್ವನಾಥರೆಡ್ಡಿ ಅವರನ್ನು ಕಾಣಲು ಮೂರು-ನಾಲ್ಕು ಸಲ ಪ್ರಯತ್ನಿಸಿದರು ಶ್ರೀ ಪಿ.ಎಸ್. ಮೂರ್ತಿ ಅವರೊಡನೆ ರಾಜಕೀಯ ವಿರೋಧವಿರುವುದರಿಂದ ವಿಶ್ವನಾಥರೆಡ್ಡಿ ಅವರು ಇವರನ್ನು ತೀರಾ ಅಲಕ್ಷ್ಯಭಾವದಿಂದ ನೋಡಿಯೂ ನೋಡದಂತೆ ವರ್ತಿಸತೊಡಗಿದರು. ಆದರೂ ಪಿ.ಎಸ್. ಮೂರ್ತಿ ಅವರು ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ ಅವರ ಸೋದರ ಮಾವನವರ ಮುಖಾಂತರ ರೆಡ್ಡಿ ಅವರ ಮನೆಗೆ ಹೋಗಿ ವಿಶ್ವನಾಥರೆಡ್ಡಿ ಅವರ ಬಗ್ಗೆ ತಮಗಿದ್ದ ಪ್ರೀತಿ, ವಿಶ್ವಾಸ ವ್ಯಕ್ತಪಡಿಸಿದರು. ಹೀಗೆ ಐದಾರು ಪ್ರಸಂಗಗಳಲ್ಲಿ ಮಾತನಾಡುವಾಗ "ಶ್ರೀ ರೆಡ್ಡಿ ಅವರೇ ನೀವು ನನ್ನನ್ನು ನಂಬಿರಿ. ನನಗೆ ನಿಮ್ಮ ಬಗ್ಗೆ ಅಪಾರವಾದ ಗೌರವವಿದೆ. ಪ್ರೀತಿ ಇದೆ. ವಿಶ್ವಾಸವಿದೆ. ನಿಮ್ಮ ರೀತಿ, ನೀತಿ, ಸಾಮಾಜಿಕ ಕಳಕಳಿ ನಿಮ್ಮ

ಮುತ್ಸದ್ದಿತನ ಇವೆಲ್ಲವುಗಳು ನನಗೆ ಗೊತ್ತು. ನಿಮ್ಮಂತಹ ನಿಷ್ಠಾವಂತ ಮನೆತನದ ವ್ಯವಹಾರ ಹೇಗೆ ನೋಡಿಕೊಂಡು ಹೋಗಬೇಕೆನ್ನುವುದು ನನಗೆ ಗೊತ್ತು" ಎಂದು ಅವರು ಮನೆಗೆ ಬಂದಾಗೊಮ್ಮೆ ಹೇಳುತ್ತಿದ್ದರು.

"ಒಂದು ಪ್ರಸಂಗದಲ್ಲಿ ನಮ್ಮ ಸಮೀಪದ ಬಂಧುವಾದ ಶ್ರೀ ಸತ್ಯನಾರಾಯಣ ಎಂಬುವವರ ಕೂಡ ಕೆಲವರಿಂದ ಆದ ಹೊಡೆದಾಟದಲ್ಲಿ ತಾವೇ ಅವರಿಗೆ ಸಹಾಯ ನೀಡಿ ವಿರೋಧಿ ಜನರಿಗೆ ಇನ್ನು ಸತ್ಯನಾರಾಯಣ ಅವರಿಗೆ ತೊಂದರೆ ಕೊಡಬಾರದು" ಎಂದು ತಾಕೀತು ಮಾಡಿದ್ದು ನನಗೆ ಗೊತ್ತಿದೆ ಎಂದು ಆ ಪ್ರಸಂಗ ನೆನೆಸಿಕೊಂಡು ಪಿ.ಎಸ್. ಮೂರ್ತಿ ಅವರು ಶ್ರೀ ವಿಶ್ವನಾಥರೆಡ್ಡಿ ಅವರ ಹತ್ತಿರವಾದರು ಆಗಾಗ್ಗೆ ಅವರ ಮನೆಗೆ ಹೋಗಿ ಬರತೊಡಗಿದರು. ನಾನು ಬಂದಂತೆ ರೆಡ್ಡಿ ಅವರೆ, ನೀವು ಬೆಳಗಿನ ಚಹಾಕ್ಕೆ ನಮ್ಮ ಕಡೆ ಬರಬೇಕು ಎಂದು ವಿನಂತಿಸಿಕೊಳ್ಳುತ್ತಿದ್ದರು.

ಹೀಗೆ ಪಿ.ಎಸ್. ಮೂರ್ತಿ ಅವರ ಆಗ್ರಹದ ಮೇರೆಗೆ ವಿಶ್ವನಾಥರೆಡ್ಡಿ ಅವರು ಮೂರ್ತಿ ಅವರ ಮನೆಗೆ ಆಗಾಗ್ಗೆ ಬಂದು ಹೋಗುತ್ತಿದ್ದರು. ಪಿ.ಎಸ್. ಮೂರ್ತಿ ಅವರು ವಿದ್ಯಾಧರ ಗುರೂಜಿ ಅವರು ಒಂದೇ ತಾಟಿನಲ್ಲಿ ಊಟ ಮಾಡುತ್ತಿದ್ದರು. ಎಷ್ಟು ಸಲ ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ ಅವರು ಬಂದರೋ ಅಷ್ಟು ಸಲ ವಿದ್ಯಾಧರ ಗುರೂಜಿಯವರನ್ನು ಮೂರ್ತಿ ಅವರ ಮನೆಯಲ್ಲಿ ನೋಡುತ್ತಿದ್ದರು. ಅವರೊಡನೆ ವ್ಯಾವಹಾರಿಕವಾಗಿ ಮಾತನಾಡುತ್ತಿದ್ದರು. ಅವರೆಲ್ಲರೂ ಕೂಡಿ ಚಹಾ ಕುಡಿಯುತ್ತಿದ್ದರು. ಒಮ್ಮೊಮ್ಮೆ ರಾಜಕೀಯವಾಗಿ ಮಾತನಾಡುವ ಪ್ರಸಂಗಗಳು ಬರುತ್ತಿದ್ದವು. ಇದರಿಂದ ವಿಶ್ವನಾಥರೆಡ್ಡಿ ಮತ್ತು ವಿದ್ಯಾಧರ ಗುರೂಜಿ ಅವರ ಬಗ್ಗೆ ರಾಜಕೀಯ ಭಿನ್ನಾಭಿಪ್ರಾಯಗಳು ಒಂದೊಂದು ಸುರುಳಿ ಬಿಚ್ಚಿಕೊಂಡು ದೂರಾಗುತ್ತಿದ್ದವು. ಅರ್ಥವಿಲ್ಲದ ಸಮಸ್ಯೆಗಳು ಪರಿಹಾರವಾದಂತೆ ಈ ಇಬ್ಬರೂ ಧುರೀಣರಲ್ಲಿ ಮಧ್ಯ ರಾಜಕೀಯ ತತ್ವವಿರುತ್ತಿತ್ತು. ಸಾಮಾಜಿಕ ಕಳಕಳಿ ಇರುತ್ತಿತ್ತು. ಇಬ್ಬರ ಮನಸ್ಸಲ್ಲಿ ಇನ್ನೊಬ್ಬರ ಮನಸ್ಸನ್ನು ಸೆಳೆಯುವ ಗುಣವಿರುತ್ತಿತ್ತು. ಅದರಿಂದ ವಿದ್ಯಾಧರ ಗುರೂಜಿ ಅವರಿಗೂ, ವಿಶ್ವನಾಥರೆಡ್ಡಿ ಮುದ್ನಾಳರಲ್ಲಿಯೂ ವಿನಾಕಾರಣ ಬೆಳೆದುಕೊಂಡು ಬಂದ ಮನಸ್ತಾಪ ಮೋಡದಂತೆ ಕರಗಿಹೋಯಿತು. ಇದು ನಡೆದದ್ದು 1960ರ ಆಸುಪಾಸು ಇರಬಹುದು. ಆಗ ಪಿ.ಎಸ್. ಮೂರ್ತಿ ಮತ್ತು ಶ್ರೀವಿದ್ಯಾಧರ ಗುರೂಜಿ ಅವರು ಕೂಡಿ



ಈ ಸಲ ಮುಂದೆ ಬರುವ 1962ರ ಮೂರನೆ ಮಹಾಚುನಾವಣೆಯಲ್ಲಿ ನೀವು ಸ್ಪರ್ಧಿಸಿದರೆ ನಾವು ಇಬ್ಬರೂ ನಿಮಗೆ ಖಂಡಿತವಾಗಿ ಸಹಾಯ ಮಾಡುತ್ತೇವೆ ಎಂದು ಹೇಳುತ್ತ ಮೂವರು ಸ್ನೇಹಿತರು ಆತ್ಮೀಯ ಬಂಧುಗಳಾದರು. ಸಮಾಜದ ಹಿತ ಚಿಂತಕರಾದರು. ಹೀಗೆ ಕಾಲ ಕೂಡಿಬರುತ್ತದೆ ಎಂದು ಯಾರೂ ಭಾವಿಸಿಕೊಂಡಿರಲಿಲ್ಲ, ಬಯಸಿದ್ದಿಲ್ಲ. ಪೂರ್ವ-ಪಶ್ಚಿಮದಲ್ಲಿದ್ದ ಯಾದಗಿರಿ ಧುರೀಣರು ಒಂದಾದುದು ಒಂದು ಐತಿಹಾಸಿಕ ಘಟನೆ ನೆನಪು.



ಕಾಂಗ್ರೆಸ್ ಪಕ್ಷ ತ್ಯಜಿಸಬಾರದೆಂದು ಗುರೂಜಿ ಅವರಿಗೆ ಒಕ್ಕೊರಲಿನ ಮನವಿ

ತಾವು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ ಧುಮುಕಿ ಹೋರಾಡುತ್ತ ಬಂದವರು. ಒಕ್ಕೂಟದಲ್ಲಿ ಸೇರಲು ಬಯಸದ ಹೈದರಾಬಾದ್ ನಿಜಾಮರ ವಿರುದ್ಧವೂ ಸೆಡ್ಡು ಹೊಡೆದು ನಿಂತವರು 'ಗೋವಾ' ಪ್ರಾಂತ ಬಿಡುಗಡೆಗೂ ಕುಮ್ಮಕ್ಕು ನೀಡಿದವರು. ಸ್ವಾತಂತ್ರ್ಯಾನಂತರವೂ ಅಸ್ತವ್ಯಸ್ತಗೊಂಡ ಸಮಾಜದ ನೆಮ್ಮದಿಗೆ ಶಾಂತಿ ಸಭೆಗಳನ್ನು ಏರ್ಪಡಿಸಿ ಜನರಲ್ಲಿ ಧೈರ್ಯ, ಸ್ಥೈರ್ಯ ಮೂಡಿಸಿದವರು. ಆರ್ಯಸಮಾಜದ ರೂವಾರಿಗಳ ಹೆಗಲಿಗೆ ಹೆಗಲು ಹಚ್ಚಿ ದುಡಿದು ಜನರ ಒಗ್ಗಟ್ಟಿಗೆ ಕಾರಣರಾದವರು. ಹಿಂದಿ ರಾಷ್ಟ್ರ ಭಾಷಾ ಪ್ರಚಾರಕ್ಕೆ ಕೇಂದ್ರಗಳನ್ನು ನಿರ್ಮಿಸಿ ಪರೀಕ್ಷೆ ಕುಳ್ಳಿರಿಸಿ ಜನರನ್ನು ಸಾಕ್ಷರರನ್ನಾಗಿ ಮಾಡಿದವರು. ನೊಗಹೊತ್ತು ಜೋಡೆತ್ತಿನ ಕಾಂಗ್ರೆಸ್ಸಿನ ಅಡಿಯಲ್ಲಿ ಭಾರತ ದೇಶವನ್ನು ಸ್ವತಂತ್ರಗೊಳಿಸಿದ ಈ ಮಾತೃ ಸಂಸ್ಥೆಯನ್ನು ಬಿಟ್ಟು ಹೋಗಬಾರದೆಂದು ಅಸಂಖ್ಯಾತ ಕಾಂಗ್ರೆಸ್ ಕಾರ್ಯಕರ್ತರು, ಧುರೀಣರು ಕೈ

ಮುಗಿದು ನಿಂತಾಗ ವಿದ್ಯಾಧರ ಗುರೂಜಿ ಅವರು ದಿಙ್ಮೂಢರಾಗಿ ನಿಂತುಕೊಂಡರು. ತಾಯಿ ಭಾರತೀಯ ಭವ್ಯಮೂರ್ತಿ ಮನಃಪಟಲದ ಮೇಲೆ ಮೂಡಿ ಮೆಲ್ಲನೆ ಮರೆಯಾಯಿತು. ಶೂರ ಸುಭಾಶ್‌ಚಂದ್ರಬೋಸ್, ಭಗತ್‌ಸಿಂಗ್, ಸುಖದೇವ, ರಾಜಗುರು, ಚಂದ್ರಶೇಖರ ಅಜಾದರ ತ್ಯಾಗ ಬಲಿದಾನ, ಸರದಾರ ವಲ್ಲಭಬಾಯಿ ಪಟೇಲ, ಜವಾಹರಲಾಲ ನೆಹರು, ವರದಾ ಆಶ್ರಮದಲ್ಲಿ ಚರಕಾ ಹಿಡಿದು ನೂಲು ತೆಗೆಯುವ ಮಹಾತ್ಮಾಗಾಂಧಿ ಅವರ ಭವ್ಯ ಚಿತ್ರಗಳು ತೆರೆಯ ಮೇಲೆ ಬಂದು ಸುಳಿದಂತಾಯಿತು. ತಮ್ಮನ್ನು ಮುಂದೆ ಕರೆದು ಮೈದಡವಿ ಇವರು ವಶಿಷ್ಠ ಕುಲೋತ್ಪನ್ನ ಪುತ್ರ ವಿದ್ಯಾಧರ ಎಂದು ಹೃದಯತುಂಬಿ ಹಾರೈಸಿದ ಸ್ವಾಮಿ ರಾಮಗಿರಿಜಿ ಗುರುಗಳ ಮುಗುಳ್ನಗೆಯ ಮಂದಹಾಸ ಮೂಡಿ ಮಾಯವಾಯಿತು. ವಿದ್ಯಾಧರ ಗುರೂಜಿ ಅವರು ಶಿಲಾಮೂರ್ತಿಗಳಂತೆ ಕುಳಿತಿದ್ದರು. ಅವರ ಪಕ್ಕದಲ್ಲಿಯೇ ಕುಳಿತಿದ್ದ ಶ್ರೀ ಪಿ.ಎಸ್. ಮೂರ್ತಿ ಅವರು ಈಗ ಪಕ್ಷ ಬದಲಾಯಿಸುವುದು ಬಹಳ ಅವಶ್ಯವಿದೆ. ಶ್ರೀ ಮುದ್ನಾಳ ವಿಶ್ವನಾಥ ರೆಡ್ಡಿ ಅವರು ಕಟ್ಟಿದ 'ಲೋಕ ಸೇವಕ ಸಂಘ' ಆಳುವ ಪಕ್ಷವನ್ನು ಕೇಳುವ ಸಂಸ್ಥೆ. ವಿರೋಧಿ ಪಕ್ಷದಲ್ಲಿ ಘಟಾನುಘಟಿಗಳು ಇದ್ದರೆ ಸರಕಾರ ಎಚ್ಚರಿಕೆಯಿಂದ ಕೆಲಸ ಮಾಡುತ್ತದೆ. ಶ್ರೀ ವಿದ್ಯಾಧರ ಗುರೂಜಿ ಅವರು ಹಳ್ಳಿಯಿಂದ ದಿಲ್ಲಿಯವರಿಗೆ ಯಾರು ಎಂತು ಹೇಗೆ? ಎಂದು ಎಲ್ಲ ಬಲ್ಲವರು ಇಂತಹ ಘಟಾನುಘಟಿ ವ್ಯಕ್ತಿಗಳು ವಿರೋಧ ಪಕ್ಷದಲ್ಲಿದ್ದರೆ ಇನ್ನೂ ಒಳ್ಳೆಯದು.

ನಾವು ವಿರೋಧಪಕ್ಷದಲ್ಲಿದ್ದರೆ ದೇಶವನ್ನು, ಜನರನ್ನು ಇನ್ನೂ ಒಳ್ಳೆಯ ದಾರಿಯಲ್ಲಿ ತೆಗೆದುಕೊಂಡು ಹೋಗುವುದು ಸಾಧ್ಯವಿದೆ. ನಾವು ಎಲ್ಲರೂ ತತ್ವ, ಸಿದ್ಧಾಂತಕ್ಕೆ ಒಳಪಟ್ಟೆ ಜನಸೇವೆ ಮಾಡುವವರು. ಕಾಂಗ್ರೆಸ್‌ಗೆ ದ್ರೋಹ ಬಗೆಯುವ ಮನಸ್ಸು ನಮಗೆ ಇಲ್ಲ. ಲೋಕಸೇವಕ ಸಂಘ, ಸ್ವತಂತ್ರ ಪಾರ್ಟಿ, ಕಮ್ಯುನಿಸ್ಟ್ ಪಕ್ಷಗಳು ಹುಟ್ಟಿಕೊಂಡು ಆ ಪಕ್ಷದಲ್ಲಿದ್ದ ಮುಂದಾಳುಗಳು ತಮ್ಮ ತಮ್ಮ ಪಕ್ಷದ ಪ್ರಣಾಳಿಕೆಯಂತೆ ಹೋರಾಡುತ್ತವೆ. ಇವೆಲ್ಲ ಪಕ್ಷಗಳು ದೇಶದ ಹಿತ, ಜನರ ಏಳಿಗೆಯನ್ನೇ ಬಯಸುತ್ತವೆ. ತತ್ವಗಳನ್ನು ಮುಂದಿಟ್ಟುಕೊಂಡು ಸರಕಾರಕ್ಕೆ ಎಚ್ಚರಿಕೆ ನೀಡುತ್ತವೆ ಎಂದು ಶ್ರೀ ಪಿ.ಎಸ್. ಮೂರ್ತಿ ಅವರು ತಾವು ಪಕ್ಷ ಬದಲಿಸುವ ಉದ್ದೇಶವನ್ನು ಜನರಿಗೆ ತಿಳಿಸಿದರು.

ಈಗ ನಾನು ಯಾವ ಪಕ್ಷದಲ್ಲಿದ್ದರೂ ಇನ್ನು ಮುಂದೆ ನಾನು ಅಭ್ಯರ್ಥಿಯಾಗಿ ಚುನಾವಣೆ ಕಣಕ್ಕಿಳಿಯಲಾರೆ. ಕೇವಲ ಜನ ಬಲದಿಂದ ಚುನಾವಣೆಯಲ್ಲಿ ಗೆದ್ದು ಬರುವ ವಿಶ್ವಾಸ ಹೋಗಿಬಿಟ್ಟಿತು. ಈಗ ಮುಖ್ಯವಾಗಿ ಬೇಕಾಗಿರುವುದು ಧನ ಬಲ. ಅಂತಹ ಸ್ಥಿತಿವಂತರು ನಾವಲ್ಲ. ಅಂತಹ ಸ್ಥಿತಿವಂತರಾಗುವ ಬಯಕೆಯೂ ನನಗಿಲ್ಲ. ದೇಶದಲ್ಲಿ ಹಾಸಿ ಹೊಚ್ಚಿದ ಬಡತನ, ದಾರಿದ್ರ್ಯ, ಅಜ್ಞಾನ ಮೂಢನಂಬಿಕೆ ಅನಕ್ಷರತೆಗಳ ವಿರುದ್ಧ ಹೋರಾಡಿ ಜನಸೇವೆ ಮಾಡುವ ಬಯಕೆಯೇ ನನ್ನದಾಗಿದೆ. ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ ಅವರ ಬಲವಾದ ಬಯಕೆಯೂ ಇದೇ ಆಗಿದೆ. ಅವರು ತತ್ವದ ಮೇಲೆ ಹೋರಾಡುತ್ತಾರೆ. ಸಿದ್ಧಾಂತದ ಮೇಲೆ ಕುಣಿದಾಡುತ್ತಾರೆ. ಅವರ ಮಾತಿನಲ್ಲಿ ತೂಕವಿರುತ್ತದೆ ನಡೆಯಲ್ಲಿ ಎಚ್ಚರಿಕೆ ಇರುತ್ತದೆ. ಅವರಲ್ಲಿರುವ ಸ್ವಾರ್ಥರಹಿತ ಸೇವೆಗೆ ನಾನು ಮೆಚ್ಚಿಕೊಂಡಿದ್ದೇನೆ ಎಂದು ತಮ್ಮ ಅನುಯಾಯಿಗಳಿಗೆ ಹೇಳಿದರು.

ನಮ್ಮ ಮನೆಯವರು ಸವಿತಾ ದೇವಿ ಸಾತ್ವಿಕ ಶಿಕ್ಷಕಿಯ ಬಾಳನ್ನು ಅಪ್ಪಿ ಅಧ್ಯಾಪನದೊಡನೆ ಸ್ವಸಾಮರ್ಥ್ಯ ಬೆಳೆಸಿಕೊಳ್ಳಲು ಸ್ವಾಧ್ಯಾಯ ಪ್ರಾರಂಭಿಸಿದ್ದಾರೆ. ಇನ್ನು ಮೇಲೆ ಅವರನ್ನು ಅಪ್ಪಿತಪ್ಪಿಯೂ ರಾಜಕೀಯ ರಂಗಕ್ಕೆ ತರಲಾರೆ ನಮ್ಮಿಬ್ಬರಿಗೂ 'ಸೇವೆ' ಮುಖ್ಯ. ಅವರು ಶಿಕ್ಷಕಿಯಾಗಿ ಶೈಕ್ಷಣಿಕ ಸೇವೆ ಮಾಡಿದರೆ ನಾನು ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಸೇವೆಯಲ್ಲಿ ನಿರತನಾಗುತ್ತೇನೆ. ನಾನು ನನ್ನ ಸೇವೆಗೆ ಜನರಿಂದ ಏನನ್ನೂ ಅಪೇಕ್ಷಿಸುವುದಿಲ್ಲ. ಇದು ನನ್ನ ಹುಟ್ಟುಗುಣವೂ ಆಗಿದೆ. ಈ ವಿಷಯ ತಮ್ಮೆಲ್ಲರಿಗೆ ಮನವರಿಕೆಯಾಗಿರಬೇಕು ಎಂದು ತಮ್ಮ ಮನದ ಇಂಗಿತವನ್ನು ಜನರ ಮುಂದೆ ಇಟ್ಟು ಪಿ.ಎಸ್. ಮೂರ್ತಿ ಅವರೊಡನೆ ವಿಶ್ವನಾಥರೆಡ್ಡಿ ಮುದ್ನಾಳ ಅವರು ಕಟ್ಟಿದ ಲೋಕಸೇವಕ ಸಂಘಕ್ಕೆ ಸಹಕರಿಸುತ್ತ ಜನಸೇವೆ ಯಲ್ಲಿ ನಿರತರಾದರು.

ಆರ್ಯಸಮಾಜದ ಧುರೀಣರು, ಸ್ವಾತಂತ್ರ್ಯಹೋರಾಟಗಾರರು, ಕಾಂಗ್ರೆಸ್ ಪಕ್ಷದಲ್ಲಿದ್ದ ಸ್ನೇಹಿತರು, ಹಿಂದಿ ಭಾಷಾ ಪ್ರಚಾರಕರು, ಭಾಷಾತಜ್ಞರು, ಇನ್ನಿತರ ರಾಜಕೀಯ ಮುತ್ಸದ್ದಿಗಳು ವಿದ್ಯಾರ್ಥರ ಗುರೂಜಿ ಅವರ ಸ್ನೇಹ-ಸಹಕಾರದಲ್ಲಿಯೇ ಇದ್ದರು.

ರಕ್ಷಾ ಬಂಧನ

ವಿದ್ಯಾಧರ ಗುರೂಜಿ ಅವರು ಸಕಲ ಜೀವಾತ್ಮರಿಗೆ ಲೇಸನ್ನು ಬಯಸಿದ ಓರ್ವ ತರುಣ ಭಾರತೀಯರು. ಅವರು ಜಾತಿ, ಮತ, ಪಂಥ, ಪಂಗಡ, ವರ್ಣ, ವರ್ಗ ಭೇದಗಳನ್ನು ತೊಡೆದು ಹಾಕಿದ್ದರು. ಮಾನವಕುಲ ಒಂದು ಎಂಬ ವಿಶ್ವವಿಶಾಲ ಭಾವನೆ ಅವರಲ್ಲಿ ಬೇರೂರಿತ್ತು. ಹಿಂದಿ ರಾಷ್ಟ್ರಭಾಷೆ ಎಲ್ಲರ ಆಕರ್ಷಣೀಯ ಭಾಷೆಯಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಮಾರವಾಡಿ, ಜೈನ-ಮುಸ್ಲಿಂರೆಲ್ಲರೂ ಹಿಂದಿ ಭಾಷೆಯನ್ನು ಪ್ರೀತಿಸುತ್ತಿದ್ದರು, ಗೌರವಿಸುತ್ತಿದ್ದರು. ಹೀಗಾಗಿ ಬಹಳಷ್ಟು ಜನ ಮುಸಲ್ಮಾನ ಬಂಧು ಭಗಿನಿಯರು ಶಿಕ್ಷಕರಾಗಿ ಸೇವೆ ಸಲ್ಲಿಸುತ್ತ ರಾಷ್ಟ್ರಭಾಷೆಯಲ್ಲಿ ನಡೆಯುತ್ತಿದ್ದ ಪರೀಕ್ಷೆಗಳಿಗೆ ಕಟ್ಟಿ ಹಿಂದಿ 'ಉತ್ತಮ', 'ವಿದ್ವಾನ್', 'ಭೂಷಣ' ಗಳನ್ನು ಪಾಸುಮಾಡಿ ಶಿಕ್ಷಕ ವೃತ್ತಿಯಲ್ಲಿ ಪ್ರಗತಿಯನ್ನು ಸಾಧಿಸುತ್ತಿದ್ದರು. ಈ ಪರೀಕ್ಷೆಗಳನ್ನು ಕಟ್ಟಿ ಪ್ರಗತಿ ಸಾಧಿಸಲು ಹೆಚ್ಚಾಗಿ ಮುಸ್ಲಿಂ ಮಹಿಳೆಯರು ಮುಂದು ಬರುತ್ತಿದ್ದರು.



ವಿದ್ಯಾಧರ ಗುರೂಜಿ ಅವರಿಗೆ ಶಿಕ್ಷಕರ ಮೇಲೆ ಬಹಳ ಪ್ರೀತಿ. ಸ್ವತಂತ್ರ ಭಾರತದ ಪ್ರಜೆಗಳು, ಅದರಲ್ಲಿ ಬೆಳೆಯುತ್ತಿರುವ ಮಕ್ಕಳು ಸುಶಿಕ್ಷಿತರಾಗಲು, ವಿದ್ಯಾರಂತರಾಗಲು, ಸಭ್ಯಗೃಹಸ್ತರಾಗಿ ಬೆಳೆಯಲು ಬದುಕಲು ಶಿಕ್ಷಣ ಅವಶ್ಯ ಬೇಕು ಎಂದು ಮನಗಂಡ ವ್ಯಕ್ತಿ. ಶಿಕ್ಷಕರಿಂದಲೇ ನಮ್ಮ ಹಳ್ಳಿಗಳ ಉದ್ಧಾರ. ಅವರಿಂದಲೇ ಕಲೆ, ಸಾಹಿತ್ಯ, ಸಂಸ್ಕೃತಿ ಸಮೃದ್ಧವೆಂದು ತಿಳಿದುಕೊಂಡು ಶಿಕ್ಷಕರನ್ನು ಬಹಳ ಗೌರವಿಸುತ್ತಿದ್ದರು. ಅದರಿಂದ ಮುಸ್ಲಿಂ ಮಹಿಳಾ ಶಿಕ್ಷಕಿಯರು ವಿದ್ಯಾಧರ ಗುರೂಜಿ ಅವರನ್ನು ತುಂಬ ವಿಶ್ವಾಸದಿಂದ ಕಂಡು ಅವರನ್ನು ನಿಜವಾದ ಅರ್ಥದಲ್ಲಿ 'ಗುರೂಜಿ' ಎಂದು ಗೌರವಿಸುತ್ತಿದರು.

ಇವರನ್ನು ಇಷ್ಟು ವಿಶ್ವಾಸದಿಂದ ಕಾಣುತ್ತಿದ್ದುದರಿಂದ ಕೆಲವು ಮುಸಲ್ಮಾನರು ಹೊಟ್ಟೆಕಿಚ್ಚಿನಿಂದ ವಿರೋಧಿಸುತ್ತಿದ್ದರು. ವಿದ್ಯಾಗುರೂಜಿ ಅವರು ಮಾನವ ಕರುಣೆಯುಳ್ಳ ಮಹಾನ್ ವ್ಯಕ್ತಿ. ಅವರನ್ನು ವಿರೋಧಿಸಿದರು ಅವರು ತಿರುಗಿ ನಿಮ್ಮನ್ನು ವಿರೋಧಿಸುವುದಿಲ್ಲ. ಪ್ರತಿಯಾಗಿ ನಿಮ್ಮನ್ನು ಗೌರವಿಸುತ್ತಾರೆ ಎಂದು ಅವರ ಬಗ್ಗೆ ಇದ್ದ ಗೌರವವನ್ನು ವ್ಯಕ್ತಪಡಿಸುತ್ತಿದ್ದರು.

ಪ್ರತಿವರ್ಷ ಶ್ರಾವಣ ಮಾಸದಲ್ಲಿ ಬರುತ್ತಿದ್ದ ರಾಖಿ ಹುಣ್ಣಿಮೆಯೆಂದು ಎಲ್ಲ ಮುಸಲ್ಮಾನ ಭಗಿನಿಯರು ಒಂದುಗೂಡಿ ವಿದ್ಯಾಧರ ಗುರೂಜಿ ಅವರಿಗೆ 'ರಕ್ಷಾ ಬಂಧನ' ಕಟ್ಟಿ 'ಅಣ್ಣಾ' ಎಂದು ಗೌರವಿಸುತ್ತಿದ್ದರು. ಹೀಗೆ 'ರಕ್ಷಾ ಬಂಧನ' ಮಾಡಿ ಗೌರವಿಸುತ್ತಿದ್ದ ಭಗಿನಿಯರಲ್ಲಿ ಶ್ರೀಮತಿ ಸಮೀರ ಉನ್ನಿಸಾಬೇಗಂ ಶ್ರೀಮತಿ ಕುತುಜಾಬಿ ಬೇಗಂ ಶ್ರೀಮತಿ ಹುಸನ್ನೊನ್ನಿಸಾ ಬೇಗಂ ಶ್ರೀಮತಿ ಸಾರಾಬಾಯಿ ಶ್ರೀಮತಿ ರಬ್ಬಾನಿ ಬೇಗಂ ಇವರೆಲ್ಲರೂ ಯಾದಗಿರಿಯ ಉರ್ದು ಶಾಲಾ ಶಿಕ್ಷಕಿಯರಾಗಿ ಸೇವೆ ಸಲ್ಲಿಸುತ್ತಿದ್ದರು.

ಈ ಎಲ್ಲ ಮಹಿಳಾ ಭಗಿನಿಯರ ಜೊತೆಗೆ ಶ್ರೀ ಅಬ್ದುಲ್ ಸಬದ್ ಆಫಘಾನ, ಶ್ರೀ ಅಬ್ದುಲ್ ರಸೀದ ಲಾತೂರೆ, ಶ್ರೀ ಅಬ್ದುಲ್ ಮಜೀದ ದುಃಖಾನದಾಡಿ ಶ್ರೀ ನ್ಯಾಮತುಲ್ಲಾ ಘೋರಿ ಶ್ರೀ ರಹಮತುಲ್ಲಾ ಘೋರಿ ಶ್ರೀ ಫೈಜ ಅಹಮದ್ ಫೈಜ್ ಅವರೂ ಇದ್ದು ರಾಖಿ ಹಬ್ಬ ಅಂದರೆ 'ರಕ್ಷಾ ಬಂಧನ' ಕಾರ್ಯಕ್ರಮಕ್ಕೆ ಮೆರಗು ತಂದು ಕೊಡುತ್ತಿದ್ದರು.

ಅಂದು ವಿದ್ಯಾಧರ ಗುರೂಜಿ ಅವರು ಹಿಂದು ಮತ್ತು ಮುಸಲ್ಮಾನ ಬಂಧು ಭಗಿನಿಯರಿಗೆ ಸಿಹಿ ತಿಂಡಿ ಹಂಚಿ ನಾವೆಲ್ಲರೂ ಭಾರತೀಯರು

ನಮ್ಮ ನಮ್ಮ ಹಬ್ಬ ಹುಣ್ಣಿಮೆ ಆಚರಣೆಗಳು ಬೇರೆ ಬೇರೆ ಇದ್ದರೂ ನಾವೆಲ್ಲರೂ ದೊಡ್ಡ ಮನಸ್ಸು ಮಾಡಿ ಕೂಡಿಕೊಂಡು ಹೋಗುವುದರಲ್ಲಿ ನಮಗೆ ದೊಡ್ಡ ಶಕ್ತಿ ಬರುತ್ತದೆ ಎಂದು ಹೇಳಿ ಅನೇಕತೆಯಲ್ಲಿ ಏಕತೆಯನ್ನು ಸಾಧಿಸಿ ಸ್ವಾರಸ್ಯಕರವಾಗಿ ಬದುಕಿ ಬಾಳಲು ಮಾರ್ಗದರ್ಶನ ಮಾಡುತ್ತಿದ್ದರು.

ಮೋಹರಂ ಹಬ್ಬವನ್ನು ಹಿಂದು ಮುಸಲ್ಮಾನರು ಕೂಡಿ ಆಚರಿಸುವುದರಿಂದಲೇ ಆ ಹಬ್ಬಕ್ಕೆ ಒಂದು ದೊಡ್ಡ ಶಕ್ತಿ ಬಂದಿದೆ. ಆ ಹಬ್ಬ ಭಾರತೀಯರ ದೊಡ್ಡ ಹಬ್ಬವೆಂದು ಕರೆಯಲ್ಪಡುತ್ತದೆ. ಇಡೀ ಭಾರತ ದೇಶದಾದ್ಯಂತ ಮೋಹರಂ ಹಬ್ಬ ಆಚರಿಸುವಂತೆ ರಕ್ಷಾಬಂಧನ ಹಬ್ಬವೂ ಸಹ ಎಲ್ಲರೂ ಆಚರಿಸುವಂತೆ ಆಗಬೇಕೆಂದು ಹೇಳುತ್ತಿದ್ದರು.

ಹೀಗೆ ವಿದ್ಯಾಧರ ಗುರೂಜಿ ಅವರು ಸಮಾಜದ ಎಲ್ಲ ವರ್ಗದ ಜನರೊಡನೆ ಬೆರೆತು ಹಸನ್ಮುಖಿಯಾಗಿ ಬಾಳಿ ಬದುಕಿ ಸಾಮರಸ್ಯ ಮೂಡಿಸತೊಡಗಿದರು. ವಿದ್ಯಾಧರ ಗುರೂಜಿ ಅವರ ದಯೆ, ಅಂತಃಕರಣ ಮಾನವ ಪ್ರೇಮ ಮುಂತಾದ ಸದ್ಗುಣಗಳು ಸಮಾಜ ಎಲ್ಲ ಸ್ತರಗಳ ಜನರಿಗೆ ಅರ್ಥವಾಗತೊಡಗಿತು.

ಸಾಮರಸ್ಯ ಮೂಡಿಸಿದ ವನಭೋಜನ

ಭಾರತ ದೇಶವು ಪ್ರಾಚೀನ ಕಾಲದಿಂದಲೂ ಹಲವು ಕುಲ, ಜಾತಿ, ಮತ, ಪಂಥ, ವರ್ಣ, ವರ್ಗ ಪಂಗಡಗಳಿಂದ ಕೂಡಿದ ವರ್ಣರಂಜಿತ ದೇಶ. ಜೊತೆಗೆ ಹಲವು ಭಾಷೆಗಳಿಂದಲೂ ಮೆರಗು ಪಡೆದ ದೇಶ ಭಾರತ. ಹೀಗೆ ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದ ಭಾರತವು ಜಗತ್ತಿನ ಆಧ್ಯಾತ್ಮದ ಕೇಂದ್ರವೆಂದೂ, ಪರಂಧಾಮವೆಂದು ಪ್ರಖ್ಯಾತಿಯನ್ನು ಪಡೆದಿದೆ.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ಚಾತುವರ್ಣಗಳಲ್ಲಿ ರಂಜಿಸಿದ ಭಾರತ ಆತ್ಮವಿಶ್ವಾಸವನ್ನು ಕಳೆದುಕೊಳ್ಳಲಿಲ್ಲ. ವೇದವನ್ನು ಓದಿದ ಬ್ರಾಹ್ಮಣರು ತಾವು ಹೆಚ್ಚಿನವರು, ಧರಣಿಯನ್ನು ಪರಿಪಾಲಿಸುವ ಕ್ಷತ್ರಿಯರು ರಾಜ ಮಹಾರಾಜರು ಅವರ ನಂತರದವರು ವ್ಯಾಪಾರೋದ್ಯಮಿಗಳಲ್ಲಿ ತೊಡಗಿದ ವೈಶ್ಯರು ಮೂರನೆಯ ದರ್ಜೆಯಲ್ಲಿ ಇರತಕ್ಕವರು. ಕೃಷಿ ಕಾಯಕ ಮಾಡಿ ಜಗತ್ತಿಗೆ ಅನ್ನ ಹಾಕುವ ರೈತರು ಅವನ ಅನುಯಾಯಿಗಳಾದ ಆಯಗಾರರು



ಶೂದ್ರರೆಂದು ಪರಿಗಣಿಸಲ್ಪಟ್ಟರು. ಭಾರತದಲ್ಲಿ ಶ್ರಮ ಜೀವಿಗಳಿಗೆ ಸ್ಥಾನ ಮಾನಗಳಿರಲಿಲ್ಲ. ಇಂತಹ ಕಷ್ಟಕಾಲದಲ್ಲಿ ದುಡಿದು ಬದುಕುವ ಛಲವನ್ನು ಅವರು ಕಳೆದುಕೊಳ್ಳಲಿಲ್ಲ. ಅವರು ಮಾಡುವ ಕಸಬುಗಳ ಮೇಲಿಂದ ಕುಲ, ಜಾತಿ, ಮತ, ಪಂಥ, ವರ್ಣ, ವರ್ಗಗಳನ್ನು ಕಲ್ಪಿಸಿ ಇನ್ನೂ ಕೀಳುತನದಿಂದ ಕಾಣುವ ಕಾಲ ಅದಾಗಿತ್ತು. ಇಂತಹ ಕ್ಲಿಷ್ಟ ಕಾಲದಲ್ಲಿ ಭಾರತ ಬ್ರಿಟಿಷರ ಕಪಿಮುಷ್ಟಿಯಲ್ಲಿ ಸಿಲುಕಿ ಗುಲಾಮಗಿರಿಯ ಗುಂಗಿನಲ್ಲಿ ಬಳಲತೊಡಗಿತು. ಹುಲಿಯಂತಿದ್ದ ಮಾನವ ಹುಲ್ಲೆಯಂತಾದ. ಹರಿಯ ರೂಪದಲ್ಲಿದ್ದ ಈ ಮಾನವ ಕುರಿಯಂತೆ ತಲೆ ತಗ್ಗಿಸಿದ.

ಈ ಸ್ಥಿತಿ ಇಡೀ ಭಾರತವನ್ನು ಆವರಿಸಿತು. ವೇಶ್ಯಾ ಪದ್ಧತಿ ಜಾರಿಯಲ್ಲಿ ಬಂದಿತು. ದೇವರ ಹೆಸರಿನಲ್ಲಿ ಹೊರಬಂದ ದೇವ ದಾಸಿಯರು ಜೋಗತಿಯರು, ಪಾತರದವರು ಸೂಳೆಯರು ದಾಸರು, ಡೊಂಬರು ತಮ್ಮ ಜೀವನದ ಶೈಲಿ, ಬದುಕಿನ ರೀತಿ ಹೀಗೆಯೇ ಎಂದು ಭಾವಿಸಿ ಹೇಸಿಗೆ ಮರೆತು ಬಾಳತೊಡಗಿದ್ದರು. ಇಂತಹವರಿಗೆ ಸಮಾಜದಲ್ಲಿ ಸ್ಥಾನ-ಮಾನಗಳೇ ಇರಲಿಲ್ಲ. ಇಂತಹ ದುರ್ದೈವಿಗಳನ್ನು ಕಣ್ಣಾರೆ ಕಂಡ ವಿದ್ಯಾಧರ ಗುರೂಜಿಯವರು ಈ ನಿರ್ಭಾಗ್ಯರನ್ನು ಹತ್ತಿರ ಕರೆದು ಅವರಿಗೆ ಶಿಕ್ಷಣ ಕೊಡತೊಡಗಿದರು. ಹದಿ ಹರೆಯದವರಿಗೆ "ವಯಸ್ಕರ ಶಿಕ್ಷಣ" ಪದ್ಧತಿಯಲ್ಲಿ ಮಕ್ಕಳಿಗೆ ಪ್ರಾಥಮಿಕ ಶಾಲಾ ಶಿಕ್ಷಣ ನೀಡತೊಡಗಿದರು. ವಿದ್ಯಾಧರ ಗುರೂಜಿ ಅವರು ಸಮಾಜದ ಕಟ್ಟಕಡೆಯ ಮನುಷ್ಯನನ್ನು ಗುರುತಿಸಿ ಅವರಿಗೆ ಸಮಾಜದ ಮುಖ್ಯವಾಹಿನಿಗೆ ಎಳೆದು ತರಲು ಯಾದಗಿರಿ ಭಾಗದಲ್ಲಿ ಪ್ರಯತ್ನಿಸಿದರು.

ಶಾಲೆಗೆ ಬರುವ ಬಡ ಹಿಂದುಳಿದ ಮತ್ತು ಅಸ್ಪೃಶ್ಯರ ಮಕ್ಕಳನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಶಾಲೆಯಲ್ಲಿ ಅವರನ್ನು ದೂರ ಕೂಡ್ರಿಸಿ ಶಿಕ್ಷಣ ಕೊಡಲು ವಿದ್ಯಾಧರ ಗುರೂಜಿ ಅವರಿಗೆ ಮನಸ್ಸಿರಲಿಲ್ಲ. ಮುಂದುವರಿದ, ಶ್ರೀಮಂತ ಮಕ್ಕಳು ಬಡವರ ಮಕ್ಕಳನ್ನು ಸೇರುತ್ತಿರಲಿಲ್ಲ. ಈ ಎಲ್ಲ ಜನರನ್ನು, ಮಕ್ಕಳನ್ನು ಒಂದುಗೂಡಿಸಲು ಗುರೂಜಿ ಅವರು ಹಗಲಿರುಳು ಚಿಂತಿಸಿದರು, ಶ್ರಮಿಸಿದರು. ಇವರೆಲ್ಲರನ್ನು ಒಂದು ಕಡೆ ಕರೆದು ದುಂಡಾಕಾರವಾಗಿ ಕೂಡ್ರಿಸಿ ಸ್ವಾತಂತ್ರ್ಯ ಚಳುವಳಿಯ ಕಥೆಯನ್ನು ಹೇಳಿ ಮಕ್ಕಳ ಹೃದಯವನ್ನು ಅರಳಿಸುತ್ತಿದ್ದರು. ಚಳುವಳಿಯ ಮುಂಚೂಣಿಯಲ್ಲಿ ಪಕ್ಷಪಾತವನ್ನು ಮರೆತು

ಮೇಲು ಕೀಳುತನವನ್ನು ತೊಡೆದು ಹಾಕಿ ಮುಟ್ಟಿ-ತಟ್ಟಿ ಎಂಬ ಭೇದ ಭಾವವನ್ನು ಮರೆತು ಅಡಿಯ ಮುಂದಡಿ ಇಟ್ಟು ಪ್ರತಿಯೊಬ್ಬರು ಹಗಲಿಗೆ ಹಗಲು ಹಚ್ಚಿ ದುಡಿದು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಕತೆಯನ್ನು ಹೇಳಿ ಪ್ರತಿಯೊಬ್ಬರ ಮನಸ್ಸಿನಲ್ಲಿದ್ದ ಕಹಿ ಭಾವನೆಯನ್ನು ಹೋಗಲಾಡಿಸು ತ್ತಿದ್ದರು.

ಮಕ್ಕಳಲ್ಲಿ ಭಾವ್ಯಕ್ಯತೆ ಮೂಡಿಸಲು ಸಾಮೂಹಿಕವಾಗಿ ಆಟವಾಡುವ ಪ್ರವೃತ್ತಿಯನ್ನು ಬೆಳೆಸಿದರು. ಆಗಾಗ್ಗೆ ಹೊರಸಂಚಾರ ಏರ್ಪಡಿಸಿ ನಾವೆಲ್ಲರೂ ಒಂದೆಂಬ ಭಾವನೆ ಮೂಡಿಸಿದರು. ಸಮಯ ಸಿಕ್ಕಾಗ **'ವನ ಭೋಜನ' ಏರ್ಪಡಿಸಿ ಮಕ್ಕಳು ತಾವು ತಂದ ಪದಾರ್ಥಗಳನ್ನು ಒಬ್ಬರಿಗೊಬ್ಬರು ಹಂಚಿ ತಿನ್ನುವ ಪ್ರವೃತ್ತಿಯನ್ನು ಬೆಳೆಸಿದರು. ಹೀಗೆ ಮಾಡುವುದರಿಂದ ಮಕ್ಕಳಲ್ಲಿ ಸಮಾನತೆ ಬಂದಿತು. ಸೌಹಾರ್ದತೆ ಬೆಳೆಯಿತು, ಸ್ನೇಹ ಕುದುರಿತು.**

ಈ ರೀತಿ ಬೆಳೆದು ಶಿಕ್ಷಣ ಪಡೆದು ಕೆಲವು ಮಕ್ಕಳು ದೊಡ್ಡವರಾದ ಮೇಲೆ ಪೋಲೀಸ್ ಇಲಾಖೆಯಲ್ಲಿ ಸೇರಿ ಕೆಲಸ ಮಾಡತೊಡಗಿದರು. ಉದಾಹರಣೆ ಪಾಂಡುರಂಗ ತೇಲಕರ ಇತ್ಯಾದಿ. ರಾಮಯ್ಯ ಕಲಾಲ, ನರಸಣ್ಣ ಮೇದಾರ, ಲಿಂಗಪ್ಪ ಯರಗೋಳ ಶಾಲಾ ಶಿಕ್ಷಕರಾದರು. ಇನ್ನು ಕೆಲವರು ಅಡತಿ ಅಂಗಡಿ, ಕಿರಾಣಿ ಅಂಗಡಿ ಬಟ್ಟೆ ಅಂಗಡಿಗಳಲ್ಲಿ ಕೆಲಸ ಮಾಡತೊಡಗಿದರು. ಮತ್ತೆ ಕೆಲವರು ತಾವೇ ಸ್ವತಃ ವ್ಯಾಪಾರೋದ್ದಿಮೆಯಲ್ಲಿ ನಿರತರಾದರು. ಕೆಲವರು ರಾಜಕೀಯ ರಂಗಕ್ಕೆ ಧುಮುಕಿದರು. ರಾಜಕೀಯ ರಂಗದಲ್ಲಿ ಧುಮುಕಿದ ತಿಮ್ಮಣ್ಣ ಹೆಡಗಿ ಮದರಿ ಅವರು ಇಂದು ಸಮಾಜದ ಮುಖ್ಯವಾಹಿನಿಯಲ್ಲಿ ಬಂದು ಪ್ರತಿಷ್ಠಿತರ ಸಾಲಿನಲ್ಲಿ ಪ್ರಮುಖ ವ್ಯಕ್ತಿಗಳಾಗಿದ್ದಾರೆ. ಇವರ ರಾಜಕೀಯ ಗುರುಗಳೇ ವಿದ್ಯಾಧರ ಗುರೂಜಿ ಅವರು. ಈ ಪುಸ್ತಕ ಬರೆಯುವ ಸಮಯದಲ್ಲಿಯೇ ಅವರು ಇಹಲೋಕ ಯಾತ್ರೆ ಮುಗಿಸಿದರು.

ಹೀಗೆ ಕುಲ ಕಸಬುಗಳಿಂದ ವಿಂಗಡಿಸಲ್ಪಟ್ಟ ಜನರನ್ನು, ಅವರ ಮಕ್ಕಳನ್ನು ಒಂದು ಕಡೆ ಕರೆದು ಅವರಿಗೆ ಶಿಕ್ಷಣ ಕೊಟ್ಟು ಸಮರಸ ಬದುಕಿಗೆ ದಾರಿ ಮಾಡಿಕೊಟ್ಟ ವಿದ್ಯಾಧರ ಗುರೂಜಿ ಅವರು ಶ್ರೇಷ್ಠ ಸಮಾಜ ಸುಧಾರಕರಲ್ಲವೆ?

ಒಂದೇ ನಾಣ್ಯದ ಎರಡು ಮುಖಗಳು

‘ಕೂಡಿ ಕಾಡಬಾರದು ಕಾಡಿ ಕೂಡಬೇಕು’ ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ ಅವರು ಶ್ರೀ ವಿದ್ಯಾಧರ ಗುರೂಜಿ ಅವರು ಕಾಡಿ ಕೂಡಿದರು. ಕೂಡಿದ ಮೇಲೆ ಇಬ್ಬರೂ ಒಬ್ಬರಿಗೊಬ್ಬರು ಕಾಡಲಿಲ್ಲ, ಕಚ್ಚಾಡಲಿಲ್ಲ. ಇವರಿಬ್ಬರೂ ಕೂಡಿದ ಮೇಲೆ ‘ಸತ್ವ, ತತ್ವ’ ಕೂಡಿತಂದಾಯಿತು. ‘ಜ್ಞಾನ–ಕ್ರಿಯೆ’ ಬೆರೆತಂತಾಯಿತು. ‘ದಕ್ಷತೆ, ಪ್ರಾಮಾಣಿಕತೆ’ ಮೇಳವಿಸಿದಂತಾಯಿತು. ‘ನಿಷ್ಠೆ–ನಿಸರ್ಗ’ ಒಂದಾದಂತಾಯಿತು. ಇವರಿಬ್ಬರು ಕೂಡಿ ಮೊದಲಸಲ ಚಹಾ ಕುಡಿಯುವುದನ್ನು ನೋಡಿ ಜನರಷ್ಟೇ ಅಲ್ಲ ಯಾದಗಿರಿಯ ಗುಡ್ಡದ ಕಲ್ಲುಗಳೂ ಸಹ ಕರತಾಡನ ಮಾಡಿದವು. ಗುರೂಜಿಯವರ ಅಭಿಮಾನಿಗಳು ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ ಅವರ ಅಭಿಮಾನಿಗಳು ವಿದ್ಯಾಧರ ಗುರೂಜಿ – ವಿಶ್ವನಾಥ ರೆಡ್ಡಿ ಮುದ್ನಾಳ ಒಂದೇ ನಾಣ್ಯದ ಎರಡು ಮುಖಗಳೆಂದು ಉದ್ಗಾರ ತೆಗೆದರು. ಹೇಗೆ ಎರಡು ಮನಸ್ಸು ಒಂದು ಎಂದು ಹಾರೈಸಿದರು.



ವಿದ್ಯಾಧರ ಗುರೂಜಿ ಅವರು ಕಾಂಗ್ರೆಸ್ ಪಕ್ಷ ಬಿಟ್ಟರೂ ಕಾಂಗ್ರೆಸ್ಸಿನಲ್ಲಿದ್ದ ಹಿರಿಯ ನಾಯಕರು ಕಾರ್ಯಕರ್ತರನ್ನು ಬಿಡಲಿಲ್ಲ. ಅವರೊಡನೆ ಇದ್ದ ಸ್ನೇಹ-ಪ್ರೀತಿ ವಿಶ್ವಾಸ ಮುಂದುವರಿಯಿತು. ಕಾಂಗ್ರೆಸ್ ಹಿರಿಯ ಮುಖಂಡರು ಹಿಂದುಳಿದ ವರ್ಗದ ರೂವಾರಿಗಳು ಎನಿಸಿಕೊಂಡಿದ್ದ ಕೋಲೂರು ಮಲ್ಲಪ್ಪನವರೊಡನೆ ತುಸು ವಿರಸ ಬಂದಿತ್ತು. ಗುರೂಜಿಯವರು ವಿಶ್ವನಾಥ ರೆಡ್ಡಿ ಮುದ್ನಾಳ ಅವರ ಕಡೆ ಬರುವುದರಿಂದ ಕಾಲ ಕಳೆದಂತೆ ಅವರ ಪ್ರೀತಿ, ವಿಶ್ವಾಸ, ಸ್ನೇಹದಿಂದ ದೂರಾದರು. ಯಾದಗಿರಿ ಪರಿಸರದ ಹಿಂದುಳಿದ ಬಡವರ ನಿರ್ಗತಿಕರ ಹಿತೈಷಿಯಾದ ವಿದ್ಯಾಧರ ಗುರೂಜಿ ಅವರನ್ನು ನಂಬಿಕೊಂಡ ಕೆಳವರ್ಗದ ಜನರು ಗುರೂಜಿ ಅವರ ಹತ್ತಿರವೇ ಉಳಿದರು. ಗುರೂಜಿ ಅವರು ಬಡವ ಬಲ್ಲಿದರೆಲ್ಲರ ಮಧ್ಯದಲ್ಲಿ, ಕಾಂಗ್ರೆಸ್ ಮತ್ತು ಲೋಕಸೇವಕ ಸಂಘದ ಜನರ ನಡುವೆ ಹಾಲು ಸಕ್ಕರೆಯಂತೆ ಬೆರೆತು ಬಡಬಗ್ಗರ ಏಳಿಗೆ, ಸಮಾಜದ ಪ್ರಗತಿ ಕಡೆ ಗಮನ ಹರಿಸಿ ಬಹಳ ತೂಕಬದ್ಧವಾಗಿ ನಡೆದುಕೊಳ್ಳತೊಡಗಿದರು.

ಅದು 1960ರ ಸಮಯ ಗುರೂಜಿ ಅವರು ಕಾಂಗ್ರೆಸ್ ಪಕ್ಷವನ್ನು ತೊರೆದರೂ ಕಾಂಗ್ರೆಸ್ ಮುಖಂಡರೊಡನೆ ಬೆಳೆದು ಬಂದಿದ್ದ ಸ್ನೇಹ-ಸಂಪರ್ಕದಿಂದ ದೂರಾಗಲಿಲ್ಲ. ಅವರಿಗೆ ಮುಂದೆ ಬರುವ ಚುನಾವಣೆಗೆ ನಿಲ್ಲುವ ಆಶೆ-ಆಕಾಂಕ್ಷೆಗಳೂ ಇರಲಿಲ್ಲ. ತಾವು ಕಟ್ಟಿ ಬೆಳೆಸಿದ 'ಗಾಂಧಿ ಜನರಲ್ ಹಾಸ್ಟೆಲ್' ಅಚ್ಚುಕಟ್ಟಾಗಿ ನಡೆಸಿಕೊಂಡು ಹೋಗುವುದು, ಕಷ್ಟದಲ್ಲಿದ್ದ ಜನರನ್ನು ಗುರುತಿಸಿ ಅವರಿಗೆ ತಕ್ಕ ನೆರವನ್ನು ನೀಡುವುದೇ ಆಗಿತ್ತು. ಅವರು ವಿಶ್ವನಾಥ ರೆಡ್ಡಿ ಮುದ್ನಾಳ ಅವರೊಡನೆ ಕೂಡಿಕೊಂಡಿದ್ದರೂ ಗುರೂಜಿ ಅವರಿಗೆ ತಮ್ಮ ಬಗ್ಗೆ ಯಾವ ಅಪೇಕ್ಷೆಯನ್ನು ಇಟ್ಟುಕೊಳ್ಳದೇ ಸಮಾಜದ ಏಳಿಗೆಯನ್ನೇ ಗುರಿಯಾಗಿಟ್ಟುಕೊಂಡಿದ್ದರು. ವಿಶ್ವನಾಥ ರೆಡ್ಡಿ ಮುದ್ನಾಳ ಅವರು ತುಂಬಾ ಮುತ್ಸದ್ದಿಗಳು ಬುದ್ಧಿವಂತರು ಕುಶಲ ಮತಿಗಳು ಅಷ್ಟೇ ಹಟವಾದಿಗಳು. ಅವರನ್ನು ಚನ್ನಾಗಿ ಪಳಗಿಸಬೇಕೆಂಬ ಬಲವಾದ ಬಯಕೆ ವಿದ್ಯಾಧರ ಗುರೂಜಿ ಅವರಲ್ಲಿತ್ತು. ಅದಕ್ಕಾಗಿ ಗುರೂಜಿ ಅವರು ಎಂತಹ ತ್ಯಾಗಕ್ಕೂ ಸಿದ್ಧರಾದರು.

ಅದು 1961ನೆಯ ಇಸವಿ. 1962ರಲ್ಲಿ ಬರುವ ಮಹಾ ಚುನಾವಣೆಯ ಸಿದ್ಧತೆಯ ಕಾಲ. ಆಯಾಯ ಪಕ್ಷದ ಮುಖಂಡರು ತಮ್ಮ ತಮ್ಮ ಪಕ್ಷಗಳ

ಸಿದ್ಧಾಂತವನ್ನು ಮುಂದಿಟ್ಟುಕೊಂಡು ಚರ್ಚಿಸುವ ಕಾಲ ಅದಾಗಿತ್ತು. ನೊಗ ಹೊತ್ತು ಜೋಡೆತ್ತಿನ ಕಾಂಗ್ರೆಸ್ ಪಕ್ಷವನ್ನು ಎದುರಿಸಿ ಸೋಲಿಸುವ ಹುನ್ನಾರ ಹೊತ್ತ ಚಕ್ರವರ್ತಿ ರಾಜಗೋಪಾಲಚಾರಿ ಅವರು ಹೊಸದಾಗಿ ಕಟ್ಟಿದ ಸ್ವತಂತ್ರ ಪಕ್ಷ, ಲೋಕಸೇವಕ ಸಂಘ, ಕಮ್ಯುನಿಸ್ಟ್ ಪಕ್ಷ ವೈಯಕ್ತಿಕ ಬಲದ ಮೇಲೆ ನಿಂತು ಆರಿಸಿ ಬರುವ ಸ್ವತಂತ್ರ ಅಭ್ಯರ್ಥಿಗಳು ಅಂದಿನ ರಾಜಕೀಯ ವಿದ್ಯಮಾನಗಳನ್ನು ಕುರಿತು ಚರ್ಚಿಸತೊಡಗಿದರು. ದೇಶಕ್ಕೆ ಸ್ವಾತಂತ್ರ್ಯ ಬಂದು 15 ವರ್ಷಗಳಾಗಿದ್ದರೂ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ ಎಂಬ ಅರಿವು ಜನಸಾಮಾನ್ಯರಲ್ಲಿ ಮೂಡಿದ್ದಿಲ್ಲ. ನೆಹರೂಜಿ ಅವರು ರೂಪಿಸಿದ ಪಂಚವಾರ್ಷಿಕ ಯೋಜನೆಗಳು ರಾಜ್ಯ ಮಟ್ಟದಲ್ಲಿಯೇ ಹೊಸೆದಾಡುತ್ತಿದ್ದವು. ವಿನೋಬಾ ಭಾವೆಯರ ಕನಸಿನ ಕೂಸು ಭೂದಾನ ಯಜ್ಞ ಪರಿಣಾಮಕಾರಿ ಯಾಗಿ ಜಾರಿಯಾಗಿರಲಿಲ್ಲ. ಬಡವರು ಮತ್ತಷ್ಟು ಬಡವರಾಗಿ ನರಳ ತೊಡಗಿದ್ದರು. ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಾ ಇನ್ನೂ ಬೆಳೆಯತೊಡಗಿದ್ದರು. ಕಲಬೆರಕೆಯ ಕಾಳಸಂತೆ ತನ್ನ ಅಟ್ಟಹಾಸ ನಡೆಸಿತ್ತು. ಅಂದಿನ ರಾಜಕೀಯ ಮುಖಂಡರು ಜನಮುಖಿಯಾಗಿರಲಿಲ್ಲ. ಅವರಿಗೆ ನೆಲ, ಜಲದ ಬಗ್ಗೆ ಅರಿವೇ ಇರಲಿಲ್ಲ. ತಮ್ಮ ತೋಳ್ಬಲದ ಮೇಲೆ ಚುನಾವಣೆಯ ಕಣಕ್ಕಿಳಿದು ಜನ ಸಾಮಾನ್ಯರಿಗೆ ಸುಳ್ಳು ಆಶ್ವಾಸನೆ ಕೊಟ್ಟು ಆರಿಸಿ ಬರುತ್ತಿದ್ದರು. ಅದೇ ಪದ್ಧತಿ ಇವತ್ತಿಗೂ ಮುಂದುವರಿದಿದೆ. ಆರಿಸಿ ಬಂದ ಮೇಲೆ ತಾವು ಆರಿಸಿ ಬಂದ ಮತಕ್ಷೇತ್ರದ ಅಭಿವೃದ್ಧಿಯು ಇವರ ಗಮನದಲ್ಲಿರಲಿಲ್ಲ. ಇಂದಿಗೂ ಸಮಾಜದಲ್ಲಿ ಬೇರುಬಿಟ್ಟಿದ್ದ 'ಜೀತ ಪದ್ಧತಿ' ಈ ಪರಂಪರೆ ಹಾಗೆ ಉಳಿದುಕೊಂಡು ಬಂದಿತ್ತು.

ಸಮಾಜದಲ್ಲಿ ಬೇರುಬಿಟ್ಟಿದ್ದ 'ಜೀತ ಪದ್ಧತಿ', 'ಸಾಲಶೂಲ', 'ಮಲ ಹೊರುವ ಪದ್ಧತಿ', 'ಜಾತಿಯ ಸಂಘರ್ಷಣೆ', 'ಮೇಲು–ಕೀಳು' ತನಗಳು ಇನ್ನಷ್ಟು ಬಲಪಟ್ಟಿದ್ದವು. ಅನಕ್ಷರತೆ 'ಜಾತಿ ರಾಜಕಾರಣ' ತಾಂಡವ ನೃತ್ಯ ನಡೆಸಿದ್ದವು. ರೈತಾಪಿ ಜನರು ಆತ್ಮಹತ್ಯೆ ದಾರಿ ಹಿಡಿದಿದ್ದರು. ವೇಶ್ಯಾ ಪದ್ಧತಿ ಉಳಿದುಕೊಂಡು ಬೆಳೆದುಕೊಂಡು ಬರುತ್ತಲಿತ್ತು. ಕಡ್ಡಾಯ ಶಿಕ್ಷಣ ಜಾರಿಯಲ್ಲಿದ್ದರೂ ಬಡ ಹಿಂದುಳಿದ ವರ್ಗಗಳ ಮಕ್ಕಳು, ಕೂಲಿ ಕಾರ್ಮಿಕರ ಮಕ್ಕಳು, ತಿಪ್ಪಿ ತಿಪ್ಪಿ ಅಲೆದು ಚಿಂದಿ ಆಯುವ ಮಕ್ಕಳು, ಅಲೆಮಾರಿ ಜನಾಂಗದ ಮಕ್ಕಳು, ಅಂಗವಿಕಲ ಮಕ್ಕಳು ಶಿಕ್ಷಣದಿಂದ ವಂಚಿತರಾಗಿ

ದೂರ ಉಳಿದಿದ್ದರು. ಸಮಾಜದಲ್ಲಿ ಬೇರುಬಿಟ್ಟಿದ್ದ ಈ ದಾರುಣ ಸ್ಥಿತಿಯನ್ನು ನೆನೆದು ವಿದ್ಯಾಧರ ಗುರೂಜಿ ಅವರು ಈ ಎಲ್ಲ ಅನಿಷ್ಟಪದ್ಧತಿಯನ್ನು ಹೊಡೆದೋಡಿಸಲು ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತಿದ್ದರು. ಈ ಎಲ್ಲ ವಿಷಯಗಳ ಪಟ್ಟಿ ಮಾಡಿ ತಮ್ಮ ಸ್ನೇಹಿತರೊಡನೆ ಸಮಾಲೋಚಿಸುತ್ತಿದ್ದರು.

ಗುರೂಜಿಯವರ ಉದಾತ್ತ ವಿಚಾರಗಳನ್ನು ಆದರ್ಶ ವ್ಯಕ್ತಿತ್ವ ಜನಪರ ಕಾಳಜಿಗಳನ್ನು ಅರಿತು ವಿಶ್ವನಾಥ ರೆಡ್ಡಿ ಮುದ್ನಾಳ ಅವರು ವಿದ್ಯಾಧರ ಗುರೂಜಿ ಅವರನ್ನು ಬಹಳ ಗೌರವದಿಂದ ಕಾಣತೊಡಗಿದರು. 1957ರಲ್ಲಿ ನಡೆದ ಎರಡನೆಯ ಮಹಾಚುನಾವಣೆಯಲ್ಲಿ ಸೇಡಂ ಮತ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಕೋಲೂರು ಮಲ್ಲಪ್ಪನವರನ್ನು ಎದುರಿಸಿ ಸೋತಿದ್ದ ವಿಶ್ವನಾಥ ರೆಡ್ಡಿ ಮುದ್ನಾಳ ಅವರ ಮನದ ನೋವು ಅವರನ್ನು ಒಂದೇ ಸಮನೆ ಕಾಡುತ್ತಿತ್ತು. ಈ ನೋವನ್ನು ಅರಿತ ವಿದ್ಯಾಧರ ಗುರೂಜಿ ಅವರು ವಿಶ್ವನಾಥ ರೆಡ್ಡಿ ಮುದ್ನಾಳ ಅವರನ್ನು ಕುರಿತು 'ರೆಡ್ಡಿ ಸಾಹೇಬರೆ 1962ರಲ್ಲಿ ಮೂರನೆಯ ಮಹಾ ಚುನಾವಣೆ ಹಣಿಕೆ ಹಾಕುತ್ತಲಿದೆ. ಈ ಸಲ ನಿಮ್ಮ ಗೆಲವು ಕಟ್ಟಿಟ್ಟ ಬುತ್ತಿ. ನೀವು ಚುನಾವಣೆಯ ತಯಾರಿಯಲ್ಲಿರಬೇಕೆಂದು' ಮೂರ್ತಿ ಅವರು ವಿದ್ಯಾಧರ ಗುರೂಜಿ ಅವರು ಕೂಡಿಯೇ ಒಂದೇ ಧ್ವನಿಯಲ್ಲಿ ಹೇಳುತ್ತಿದ್ದರು. ಇವರಿಬ್ಬರ ಮಾತಿಗೆ ವಿಶ್ವನಾಥ ರೆಡ್ಡಿ ಮುದ್ನಾಳ ಅವರು ಹರ್ಷವನ್ನಾಗಿಲಿ ಆನಂದವನ್ನಾಗಲಿ ವ್ಯಕ್ತಪಡಿಸದೆ ಆ ದಿನಗಳು ಬರಲಿ ಎಂದು ಹೇಳುತ್ತಿದ್ದರು. ಆಗ ವಿಶ್ವನಾಥ ರೆಡ್ಡಿ ಮುದ್ನಾಳ ಅವರ ಮನಸ್ಸಿನಲ್ಲಿದ್ದ ಒಂದು ಮಾತೆಂದರೆ ಈ ಸಲ ಕೋಲೂರ ಮಲ್ಲಪ್ಪನವರನ್ನು ಸೋಲಿಸಿಯೇ ಬಿಡಬೇಕು ಎಂಬ ಹಟ ಅವರ ಮನವನ್ನು ಕಾಡುತ್ತಿತ್ತು. ಈ ಮಾತು ಅವರು ಬಹಿರಂಗವಾಗಿ ವ್ಯಕ್ತಪಡಿಸದಿದ್ದರೂ ಅವರ ಮನಸ್ಸಿನಲ್ಲಿದ್ದ ಈ 'ಜಿದ್ದು' 'ಹಟ' ಎಲ್ಲರಿಗೂ ಗೊತ್ತಿತ್ತು. ಈ ಸಲ ತಾವು ಚುನಾವಣೆಯ ಕಣಕ್ಕೆ ಇಳಿಯಬಾರದು. ಕಾಂಗ್ರೆಸ್ ಅಭ್ಯರ್ಥಿ ಕೋಲೂರು ಮಲ್ಲಪ್ಪ ಅವರ ಪ್ರತಿಸ್ಪರ್ಧಿಯನ್ನು ಆಯ್ಕೆ ಮಾಡಿ ಚುನಾವಣೆಯ ಕಣಕ್ಕಿಳಿಸಿ ಕೋಲೂರು ಮಲ್ಲಪ್ಪನವರನ್ನು ಸೋಲಿಸಬೇಕು ಎಂದು ಮನದಲ್ಲಿ ಮಂಡಿಗೆ ತಿನ್ನುತ್ತಿದ್ದರು.

ಕಾಂಗ್ರೆಸ್ ಅಭ್ಯರ್ಥಿ ಕೋಲೂರ ಮಲ್ಲಪ್ಪನವರ ವಿರುದ್ಧ ತಾವು ನಿಂತರೂ ಸರಿ. ಪ್ರತಿಸ್ಪರ್ಧಿಯನ್ನು ಆಯ್ಕೆಮಾಡಿ ಕಣಕ್ಕಿಳಿಸಿದರೂ ಸರಿ. ನಾವು ವಿಶ್ವನಾಥ

ರೆಡ್ಡಿ ಮುದ್ನಾಳ ಅವರ ಬೆಂಬಲಕ್ಕೆ ನಿಂತು ಈ ಸಲ ಕೋಲೂರು ಮಲ್ಲಪ್ಪನವರನ್ನು ಸೋಲಿಸುವುದು ಖಚಿತವೆಂದು ವಿದ್ಯಾಧರ ಗುರೂಜಿ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರು. ಕೆಲವರು ಗುರೂಜಿ, ಈ ಸಲ ನೀವೇ ಗುರುಮಠಕಲ್ಲ ಮತಕ್ಷೇತ್ರದಿಂದ ಸ್ಪರ್ಧಿಸಿದರೆ ಹೇಗಾಗುತ್ತದೆ ಎಂದು ಪ್ರಶ್ನಿಸಿದರೆ ಅದಕ್ಕೆ ಗುರೂಜಿ ಅವರು ಇನ್ನು ನಾನು ಚುನಾವಣೆಯ ಕಣಕ್ಕೆ ಇಳಿಯುವುದಿಲ್ಲ. ವಿಶ್ವನಾಥ ರೆಡ್ಡಿ ಮುದ್ನಾಳ ಅವರ ಬೆಂಬಲಕ್ಕೆ ನಿಂತು ಸಮಾಜ ಸೇವೆಯಲ್ಲಿ ನಿರತನಾಗುತ್ತೇನೆ ಎಂದು ಸ್ಪಷ್ಟವಾಗಿ ಹೇಳುತ್ತಿದ್ದರು.

ನಿಜವಾಗಿ ವಿದ್ಯಾಧರ ಗುರೂಜಿ ಅವರು 1962ರಲ್ಲಿ ನಡೆಯುವ ಮೂರನೆಯ ಮಹಾ ಚುನಾವಣೆ ಕಣಕ್ಕಿಳಿಯುವ ಮನಸ್ಸು ಮಾಡಿದವರಲ್ಲ. ಅದರಲ್ಲಿಯೂ ಗುರುಮಠಕಲ್ಲ ಮತಕ್ಷೇತ್ರದ ಈರ್ಷೆ, ಅಸೂಯೆಗಳ ದಟ್ಟ ಹೊಗೆಯಿಂದ ಮುಚ್ಚಿಕೊಂಡಿತ್ತು. ಕೀರ್ತಿ, ಪ್ರತಿಷ್ಠೆಗಳ ಪ್ರಲೋಭನೆಯಲ್ಲಿ ಕೊಚ್ಚಿಕೊಂಡುಹೋಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಯಾರು ಚುನಾವಣೆಯ ಕಣಕ್ಕಿಳಿದರೂ ಗೆದ್ದು ಬರುವ ಅಭ್ಯರ್ಥಿ ಇನ್ನೊಮ್ಮೆ ಹುಟ್ಟಿ ಬಂತಂತೆಯೇ ಸರಿ ಎಂಬ ಜನಸಾಮಾನ್ಯರ ಮಾತು ಮನೆಮಾತಾಗಿತ್ತು. ಮನೆಯಲ್ಲಿ ಗುರೂಜಿ ಅವರ ಧರ್ಮಪತ್ನಿ ಸವಿತಾ ದೇವಿ ಅವರು ಗುರೂಜಿ ಅವರ ಬೆಂಬಲಕ್ಕೆ ನಿಂತು ರಾಜಕೀಯ ವಿದ್ಯಮಾನವನ್ನು ವೀಕ್ಷಿಸುತ್ತಿದ್ದರು. ಸವಿತಾ ದೇವಿ ಅವರ ಒಂದು ಕಣ್ಣು ತಾವು ಓದಿಸುವ ಶಾಲೆಯ ಮಕ್ಕಳ ಕಡೆಗೆ, ಇನ್ನೊಂದು ಕಣ್ಣು ವಿದ್ಯಾಧರ ಗುರೂಜಿಯವರ ಮೇಲೆ. ಅವರ ಮನಸ್ಸೆಲ್ಲ ತಮ್ಮ ಅಧ್ಯಯನದ ಕಡೆಗೆ. ಇಬ್ಬರ ದೃಷ್ಟಿಯೂ ಮನೆ, ಮಕ್ಕಳ ಕಡೆಗೂ ಇತ್ತು. ಆದರೂ ಆದರ್ಶ ಗೃಹಿಣಿ, ದಕ್ಷ ಶಿಕ್ಷಕರಾದ ಸವಿತಾ ದೇವಿಯರು ಸುತ್ತು ಹತ್ತೂ ಕಡೆ ಕಣ್ಣು ಹಾಕಿ ಶಾಲೆ, ಮನೆ, ಮಕ್ಕಳು, ದೇಶಭಕ್ತ ಪತಿಯ ಕಡೆಗೂ ಲಕ್ಷ್ಯಕೊಟ್ಟು ಮನೆತನದ ನೆಮ್ಮದಿಯನ್ನು ಕಾಪಾಡಿಕೊಂಡು ಬರುತ್ತಿದ್ದರು. ತಮಗೆ ಬಿಡುವು ಸಿಕ್ಕಾಗ 'ಗಾಂಧಿ ಜನರಲ್ ಹಾಸ್ಟೆಲ್' ಕಡೆಗೂ ಬಂದು ಅಲ್ಲಿಯ ಮಕ್ಕಳ ಊಟ, ಉಪಹಾರ, ಉಡುಗೆ, ತೊಡುಗೆ ಅವರ ವಿದ್ಯಾಭ್ಯಾಸದ ಕಡೆ ಗಮನ ಹರಿಸಿ ಅವರೊಡನೆ ಮಾತಾಡಿ ಹೋಗುವ ವಾಡಿಕೆ ಇಟ್ಟುಕೊಂಡಿದ್ದರು. ಆ ಪ್ರಕಾರ ಬಿಡುವು ಸಿಕ್ಕಾಗ ಬಂದು ಹೋಗುತ್ತಿದ್ದರು. ಹೀಗೆ ಸವಿತಾದೇವಿ ಅವರು ವಿದ್ಯಾಧರ ಗುರೂಜಿ ಅವರು

ಸಮಾಜ, ಶಿಕ್ಷಣ ಸೇವೆಯ್ಲಲಿಯೇ ಸಂತೋಷ ಪಡುತ್ತಿದ್ದರೂ ರಾಜಕೀಯ ಕ್ಷೇತ್ರ ಅವರನ್ನು ಇನ್ನಷ್ಟು ಎಳೆದು ತರುವ ಪ್ರಯತ್ನ ಮಾಡುತ್ತಿತ್ತು. ತುಂಬ ಗಟ್ಟಿಗರಾದ ಈ ದಂಪತಿಗಳು ಎಲ್ಲ ಕಡೆಗೂ ಇರುತ್ತಿದ್ದರು ದಕ್ಷತೆ, ಪ್ರಾಮಾಣಿಕತೆ, ಸರಳ ಸಜ್ಜನಿಕೆ ಮುಂತಾದ ಸದ್ಗುಣಗಳು ಅವರನ್ನು ಕೈ ಹಿಡಿದು ಮುನ್ನಡೆಸುತ್ತಿದ್ದವು.

ಒಲಿದು ಬಂದಿತು ಗುರುಮಠಕಲ್ಲ ಚುನಾವಣೆಯ ಕಣ

1962 ಜನವರಿ 14 ರಂದು ಪೂಜ್ಯಶ್ರೀ ಬಂಥನಾಳ ಸಂಗನ ಬಸವ ಶಿವಯೋಗಿಗಳು ರಾಯಚೂರು ಜಿಲ್ಲೆ ಕೃಷ್ಣಾನದಿ ತೀರದಲ್ಲಿ ದುಷ್ಟ ಶಕ್ತಿಗಳ ನಿವಾರಣೆಗಾಗಿ ಪಂಚಕೋಟಿ ಜಪಾನುಷ್ಠಾನ ಕಾರ್ಯವನ್ನು ಹಮ್ಮಿಕೊಂಡಿದ್ದರು. ಈ ಜಪಾನುಷ್ಠಾನ ಕಾರ್ಯಕ್ರಮದ ಯಶಸ್ವಿಗಾಗಿ ಒಂದು ಸಮಿತಿ ರಚನೆ ಆಯಿತು. ಈ ಸಮಿತಿಗೆ ಅಧ್ಯಕ್ಷರೆಂದು ವಿಶ್ವನಾಥ ರೆಡ್ಡಿ ಮುದ್ನಾಳ ಅವರನ್ನು ಆಯ್ಕೆ ಮಾಡಲಾಯಿತು. ರಾಯಚೂರು ಜಿಲ್ಲೆಯ ಈ ಕೃಷ್ಣಾ ತೀರಕ್ಕೆ ಹೊಂದಿಕೊಂಡ ಗುರುಮಠಕಲ್ಲ ಪ್ರದೇಶವಿತ್ತು. ಅತ್ಯಂತ ಭವ್ಯವಾದ ಈ ಜಪಾನುಷ್ಠಾನ ಕಾರ್ಯಕ್ರಮಕ್ಕೆ ಗುರುಮಠಕಲ್ಲ ಪರಿಸರದ ಜನರು ಭಾರಿ ಪ್ರಮಾಣದಲ್ಲಿ ಆಗಮಿಸಿದ್ದರು. ತಲೆಗೆ ಬಿಳಿಯ ವಸ್ತ್ರ ಕಟ್ಟಿಕೊಂಡು ಸಮಾರಂಭದ ಯಶಸ್ಸಿಗೆ ಒಂದೇ ಸವನೆ ಓಡಾಡುತ್ತಿದ್ದ ವಿಶ್ವನಾಥ ರೆಡ್ಡಿ ಮುದ್ನಾಳ ಅವರನ್ನು ನೋಡಿ ಮುಂದೆ ಬರುವ ಮೂರನೆಯ ಮಹಾ ಚುನಾವಣೆಯ



ಗುರುಮಠಕಲ್ಲ ಮತಕ್ಷೇತ್ರದ ಅಭ್ಯರ್ಥಿ ಇವರೆಂದು ಅಲ್ಲಿಯ ಜನರು ಇವರ ಹತ್ತಿರ ಬಂದು ಒಳ್ಳೆಯ ಗೌರವದಿಂದ ಕಂಡು ಪ್ರೀತಿಯಿಂದ ಮಾತಾಡಿಸ ತೊಡಗಿದರು. ಕೆಲವೇ ಗಂಟೆಗಳಲ್ಲಿ ವಿಶ್ವನಾಥ ರೆಡ್ಡಿ ಮುದ್ನಾಳ ಅವರ ಪ್ರಭಾವ ಮಿಂಚಿನಂತೆ ಸಂಚಾರವಾಗಿ ಜನಾಕರ್ಷಣೆಯನ್ನು ಪಡೆಯಿತು. ಈ ಸಲ ನೀವೇ ಗುರುಮಠಕಲ್ಲ ಮತಕ್ಷೇತ್ರ ಅಭ್ಯರ್ಥಿಯಾಗಬೇಕೆಂದು ಒಕ್ಕೊರಲಿನ ಕರೆಯೂ ಬಂದಿತು. ಜನರ ಅಭಿಪ್ರಾಯಕ್ಕೆ ವಿಶ್ವನಾಥ ರೆಡ್ಡಿ ಮುದ್ನಾಳ ಅವರ ಬಾಯಲ್ಲಿ ನೀರೂರಿತು. ಆದರೂ ವಿಶ್ವನಾಥ ರೆಡ್ಡಿ ಮುದ್ನಾಳ ಅವರು ಚುನಾವಣೆಯ ಕಣಕ್ಕೆ ಇಳಿಯಲು ಬರುವಂತಿರಲಿಲ್ಲ. ಕಾರಣ ಅವರ ತಂದೆಯವರು ಲಿಂಗೈಕ್ಯರಾಗುವ ಸಮಯದಲ್ಲಿ ಮೃತ್ಯುಪತ್ರದ ಒಕ್ಕಣೆ ಅವರ ಕೈಕಟ್ಟಿದಂತಾಗಿತ್ತು. ಆ ಒಕ್ಕಣೆ ಹೀಗಿತ್ತು. "ಮುಂದೆ ಬರುವ ಚುನಾವಣೆಯಲ್ಲಿ ವಿಶ್ವನಾಥ ರೆಡ್ಡಿ ಮುದ್ನಾಳ ನಿಲ್ಲಬಾರದು. ಏಕೆಂದರೆ ಈತ ತುಂಬ ಹಠವಾದಿ ಮನುಷ್ಯ. ಹಣ ಹಾಳು ಮಾಡುತ್ತಾನೆ, ಮನೆಯ ಕಡೆ ಈತನ ಲಕ್ಷ್ಯವೇ ಇರುವುದಿಲ್ಲ" ಎಂದು ಬರೆದ ಉಯಿಲಿನ ಒಕ್ಕಣೆ ಅವರ ಹೃದಯದಲ್ಲಿ ಒಂದೇ ಸವನೆ ಕಟೆಯುತ್ತಿತ್ತು.

ಮುದ್ನಾಳ ಅವರ ತಂದೆಯುವರ ಅಭಿಪ್ರಾಯದಂತೆ ತಾವು ಚುನಾವಣೆಯ ಕಣಕ್ಕೆ ಇಳಿಯಬಾರದೆಂದು ನಿರ್ಧರಿಸಿದ್ದರು. ಯಾದಗಿರಿಗೆ ಮತಕ್ಷೇತ್ರಕ್ಕೆ ವಿಶ್ವನಾಥ ರೆಡ್ಡಿ ಮುದ್ನಾಳ ಅವರ ಸಹೋದರ ಭೀಮರೆಡ್ಡಿ ಮುದ್ನಾಳ ಇಲ್ಲವೆ ಅವರ ಸೋದರ ಮಾವನ ಮಗ ಪಂಪಾಪತಿರೆಡ್ಡಿ ಅವರನ್ನು ನಿಲ್ಲಿಸಲು ಪ್ರಕಟಣೆಯ ಮೂಲಕ ತಿಳಿಸಿದರು. ಅದೂ ಸಹ ಕೂಡಿಬರಲಿಲ್ಲ. ಕೊನೆಗೆ ಒಂದು ಸಭೆ ಕರೆದು ರಾಯಚೂರಿನ ಡಾ. ಭೋಜರಾಜರನ್ನು ನಿಲ್ಲಿಸಬೇಕೆಂದು ನಿರ್ಧಾರ ತೆಗೆದುಕೊಳ್ಳಲಾಯಿತು. ಇನ್ನು ಗುರುಮಠಕಲ್ಲ ಮತಕ್ಷೇತ್ರಕ್ಕೆ ಕೋಲೂರ ಮಲ್ಲಪ್ಪನವರ ಎದುರಾಳಿಯಾಗಿ ವಿದ್ಯಾಧರ ಗುರೂಜಿ ಅವರನ್ನು ನಿಲ್ಲಿಸಲು ಗುರೂಜಿ ಅವರನ್ನು ವಿಚಾರಿಸಿದರು. ಆಗ ಗುರೂಜಿ ಅವರು ನನ್ನ ಹತ್ತಿರ ಹಣ ಬಲ ಇಲ್ಲ, ಪ್ರಚಾರ ಕಾರ್ಯಕ್ಕೆ ವಾಹನಗಳ ಸೌಕರ್ಯವಿಲ್ಲ ಬರಿಗೈಯಿಂದ ಈ ಚುನಾವಣೆಯಲ್ಲಿ ಗೆದ್ದು ಬರುವುದು ಸಾಧ್ಯವಿಲ್ಲ. ರೆಡ್ಡಿ ಅವರೆ ಈ ಸಲ ನೀವೇ ನಿಲ್ಲಬೇಕು. ಆರಿಸಿ ತರುವ ಹೊಣೆ ಕಾರ್ಯಕರ್ತರಾದ ನಮ್ಮ ಮೇಲೆ ಬಿಡಬೇಕು ಎಂದು ವಿದ್ಯಾಧರ ಗುರೂಜಿ ಅವರು ಸ್ಪಷ್ಟವಾಗಿ

ಹೇಳಿದರು. ನಮ್ಮ ತಂದೆಯವರ ಮಾತು ಮೀರಬಾರದೆಂದು ನನ್ನ ಮನಸ್ಸು ಹೇಳುತ್ತದೆ. ಈ ಸಲ ನೀವು ನಿಲ್ಲಿರಿ. ಚುನಾವಣೆಯ ಖರ್ಚು ವಾಹನ ಸೌಕರ್ಯ ನನಗೆ ಬಿಡಿರಿ ಎಂದು ಗಟ್ಟಿಯಾಗಿ ಹೇಳಿದರು ವಿಶ್ವನಾಥ ರೆಡ್ಡಿ ಮುದ್ನಾಳ ಅವರು.

ವಿಶ್ವನಾಥ ರೆಡ್ಡಿ ಮುದ್ನಾಳ ಅವರ ಅಭಿಪ್ರಾಯದಂತೆ 1962ರ ಮಹಾಚುನಾವಣೆಯ ಕಣಕ್ಕಿಳಿದು ಗುರುಮಠಕಲ್ಲ ಮತಕ್ಷೇತ್ರದಿಂದ ಸ್ವತಂತ್ರ ಪಾರ್ಟಿಯ ಅಧಿಕೃತ ಅಭ್ಯರ್ಥಿಯೆಂದು ಕಾಂಗ್ರೆಸ್ ಪಕ್ಷದ ಕೋಲೂರು ಮಲ್ಲಪ್ಪನವರನ್ನು ವಿದ್ಯಾಧರ ಗುರೂಜಿ ಅವರು ಎದುರಿಸಿದರು.

ವಿದ್ಯಾಧರ ಗುರೂಜಿ, ಕೋಲೂರು ಮಲ್ಲಪ್ಪನವರು ಇಬ್ಬರೂ ಸಮ ವಯಸ್ಕರು. ಇಬ್ಬರೂ ಸ್ವಾತಂತ್ರ್ಯ ಹೋರಾಟಗಾರರು. ಇಬ್ಬರೂ ಮೊದಲು ಕಾಂಗ್ರೆಸ್ಸಿನಲ್ಲಿದ್ದು ಸೇವೆ ಸಲ್ಲಿಸಿದವರು. ಇಬ್ಬರೂ ಹಿಂದುಳಿದ ವರ್ಗಕ್ಕೆ ಸೇರಿದವರು. ಇಬ್ಬರೂ ಮುತ್ಸದ್ದಿಗಳು. ಇಬ್ಬರೂ ರಾಜನೀತಿಜ್ಞರು.

ಕೋಲೂರು ಮಲ್ಲಪ್ಪನವರು ಧನ ಬಲವುಳ್ಳವರು. ವಾಹನಗಳ ಸೌಕರ್ಯವೂ ಸಾಕಷ್ಟು ಇತ್ತು. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ನೊಗಹೊತ್ತ ಜೋಡೆತ್ತಿನ ಗುರುತಿನ ಚಿನ್ಹೆ ಜನರಿಗೆ ಚಿರಪರಿಚಿತವಾಗಿತ್ತು. ಕಾಂಗ್ರೆಸ್ಸಿನಲ್ಲಿದ್ದ ಅತಿರಥ ಮಹಾರಥರ ಬೆಂಬಲವೂ ಇತ್ತು. ಸಾಲದ್ದಕ್ಕೆ ಆಳುವ ಪಕ್ಷ ಕಾಂಗ್ರೆಸ್ಸೇ ಆಗಿತ್ತು. ಇದರಿಂದ ಕೋಲೂರು ಮಲ್ಲಪ್ಪನವರಿಗೆ ತಮ್ಮ ಎಣಿಕೆ, ಬಯಕೆಯಂತೆ ಗೆಲುವು ಖಚಿತವಾಗಿತ್ತು.

ಹೊಸದಾಗಿ ಸ್ಥಾಪನೆಗೊಂಡ ಚಕ್ರವರ್ತಿ ರಾಜಗೋಪಾಲಚಾರಿ ಅವರ ಸ್ವತಂತ್ರಪಕ್ಷದ ಗುರುತಿನ ಚಿನ್ಹೆ ಜನರಿಗೆ ಪರಿಚಯವಿರಲಿಲ್ಲ. ಗುರೂಜಿ ಅವರು ಹಣಬಲವನ್ನು ಪಡೆದಿರಲಿಲ್ಲ. ವಾಹನ ಸೌಕರ್ಯ ಅವನ್ನು ಹೊಂದಿದವರಲ್ಲ. ವಿಶ್ವನಾಥ ರೆಡ್ಡಿ ಮುದ್ನಾಳ ಅವರ ಬೆಂಬಲವೇ ಬೆಂಬಲ. ವಿದ್ಯಾಧರ ಗುರೂಜಿ ಅವರು ಕೇವಲ ಬಡವರ, ಅನಕ್ಷರಸ್ಥರ, ಅನಾಥರ, ವಿಧವೆಯರ, ದೇವದಾಸಿಯರ, ಅಂಗವಿಕಲ, ಕೈವಾರಿಯಾಗಿ ಅವರ ಸೇವೆಗೈದವರು. ದೊಡ್ಡ ದೊಡ್ಡ ಶ್ರೀಮಂತರು, ವ್ಯಾಪಾರಸ್ಥರು, ಸರಕಾರಿ ನೌಕರರು ಯಾರ ಪಕ್ಷಕ್ಕೆ ಒಲಿದು ಬರುತ್ತಾರೋ ಊಹಿಸುವುದು ತೀರಾ ಕಷ್ಟದ ಕೆಲಸ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅತ್ಯಂತ ಗಟ್ಟಿ ಧೈರ್ಯ

ಮಾಡಿ ತಾಯಿ ಭುವನೇಶ್ವರಿಯನ್ನು ಹೃದಯ ತುಂಬಿ ಸ್ಮರಿಸಿ ಸ್ವತಂತ್ರ ಪಕ್ಷದ ಅಭ್ಯರ್ಥಿಯಾಗಿ ಗುರುಮಠಕಲ್ಲ ಮತಕ್ಷೇತ್ರದ ಅಭ್ಯರ್ಥಿಯಾಗಿ ಚುನಾವಣೆಯ ಕಣಕ್ಕಿಳಿದರು. ದಿಗ್ಗಜಗಳಿಬ್ಬರ ಸ್ಪರ್ಧೆಯಿಂದ ಗುರುಮಠಕಲ್ಲ ಮತಕ್ಷೇತ್ರ ಕಾಯ್ದು ಹಂಚಿನಂತಾಯಿತು.

ವಿದ್ಯಾರ್ಥಿ ದಿಸೆಯಲ್ಲಿಯೇ ಉಟ್ಟಬಟ್ಟೆಯ ಮೇಲೆ ಮನೆ ಬಿಟ್ಟು ಬಂದು ಸ್ವಾತಂತ್ರ್ಯ ಹೋರಾಟದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡ ಭಿಕ್ಷಪ್ಪನಿಗೆ ಆರ್ಯಸಮಾಜದ ಪ್ರಚಾರಕರಾಗಿ ಆಗಮಿಸಿದ ಸ್ವಾಮಿ ರಾಮಗಿರಿಜಿ ಅರು ದೊರಕಿರುವುದು ಒಂದು ಯೋಗಾಯೋಗ. ಗಿರಿಜಿ ಅವರು ಇವರನ್ನು ಇನ್ನೂ ಅಡಿಯ ಮುಂದಡಿ ಇಟ್ಟು ಮುನ್ನುಗ್ಗಲು ಪ್ರೋತ್ಸಾಹ ಕೊಟ್ಟರು. ಅವರು ತಮ್ಮ ಮಾತುಗಳಿಂದ ಹುರಿದುಂಬಿಸಿ ಇವರಿಗೆ ಆರ್ಯಸಮಾಜದ ಪ್ರಣಾಳಿಕೆಯನ್ನು ತಿಳಿಸಿಕೊಟ್ಟು ಅಪ್ಪಟ ದೇಶಭಕ್ತರನ್ನಾಗಿ ಪರಿವರ್ತಿಸಿ 'ವಿದ್ಯಾಧರ' ಎಂದು ಬಾಯ್ತುಂಬ ಕರೆದರು. ಚಿಗುರುಮೀಸೆಯ ಬಗರು ಹರೆಯದ ವಿದ್ಯಾಧರ ಅಪ್ಪಟ ದೇಶಭಕ್ತರಾಗಿ ಕಂಗೊಳಿಸತೊಡಗಿದರು. ವಿದ್ಯಾಧರ ಅವರಿಗೆ ಮೊದಲು ದೊರಕಿದ ದೊಡ್ಡ ಆಸ್ತಿ ರಾಜಕೀಯ ಗುರು ಲಾಹೋರದ ಆರ್ಯಸಮಾಜದ ಪ್ರಚಾರಕ ಸ್ವಾಮಿ ರಾಮಗಿರಿಜಿ.


ದೇಶದ ಸ್ವಾತಂತ್ರ್ಯಕ್ಕಾಗಿ ಹೈದರಾಬಾದ್ ಸಂಸ್ಥಾನ ವಿಮೋಚನೆಗಾಗಿ ಮನೆ ಮಾರು ಬಿಟ್ಟು ತಾಯಿ ತಂದೆಗಳನ್ನು ಮರೆತು ಹೊರಬಂದ ಅಸಂಖ್ಯಾತ ಭಾರತೀಯರ ಕಷ್ಟ ಸಹಿಷ್ಣುತೆ, ತ್ಯಾಗ ಬಲಿದಾನದಿಂದ ದೇಶಕ್ಕೆ ಸ್ವಾತಂತ್ರ್ಯ ಲಭಿಸಿತು. ಹೈದರಾಬಾದ್ ವಿಮೋಚನೆಯೂ ಆಯಿತು. ತುಂಬು ಏರು ಜವ್ವನದಲ್ಲಿ ವಿದ್ಯಾಧರ ಗಳಿಸಿದ್ದು ಏನು? ದೇಶಕ್ಕೆ ಸ್ವಾತಂತ್ರ್ಯ, ಹೈದರಾಬಾದ್ ವಿಮೋಚನೆಗೊಳಿಸಿದ 'ಜನಪ್ರಿಯತೆ'. ಮೊದಲು ಉಟ್ಟ ಬಟ್ಟೆಯ ಮೇಲೆ ಹೊರಬಂದರು. ಇಂದೂ ಅದೇ ಉಟ್ಟಬಟ್ಟೆಯ ಮೇಲೆ ಚುನಾವಣೆಯ ಕಣಕ್ಕೆ ಇಳಿದಿದ್ದಾರೆ. ಅವರ ಹತ್ತಿರ ಇರುವ ಓಟ ಬ್ಯಾಂಕ್ ಅಂದರೆ ಗುರು ಹಿರಿಯರ ಆಶೀರ್ವಾದ, ಸ್ನೇಹಿತರ, ಹಿತೈಷಿಗಳ ಬೆಂಬಲ, ಜನರ ಒಲುಮೆ. ವಿದ್ಯಾಧರ ಗುರೂಜಿ ಅವರ ಹೋರಾಟ, ಸಾಹಸ ತ್ಯಾಗ, ನಿಷ್ಠೆ ಜನಮನದಲ್ಲಿ ಹಚ್ಚ ಹಸಿರಾಗಿತ್ತು. ದೇಶ ಸ್ವಾತಂತ್ರ್ಯ ಪಡೆದ ಮೇಲೆ ಕಾರ್ಯಕರ್ತರು ಹಳ್ಳಿಗಳಿಗೆ ಹೋಗಿ ಹಳ್ಳಿಗರ ಹಿತರಕ್ಷಣೆಗೆ ಹೋರಾಡಬೇಕೆಂದು ಹೇಳಿದ ಗಾಂಧೀಜಿ ಮಾತು ಹೂ ಆಗಿ ಅರಳಿತ್ತು. ಅಪ್ಪಟ ಗಾಂಧಿವಾದಿ, ಖಾದಿ

ದಾರಿ, ರಾಷ್ಟ್ರಭಾಷೆಯ ರೂವಾರಿ ವಿದ್ಯಾಧರ ಗುರೂಜಿ ಚುನಾವಣೆ ಕಣಕ್ಕಿಳಿಯುತ್ತಲೇ ನಮ್ಮ ಅಣ್ಣ, ನಮ್ಮ ಅಪ್ಪ, ನಮ್ಮ ಗುರೂಜಿ ಅವರು ಚುನಾವಣೆಗೆ ನಿಂತಿದ್ದಾರೆ. 'ಬಡವರ ಬಂಧು' 'ದೀನ–ದಲಿತರ' ಕೈವಾರಿ, ಸಮಾಜದ ಕಟ್ಟಕಡೆಯ ಮನುಜನ ಹಿತೈಷಿ ಚುನಾವಣೆಯ ಕಣಕ್ಕೆ ಇಳಿದಿದ್ದಾರೆ. ಅವರಿಗೆ ನಮ್ಮ ಮತ ಕೊಟ್ಟು ಅವರ ಕೈಬಲಪಡಿಸೋಣವೆಂದು ಗುರೂಜಿ ಅವರ ಹತ್ತಿರವೇ ಜನ ಹರಿದು ಬರತೊಡಗಿತು. ಗುರುಮಠಕಲ್ಲ ಮತಕ್ಷೇತ್ರಕ್ಕೆ ಗುರುಮಠಕಲ್ಲ ಮನೆಯ ಮಗನೇ ನಿಂತಿದ್ದಾನೆ. ಅವನಿಗೆ ನಮ್ಮ ಓಟು ಎಂದು ಜನರು ಪ್ರಚಾರ ಮಾಡತೊಡಗಿದರು.

ಒಂದೇ ಪಕ್ಷದಲ್ಲಿದ್ದು ಇವರು ಇಬ್ಬರೂ ಒಬ್ಬರಿಗೊಬ್ಬರು ಎದುರಾಳಿಯಾದುದು ಪರಮಾಶ್ಚರ್ಯವೆಂದು ಹೇಳಿ ನಮಗೆ ಪಕ್ಷ ಮುಖ್ಯವಲ್ಲ ವ್ಯಕ್ತಿ ಮುಖ್ಯ ಎಂದು ಎಲ್ಲ ಜನರೂ ವಿದ್ಯಾಧರ ಗುರೂಜಿ ಅವರ ಸಾಧನೆ ನೋಡಿ ಅವರಿಗೆ ಮತ ಕೊಡಲು ಮುಂದೆ ಬಂದರು. ಇವರಿಬ್ಬರೂ ಮತಕ್ಷೇತ್ರದಲ್ಲಿ ಹೋದಾಗ ಒಬ್ಬರಿಗೊಬ್ಬರು ಟೀಕೆ ಮಾಡಲಿಲ್ಲ. ಹೀಯಾಳಿಸಲಿಲ್ಲ, ಹೀನಾಯವಾಗಿ ನಡೆದುಕೊಳ್ಳಲಿಲ್ಲ. ಇವರಿಬ್ಬರೂ ತಮ್ಮ ತಮ್ಮ 'ಸಾಧನೆ'ಯನ್ನು ಜನರ ಮಧ್ಯ ಹೋಗಿ ಹಂಚಿಕೊಳ್ಳುವ ರೀತಿ ಹೃದಯಂಗಮವಾಗಿತ್ತು. ಸಾಧಕರ ಸಾಧನೆಗೆ ನಿಮ್ಮ ಮತ ಇರಲಿ ಎಂದು ಹೇಳಿ ಜನಮನವನ್ನು ಆಕರ್ಷಿಸುತ್ತಿದ್ದರು.

ಕನ್ನಡ, ಉರ್ದು, ತೆಲಗು, ಹಿಂದಿ ಭಾಷೆಯಲ್ಲಿ ಪ್ರಾವೀಣ್ಯತೆಯನ್ನು ಪಡೆದ ವಿದ್ಯಾಧರ ಗುರೂಜಿ ಅವರು ಮತಕ್ಷೇತ್ರದಲ್ಲಿ ಬಿತ್ತರಿಸಿದ ಶಾಹಿರಿ, ಒಗಟು ಕೇಳಿ ಮಂತ್ರಮುಗ್ಧರಾಗುತ್ತಿದ್ದರು. ಇವರ ಚುನಾವಣೆ ಪ್ರಚಾರ ಭಾಷಣ ಕೇಳಲು ಜನ ಕಿಕ್ಕಿರಿದು ನೆರೆಯುತ್ತಿದ್ದರು. ಇವರ ವಾಕ್‌ಚಾತುರ್ಯಕ್ಕೆ ಹಾಸ್ಯ ಚಟಾಕಿ, ವಾಕ್ ಪಟುತ್ವಕ್ಕೆ ಬೆರಗಾಗಿ ಬೆರಳು ಕಚ್ಚಿಕೊಳ್ಳುತ್ತಿದ್ದರು.

ಈ ಚುನಾವಣೆಯಲ್ಲಿ ಹಣದ ಹೊಳೆ ಹರಿಯಲಿಲ್ಲ. ಹೆಂಡ ಮೈಮರೆತು ಕುಣಿಯಲಿಲ್ಲ. ಜಾತಿ, ಜಾತಿಗಳು ಬೆಂಕಿ ಹೊತ್ತಿ ಉರಿಯಲಿಲ್ಲ. ಸ್ವಾರ್ಥ ತನ್ನ ಕಬಂಧಬಾಹು ಚಾಚಲಿಲ್ಲ. ಈರ್ಷೆ ಅಸೂಯೆಗಳು ಅಡಗಿದ್ದವು. ಪ್ರೀತಿ ವಿಶ್ವಾಸ ಮೈದಳೆದು ನಿಂತಿದ್ದವು. ಅಂತೆಯೇ ವಿದ್ಯಾಧರ ಗುರೂಜಿ ಅವರು ಕಾಂಗ್ರೆಸ್ ಅಭ್ಯರ್ಥಿ ಕೋಲೂರು ಮಲ್ಲಪ್ಪನವರನ್ನು ಸೋಲಿಸಿ



11000 ಸಾವಿರ ಮತಗಳ ಅಂತರದಿಂದ ಸ್ವತಂತ್ರ ಪಕ್ಷಕ್ಕೆ ಅಸ್ತಿತ್ವ ತಂದುಕೊಟ್ಟ ಕೀರ್ತಿ ವಿದ್ಯಾಧರ ಗುರೂಜಿ ಅವರದಾಗಿತ್ತು.

ಮತಗಳ ಎಣಿಕೆ ಮುಂದುವರಿದಂತೆ ವಿಶ್ವನಾಥ ರೆಡ್ಡಿ ಮುದ್ನಾಳ ಅವರ ಹೃದಯ ಕಮಲ ಅರಳುತ್ತ ನಡೆಯಿತು. ವಿದ್ಯಾಧರ ಗುರೂಜಿ ಅವರ ಗೆಲುವು ತಮ್ಮ ಗೆಲುವು ಎಂದು ಭಾವಿಸಿಕೊಂಡು ಸಂತಸದ ಉಸಿರು ಬಿಟ್ಟರು. ವಿಜಯ ಅಭ್ಯರ್ಥಿ ವಿದ್ಯಾಧರ ಗುರೂಜಿ ಅವರನ್ನು ಮೆರೆಸಬೇಕೆಂದು ಕಾರ್ಯಕರ್ತರು ಮುಂದೆ ಬಂದರು. ಆಗ ಗುರೂಜಿ ಅವರು "ಇದು ನನ್ನ ಗೆಲುವಲ್ಲ ನಿಮ್ಮ ಮತ ಕೊಟ್ಟು ನನ್ನನ್ನು ಗೆಲ್ಲಿಸಿದ ನಿಮ್ಮ ಗೆಲುವು ನಿಮ್ಮ ತೀರ್ಮಾನಕ್ಕೆ ನಾನು ಋಣಿಯಾಗಿದ್ದೇನೆ" ಎಂದು ಕಾರ್ಯಕರ್ತರಿಗೆ, ಮತನೀಡಿ ಗೆಲ್ಲಿಸಿದ ಮತದಾರರಿಗೆ ವಂದಿಸಿ ಚುನಾವಣೆಯ ವಿರಸ, ಸರಸ ಇಲ್ಲಿಗೆ ಮುಗಿಯಲಿ ಎಂದು ಹರಸಿ ಹಾರೈಸಿ ಮತಕ್ಷೇತ್ರದ ಅಭಿವೃದ್ಧಿಗೆ ನಾಂದಿ ಹಾಡಿದರು.

ಕನ್ನಡದಲ್ಲಿ ಪ್ರಮಾಣ ವಚನ

ಗುರುಮಠಕಲ್ಲ ಮತಕ್ಷೇತ್ರದಿಂದ ವಿಧಾನಸಭೆಗೆ ಆರಿಸಿ ಬಂದ ವಿದ್ಯಾಧರ ಗುರೂಜಿ ಅವರಲ್ಲಿ ಇನ್ನಷ್ಟು ನಮ್ರಭಾವನೆ ಮೂಡಿತು. ಕೈಯ್ಯಲ್ಲಿ ಕಾಸಿಲ್ಲದ ಮನುಷ್ಯನ ಮೇಲೆ ಕರುಣೆ ತೋರಿಸಿ ಆರಿಸಿ ತಂದ ಮತಕ್ಷೇತ್ರದ ಸಕಲ ಮತದಾರ ಬಾಂಧವರಿಗೆ ಸಹಸ್ರ ಸಹಸ್ರ ನಮನಗಳನ್ನು ಸಲ್ಲಿಸಿದರು. ನಾನು ದೇಶ ಸ್ವಾತಂತ್ರ್ಯಕ್ಕಾಗಿ, ಹೈದರಾಬಾದ್ ವಿಮೋಚನೆಗೆ ಹೋರಾಡಿದರೆ ನೀವು ನನ್ನ ಸಲುವಾಗಿ ಹೋರಾಡಿ ಆರಿಸಿ ಕಳಿಸಿದಿರಿ. ನನ್ನ ಸೇವೆಗಿಂತಲೂ ನಿಮ್ಮ ಪ್ರೀತಿ ಹೆಚ್ಚಿನದು. ನಿಮಗೆ ಎಷ್ಟು ವಂದನೆಗಳನ್ನು ಹೇಳಿದರೂ ಕಡಿಮೆಯೇ ಸರಿ. ನನ್ನ ಮಾನ ರಕ್ಷಿಸಿದ ನಿಮ್ಮನ್ನು ದೇವರೆಂದು ಭಾವಿಸಿ ನಿಮ್ಮ ಸೇವೆ ಮಾಡುತ್ತೇನೆ. ನೀವು ನನ್ನ ಮತದಾರ ಬಾಂಧವರೆಂದು ಕರೆಯದೆ ನನಗೆ ಮತ ನೀಡಿ ಆರಿಸಿ ಕಳಿಸಿದ ದೇವರು. ನನಗೆ ಮತನೀಡಿದ ನಿಮ್ಮೆಲ್ಲರನ್ನು ಸಮಾನ ದೃಷ್ಟಿಯಿಂದ ನೋಡಿ ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಪ್ರಯತ್ನಿಸುತ್ತೇನೆ.



ಇದುವರೆಗೆ ನಾನು ಅನಾಥನಾಗಿದ್ದೆ. ನೀವು ನಿಮ್ಮ ಅಮೂಲ್ಯ ಮತ ನೀಡಿ ಜನರ ಮಧ್ಯದಲ್ಲಿ ಕರೆದು ತಂದಿದ್ದೀರಿ. ಇನ್ನು ನಾನು ನಿಮ್ಮ ಹಿತೈಷಿಯಾಗಿ ನಿಮ್ಮ ಸೇವೆ ಮಾಡುತ್ತೇನೆ. ನನ್ನ ಮಾತೃಭಾಷೆ ತೆಲಗು, ಅಭ್ಯಾಸ ಮಾಡಿದ್ದು ಉರ್ದು, ಮರಾಠಿ. ಇದುವರೆಗೆ ರಾಷ್ಟ್ರಭಾಷೆ ಹಿಂದಿಗೆ ಒತ್ತು ಕೊಟ್ಟಂತೆ- ಇನ್ನು ಮೇಲೆ ನಾಡು-ನುಡಿಗೂ ಒತ್ತು ಕೊಡುತ್ತೇನೆ. ಇನ್ನು ನಾನು ಕನ್ನಡ ನಾಡು- ನುಡಿ ನೆಲ, ಜಲ ಜನರ ಸೇವೆಗೆ ಕಂಕಣಬದ್ಧನಾಗುತ್ತೇನೆ ಎಂದು ಹೇಳಿ ಇನ್ನೂ ನಮ್ರಭಾವ ತಳೆದು ಕನ್ನಡಿಗರ ಸೇವೆಗೆ ಕಂಕಣ ಬದ್ಧರಾದರು.

ಅಂದು ಮೈಸೂರು ರಾಜ್ಯದ ಮುಖ್ಯಮಂತ್ರಿ ಎಸ್.ಆರ್. ಕಂಠಿ ಅವರ ಹಿರಿತನದಲ್ಲಿ ಮಾನನೀಯ ರಾಜ್ಯಪಾಲ ಧರ್ಮವೀರ ಅವರ ಸಮ್ಮುಖದಲ್ಲಿ ಕನ್ನಡ ಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸಿದರು. 48 ವರ್ಷದ ತುಂಬು ಹರೆಯದ ವಿದ್ಯಾಧರ ಗುರೂಜಿ ಅವರು ಗಾಂಧೀಜಿ ಅವರು ಕಂಡ ಕನಸಿನ ಭಾರತ ಕಟ್ಟಲು ಕಂಕಣಬದ್ಧರಾದರು. ಆ ವೇಳೆಗಾಗಲೇ ರಾಜಕೀಯ ಜನರು ದೇಶ ಭ್ರಷ್ಟರಾಗಿದ್ದರು. ಜನಹಿತವನ್ನು ಮರೆತು ತಮ್ಮ ಮನೆ ತುಂಬಿಕೊಳ್ಳುವ ಕೆಲಸ ಪ್ರಾರಂಭಿಸಿದ್ದರು. ಬಡವರು ಇನ್ನಷ್ಟು ಬಡವ ರಾಗುತ್ತಿದ್ದರು. ಶ್ರೀಮಂತರು ಇನ್ನಷ್ಟು ಶ್ರೀಮಂತರಾಗಿದ್ದರು. ಬಡತನ ರೇಖೆಗಿಂತ ಕೆಳಗಿದ್ದ ಜನರು ಶ್ರೀಮಂತರ ಕಣ್ಣಿಗೆ ಕಾಣದಂತಾಗಿದ್ದರು. ನಿಜವಾಗಿಯೂ ದೇಶದ ಪರಿಸ್ಥಿತಿ ತೀರಾ ಚಿಂತಾಜನಕವಾಗಿದ್ದಿತು. ಇವು ಅವರೆದುರಿಗಿದ್ದ ಸವಾಲುಗಳಾಗಿದ್ದವು.

ಸಾಹಿತ್ಯದಲ್ಲಿಯೂ ದಲಿತ ಬಂಡಾಯ, ಪ್ರಗತಿಪರ ಧೋರಣೆಗಳು ತಲೆ ಎತ್ತಿ 'ಯಾರಿಗೆ ಬಂತು ಸ್ವಾತಂತ್ರ್ಯ?' ಎಂಬ ಕವಿವಾಣಿ ಮೊಳಗ ತೊಡಗಿತು. ನೆರೆ ದೇಶಗಳಾದ ಪಾಕಿಸ್ತಾನ, ಚೀನಾಗಳು ತಮ್ಮ ಧೋರಣೆ ಗಳನ್ನು ಬದಲಿಸಿದ್ದವು. ಕೋಮುವಾದ ಮತ್ತೊಮ್ಮೆ ಪ್ರಜ್ವಲಿಸತೊಡಗಿತ್ತು. ಬಡವ-ಬಲ್ಲಿದರ ನಡುವೆ ದೊಡ್ಡ ಕಂದಕವೇ ಕೊರೆದಿತ್ತು. ಅಲೆಮಾರಿ ಜನಾಂಗಕ್ಕೆ ಬೆಲೆ ಇಲ್ಲದಂತಾಗಿತ್ತು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಹಿಂದುಳಿದ, ತುಳಿಯಲ್ಪಟ್ಟ ದೋಬಿ ಸಮಾಜದಲ್ಲಿ ಹುಟ್ಟಿ ಬಂದ ಗುರೂಜಿ ಅವರಿಗೆ ಈ ಎಲ್ಲ ಸಮಸ್ಯೆಗಳು ಸವಾಲುಗಳಂತೆ ಕಾಣತೊಡಗಿದವು.

ಸಾಮಾಜಿಕ ವ್ಯವಸ್ಥೆಯಲ್ಲಿ ಬೇರುಬಿಟ್ಟಿದ್ದ ಶೋಷಣೆ ಅಸ್ಪೃಶ್ಯತೆ. ಯಾರು ಎಷ್ಟು ಪ್ರಯತ್ನಿಸಿದರು ನಿಯಂತ್ರಣಕ್ಕೆ ಬರಲಿಲ್ಲ ಎಂಬ ಅಳಕು ವಿದ್ಯಾಧರ ಗುರೂಜಿಯವರ ಮನಸ್ಸಿನಲ್ಲಿ ಕಟೆಯುತ್ತಿತ್ತು. ಜಾತಿ, ಜಾತಿ ಎಂದು ಅದೊಂದೇ ಕಾರಣಕ್ಕೆ ಪದೇ ಪದೇ ಅವಹೇಳನಕ್ಕೆ ಒಳಗಾಗುತ್ತಿದ್ದ ದಲಿತರು ಮೀಸಲಾತಿಯಿಂದ ಹೆಚ್ಚಿನ ಅವಕಾಶಗಳನ್ನು ಗಿಟ್ಟಿಸುತ್ತಿದ್ದಾರೆಂಬ ಅಸೂಯೆ ಯಿಂದ ಇನ್ನಷ್ಟು ಕೆಟ್ಟ ದೃಷ್ಟಿಯಿಂದ ನೋಡುವ ಪರಿಸ್ಥಿತಿ ಹೆಚ್ಚಾಯಿತು.

ದಲಿತ ವರ್ಗದಂತೆ– ತಲೆ ತಲಾಂತರದಿಂದ ಶಿಕ್ಷಣದಿಂದ ವಂಚಿತರಾಗಿ ಶ್ರಮಿಕ ವರ್ಗದ ಜನರೂ ಅನ್ಯಾಯದ ಮೇಲೆ ಅನ್ಯಾಯವನ್ನು ಎದುರಿಸುತ್ತಲೇ ಬಂದಿದ್ದಾರೆ. ಇವರಂತೆಯೇ ಕುಂಬಾರ, ಕಂಬಾರ, ಬಡಿಗ, ಅಗಸ, ಕ್ಷೌರಿಕ, ಅಕ್ಕಸಾಲಿಗ, ನೇಕಾರ, ಸಿಂಪಿ ಮುಂತಾದ ಕಾಯಕ ಜೀವಿಗಳು ಸರಕಾರದಿಂದ ಸಿಗಬೇಕಾದ ಸೌಲಭ್ಯಗಳಿಂದ ವಂಚಿತರಾಗಿ ಮುಗಿಲು ಮುಖ ನೋಡು ವಂತಾಗಿತ್ತು. ಅಂದಿನ ರಾಜಕೀಯ ನಾಯಕರಲ್ಲಿ ನಾಯಕತ್ವ ಗುಣವೇ ಇರಲಿಲ್ಲ. ಮಾನವೀಯ ಮೌಲ್ಯಗಳನ್ನು, ಶಿಷ್ಟಾಚಾರಗಳನ್ನು ಗಾಳಿಗೆ ತೂರಿ ಬಿಟ್ಟಿದ್ದರು. ವರ್ಣ, ಜಾತಿಗಳ ಕ್ರೌರ್ಯಕ್ಕೆ ಸಿಲುಕಿ ಸಾವಿರಾರು ವರ್ಷಗಳಿಂದ ಒಂದೇ ಸವನೆ ನರಳುತ್ತ ಬಂದ ಹಿಂದುಳಿದ, ತುಳಿಯಲ್ಪಟ್ಟ ಜನರು ಶೋಷಣೆಯ ಸಂಕೋಲೆಯಿಂದ ಹೊರಗೆ ಬರಬೇಕು. ಅವರು ಶಿಕ್ಷಣ ಪಡೆದು ಭಾರತೀಯ ಸಂಸ್ಕೃತಿ ಅಳವಡಿಸಿಕೊಂಡು ಕೀಳರಿಮೆಯಿಂದ ಸಂಪೂರ್ಣ ಮುಕ್ತರಾಗಿ ತಮ್ಮ ತಮ್ಮ ಕಾಲಮೇಲೆ ತಾವು ನಿಂತು ಸ್ವಾವಲಂಬಿಗಳಾಗಿ ಬಾಳಬೇಕು ಎಂದು ವಿದ್ಯಾಧರ ಗುರೂಜಿ ಅವರು ಹಗಲಿರುಳು ಕುದಿಯತೊಡಗಿದರು.

ತಾವು ಹುಟ್ಟು ಹಾಕಿದ ಗಾಂಧಿ ಜನರಲ್ ಹಾಸ್ಟೆಲ್ ಇನ್ನಷ್ಟು ಬಲಪಡಿಸಿ ಶೋಷಿತರ, ಕಾರ್ಮಿಕರ, ಅಲೆಮಾರಿ ಜನಾಂಗದ ಮಕ್ಕಳನ್ನು ಹಾಸ್ಟೆಲ್ಲಿಗೆ ಸೇರಿಸಿ ಅವರಿಗೆ ಶಿಕ್ಷಣ, ಸಂಸ್ಕೃತಿ, ಸಂಸ್ಕಾರ ನೀಡಿ ಭಾರತದ ಉತ್ತಮ ಪ್ರಜೆಗಳನ್ನಾಗಿ ಮಾಡಬೇಕೆಂದು ಕನಸು ಕಾಣತೊಡಗಿದರು. ತಾವು ಶಾಸಕರು ಎಂಬ ಅಹಂ ಭಾವನೆ ಅವರ ಹತ್ತಿರ ಸುಳಿಯಲಿಲ್ಲ. ಜನ ಸಾಮಾನ್ಯರ ಮಧ್ಯದಲ್ಲಿ ಅವರ ಜ್ವಲಂತ ಸಮಸ್ಯೆಗಳನ್ನು ಅರಿತು ಅವರು ಅವುಗಳ ಪರಿಹಾರಕ್ಕೆ ಶ್ರಮಿಸುವ ಪಣ ತೊಟ್ಟರು. ತಮ್ಮ ಕೈಲಾದಷ್ಟು ಅವರ ಏಳಿಗೆಗೆ

ಶ್ರಮಿಸಬೇಕೆಂದು ಮನಸ್ಸು ಮಾಡಿದರು. ಅವರು ಈ ಸ್ವತಂತ್ರ ಪಕ್ಷದ ಶಾಸಕರಾಗಿದ್ದರೂ ಸ್ವಾತಂತ್ರ್ಯ ಸೇನಾನಿಯೇ ಎಂದು ಗುರುತಿಸಿಕೊಂಡಿದ್ದರು. ಅದರಿಂದ ಕಾಂಗ್ರೆಸ್, ಸ್ವತಂತ್ರ, ಕಮ್ಯುನಿಸ್ಟ್, ಲೋಕಸೇವಕ ಸಂಘದ ಎಲ್ಲ ಶಾಸಕರು ಇವರನ್ನು ತುಂಬ ಗೌರವದಿಂದ ಕಾಣುತ್ತಿದ್ದರು. ವಿದ್ಯಾಧರ ಗುರೂಜಿ ಅವರೂ ಸಹ ಎಲ್ಲರನ್ನು ಪ್ರೀತಿಯಿಂದ ಕಂಡು ಜ್ವಲಂತ ಸಮಸ್ಯೆಗಳ ಬಗ್ಗೆ ಮುಕ್ತ ಮನಸ್ಸಿನಿಂದ ಚರ್ಚಿಸುತ್ತಿದ್ದರು.

ರಾಜನೀತಿಜ್ಞರಾಗಿದ್ದ ವಿದ್ಯಾಧರ ಗುರೂಜಿ ಅವರು ಚಾಣಕ್ಯನಂತೆ ಕುಶಲಮತಿಯೂ, ಕಾಳಿದಾಸನಂತೆ ದೈವ ಬಲವುಳ್ಳವರೂ, ಕಾಮರಾಜ ನಾಡರರಂತೆ ಮುತ್ಸದ್ದಿಗಳು, ಚಕ್ರವರ್ತಿ ರಾಜಗೋಪಾಲ ಚಾರ್ಯರಂತೆ ವಿಶಾಲ ಹೃದಯವುಳ್ಳವರು ಗಾಂಧೀಜಿಯಲ್ಲಿದ್ದ ದೂರದೃಷ್ಟಿ, ವಿನೋಬಾ ಭಾವೆ ಅವರ ತ್ಯಾಗ ಇವರಲ್ಲಿತ್ತು. ಅಂತೆಯೇ ಇವರು ಭ್ರಷ್ಟ ರಾಜಕೀಯದಿಂದ ಭಾರತ ದೇಶ ಮುಕ್ತವಾಗ ಬೇಕೆಂದು ಬಯಸತೊಡಗಿದರು. ತಾವು ಆಳುವ ಪಕ್ಷದಲ್ಲಿದ್ದರೆ ಈ ಕಾರ್ಯ ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ ಅಂತೆಯೇ ಕೇಳುವ ಪಕ್ಷಕ್ಕೆ ಬಂದಿದ್ದೇ ಒಳ್ಳೆಯದಾಯಿತೆಂದು ತಮ್ಮಷ್ಟಕ್ಕೆ ತಾವೇ ಸಂತೋಷಪಟ್ಟರು.

ಲೋಕ ಸೇವಕ ಸಂಘ ಧುರೀಣರಾದ ವಿಶ್ವನಾಥ ರೆಡ್ಡಿ ಮುದ್ನಾಳ ಅವರು ಭ್ರಷ್ಟ ರಾಜಕಾರಣಿಗಳ ಬದ್ಧವೈರಿಗಳಾಗಿದ್ದರು. ಅಕ್ರಮ ಆಸ್ತಿ ಮಾಡಿದ, ಮಾಡುತ್ತಿರುವ ದುಷ್ಟ ರಾಜಕಾರಿಗಳ ಕಾಲರ್ ಹಿಡಿದು ಕೇಳುವುದಕ್ಕಾಗಿಯೇ ಅವರು ಲೋಕಸೇವ ಸಂಘವನ್ನು ಕಟ್ಟಿದ್ದು. ಅಂತಹ ಶಕ್ತಿಗಳನ್ನು ಅವರು ಬೆಳೆಸುತ್ತಿದ್ದರು. ಇದುವರೆಗೂ ವಿದ್ಯಾಧರ ಗುರೂಜಿ ಅವರು ಆಳುವ ಪಕ್ಷದಲ್ಲಿದ್ದರೂ ಅವರ ಜೀವನ, ಬದುಕು ಮಡಿ ಮಾಡಿದ ಶುಭ್ರ ಬಟ್ಟೆಯಂತೆ ಇತ್ತು. ಅಂತೆಯೇ ಮುದ್ನಾಳ ವಿಶ್ವನಾಥರೆಡ್ಡಿ ಅವರು ಗುರೂಜಿಯವರನ್ನು ತಮ್ಮ ಕಡೆ ಎಳೆದುಕೊಂಡರು.

ಸ್ವಾತಂತ್ರ್ಯ ಹೋರಾಟಗಾರರಾದ ವಿದ್ಯಾಧರ ಗುರೂಜಿಯವರು ಸ್ವತಂತ್ರ ಪಕ್ಷದ ಸಮರ್ಥ ಶಾಸಕರಾಗಿ, ನಾಯಕರಾಗಿ, ಬಹುಜನರ ಪ್ರೀತಿಗೆ ಪಾತ್ರರಾದರು. ಅವರ ಜೊತೆಗೆ ವಿಶ್ವನಾಥ ರೆಡ್ಡಿ ಮುದ್ನಾಳ ಅವರು ಇರುತ್ತಿದ್ದರು. ಶಾಸಕರ ಭವನದಲ್ಲಿ ವಿದ್ಯಾಧರ ಗುರೂಜಿ ವಿಶ್ವನಾಥ ರೆಡ್ಡಿ

ಮುದ್ನಾಳ ಅವರು ಕೂಡಿಯೇ ಇರುತ್ತಿದ್ದರು. ವಿದ್ಯಾಧರ ಗುರೂಜಿ ಅವರು ಹಿಂದಿ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡುವುದನ್ನು ಕೇಳಿದ ರಾಜಕೀಯ ಮುತ್ಸದ್ದಿಗಳು 'ಗುರೂಜಿ ಅವರು ರಾಷ್ಟ್ರ ನಾಯಕರಾಗಲು ತುಂಬ ಸಮರ್ಥ ವ್ಯಕ್ತಿಗಳೆ'ಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸದೇ ಇರುತ್ತಿದ್ದಿಲ್ಲ. ರಾಷ್ಟ್ರ ನಾಯಕರೆಲ್ಲ ವಿದ್ಯಾಧರ ಗುರೂಜಿ ಅವರ ಸ್ನೇಹಿತರು. ಅವರು ಮಾತನಾಡುವ ಭಾಷೆ ಹಿಂದಿ, ರಾಷ್ಟ್ರಭಾಷೆ. ಕಾರ್ಯವ್ಯಾಪ್ತಿ ಇಡೀ ಭಾರತ ತುಂಬ ಪಸರಿಸಿತ್ತು. ಅವರ ಆರಾಧ್ಯ ರಾಷ್ಟ್ರ ಪುರುಷ ಶೂರ ಸುಭಾಶ್ಚಂದ್ರ ಭೋಸರು, ವೀರಸಾವರಕರ್, ವಿದ್ಯಾಧರ ಗುರೂಜಿ ಅವರ ರಾಜಕೀಯ ಗುರು ಆರ್ಯ ಸಮಾಜದ ಧುರೀಣರು ಜಾತ್ಯತೀತ ವ್ಯಕ್ತಿಗಳು ಆದ ಸ್ವಾಮಿ ರಾಮಗಿರಿಜಿ ಅವರು. ಸ್ವಾಮಿ ರಾಮಗಿರಿಜಿ ಅವರ ತ್ಯಾಗ, ನಿಷ್ಠೆ, ರಾಷ್ಟ್ರ ಭಕ್ತಿ, ಕಠಿಣಬದ್ಧವಾದ ಸಮಾಜಸೇವೆ ವಿದ್ಯಾಧರ ಗುರೂಜಿ ಅವರ ಜೀವನದಲ್ಲಿ ಇಳಿದುಬಂದಿದ್ದವು. ಸಮಾಜದ ಬಗ್ಗೆ ಗುರೂಜಿ ಅವರಲ್ಲಿದ್ದ ಕಳಕಳಿ ದೇಶದ ಬಗ್ಗೆ ಇದ್ದ ಕಾಳಜಿ ಸ್ಪಷ್ಟವಾಗಿ ಎದ್ದು ಕಾಣುತ್ತಿದ್ದವು. ದೇಶ ಸ್ವಾತಂತ್ರ್ಯ ಪಡೆದ ಮೇಲೆ ಗುರುಮಠಕಲ್ಲ ಮತಕ್ಷೇತ್ರ ಅತ್ಯಂತ ನಿಷ್ಠಾವಂತ, ಸಮಾಜಸೇವಕ ದಕ್ಷ ಸಮರ್ಥ ಶಾಸಕನನ್ನ ಆರಿಸಿ ಕಳಿಸಿ ಲೋಕಮಾನ್ಯತೆಯನ್ನು ಪಡೆಯಿತು.

ಯಂಗ್ ಮೆನ್ ಅಸೋಸಿಯೇಶನ್

ವಿದ್ಯಾಧರ ಗುರೂಜಿ ಅವರು ವಿಶ್ವನಾಥ ರೆಡ್ಡಿ ಮುದ್ನಾಳ ಇವರಿಬ್ಬರ ಪ್ರೀತಿ, ವಿಶ್ವಾಸ, ಸ್ನೇಹ ಸಹಕಾರ ಗಮನಿಸಿದಾಗ ನಮಗೆ ದ್ವಾಪರ ಯುಗದ ನೆನಪಾಗಿ ಶ್ರೀಕೃಷ್ಣ–ಸುಧಾಮರು ನಮ್ಮ ಕಣ್ಣಮುಂದೆ ಬಂದು ನಿಂತಂತಾಗುತ್ತದೆ. ಅಂತಹ ಗೆಳೆತನ ಇವರಿಬ್ಬರಲ್ಲಿಯೂ ಇತ್ತು.

ಪ್ರಾರಂಭದಲ್ಲಿ ಒಬ್ಬರನ್ನೊಬ್ಬರು ದ್ವೇಷಿಸಿರು. ವಿರೋಧಿಸಿದರು. ಕಚ್ಚಾಡಿದರು ಬಹಳ ಸುದೈವ ದಿಂದ ಕಾಡಿ ಇಬ್ಬರೂ ಕೂಡಿದರು. ಇವರು ಕೂಡಿದ ಮೇಲೆ ಇವರಿಬ್ಬರಲ್ಲಿ ಸೂಜಿಯ ಮೊನೆಯಷ್ಟು ದ್ವೇಷ ಇಲ್ಲ. ಅಸೂಯೆ ಇಲ್ಲ. ಇವರಿಬ್ಬರ ಮಧ್ಯದಲ್ಲಿ ಜಾತಿ, ಬಡತನ, ಶ್ರೀಮಂತಿಕೆ ಅಂತಸ್ತುಗಳು ಅಡ್ಡ ಬರಲಿಲ್ಲ. ಎರಡು ದೇಹದಲ್ಲಿ ಒಂದೇ ಆತ್ಮ ಅನ್ನುವಂತೆ ಅತ್ಯಂತ ಪ್ರೀತಿ ವಿಶ್ವಾಸ ಸ್ನೇಹದಿಂದ ಬದುಕಿ ಬಾಳಿ ಆದರ್ಶಪ್ರಾಯರಾದರು.

ರಾಜಕೀಯದಲ್ಲಿ ಇವರಿಬ್ಬರೂ ಚಂದ್ರಗುಪ್ತ ಚಾಣಕ್ಯರನ್ನು ಕಂಡಂತೆ–ರಾಜ್ಯವನ್ನು ಹೇಗೆ



ಕಟ್ಟಬೇಕು. ದುಷ್ಟ ಶಕ್ತಿಗಳನ್ನು ಹೇಗೆ ಸದೆಬಡಿಯಬೇಕು. ಸಜ್ಜನರನ್ನು, ಸಾತ್ವಿಕರನ್ನು, ಬಡವರನ್ನು ಅತ್ಯಂತ ತುಳಿಯಲ್ಪಟ್ಟವರನ್ನು ಸಮಾಜದ ಮುಖ್ಯವಾಹಿನಿಗೆ ಹೇಗೆ ತರಬೇಕೆಂಬ ಆಲೋಚನೆಯಲ್ಲಿ ಇವರಿಬ್ಬರೂ ಒಂದೇ. ವಿದ್ಯಾಧರ ಗುರೂಜಿಯವರು ಅತ್ಯಂತ ಚಾಣಾಕ್ಷ ರಾಜನೀತಿಜ್ಞರು. ವಿಶ್ವನಾಥ ರೆಡ್ಡಿ ಮುದ್ನಾಳ ಅವರು ತುಂಬಾ ಹಠವಾದಿಗಳು. ಒಬ್ಬರು ಕುಶಾಗ್ರಯುಕ್ತಿ. ಇನ್ನೊಬ್ಬರು ಕಟ್ಟುಗ್ರ ಶಕ್ತಿ. ಈ ಯುಕ್ತಿ-ಶಕ್ತಿಗಳು ಸಮ್ಮಿಲನಗೊಂಡು ಸುಮಾರು ಐದು ದಶಕಗಳಕಾಲ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿ ಗಮನಾರ್ಹ ವ್ಯಕ್ತಿಗಳೆನಿಸಿಕೊಂಡರು. ವಿದ್ಯಾಧರ ಗುರೂಜಿ ಅತ್ಯಂತ ಕಡುಬಡವರು. ವಿಶ್ವನಾಥ ರೆಡ್ಡಿ ಮುದ್ನಾಳ ಅವರು ಆಗರ್ಭ ಶ್ರೀಮಂತರು. ಇವರಿಬ್ಬರ ಮಧ್ಯದಲ್ಲಿ ಈ ಬಡತನ-ಶ್ರೀಮಂತಿಕೆಗಳು ಅಡ್ಡ ಬರಲಿಲ್ಲ. ತಮ್ಮ ಕುಚೇಷ್ಟೆ ನಡೆಸಲಿಲ್ಲ. ಅಂದ ಮೇಲೆ ಇವರಿಬ್ಬರ ಗಾಢ ಸ್ನೇಹ-ಸಂಬಂಧವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ರಾಜಕೀಯ ಮುತ್ಸದ್ದಿಗಳು ಇವರಂತೆ 'ಗುರಿ' ಇಟ್ಟುಕೊಂಡು ಮುನ್ನಡೆದಿದ್ದರೆ ಭಾರತ ಇಡೀ ವಿಶ್ವದಲ್ಲಿಯೇ ಬಲಿಷ್ಠ, ಸಶಕ್ತ ದೇಶವೆಂದು ಕೀರ್ತಿ ಭಾಜನವಾಗುತ್ತಿತ್ತು.

ಸ್ವಾತಂತ್ರ್ಯನಂತರ ನಮ್ಮ ರಾಜಕೀಯ ಕೆಲವು ಮುತ್ಸದ್ದಿಗಳು ತುಳಿದ ದಾರಿಯೆ ಬೇರೆಯಾಗಿದೆ. ಈಗಂತು ಮುಳ್ಳಿನ ಹಾಸಿಗೆಯಾಗಿದೆ. ರಾಜಕೀಯವೆಂದರೆ ಸಾಮಾಜಿಕ, ಆರ್ಥಿಕ, ಸಿದ್ಧಾಂತಗಳ ಬುನಾದಿಯ ಮೇಲೆ ಇಡೀ ಸಮುದಾಯದ ಏಳಿಗೆಗಾಗಿ ಕೆಲವು ಕಟ್ಟು-ನಿಟ್ಟುಗಳನ್ನು ಹಾಕಿಕೊಂಡು ಅವುಗಳನ್ನು ಕಾರ್ಯರೂಪಕ್ಕೆ ತರಲು ಹೋರಾಡುವುದೇ ಮೂಲಭೂತ ಹಕ್ಕು ಮತ್ತು ಕರ್ತವ್ಯ. ಈ ಎರಡೂ ವಿಷಯಗಳನ್ನು ಮೂಲೆಗೆ ಒತ್ತಿ ಜನರ ಮನಸ್ಸನ್ನು ಒಡೆಸಿ ಅವರನ್ನು ಬೇರೆ ಬೇರೆ ಮಾಡಿ ಅವರಿಗೆ ದಿಕ್ಕನ್ನು ತಪ್ಪಿಸಿ ಅವರವರಲ್ಲಿ ಜಗಳ ಹುಟ್ಟಿಸಿ ಅವರನ್ನು ಪ್ರತ್ಯೇಕಗೊಳಿಸಿ ಅವರ ಶಕ್ತಿ, ಸಾಮರ್ಥ್ಯ ಕ್ಷೀಣಗೊಳಿಸಿ ಅವರ ಮೇಲೆ ಅಧಿಕಾರ ಚಲಾಯಿಸಿ ರಾಜ್ಯ, ರಾಷ್ಟ್ರದ ಅಧಿಕಾರ ಗದ್ದಿಗೆ ಹಿಡಿಯುವ ಚಾಳಿ ಬೆಳಕಿಗೆ ಬಂದಿದ್ದು ದುರಾದೃಷ್ಟಕರ. ಇಂತಹ ದುಷ್ಟಶಕ್ತಿಗಳ ವಿರುದ್ಧ ಜನ ಜಾಗೃತಿ ಇಂದು ತುಂಬ ಅವಶ್ಯವೆಂದು ಅರಿತು ಸಂಘಟನೆಗೆ ಮೂರ್ತಸ್ವರೂಪ ಕೊಡುವ ಉದ್ದೇಶದಿಂದ ತಮ್ಮ ಸ್ವಾತಂತ್ರ್ಯ ಹೋರಾಟಕ್ಕೆ



ಸ್ಫೂರ್ತಿ ನೀಡಿದ ಶೂರ ಸುಭಾಶಚಂದ್ರ ಭೋಸರ ಜೀವನ-ಸಂದೇಶ ಜನತೆಗೆ ಮನವರಿಕೆ ಮಾಡಲು ಯಾದಗಿರಿಯಲ್ಲಿ 1964ರಲ್ಲಿ ವಿದ್ಯಾಧರ ಗುರೂಜಿ ಅವರು 'ಯಂಗ್ ಮೆನ್ ಅಸೋಸಿಯೇಷನ್' ಸಂಸ್ಥೆಯನ್ನು ಕಟ್ಟಿ ಉದ್ಘಾಟನೆಗೊಳಿಸಿದರು. ಬೃಹತ್ತು, ಮಹತ್ತು ಪಡೆದುಕೊಂಡ ಈ ಸಮಾರಂಭಕ್ಕೆ ಸಾವಿರಾರು ಜನರು ಕಿಕ್ಕಿರಿದು ಸೇರಿದ್ದರು. ಈ ಸಂದರ್ಭದಲ್ಲಿ ವಿದ್ಯಾಧರ ಗುರೂಜಿಯವರು ಪ್ರಾಸ್ತಾವಿಕವಾಗಿ ಹಿಂದಿಭಾಷೆಯಲ್ಲಿ ಮಾತನಾಡಿದ ಮಾತುಗಳು ಸಭಿಕರ ನರನಾಡಿಗಳಲ್ಲಿ ಮಿಂಚಿನ ಸಂಚಾರ ವನ್ನುಂಟುಮಾಡಿತು. ವಿದ್ಯಾಧರ ಗುರೂಜಿಯವರ ಅಂತರಂಗದ ಬೆಳಕು ಅರಿತು ಜನಸಾಮಾನ್ಯರು ವಿದ್ಯಾಧರ ಗುರೂಜಿಯವರು ಬಡವರ ತಾಯಿ ತಂದೆ, ರಾಜಕೀಯ ಮುತ್ಸದ್ದಿ ಹೊಸ ಹೊಸ ವಿಷಯ ಹೇಳಿ ಜನಮನವನ್ನು ತಣಿಸುವ ರಾಜಕೀಯ ಗುರು ಎಂದು ಹರಸಿ ಹಾರೈಸತೊಡಗಿದರು.

ತಾವು ಕಟ್ಟಿದ ಈ 'ಯಂಗ್ ಮೆನ್ ಅಸೋಸಿಯೇಷನ್' ಸಂಸ್ಥೆಯ ಉದ್ದೇಶಗಳು ಜನತೆಗೆ ಮನದಟ್ಟು ಮಾಡಿಕೊಡಲು ದೊಡ್ಡ ದೊಡ್ಡ ಊರುಗಳಲ್ಲಿ ಕಾರ್ಯಕ್ರಮ ಹಾಕಿಕೊಂಡು ಜನ ಜಾಗೃತಿಗೊಳಿಸತೊಡಗಿದರು. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರ ಅಖಂಡ ರಾಷ್ಟ್ರೀಯತೆ, 'ಜಲಿಯನ್ ವಾಲಾ ಹತ್ಯಾಕಾಂಡ', 'ರಜಾಕಾರರು ನಡೆಸಿದ ಹಾವಳಿ', 'ಶೂರ ಸುಭಾಶ್ಚಂದ್ರ ಭೋಸರ ಸಾಹಸ' ಸ್ವಾತಂತ್ರ್ಯವೀರ ಸಾವರಕರ ಜೀವನ ಸಾಧನೆ ಮುಂತಾದ ವಿಷಯಗಳನ್ನು ಕುರಿತು ಮಾತನಾಡಿ ಜನರಲ್ಲಿ ಸಾಮಾಜಿಕ, ರಾಜಕೀಯ ಪ್ರಜ್ಞೆಯನ್ನು ಮೂಡಿಸುತ್ತಿದ್ದರು.

ಈ ಹೊತ್ತಿಗೆ ರಾಷ್ಟ್ರೀಯ ಕಾಂಗ್ರೆಸ್ಸು ರಾಷ್ಟ್ರವಾದಿ ಕಾಂಗ್ರೆಸ್ಸಾಗಿ ಉಳಿದಿರಲಿಲ್ಲ. ಅಧಿಕಾರ ಲಾಲಸೆ ಕಾಂಗ್ರೆಸಿಗರನ್ನು ಅಧಃಪತನಕ್ಕೆ ಗುರಿ ಮಾಡಿತ್ತು. ಕಾಂಗ್ರೆಸ್ಸಿನಲ್ಲಿ ಸ್ವಜನ ಪಕ್ಷಪಾತ, ಒಳಜಗಳಗಳು ಒಬ್ಬರಿಗೊಬ್ಬರು ಎತ್ತಿ ಕಟ್ಟುವುದು, ಜಾತಿಯ ಗುಂಪುಗಾರಿಕೆ ಮಿತಿ ಮೀರಿ ಹೋಗಿತ್ತು. ಇಂತಹ ಉಸಿರು ಗಟ್ಟಿಸುವ ಸನ್ನಿವೇಶದಲ್ಲಿ ದೇಶಸೇವೆ, ತ್ಯಾಗ ಮನೋಭಾವನೆ ಬಡಜನತೆಯ ಹಿತಾಕಾಂಕ್ಷೆಯ ವಿದ್ಯಾಧರ ಗುರೂಜಿ ಅವರ ಮತ್ತು ವಿಶ್ವನಾಥ ರೆಡ್ಡಿ ಮುದ್ನಾಳ ಅವರ ನಾಯಕತ್ವ ಜನರಿಗೆ ಒಪ್ಪಿಗೆಯಾಗತೊಡಗಿತು. ವಿದ್ಯಾಧರ ಗುರೂಜಿ ಅವರ ಕಡೆ ಜನ ಸಾಗರದಂತೆ ಹರಿದು ಬರತೊಡಗಿತು.

1956ರಲ್ಲಿಯೇ ಹೈದರಾಬಾದ್ ರಾಜ್ಯದ ಗೃಹಮಂತ್ರಿಗಳಾಗಿದ್ದ ಶ್ರೀ ದಿಗಂಬರ ರಾವ್ ಬಿಂದು ಅವರಿಂದ **'ಹೈದರಾಬಾದ್ ಕರ್ನಾಟಕದ ಹಿಂದುಳಿದ ಜನಾಂಗದ ಜಾಗೃತಿಯ ಜನಕ'**ರೆಂದು ಅಭಿದಾನ ಪಡೆದಿದ್ದ ವಿದ್ಯಾಧರ ಗುರೂಜಿ ಅವರು ಈ ಬಿರುದು ಸಾರ್ಥಕಗೊಳಿಸಲು ಅವಿಶ್ರಾಂತ ಹೋರಾಟ ಮಾಡತೊಡಗಿದರು. ಈಗ ಇವರ ಹಿಂದೆ ಇವರ ಧರ್ಮಪತ್ನಿ, ಸವಿತಾ ದೇವಿ ಅವರು ಕಾಣದ ಹಸ್ತ ಚಾಚಿ ಇವರ ಸಾಹಸಕ್ಕೆ ಸ್ಫೂರ್ತಿ ನೀಡುತ್ತಿದ್ದರು.

ತಮ್ಮ ಜೀವನದಲ್ಲಿ ಸ್ವಾತಂತ್ರ್ಯ ಚಳುವಳಿಯ ಕಸುವು ತುಂಬಿದ ನೇತಾಜಿ ಸುಭಾಶ್ಚಂದ್ರ ಭೋಸರ ಜಯಂತಿಯನ್ನು ಪ್ರತಿ ವರ್ಷವೂ ತಪ್ಪದೇ ಆಚರಿಸುತ್ತ ಬಂದಿದ್ದರು. ತಾವು ಶಾಸಕರಾದ ಮೇಲೆ 1964 ಜನವರಿ 23 ರಂದು ಯುವ ಸಂಘದ ವತಿಯಿಂದ ತುಂಬ ಅರ್ಥಪೂರ್ಣವಾಗಿ ನೇತಾಜಿ ಜಯಂತುತ್ಸವ ಏರ್ಪಡಿಸಿದರು. ಈ ಸಲದ ನೇತಾಜಿ ಜಯಂತಿಗೆ ತೆಲಂಗಾಣದ ನಾಯಕ ಡಾ. ಎಂ. ಚೆನ್ನಾರೆಡ್ಡಿ, ಪ್ರಕಾಶ ವೀರಶಾಸ್ತ್ರಿ, ಆರ್ಯಸಮಾಜದ ಧುರಿಣ ಪಂಡಿತ ನರೇಂದ್ರಜಿ ಹಿಂದುಳಿದ ಜನಾಂಗದ ಹಿಂತಚಿಂತಕ ದೇವರಾಜ ಅರಸ, ಹುತಾತ್ಮ ಭಗತ್ ಸಿಂಗ್‌ರ ಸಹೋದರ ಸರ್ದಾರ ಕುಲ್ತಾರ ಸಿಂಗ್ ಮುಂತಾದ ರಾಷ್ಟ್ರೀಯ ನಾಯಕರನ್ನು ಬರಮಾಡಿಕೊಂಡಿದ್ದರು. ಅಂದು ನೇತಾಜಿ ಅವರನ್ನು ಕುರಿತು ಹಿಂದಿ, ಇಂಗ್ಲಿಷ್ ಭಾಷೆಯಲ್ಲಿ ಆಡಿದ ಮಾತುಗಳು ಕೇವಲ ಮಾತುಗಳಾಗಿ ಉಳಿದಿರಲಿಲ್ಲ. ಅವು ಜನತೆಯ ಎದೆಯಲ್ಲಿ ಮಂತ್ರಗಳಾಗಿ ಬೆಳಗುತ್ತಿದ್ದವು. ಹೀಗೆ ವಿದ್ಯಾಧರ ಗುರೂಜಿ ವಿಶ್ವನಾಥ ರೆಡ್ಡಿ ಮುದ್ನಾಳ ಅವರು ಯಾದಗಿರಿಯಲ್ಲಿ ಒಂದಿಲ್ಲ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡು ಜನರಲ್ಲಿ ರಾಜಕೀಯ ಪ್ರಜ್ಞೆಯನ್ನು, ಸಾಮಾಜಿಕ ತಿಳುವಳಿಕೆಯನ್ನು ನೀಡಿ ಹುರಿದುಂಬಿಸುತ್ತಿದ್ದರು. ಈ ಎಲ್ಲ ಕಾರ್ಯಕ್ರಮಗಳಿಗಾಗಿ ಜನತೆಯ ಬೆಂಬಲ ಆರ್ಥಿಕ ನೆರವು ಹಿತೈಷಿಗಳಿಂದ ದೊರಕುತ್ತಿತ್ತು. ಗುರೂಜಿ ಅವರು ಆರ್ಥಿಕ ಹೊರೆ ಯಾರ ಮೇಲೂ ಬೀಳದಂತೆ ನೋಡಿಕೊಳ್ಳುತ್ತಿದ್ದರು.

'ಯಂಗ್ ಮೆನ್ ಅಸೋಸಿಯೇಶನ್' ಸಂಸ್ಥೆಯ ಆಶ್ರಯದಲ್ಲಿ ಕ್ರಿ.ಶ. 1974 ಡಿಶೆಂಬರ್ 26 ರಿಂದ 1975 ಜನವರಿ 23ರರವರೆಗೆ ಸರ್ದಾರ್ ಭಗತ್‌ಸಿಂಗ್ ಅವರ ಪುತ್ರಿ ಶ್ರೀಮತಿ ವೀರೇಂದ್ರ ಸಿಂಧು ಅವರು ರಚಿಸಿದ ಯುಗ ದೃಷ್ಟಾ 'ಸರ್ದಾರ ಭಗತ್‌ಸಿಂಗ್ ಔರ್ ಉನಕೆ ಮೃತ್ಯುಂಜಯ

ಪುರಕೆ' ಎಂಬ ಹಿಂದಿ ಪುಸ್ತಕದ ಪಾರಾಯಣ ಹಿರಿಯ ಸ್ವಾತಂತ್ರ್ಯಯೋಧರು, ಸಮಾಜ ಚಿಂತಕರು, ಮಾಜಿ ಶಾಸಕರು ಆದ ವಿದ್ಯಾಧರ ಗುರೂಜಿ ಅವರು ತುಂಬ ಭಕ್ತಿ ಮತ್ತು ಶ್ರದ್ಧೆಯಿಂದ ನಡೆಸಿಕೊಟ್ಟರು.

ಈ ಗ್ರಂಥ 'ಪಾರಾಯಣ' ಸಮಾರಂಭವನ್ನು ಉದ್ಘಾಟನೆ ಮಾಡಲು ಸರ್ವೋದಯ ವಿಚಾರ ಪ್ರವೃತ್ತಕರು ಶಿಕ್ಷಣ, ಸಾಹಿತ್ಯ, ಸಮಾಜ ಪ್ರೇಮಿಗಳು, ಸಂಯುಕ್ತ ಕರ್ನಾಟಕ ಪ್ರಧಾನಸಂಪಾದಕರು ಆದ ಶ್ರೀ ಖಾದ್ರಿ ಶಾಮಣ್ಣನವರು ಆಗಮಿಸಿದ್ದರು. ಈ ಗ್ರಂಥ ಪಾರಾಯಣವನ್ನು ಉದ್ಘಾಟಿಸುತ್ತ ಇಂದು ಎಲ್ಲ ಕಡೆಗೂ ವ್ಯಾಪಿಸಿರುವ ಭ್ರಷ್ಟ, ದುಷ್ಟ, ಕನಿಷ್ಠ ಪರಿಸ್ಥಿತಿಯನ್ನು ಹೋಗಲಾಡಿಸಲು ಇಂತಹ ರಾಷ್ಟ್ರ ಭಕ್ತಿ ಪ್ರೇರಕಗ್ರಂಥಗಳ ಪಠಣ ಅತ್ಯಾವಶ್ಯಕವಾಗಿದೆಯೆಂದು ಒತ್ತಿ ಹೇಳಿದರು.

ವಿದ್ಯಾಧರ ಗುರೂಜಿ ಅವರು ಕ್ರಮಬದ್ಧವಾಗಿ ತಮ್ಮ ನಾಲ್ಕು ವಾರಗಳ ಯುಗ ದೃಷ್ಟ 'ಸರ್ದಾರ್ ಭಗತ್‌ಸಿಂಗ್ ಔರ, ಉನಕೆ ಮೃತ್ಯುಂಜಯ ಪುರಕೆ' ಎಂಬ ಗ್ರಂಥ ಪಾರಾಯಣ ಮುಕ್ತಾಯಗೊಳಿಸುತ್ತಾ 'ಸರ್ದಾರ್ ಭಗತ್‌ಸಿಂಗ್ ಫಾಸಿ ಶಿಕ್ಷೆಗೆ ಬದಲಾಗಿ ಗುಂಡಿಟ್ಟು ಕೊಲ್ಲುವ ಉಗ್ರ ಶಿಕ್ಷೆ ಬೇಕಾಗಿತ್ತು ಎಂದು ಹೇಳುತ್ತಿದ್ದಾಗ ಪಾರಾಯಣದಲ್ಲಿ ಪಾಲುಗೊಂಡ ಯುವಕರ ನರ ನಾಡಿಗಳಲ್ಲಿ ರಕ್ತ ಚಿಮ್ಮಿ ಹೊರಹೊಮ್ಮಿ ಬರುತ್ತಿತ್ತು.'

ಗ್ರಂಥ ಪಾರಾಯಣದ ಮುಕ್ತಾಯ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಶಿವಮೂರ್ತಿ ಸ್ವಾಮಿ ಅಳವಂಡಿ ಅವರು 'ಸ್ವಾತಂತ್ರ್ಯ ಸಾಧನೆಯುಲ್ಲಿ ಕ್ರಾಂತಿಕಾರಿಗಳ ಪಾತ್ರವನ್ನು ಅಲಕ್ಷಿಸಲಾಗದೆಂದು ಪ್ರತಿಪಾದಿಸುತ್ತಾ 1937ರಲ್ಲಿ ಅಮರಶಹೀದ ಸರ್ದಾರ ಭಗತ್‌ಸಿಂಗ್ ಬ್ರಿಟಿಷ್ ಸಾಮ್ರಾಜ್ಯಕ್ಕೆ ಕುಠಾರ ಪ್ರಾಯವಾಗಿ ಶೂಲಿಗೇರಿಸಿದುದರಿಂದಲೇ 1935ರಲ್ಲಿ ಸ್ವರಾಜ್ಯ ಮಸೂದೆಯು ಮಂಡಿಸಲ್ಪಟ್ಟಿತೆ'ಂದು ತುಂಬ ಮಾರ್ಮಿಕವಾಗಿ ಹೇಳಿದರು.

ಈ ಗ್ರಂಥ ಪಾರಾಯಣ ಸಂದರ್ಭದಲ್ಲಿ ವಿದ್ಯಾಧರ ಗುರೂಜಿ ಅವರ ಜೇಷ್ಠ ಪುತ್ರ ಶ್ರೀ ಅಶೋಕ ಗುರೂಜಿ ಅವರು ಎರಡು ಸನ್ನಿವೇಶಗಳಲ್ಲಿ ಭಾಷಣ ಮಾಡುವ ಮೂಲಕ ತಮ್ಮ ಅಮೋಘ ಚಿಂತನೆಗಳನ್ನು ಹಂಚಿಕೊಂಡರು.

ನಾಲ್ಕು ವಾರಗಳುದ್ದಕ್ಕೂ ನಡೆದ ಈ ಪಾರಾಯಣ ಯಾದಗಿರಿ ಮತ್ತು ಯಾದಗಿರಿ ಸುತ್ತು ಮುತ್ತಲಿನ ಜನರಿಗೆ ವೀರ ರಸದ ಔತಣ ಕೂಟವಾಗಿತ್ತು. ಗ್ರಂಥ ಪಾರಾಯಣದಲ್ಲಿ ಪಾಲುಗೊಂಡ ಸಭಿಕರ ಹೃದಯದಲ್ಲಿ ರಾಷ್ಟ್ರಭಕ್ತಿ, ರಾಷ್ಟ್ರಪ್ರೇಮದ ಸ್ವಾಭಿಮಾನ ಮೂಡಿ ನಿಂತಿದ್ದವು. ನಿಜವಾಗಿಯೂ ವಿದ್ಯಾಧರ ಗುರೂಜಿ ಅವರು ಅಂದಿನ ಕ್ಲಿಷ್ಟ ಕಾಲದಲ್ಲಿ ಕೈಗೊಂಡ ಈ ಗ್ರಂಥ ಪಾರಾಯಣ ಸಮಾಜದಲ್ಲಿ ತೆರೆದುಕೊಂಡ ಹೊಸ ಅಧ್ಯಾಯವಾಗಿತ್ತು. ಅದು ಅಷ್ಟೇ ಜನಪ್ರಿಯವಾಗಿ ಪ್ರಚೋದಕವೂ ಆಗಿತ್ತು. ಹೀಗೆ ಗುರೂಜಿ ಅವರು ಜನರಲ್ಲಿ ರಾಷ್ಟ್ರಭಕ್ತಿ, ರಾಷ್ಟ್ರಾಭಿಮಾನ ಹುಟ್ಟಿಸಿ ಜನ ಜಾಗೃತಿಗೊಳಿಸುತ್ತಿದ್ದರು.

ಸರ್ದಾರ "ಭಗತ್ ಸಿಂಗ ಗ್ರಂಥ" ಪಾರಾಯಣ ಕೇಳಿದ ಜನರು ಇಂಥ ಕಾರ್ಯಕ್ರಮ ಮೇಲಿಂದ ಮೇಲೆ ಜರುಗಲಿ ಎಂದು ವಿದ್ಯಾಧರ ಗುರೂಜಿ ಅವರಲ್ಲಿ ವಿನಂತಿಸಿಕೊಳ್ಳುತ್ತಿದ್ದರು.



ಪುಸ್ತಕ ಪ್ರೇಮಿ ಗುರೂಜಿ

ಅತ್ಯಂತ ಸುಶಿಕ್ಷಿತರು, ಸುಜನಶೀಲರು ವಿನಯ ಸಂಪನ್ನರೂ ಆದ ವಿದ್ಯಾಧರ ಗುರೂಜಿ ಅವರಿಗೆ ಸಾಹಿತ್ಯ, ಸಂಸ್ಕೃತಿಯಲ್ಲಿ ತುಂಬ ಒಲವು, ಅಭಿರುಚಿ. ಅವರು ನಿತ್ಯ ರಾಜಕೀಯ ಚಟುವಟಿಕೆಯೊಡನೆ ಸಾಹಿತ್ಯಕ ಸಾಂಸ್ಕೃತಿಕ ಚಟುವಟಿಕೆಗಳ ಕಡೆಗೂ ವಿಶೇಷ ಗಮನ ಹರಸಿ ಹಿಂದು, ಉರ್ದು, ಮರಾಠಿ ಕನ್ನಡ ದಿನ ಪತ್ರಿಕೆಗಳನ್ನು ತಪ್ಪದೇ ಓದುತ್ತಿದ್ದರು. ಈ ಇಳಿಯ ವಯುಸ್ಸಿನಲ್ಲಿಯೂ ಅದೇ ಆಸಕ್ತಿ ಅದೇ ಲವಲವಿಕೆ; ಅದೇ ಅಭಿರುಚಿ.

ಗುರೂಜಿ ಅವರಿಗೆ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ, ಸೆರೆಮನೆ ಸೇರಿ ಅನುಭವಿಸಿದವರ ಕಥೆ–ವ್ಯಥೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹುತಾತ್ಮರ ಜೀವನ ವೃತ್ತಾಂತ ತಿಳಿದುಕೊಳ್ಳುವ ಅಮೋಘ ಗ್ರಂಥಗಳ ರಾಶಿ ಮನೆಯ ವಾಚನಾಲಯದಲ್ಲಿ ಶೇಖರಿಸಿ ಇಡಲಾಗಿದೆ. ಇವರ ಮನೆ ನೋಡಿದರೆ ಸ್ವಾತಂತ್ರ್ಯ ವೀರರ ವಸ್ತು ಸಂಗ್ರಹಾಲಯವಾಗಿದೆ. ಇಡೀ



ಮನೆಯು ಗ್ರಂಥರಾಶಿಯಿಂದ ತುಂಬಿದೆ. ಈಗಲೂ ಅವರು ಊಟಕ್ಕೆ ಕುಳಿತಿರಲಿ ಅಂಚೆಯಣ್ಣ ಪುಸ್ತಕ 'ವ್ಹೀಪಿ' ತಂದರೆ ಊಟ ಮಾಡುವುದು ಬಿಟ್ಟು 'ವ್ಹೀಪಿ' ಬಿಡಿಸಿಕೊಂಡು ಅದರಲ್ಲಿದ್ದ ಪುಸ್ತಕ ನೋಡಿ ಕಣ್ಣಿಗೆ ಒತ್ತಿಕೊಂಡು ಮತ್ತೆ ಊಟದ ತಾಟಿಗೆ ಕೈ ಹಾಕಿ ಊಟ ಮಾಡಿ ಬಂದು ಪುಸ್ತಕ ಓದುತ್ತ ಕುಳಿತುಕೊಳ್ಳುತ್ತಾರೆ. ಇವರಿಗೆ ರಾಜಕೀಯದಲ್ಲಿ ಎಷ್ಟು ಆಸಕ್ತಿ ಇದೆಯೋ ರಾಜಕೀಯ, ಸ್ವಾತಂತ್ರ್ಯಹೋರಾಟಗಾರರ ಗ್ರಂಥಗಳನ್ನು ಶೇಖರಿಸುವಲ್ಲಿಯ ಹುಚ್ಚು, ಓದುವ ಹುಚ್ಚು, ತಾವು ಓದಿದ ಗ್ರಂಥಗಳ ವಿಷಯ ತಮ್ಮ ಒಡನಾಡಿಗಳಿಗೆ ವಿವರಿಸಿ ಹೇಳುವ ಹುಚ್ಚು. ಇಂದಿಗೂ ಮುಂದುವರಿದು ಕೊಂಡು ಬಂದಿದೆ.

ಇವರನ್ನು 'ಆರ್ಯ ಸಮಾಜದ' ವ್ಯಾಪ್ತಿಗೆ ಬರಮಾಡಿಕೊಂಡ ಸ್ವಾಮಿ ರಾಮಗಿರಿಜಿ ಅವರು 'ಹಿಂದು ಪಂಚ' ಎಂಬ ಮಾಸಿಕ ಪತ್ರಿಕೆಯ 'ಕ್ರಾಂತಿ' ಎಂಬ ವಿಶೇಷಾಂಕ ಅದು 1906ರಲ್ಲಿಯೇ ಹೊರಬಂದ ಪತ್ರಿಕೆ. ಈ ಪತ್ರಿಕೆಯನ್ನು ಓದಲು ಸ್ವಾಮಿ ರಾಮಗಿರಿಜಿ ಅವರು ವಿದ್ಯಾಧರರಿಗೆ ಓದಲು ಕೊಟ್ಟರು. ಇದರಲ್ಲಿ ಕ್ರಾಂತಿಕಾರಿ ಕಥೆಗಳು, ವೀರ ಗೀತೆಗಳು, ಹಾಡುಗಳು



ವಿದ್ಯಾಧರ ಗುರೂಜಿ ಅವರ
ಪುಸ್ತಕ ಭಂಡಾರವನ್ನು
ವೀಕ್ಷಿಸುತ್ತಿರುವ
ಲಕ್ಷ್ಮಿ ಸೆಹಗಲ್

ಕ್ರಾಂತಿಕಾರರ ಜೀವನ ಚರಿತ್ರೆಗಳನ್ನೊಳಗೊಂಡ ಪತ್ರಿಕೆ. ಈ ಪತ್ರಿಕೆಯನ್ನೇ 'ವಿದ್ಯಾಧರ' ಅವರು ಮೊದಲು ಓದಿದ ಪತ್ರಿಕೆ. ಅಂದಿನಿಂದಲೂ ಇವರಿಗೆ ಓದುವ ಹವ್ಯಾಸ, ಅಭಿರುಚಿ ಹುಟ್ಟಿಕೊಂಡಿತು. ಹಾಗೆಯೇ ದಿಲ್ಲಿಯಿಂದ ಹೊರಬರುತ್ತಿದ್ದ 'ಜ್ಞಾನೋದಯ' ಮಾಸ ಪತ್ರಿಕೆ ಇವರ ಗುರುಗಳಿಂದಲೇ ಇವರ ಕೈ-ಸೇರಿತು. ಹಾಗೆಯೇ ಪೂನಾದಿಂದ ಹೊರಬರುತ್ತಿದ್ದ ಮರಾಠಿ ಭಾಷೆಯ 'ಶಾಲಾ ಪತ್ರಿಕೆ'ಯನ್ನು ನೋಡಿದರು. ಇವರಿಗೆ ಶಾಲೆಯಲ್ಲಿ ಉರ್ದು ಭಾಷೆಯೊಡನೆ ಮರಾಠಿ ಕಲಿತುಕೊಂಡಿರುವುದರಿಂದ ಮರಾಠಿ ಪತ್ರಿಕೆಯನ್ನೂ ಓದಿ ನೋಡತೊಡಗಿದರು.

ಹೈದರಾಬಾದದಿಂದ ಆರ್ಯಸಮಾಜ ಹೊರತರುತ್ತಲಿದ್ದ 'ಆರ್ಯ ಭಾನು' ಹಿಂದಿ ಪತ್ರಿಕೆ 'ಮಸಾವಾತ', 'ದಂಡಾ' ಉರ್ದು ಪತ್ರಿಕೆಗಳನ್ನು ಹಂತ ಹಂತವಾಗಿ ಓದುತ್ತ ಬಂದರು. ದಿಲ್ಲಿಯಿಂದ ಹೊರಬರುತ್ತಿದ್ದ 'ಆರ್ಯ ಜಗತ್ತು' ಪತ್ರಿಕೆ ಇವರನ್ನು ಆಕರ್ಷಿಸಿದವು. ಹೀಗೆ ಹಿಂದಿ, ಮರಾಠಿ, ಉರ್ದು ಭಾಷೆಯಲ್ಲಿ ಹೊರಬರುತ್ತಿದ್ದ ಪತ್ರಿಕೆಗಳನ್ನು ಓದಿ ಅಂದಿನ ವಿದ್ಯಮಾನವನ್ನು ತಿಳಿದುಕೊಳ್ಳುತ್ತಿದ್ದರು.

ಆಗ ಹಿಂದಿ ಭಾಷೆಯಲ್ಲಿ ಹೊರಬಂದ 'ಸ್ವಾಮಿದಯಾನಂದ ಸರಸ್ವತಿ', 'ಸ್ವಾಮಿ ಶ್ರದ್ಧಾನಂದ', 'ಸ್ವಾಮಿ ವಿವೇಕಾನಂದ'; ಜೀವನ ಚರಿತ್ರೆಗಳನ್ನು ಓದತೊಡಗಿದರು.

'ಸ್ವಾಮಿ ವಿವೇಕಾನಂದ'ರು ನಿಜವಾಗಿಯೂ ವೀರಸನ್ಯಾಸಿ ಅವರು 'ಧರ್ಮ'ವನ್ನು ಕುರಿತು ಹೇಳಿದ ಘಟನೆಯನ್ನು ಓದಿ ತುಂಬಾ ಪ್ರಭಾವಿತರಾದರು. ಅದು 1897ರಲ್ಲಿ ನಡೆದ ಒಂದು ಘಟನೆ. ಭಾರತದಲ್ಲಿ ಆಗ ಭೀಕರ ಬರಗಾಲ ತಲೆದೋರಿತ್ತು. ಬರಪೀಡಿತರ ಬಗ್ಗೆ ಸ್ವಾಮಿ ಅವರು ಅಪಾರ ಕಳಕಳಿ ಹೊಂದಿದ್ದರು. ಅಳುವಿನ ದನಿ ಅವರ ಹೃದಯವನ್ನು ತಟ್ಟುತ್ತಿತ್ತು. ಅವರೆಲ್ಲರ ಸಂಕಟ ಪರಿಹರಿಸುವ ಬಯಕೆಯನ್ನು ಅವರು ಹೊಂದಿದ್ದರು ತನ್ನ ದೇಶದ ಬಗ್ಗೆ ಸ್ವಾಮೀಜಿ ಹೊಂದಿದ್ದ ಅಪಾರ ಕಾಳಜಿ, ಕಳಕಳಿ, ಸಹಾನುಭೂತಿ ಅಚ್ಚರಿ ಹುಟ್ಟಿಸುವಂತಿತ್ತು. ಕೆಲವು ಸಂದರ್ಭಗಳಲ್ಲಿ ಸಿದ್ಧಾಂತ ಮತ್ತು ತತ್ವಜ್ಞಾನದ ಬಗ್ಗೆ ಚರ್ಚಿಸಲು ಬರುತ್ತಿದ್ದ ಪಂಡಿತರಿಗೆ ಪರಪೀಡಿತರ ವಿಷಯ ಮಾತಾಡುವಾಗ ನೀರಸವೆನಿಸುತ್ತಿತ್ತು. ಅಂತಹ



ಏಳಿ, ಎದ್ದೇಳಿ ಗುರಿ
ಮುಟ್ಟುವವರೆಗೆ ನಿಲ್ಲದಿರಿ
ಎಂದು ಸಿಂಹ ಗರ್ಜನೆ
ಗೈದು ಯುವಕರಲ್ಲಿ ಉತ್ಸಾಹ
ತುಂಬಿದ ವೀರಸನ್ಯಾಸಿ
ಸ್ವಾಮಿ ವಿವೇಕಾನಂದರು

ಒಂದು ಸಂದರ್ಭ ಇಲ್ಲಿ ವಿದ್ಯಾಧರ ಗುರೂಜಿ ಅವರು ಬಹು ಸ್ವಾರಸ್ಯಕರವಾಗಿ ಹೇಳುತ್ತಾರೆ.

'ಹಿತವಾದಿ' ಒಂದು ಪತ್ರಿಕೆ ಈ ಪತ್ರಿಕೆಯ ಸಂಪಾದಕರು ಪಂಡಿತ ಸಖಾರಾಮ ಗಣೇಶ ದೇವುಸ್ಕರ ತಮ್ಮ ಸ್ನೇಹಿತರೊಡನೆ ಸ್ವಾಮಿ ವಿವೇಕಾನಂದರ ಹತ್ತಿರ ಬಂದರು. ಇವರಲ್ಲಿ ಒಬ್ಬರು ಪಂಜಾಬ ಪ್ರಾಂತದವರೆಂದು ತಿಳಿದು ಅಲ್ಲಿಯ ಜನರ ಆಹಾರದ ಪರಿಸ್ಥಿತಿ, ಅದನ್ನು ಸರಿಪಡಿಸುವ ಬಗೆ ಶಿಕ್ಷಣ ನೀಡುವವರಲ್ಲಿ ಉಳ್ಳವರ ಕರ್ತವ್ಯ ಮತ್ತು ಅಂತಹ ಜನರ ಸಾಮಾಜಿಕ ಸ್ಥಿತಿಗತಿಯನ್ನು ಮೇಲಕ್ಕೆ ಎತ್ತುವ ಅಗತ್ಯದ ಬಗ್ಗೆ ಚರ್ಚೆ ನಡೆಯಿತು. ಕೊನೆಗೆ ಮಾತು ಮುಗಿಸಿ ಹೋಗುವ ಮುನ್ನ ಇವರು 'ಸ್ವಾಮೀಜಿ', 'ಧರ್ಮ'ದ ಬಗ್ಗೆ ಚರ್ಚಿಸಲು ಬಂದ ನಮಗೆ ಇಂದು ನಿಮ್ಮ ಮಾತು ಕೇಳಿ ನಿರಾಶೆಯಾಯಿತು ಎಂದರು. ಆಗ ಸ್ವಾಮೀಜಿ ಅವರು 'ನನ್ನ ದೇಶದ ಬೀದಿ ನಾಯಿ ಹಸಿದರೂ ಅದಕ್ಕೆ ಆಹಾರ ನೀಡಿ ಅದರ



ಬಗ್ಗೆ ಕಾಳಜಿ ವಹಿಸುವ ಬಗ್ಗೆಯೇ ನನ್ನ 'ಧರ್ಮ' ಚಿಂತಿಸುತ್ತದೆ. ಈ ಕಳಕಳಿ ಇರದಿದ್ದರೆ ಅದಾವ ಧರ್ಮ ಎಂದು ಹೇಳಿ ಸ್ವಾಮೀಜಿ ತುಸು ಗಂಭೀರರಾದರು.' ಇಂತಹ ಮಾರ್ಮಿಕ ಸಂಗತಿಗಳನ್ನು ಓದಿ ಅರ್ಥ ಮಾಡಿಕೊಂಡು ಪ್ರಸಂಗ ಬಂದಾಗ ಇಂತಹ ಅರ್ಥಪೂರ್ಣ ಮಾತುಗಳನ್ನು ವಿದ್ಯಾಧರ ಗುರೂಜಿ ಅವರು ಅನುಷ್ಠಾನಕ್ಕೆ ತರುತ್ತಿದ್ದರು. ಇಂತಹ ಓದೇ ಸಾರ್ಥಕವಾದ ಓದು ಎಂದು ಇವರ ಅಭಿಪ್ರಾಯ.

ಈ ಎಲ್ಲ ಪುಸ್ತಕಗಳು ಹಿಂದಿ, ಇಂಗ್ಲಿಷ್, ಮರಾಠಿ ಭಾಷೆಯಲ್ಲಿ ಅತ್ಯಂತ ಪಂಡಿತರು ಬರೆದ ಕೃತಿರತ್ನಗಳು ಎಂದು ಗುರೂಜಿ ಅವರು ಹೇಳುತ್ತಾರೆ.

ಆನಂತರ 'ಭಗತ್‌ಸಿಂಗ್' ಸುಖದೇವ, ರಾಜಗುರು ಚಂದ್ರಶೇಖರ ಅಜಾದ, ಮದನಲಾಲ ಧಿಂಗ್ರಾ, ಶೂರ ಸುಭಾಶ್ಚಂದ್ರಬೋಸ, 'ಮಹಾತ್ಮಾಗಾಂಧೀಜಿ' 'ವೀರ ಸಾವಕರ' ಮುಂತಾದ ಸ್ವಾತಂತ್ರ್ಯ ಹೋರಾಟಗಾರರ, ಹುತಾತ್ಮರ ಚರಿತ್ರೆಗಳು ಹೊರಬಂದವು. ಅವರೆಲ್ಲರ ಚರಿತ್ರೆ ಓದಿ ತಿಳಿದುಕೊಳ್ಳುವ ಹುಚ್ಚು ಒಂದು ಕಡೆ. ಸ್ವಾತಂತ್ರ್ಯಕ್ಕಾಗಿ ಹೋರಾಡುವ ಹುಚ್ಚು ಇನ್ನೊಂದು ಕಡೆ. 'ನನ್ನ ಜೀವನವೇ ಒಂದು ಪುಸ್ತಕ'ವಾಗಿಬಿಟ್ಟಿತ್ತು ಎನ್ನುತ್ತಾರೆ ವಿದ್ಯಾಧರ ಗುರೂಜಿ ಅವರು.


ಮಹಾನ್ ಕ್ರಾಂತಿಕಾರಿ ಲೇಖಕ. ಸಾಹಿತಿ ಡಾ॥ ಮನ್ಮಥನಾಥ ಗುಪ್ತಾ ರಚಿಸಿದ 'ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ' ಕೃತಿಗಳು ಓದಲು ಸಿಗುವುದೇ ದುರ್ಲಭವಾಗಿತ್ತು. ಅದನ್ನು ತರಿಸಿಕೊಂಡು ಓದಿದಾಗಲೇ ಸಮಾಧಾನ ವಾಯಿತೆಂದು ಹೇಳುತ್ತಾರೆ. ಡಾ॥ ಮನ್ಮಥನಾಥ ಗುಪ್ತಾ ರಚಿಸಿದ 'ಸಂಪೂರ್ಣ ಸಾಹಿತ್ಯ' ತರಿಸಿಕೊಂಡು ಮನೆಯಲ್ಲಿ ಒಂದು 'ವಾಚನಾಲಯ'ವೇ ನಿರ್ಮಾಣವಾಯಿತು.

ಹಿಂದಿಯಲ್ಲಿ ಬಂದ ಇವರ ಸಾಹಿತ್ಯ ಓದಿ ವಿದ್ಯಾಧರ ಗುರೂಜಿ ಅವರ ಧರ್ಮಪತ್ನಿ ಡಾ॥ ಸವಿತಾದೇವಿ ಗುರೂಜಿ ಅವರು ಆಳವಾಗಿ ಅಭ್ಯಾಸಮಾಡಿ ಡಾ॥ ಮನ್ಮಥನಾಥ ಗುಪ್ತಾ ಅವರ ಮೇಲೆ ಸಂಶೋಧನಾತ್ಮಕ ಮಹಾಪ್ರಬಂಧ ಬರೆದು ಡಾಕ್ಟರೇಟ್ ಪದವಿಯನ್ನು ಸಂಪಾದಿಸಿದರು. ಹೀಗೆ ದಂಪತಿಗಳಿಬ್ಬರೂ ಸಾಹಿತ್ಯ ವಿದ್ಯಾರ್ಥಿಗಳೆಂದು ಬರೆಯಲು ಹೆಮ್ಮೆ ಎನಿಸುತ್ತದೆ.

ಈಗ ಅವರ ಮನೆಯ ವಾಚನಾಲಯದಲ್ಲಿ 'ಸಂಯುಕ್ತ ಕರ್ನಾಟಕ' ಕನ್ನಡ ದಿನಪತ್ರಿಕೆ, 'ಕರ್ಮವೀರ' ಕನ್ನಡ ವಾರಪತ್ರಿಕೆ 'ಕಸ್ತೂರಿ' ಮಾಸಪತ್ರಿಕೆ. ಇತ್ಯಾದಿ ಪತ್ರಿಕೆಗಳು ತಪ್ಪದೇ ಬರುತ್ತವೆ. ಮೊದಲು ಸಭೆ ಸಮ್ಮೇಳನಗಳಲ್ಲಿ 'ಹಿಂದಿ ಭಾಷೆ'ಯಲ್ಲಿ ಮಾತಾಡುತ್ತಿದ್ದರು. ಈಗ ಕನ್ನಡದಲ್ಲಿಯೂ ನಿರರ್ಗಳವಾಗಿ ಮಾತನಾಡುತ್ತಾರೆ.

'ಹಿಂದು' ಇಂಗ್ಲಿಷ್ ದಿನಪತ್ರಿಕೆ ತರುಣಭಾರತ 'ಹಿಂದಿ', 'ಮರಾಠಿ' ಭಾಷೆಯ ಪತ್ರಿಕೆಗಳು ಬರುತ್ತವೆ. ಉರ್ದು ಪತ್ರಿಕೆಯನ್ನು ತರಿಸಿಕೊಳ್ಳುತ್ತಾರೆ. ಒಟ್ಟಿನಲ್ಲಿ ಎಲ್ಲ ಭಾಷೆಯ ಪತ್ರಿಕೆ ಓದುವರಲ್ಲಿ ಇವರಿಗೆ ತುಂಬ ಇಷ್ಟ.

ಹೀಗೆ ವಿದ್ಯಾಧರ ಗುರೂಜಿ ಅವರು ತಮ್ಮ ಕಿಶೋರಾವಸ್ಥೆಯಲ್ಲಿಯೇ ಓದುವ ಅಭಿರುಚಿ ಬೆಳೆಸಿಕೊಂಡು ಪುಸ್ತಕಪ್ರೇಮಿ ಎನಿಸಿಕೊಂಡರು. ಇಂದು ಈ ಶತಮಾನೋತ್ಸವದ ಮಹತ್ವಪೂರ್ಣ ಸಮಾರಂಭದಲ್ಲಿ ಅವರ ತುಲಾಭಾರ ನಡೆಯುತ್ತಿರುವುದು ಅಮಿತ ಚಕ್ರವರ್ತಿ ಸೂಲಿಬೆಲೆ ಬರೆದ ವೀರಸಾವರಕರ ಪುಸ್ತಕಗಳಿಂದಲೇ ಎಂದ ಮೇಲೆ ಅವರ ರಾಷ್ಟ್ರಪ್ರೇಮ, ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕ್ರಾಂತಿಪುರುಷರ ಬಗ್ಗೆ ಇದ್ದ ಅಭಿಮಾನ ಎಷ್ಟು ಎಂಬುದು ನೀವೇ ವಿಚಾರಿಸಿರಿ.




ಬಹುಭಾಷಾ ಪಂಡಿತ ವಿದ್ಯಾಧರ ಗುರೂಜಿ ಅವರು

ಮಾತೃಭಾಷೆ ತೆಲುಗು ಭಾಷೆಯಲ್ಲಿಯೂ ಅಭ್ಯಾಸಮಾಡಿ ಪಾಂಡಿತ್ಯ ಗಳಿಸಿಕೊಂಡಿದ್ದಾರೆ. ಗುರೂಜಿ ಅವರು ಹಿಂದಿಭಾಷೆಯೊಡನೆ ಸಂಸ್ಕೃತ, ಉರ್ದು, ಕನ್ನಡ, ಮರಾಠಿ, ಇಂಗ್ಲೀಷ್ ಭಾಷೆಯಲ್ಲಿಯೂ ಖಾಸಗಿಯಾಗಿ ಅಭ್ಯಾಸ ಮಾಡಿದ್ದಾರೆ. ನಿತ್ಯ ಅವರು ಹಿಂದಿ, ಉರ್ದು, ಕನ್ನಡ, ಮರಾಠಿ ಇಂಗ್ಲೀಷ್ ಭಾಷೆಯ ಪತ್ರಿಕೆಗಳನ್ನು ತರಿಸಿಕೊಂಡು ಓದುವ ಪರಿಪಾಠ ಬೆಳೆಸಿಕೊಂಡರು. ಇವರ ಮನೆ ಒಂದು ಪುಸ್ತಕ ಭಂಡಾರವೇ ಆಗಿದೆ.

ಸಕಲ ಧರ್ಮಗ್ರಂಥಗಳು ಸ್ವಾತಂತ್ರ್ಯ ಹೋರಾಟಗಾರರ ಕೃತಿರತ್ನಗಳು. ಐತಿಹಾಸಿಕ ಪುಸ್ತಕಗಳು ಹಿಂದಿಯಲ್ಲಿಯೂ ಕನ್ನಡದಲ್ಲಿಯೂ ಪ್ರಕಟವಾದ ರಾಮಾಯಣ, ಮಹಾಭಾರತ ಮಹದ್ಗ್ರಂಥಗಳು ಇವರ ಮನೆಯಲ್ಲಿ ಲಭ್ಯವಿದೆ. ಭಗವದ್ಗೀತೆ, ಬೈಬಲ್, ಕುರ್ಆನ್ ಗ್ರಂಥಗಳನ್ನು ಓದಿ ಅಭ್ಯಾಸಮಾಡಿ ತಿಳಿದುಕೊಂಡಿದ್ದಾರೆ. ಮಹಾರಾಷ್ಟ್ರದಲ್ಲಿ ಆಗಿಹೋದ ಸಂತರ, ಕನ್ನಡ





ನಾಡಿನಲ್ಲಿ ಆಗಿಹೋದ ಶರಣರ, ದಾಸರ ತಮಿಳುನಾಡಿನಲ್ಲಿ ಆಗಿಹೋದ ಪುರಾತನ ಚರಿತ್ರೆಗಳನ್ನು ತರಿಸಿಕೊಂಡು ಓದಿ ಅರ್ಥಮಾಡಿಕೊಂಡಿದ್ದಾರೆ. ಮರಾಠಿಯಲ್ಲಿ ಸಂತಜ್ಞಾನೇಶ್ವರರು ರಚಿಸಿದ 'ಜ್ಞಾನೇಶ್ವರಿ' ಮರಾಠಿ ಗ್ರಂಥ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರಗಳನ್ನು ಓದಿ ರಾಜನೀತಿಜ್ಞರೆನಿಸಿಕೊಂಡಿದ್ದಾರೆ.

ಕನ್ನಡದಲ್ಲಿ ಹೊರಬಂದ ವಚನಸಾಹಿತ್ಯ, ದಾಸಸಾಹಿತ್ಯ ಮರಾಠಿಯ ಸಂತರು ರಚಿಸಿದ ಅಭಂಗಳ ಮೇಲೆಯೂ ಕಣ್ಣಾಡಿಸದೇ ಬಿಟ್ಟಿಲ್ಲ. ತಮ್ಮ ಭಾಷಣದಲ್ಲಿ ವಚನಗಳನ್ನು, ಅಭಂಗಗಳನ್ನು ಉರ್ದು ಕವಿಗಳು ರಚಿಸಿದ ಶಾಹಿರಿಗಳನ್ನು ಉದಾಹರಣೆಗಳೊಂದಿಗೆ ಹೇಳಿ ಸಭಿಕರನ್ನು ಮಂತ್ರಮುಗ್ಧ ಗೊಳಿಸುತ್ತಾರೆ.

ಶಹಜಾನಾಪುರದ ರಾಮಚಂದ್ರಜಿ ಅವರ ಸಹಜಮಾರ್ಗ ಪ್ರಜಾಪತಿ ಈಶ್ವರೀಯ ವಿಶ್ವವಿದ್ಯಾಲಯ ಬ್ರಹ್ಮಕುಮಾರಿಯರ ಯೋಗಜ್ಞಾನದ ಅನುಭವಗಳನ್ನೆಲ್ಲ ಅರಿತವರಾಗಿದ್ದಾರೆ. ಅವರೊಡನೆ ಇವರಿಗೆ ಒಡನಾಟವೂ ಇದೆ. ಪಾಂಡಿಚೇರಿಯ ಅರವಿಂದಾಶ್ರಮದ ಸಂಪರ್ಕವನ್ನು ವಿದ್ಯಾಧರ ಗುರೂಜಿ ಅವರು ಇಟ್ಟುಕೊಂಡಿದ್ದಾರೆ ಹೀಗೆ ಸಕಲ ಮತ, ಪಂಥ, ಪಂಗಡ ವರ್ಣ, ವರ್ಗಗಳ ಜನರೊಡನೆ ಸಂಪರ್ಕ ಇಟ್ಟುಕೊಂಡು ಎಲ್ಲರೊಳ ಗೊಂದಾಗಿ ಹೋಗುವ ಮಹಾನ್ ವ್ಯಕ್ತಿ ವಿದ್ಯಾಧರ ಗುರೂಜಿ ಅವರು.

ಹೈದರಾಬಾದ್ ಹಿಂದಿ ಪ್ರಚಾರ ಸಭಾ ಅಡಿಯಲ್ಲಿ ನಡೆಯುತ್ತಿರುವ ಚಟುವಟಿಕೆಗಳನ್ನು ಗುರುಮಠಕಲ್ಲ ಹೋಬಳಿಮಟ್ಟದಿಂದ ಯಾದಗಿರಿ ತಾಲೂಕ ಮಟ್ಟದಿಂದ ಜಿಲ್ಲಾ ಮಟ್ಟಕ್ಕೂ ತಂದು ಹಿಂದಿ ವಿಷಯವನ್ನು ಜನಪ್ರಿಯಗೊಳಿಸಿದರು. ಹಿಂದಿ ಪ್ರಚಾರ, ಪ್ರಸಾರ ಮಾಡುತ್ತ ವಿದ್ಯಾಧರ ಗುರೂಜಿ ಅವರು 1975ರಲ್ಲಿ ಗುಲಬರ್ಗಾ ನಗರಕ್ಕೆ ಬಂದರು. ಗುಟುಗುಟು ಎಂದು ಜೀವ ಹಿಡಿದು ಮೂಲೆಗುಂಪಾಗಿದ್ದ ಗುಲಬರ್ಗಾ ಹಿಂದಿಪ್ರಚಾರ ಸಭಾ ತಮ್ಮ ಕೈಗ ತೆಗೆದುಕೊಂಡು ಅದಕ್ಕೆ ಹೊಸ ಜೀವಕಳೆ ತಂದುಕೊಟ್ಟರು.

1980 ರಲ್ಲಿ 'ಹೈದರಾಬಾದ್ ಹಿಂದಿ ಪ್ರಚಾರ ಸಭಾ' ಅಧ್ಯಕ್ಷರಾಗಿ ಸುಮಾರು 23 ವರ್ಷಗಳವರೆಗೆ ಸೇವೆ ಸಲ್ಲಿಸಿದರು. ಹೈದರಾಬಾದ್ ನಿಜಾಮ ಸಂಸ್ಥಾನದಲ್ಲಿ ಅಸ್ತಿತ್ವಕ್ಕೆ ಬಂದ ಹೈದರಾಬಾದ್ ಹಿಂದಿ ಪ್ರಚಾರ ಸಭಾ ಈಗ ಮೂರು ರಾಜ್ಯಗಳ ವ್ಯಾಪ್ತಿಗೆ ಒಳಪಟ್ಟಿದೆ.



ಮಹಾತ್ಮಾಗಾಂಧೀಜಿ ಶತಮಾನೋತ್ಸವ

ಅದು 1969ನೆಯ ಇಸವಿ. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ನೊಗ ಹೊತ್ತ ಜೋಡೆತ್ತಿನ ಗುರುತಿನ ಕಾಂಗ್ರೆಸ್ ಪಕ್ಷ ಒಡೆದು ಇಬ್ಭಾಗ ವಾಯಿತು. ಘಟಾನುಘಟಿ ಕಾಂಗ್ರೆಸ್ ನಾಯಕರು ಇಬ್ಭಾಗವಾದರು. ಕೆಲವರು ಸಿಂಡಿಕೇಟ್ ಅಂದರೆ ಸಂಸ್ಥಾ ಕಾಂಗ್ರೆಸ್ ಪಕ್ಷದಲ್ಲಿಯೇ ಉಳಿದರು. ಇನ್ನು ಕೆಲವರು ಇಂಡಿಕೇಟ್ ಅಂದರೆ ಇಂದಿರಾ ಕಾಂಗ್ರೆಸ್ ಪಕ್ಷಕ್ಕೆ ಬಂದರು. ಹೀಗೆ ಕಾಂಗ್ರೆಸ್ ಪಕ್ಷ ಒಡೆದು 'ಇಂಡಿಕೇಟ್ – ಸಿಂಡಿಕೇಟ್' ಎರಡು ಬಣಗಳಾದವು. ಈ ಎರಡೂ ಬಣ ದಲ್ಲಿದ್ದವರು ಹಳೆಯ ಕಾಂಗ್ರೆಸ್ ಧುರೀಣರೇ ಆದರೂ ಇಂಡಿಕೇಟ್ ಕಾಂಗ್ರೆಸ್ಸಿನ ನಾಯಕಿ ಶ್ರೀಮತಿ ಇಂದಿರಾಗಾಂಧೀಜಿ ಅವರು. ಇಂದಿರಾ ಗಾಂಧೀಜಿ ಅವರ ನಾಯಕತ್ವದಲ್ಲಿ ಅಸ್ತಿತ್ವಕ್ಕೆ ಬಂದ ಇಂಡಿಕೇಟ್ ಕಾಂಗ್ರೆಸ್ ಪಕ್ಷದ ಗುರುತಿನ ಚಿನ್ಹೆ ಹಾಲು ಕುಡಿಯುತ್ತಿರುವ 'ಕರು ಮತ್ತು ಆಕಳು'. ಇಂದಿರಾಗಾಂಧಿ ಅವರ ನಾಯಕತ್ವದ ಕಾಂಗ್ರೆಸ್ ಪಕ್ಷ ಎಲ್ಲ ಕಡೆಗೂ ತನ್ನ ಪ್ರಭಾವ



ಬೀರಿತು. ಯಾರು ಯಾವ ಪಕ್ಷದಲ್ಲಿದ್ದಾರೆ ಎಂದು ಹೇಳುವುದು ತುಂಬಾ ಕಷ್ಟವಾಗಿತ್ತು. ವಿದ್ಯಾಧರ ಗುರೂಜಿ ಅವರಿಗೆ ಇಂಡಿಕೇಟ್ ಕಾಂಗ್ರೆಸ್ಸಿನಲ್ಲಿ ಸೇರಲು ಬಲವಾದ ಒತ್ತಡ ಬಂದಿತು. ಇಂಡಿಕೇಟ್ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಶ್ರೀ ಬಾಬು ಜಗಜೀವನ ರಾಮ ಅವರೇ ಖುದ್ದಾಗಿ ವಿದ್ಯಾಧರ ಗುರೂಜಿ ಯವರನ್ನು ಕೈಮಾಡಿ ಕರೆದರು. (ಇಂದು ಮಾಜಿ ಮುಖ್ಯಮಂತ್ರಿಗಳೆಂದು ಜನಪ್ರಿಯರಾದ) ಧರ್ಮಸಿಂಗ ಜಿ, ಅಣ್ಣಾರಾವ ವೀರಭದ್ರ ಪಾಟೀಲ, ಶ್ರೀ ಅಮರೇಗೌಡ ಪಾಟೀಲ, ಸಿದ್ಧವೀರಪ್ಪನವರು, ಕೋಲೂರು ಮಲ್ಲಪ್ಪನವರು ಕಲಾಪುರದ ಶಂಕರಶೆಟ್ಟಿ ಪಾಟೀಲರು ಮುಂತಾದ ಘಟಾನು ಘಟಿಗಳು, ರಾಜಕೀಯ ಮುತ್ಸದ್ದಿಗಳು "ಗುರೂಜಿ ಅವರೆ, ನೀವು ಇಂಡಿಕೇಟ್ ಕಾಂಗ್ರೆಸ್ಸಿಗೆ ಬಂದರೆ ನಿಮ್ಮ ಜೀವನದ ರೂಪುರೇಷೆಗಳೇ ಬೇರೆಯಾಗುತ್ತವೆ. ನೀವು ನಿಮ್ಮ ಭವಿಷ್ಯದೊಡನೆ ನಿಮ್ಮ ಹಿಂದೆ ಇದ್ದ ಅಸಂಖ್ಯಾತ ಬಡವರ ಹಿಂದುಳಿದವರ ಬಾಳಿಗೆ ಬೆಳಕಾಗುತ್ತೀರಿ. ಇಂಡಿಕೇಟ್ ಕಾಂಗ್ರೆಸ್ ಪಕ್ಷ ಗರೀಬಿ ಹಟಾವೋ ಚಳುವಳಿಯನ್ನು ಮುಂದಿಟ್ಟುಕೊಂಡೇ ಹೊರಬಂದಿದೆ." ಎಂದು ಹೇಳಿದರೂ ವಿದ್ಯಾಧರ ಗುರೂಜಿ ಅವರು ಲೋಕ ಸೇವಕ ಸಂಘದ ಧುರೀಣ ವಿಶ್ವನಾಥರೆಡ್ಡಿ ಮುದ್ನಾಳ ಅವರನ್ನು ಬಿಟ್ಟು ಹೋಗಲು ಇಷ್ಟಪಡಲಿಲ್ಲ. ಇದು ವಿಶ್ವನಾಥರೆಡ್ಡಿ ಮುದ್ನಾಳ ಮತ್ತು ವಿದ್ಯಾಧರ ಗುರೂಜಿ ಅವರ ಸ್ನೇಹ ಜೀವನದ ಸತ್ವಪರೀಕ್ಷೆಯ ಇನ್ನೊಂದು ಪ್ರಸಂಗವೆಂದು ಹೇಳಬಹುದು.

ವಿಶ್ವನಾಥರೆಡ್ಡಿ ಮುದ್ನಾಳ ಅವರಿಗೂ ಇಂಡಿಕೇಟ್ ಕಾಂಗ್ರೆಸ್ ಸೇರಲು ಬಲವಾದ ಒತ್ತಾಯ ಬಂದರೂ ಅವರೂ ಸಹ ತಮ್ಮ ನಿರ್ಧಾರವನ್ನು ಬದಲಿಸಲಿಲ್ಲ. "ಈ ಮೊದಲು ನಾವು ಪ್ರಬಲವಾದ ಕಾಂಗ್ರೆಸ್ ಪಕ್ಷವನ್ನೇ ಎದುರಿಸುತ್ತ ಬಂದಿದ್ದೇವೆ. ಈಗ ಒಡೆದು ಎರಡು ಹೋಳಾಗಿ ಹೋದ ಈ ದುರ್ಬಲ ಕಾಂಗ್ರೆಸ್ಸನ್ನು ಎದುರಿಸಿ ಯಶಸ್ವಿಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲವೆಂದು ಹೇಳಿ ನಾವು ವಿರೋಧ ಮಾಡುವ ಬಣದಲ್ಲಿಯೇ ಇರುತ್ತೇವೆ" ಎಂದು ತಮ್ಮ ನಿರ್ಧಾರವನ್ನು ಪ್ರಕಟಿಸಿದರು. ಈ ಪ್ರಕಟಣೆಯಲ್ಲಿ ಹಿಂದುಳಿದ ವರ್ಗದ ಧುರೀಣರೂ, ತುಳಿಯಲ್ಪಟ್ಟ ಜನರ ರೂವಾರಿಗಳೂ ಆದ ವಿದ್ಯಾಧರ ಗುರೂಜಿ ಅವರ ಅಭಿಪ್ರಾಯವೂ ಅಡಕವಾಗಿತ್ತು.

ಹೀಗೆ ರಾಜಕೀಯ ನಾಯಕರ ಮನಸ್ಸುಗಳು ಒಡೆದು ರಾಜಕೀಯ ಕ್ಷೇತ್ರ ಅಲ್ಲೋಲ ಕಲ್ಲೋಲವಾಗಿತ್ತು (ಸಿಂಡಿಕೇಟ್) ಸಂಸ್ಥಾ ಕಾಂಗ್ರೆಸ್ಸಿನಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಉಳಿದುಕೊಂಡಿದ್ದರೆ ಅತ್ಯಂತ ಮುಂದುವರಿದ ಜನಾಂಗದ ತುಳಿತಕ್ಕೆ ಒಳಗಾಗಿ ಹತಾಶರಾಗಿದ್ದ ಕಾಂಗ್ರೆಸ್ ನಾಯಕರು, ಕೆಳವರ್ಗದ ಕಾಂಗ್ರೆಸ್ ನಾಯಕರು ಒಮ್ಮತಕ್ಕೆ ಬಂದು ಇನ್ನು ಮುಂದೆ ಯುವಕರಿಗೂ ಆದ್ಯತೆ ನೀಡಿ ಇಂಡಿಕೇಟ್ ಕಾಂಗ್ರೆಸ್ ಪಕ್ಷವನ್ನು ಬಲ ಪಡಿಸೋಣವೆಂದು ಹೇಳಿ ಎಲ್ಲಾ ಜಾತಿಯ ಯುವಕರಿಗೂ ಯುವತಿಯರಿಗೂ ಆದ್ಯತೆ ನೀಡಿದರು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೇ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮಾಗಾಂಧೀಜಿ ಅವರ ಶತಮಾನೋತ್ಸವ ಆಗಮಿಸಿತು. ಈ ಶತಮಾನೋತ್ಸವ ಅರ್ಥಪೂರ್ಣವಾಗಿ ಯಾದಗಿರಿಯಲ್ಲಿ ಆಚರಿಸಲು ವಿದ್ಯಾಧರ ಗುರೂಜಿ ಅವರು ಲೋಕಸೇವಕ ಸಂಘದ ಧುರೀಣರೂ ಆದ ವಿಶ್ವನಾಥರೆಡ್ಡಿ ಅವರು ಮುಂದಾದರು.

1969ರಲ್ಲಿ ರಾಷ್ಟ್ರಾದ್ಯಂತ ಮಹಾತ್ಮಾಗಾಂಧೀಜಿಯವರ ಶತಮಾನೋತ್ಸವ ಅರ್ಥಪೂರ್ಣವಾಗಿ ಆಚರಿಸುವ ಸಂದರ್ಭ ಒದಗಿ ಬಂದಾಗ ಬಹಳ ಕಡೆ ಕಂದಾಚಾರಕ್ಕೆಂಬಂತೆ-ಆಚರಣೆಗೊಂಡಿತು. ಆದರೆ ಯಾದಗಿರಿಯಲ್ಲಿ ಗಾಂಧೀಜಿ ಅವರ ಶತಮಾನೋತ್ಸವ ಬಹಳ ಅರ್ಥಪೂರ್ಣವಾಗಿ ನಡೆಯಿತು. ವಿಶ್ವನಾಥರೆಡ್ಡಿ ಮುದ್ನಾಳ ಅವರು ಗಾಂಧೀಜಿ ಅವರ ಅಸ್ಪೃಶ್ಯತಾ ನಿವಾರಣಾ ಕಾರ್ಯವನ್ನು ಕೈಗೆತ್ತಿಕೊಂಡರೆ ವಿದ್ಯಾಧರ ಗುರೂಜಿ ಅವರು ಗಾಂಧೀಜಿ ಅವರ ಪ್ರಕೃತಿ ಚಿಕಿತ್ಸಾ ವಿಚಾರ ಕಾರ್ಯವನ್ನು ಕೈಗೆತ್ತಿಕೊಂಡರು.

1970ರ ಆಸುಪಾಸು. ಯಾದಗಿರಿಯಲ್ಲಿ ವಿದ್ಯಾಧರ ಗುರೂಜಿ ಅವರ ಪ್ರೇರಣೆಯಿಂದ ವಿಶ್ವನಾಥ ರೆಡ್ಡಿ ಮುದ್ನಾಳ ಅವರು 'ಅಸ್ಪೃಶ್ಯತಾ ನಿವಾರಣಾ' ಕಾರ್ಯಕ್ರಮ ಕೈಕೊಂಡರು. ಗುರುಮಠಕಲ್ಲದಲ್ಲಿ ಗುರುನಾಥರೆಡ್ಡಿ ಮಾಲಿ ಪಾಟೀಲರಂತೆ ಯಾದಗಿರಿಯಲ್ಲಿ ವಿಶ್ವನಾಥರೆಡ್ಡಿ ಮುದ್ನಾಳ ಅವರೂ ಸಹ ದಿಟ್ಟ ಹೃದಯದ ನೇರ ಮಾತಿನ ಅಚ್ಚಕನ್ನಡ ವೀರ, ಛಲದಂಕ ಮಲ್ಲ. 'ಅಸ್ಪೃಶ್ಯತೆ' ನಮ್ಮ ದೇಶಕ್ಕೆ ಅಂಟಿದ ಒಂದು ರೋಗ. ಈ ರೋಗ ನಿವಾರಣೆಗಾಗಿ ಇವರೂ ಸಹ 'ಸಹಪಂಕ್ತಿ ಭೋಜನ' ಏರ್ಪಡಿಸಲು

ನಿರ್ಧರಿಸಿದರು. ಮನೆಗೆ ಒಂದು ರೊಟ್ಟಿ, ಪಲ್ಲೆ, ಯಾದಗಿರಿ ಎಲ್ಲ ಮನೆಗಳಿಂದಲೂ ಬರಮಾಡಿಕೊಳ್ಳುವ ಅಭಿಯಾನ ಪ್ರಾರಂಭಿಸಿದರು. ಅಂದು ಮೆರವಣಿಗೆಯಲ್ಲಿ ಊರಿನ ಎಲ್ಲ ಪ್ರಮುಖರೊಡನೆ ದುಡಿಯುವ ಎಲ್ಲ ಪ್ರಕಾರದ ಜನರೂ ಬಂದು ಸೇರಿದರು. ಈ ಮೆರವಣಿಗೆಯ ಮುಂದೆ ಹಳ್ಳಿಯ ಜನಪದ ವಾದ್ಯ ಕಲಾವಿದ ಕಲಾಪ್ರದರ್ಶನ ನೋಡತಕ್ಕಂತೆ ಮೆರವಣಿಗೆ ಹೊರಟಿತ್ತು. ಮೆರವಣಿಗೆಯ ಮಗ್ಗುಲಲ್ಲಿ ಮನೆಗಳಿಂದ ಬರುವ ಕಂತಿ ಭಿಕ್ಷೆ ಸ್ವೀಕರಿಸುವ ಯುವಕರು ಹರಿಜನರು, ಲಿಂಗಾಯತರೂ ಎಂಬ ಭೇದ ಭಾವವಿಲ್ಲದೆ ಏಕೋಭಾವನೆಯಿಂದ ಮುಗ್ಧ ಮನಸ್ಸಿನಿಂದ ಸ್ವೀಕರಿಸಲಾಗುತ್ತಿತ್ತು.

ಮಧ್ಯಾಹ್ನ ಮೆರವಣಿಗೆ ಮುಕ್ತಾಯವಾದಂತೆ ಸರಕಾರಿ ಪ್ರೌಢಶಾಲೆಯ ಆವರಣದಲ್ಲಿ ಸಹಭೋಜನ, ಸಹಪಂಕ್ತಿ ಪ್ರಾರಂಭವಾಯಿತು. ಈ ಪಂಕ್ತಿಯಲ್ಲಿ ಬಡಿಸುವವರು ಹರಿಜನ ಮಹಿಳೆಯರು. ಊರಿನ ಇನ್ನಿತರ ಎಲ್ಲ ತರದ ಜನರೂ ಸೇರಿ 'ಅಸ್ಪ ೃಶ್ಯತಾ ನಿವಾರಣೆಗೆ' ಟೊಂಕಕಟ್ಟಿ ನಿಂತರು. ಈ ಸಂದರ್ಭದಲ್ಲಿ ಊರಿನ ಯುವಕರಾಗಿದ್ದ ವೀರಪ್ಪ, ಒಡ್ಡರ ನಾಗಪ್ಪ, ಮಲ್ಲಯ್ಯ ಬೀರನೂರು, ಖಂಡಪ್ಪ ದಾಸನ್ ಮೂರ್ತಿ, ಹೆಡಗಿ ಮದರಿ ತಿಮ್ಮಣ್ಣ ಮುಂತಾದ ಯುವಕರು ತಮ್ಮ ತಮ್ಮ ಸರಸ ಸಜ್ಜನಿಕೆಯಿಂದ ಮೃದು ಮಧುರ ಸ್ವಭಾವದಿಂದ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಅಂದು ಸಹಭೋಜನ, ಸಹ ಪಂಕ್ತಿಯಲ್ಲಿ ಕೂಡಿದ ಸಕಲ ಜನ ಸಮೂಹದ ಮಧ್ಯದಲ್ಲಿ ಈ 'ಅಸ್ಪ ೃಶ್ಯತೆ' ನಿವಾರಣೆಯಾಗುವತನಕ ನಾನು 'ಕಂತಿ' ಭಿಕ್ಷೆ ಮಾಡಿ ಊಟ ಮಾಡುತ್ತೇನೆ ಎಂದು 'ಪ್ರತಿಜ್ಞೆ' ಗೈದರು ವಿಶ್ವನಾಥ ರೆಡ್ಡಿ ಮುದ್ನಾಳ ಅವರು. ಅಂದು ವಿಶ್ವನಾಥರೆಡ್ಡಿ ಮುದ್ನಾಳ ಅವರು ಜನರ ಕಣ್ಣಲ್ಲಿ, ಜನರ ಮನಸ್ಸಿನಲ್ಲಿ ಹನ್ನೆರಡನೆಯ ಶತಮಾನದ ಅಣ್ಣಬಸವಣ್ಣನವರಂತೆ ಕಾಣತೊಡಗಿದರು. ಇದರ ಮಗ್ಗಲಿನಲ್ಲಿದ್ದ 'ವಿದ್ಯಾಧರ ಗುರೂಜಿ' ಅವರು ಅಲ್ಲಮ ಪ್ರಭುಗಳಂತೆ ಕಂಗೊಳಿಸತೊಡಗಿದರು.

ಯಾದಗಿರಿ ತಾಲೂಕಿನಲ್ಲಿ 146 ಹಳ್ಳಿಗಳು. ಈ ಹಳ್ಳಿಗಳಲ್ಲಿ ಈ ಅಭಿಯಾನ ಏರ್ಪಡಿಸಿ 'ಅಸ್ಪಶ್ಯತಾ' ನಿವಾರಣೆಯಾಗಬೇಕು. ಅಲ್ಲಿಯವರೆಗೆ ತಾವು 'ಕಂತಿ ಭಿಕ್ಷೆ'ಯಲ್ಲಿಯೇ ಇರಬೇಕು ಎಂದು ಮಾಡಿದ ಪ್ರತಿಜ್ಞೆ ಮುಂದುವರಿಯಿತು. 146 ಹಳ್ಳಿಗಳಲ್ಲಿ 'ಅಸ್ಪಶ್ಯತಾ ನಿವಾರಣೆ' ಕಾರ್ಯಕ್ರಮ



ನಿಸರ್ಗದ ಮಡಿಲಲ್ಲಿ
ವಿದ್ಯಾಧರ ಗುರೂಜಿ

ನಡೆದು ಈ ಕಾರ್ಯಕ್ರಮದ ಮುಕ್ತಾಯ ಸಮಾರಂಭ ಯಾದಗಿರಿಯಲ್ಲಿ ಅರ್ಥಪೂರ್ಣವಾಗಿ ನಡೆಯಿತು. ಈ 146 ದಿನಗಳು 'ವಿದ್ಯಾಧರ ಗುರೂಜಿ' ಅವರು ವಿಶ್ವನಾಥರೆಡ್ಡಿ ಮುದ್ನಾಳ ಅವರ ಜೊತೆಗೆ ಇದ್ದು ಅಭಿಯಾನ ಯಶಸ್ವಿಯಾಯಿತು. ನಿಜವಾಗಿ ಅಂದಿನಿಂದ 'ಮುಟ್ಟಿ ತಟ್ಟಿ' ಎಂಬ ಶಬ್ದ ತನ್ನ ಅರ್ಥವನ್ನು ಕಳೆದುಕೊಂಡಿತು.

ಮೊದಲಿನಿಂದಲೂ ವಿದ್ಯಾಧರ ಗುರೂಜಿ ಅವರಿಗೆ ಪ್ರಕೃತಿ ಚಿಕಿತ್ಸೆ, ಬಹಳ ಇಷ್ಟವಾದ ವಿಷಯವಾಗಿತ್ತು. ವಿದ್ಯಾಧರ ಗುರೂಜಿ ಅವರಿಗೆ ನಿಸರ್ಗ ರಮ್ಯ ತಾಣವೆಂದರೆ ಎಲ್ಲಿಲ್ಲದ ಹರುಷ ಆನಂದ. ತಮಗೆ ಬಿಡುವು ಸಿಕ್ಕಾಗ ಪ್ರಕೃತಿಯ ಮಧ್ಯದಲ್ಲಿಯೇ ಕಾಲ ಕಳೆಯುತ್ತಿದ್ದರು.

ವಿದ್ಯಾಧರ ಗುರೂಜಿ ಅವರಿಗೆ ಆಯಾ ಋತುಮಾನದ ಹಣ್ಣುಗಳು ಆರೋಗ್ಯಕ್ಕೆ ತುಂಬ ಹಿತಕಾರಿ ಎಂದು ನಂಬಿಕೊಂಡಿದ್ದರು. ಪ್ರಕೃತಿ ನಮಗೆ ವರ್ಷದುದ್ದಕ್ಕೂ ಯಾವುದಾದರೂ ಒಂದು ಹಣ್ಣನ್ನು ನೀಡುತ್ತಲೇ ಬರುತ್ತದೆ.



ಮಾವಿನ ಹಣ್ಣು, ಪೇರಲ ಹಣ್ಣು, ಬಾಳೆಹಣ್ಣು, ಸೀತಾಫಲ, ಬೋರೆಹಣ್ಣು, ನೀಲದ ಹಣ್ಣು, ಸೇಬು, ಸಂತ್ರಾ, ಪಪ್ಪಾಯಿ ಮೊದಲಾದ ಹಣ್ಣುಗಳು ಆಯಾ ಋತುಮಾನಕ್ಕೆ ಹೇರಳವಾಗಿ ಬರುತ್ತವೆ. ಆ ಸಂದರ್ಭದಲ್ಲಿ ಹಣ್ಣುಗಳನ್ನು ಸೇವಿಸಿದರೆ ಆರೋಗ್ಯಕ್ಕೆ ಒಳ್ಳೆಯದು ಎಂದು ಅವರ ಅಭಿಮತ.

ವಿದ್ಯಾಧರ ಗುರೂಜಿ ಅವರು ಕರಿದ, ಹುರಿದ ಪದಾರ್ಥಗಳನ್ನು ಎಂದೂ ಸೇವಿಸಿದವರಲ್ಲ. ಅವರ ಆರೋಗ್ಯದಲ್ಲಿ ಸ್ವಲ್ಪ ಏರು ಪೇರು ಆದರೆ ಅಂದು ಅವರು ಊಟವನ್ನೂ ಬಿಟ್ಟುಬಿಡುತ್ತಾರೆ. "ಲಂಘನಂ ಪರಮೌಷಧಂ" ಎಂದು ಖಚಿತವಾಗಿ ಹೇಳುತ್ತಾರೆ. ಅದರಂತೆ ನಡೆದು ಕೊಳ್ಳುತ್ತಾರೆ. ಆದರೂ ಯಾರ ಮಾತಿಗೂ ಒಳಗಾಗಿ ಆಲೋಪಥಿಕ್ ಗೋಲಿಗಳನ್ನಾಗಲಿ, ಆಯುರ್ವೇದಿಕ್ ಮಾತ್ರೆಗಳನ್ನಾಗಲಿ ನುಂಗಿದವರಲ್ಲ. ಈ ದೃಷ್ಟಿಯನ್ನು ಮುಂದಿಟ್ಟು ವಿದ್ಯಾಧರ ಗುರೂಜಿ ಅವರು ಮಹಾತ್ಮಾ ಗಾಂಧೀಜಿ ಅವರ ಶತಮಾನೋತ್ಸವದ ಅರ್ಥಪೂರ್ಣವಾಗಿ ಆಚರಿಸಿದರು.

ಅಂದು ನಿಸರ್ಗದ ಮಡಿಲಲ್ಲಿ ಸಿಗುವ ಎಲ್ಲ ತರದ ಹಣ್ಣು ತರಿಸಿ ರೋಗಿಗಳಿಗೂ, ಅಂಗವಿಕಲರಿಗೂ, ಮಕ್ಕಳಿಗೂ, ದುರ್ಬಲರಿಗೂ ಈ ವಿಷಯ ಹೇಳಿ ಹಣ್ಣು ಹಂಚುವುದರ ಮೂಲಕ ಪೂಜ್ಯ ಮಹಾತ್ಮಾಗಾಂಧೀಜಿ ಅವರ ಶತಮಾನೋತ್ಸವ ಆಚರಿಸಿದರು. ಅಂದು ವಿದ್ಯಾಧರ ಗುರೂಜಿ ಅವರಿಗೆ ಆದ ಆನಂದಕ್ಕೆ ಅಳತೆಯೇ ಇರಲಿಲ್ಲ.

ಹಿಂದಿ ಪ್ರಚಾರಸಭಾ ಅಧ್ಯಕ್ಷರು

ವಿದ್ಯಾಧರ ಗುರೂಜಿ ಅವರಿಗೆ ತೀರ ಸಣ್ಣ ವಯಸ್ಸಿನಲ್ಲಿ 'ಆರ್ಯ ಸಮಾಜ'ದ ಸಂಪರ್ಕ ಬಂದಿತು. ಆರ್ಯಸಮಾಜದಲ್ಲಿದ್ದ ತ್ಯಾಗಿಗಳ, ಮೇಧಾವಿಗಳ, ಪಂಡಿತರ, ಅಪ್ಪಟ ದೇಶಾಭಿಮಾನಿಗಳ ಸಹವಾಸ, ಒಡನಾಟ ಇವರಿಗೆ ಲಭಿಸಿತು. ವಿದ್ಯಾಧರ ಗುರೂಜಿ ಅವರನ್ನು ತುಂಬ ಗೌರವದಿಂದ ಕಾಣುತ್ತಿದ್ದರು. ಅವರೆಂದರೆ ಲೋಕನಾಥ ಆಣೆ, ವೀರ ಸಾವರಕರ, ಭಾಯಿ ಪರಮಾನಂದ ಜಿ. ಡಾ. ಮುಂಜೆ ಸೇನಾಪತಿ ಬಾಪಟ, ಮಹಾತ್ಮಾ ನಾರಾಯಣ ಸ್ವಾಮಿಜಿ, ಸ್ವಾಮಿ ಸ್ವತಂತ್ರಾನಂದಜೀ, ಘನಶಾಮ ಗುಪ್ತಾ, ತೇಜಿ ಸ್ಲೇಟಿವ್ ಸಂಯುಕ್ತ ಪ್ರಾಂತ ಸ್ಪೀಕರ, ಸ್ವಾಮಿ ಶಿವಾನಂದ ಜೀ. ಮಹಾರಾಜ ರಾಜಗುರು ಧುರೇಂದ್ರಶಾಸ್ತ್ರಿ, ಮಹಾತ್ಮಾ ಕುಶಾಲ ಚಂದಜೀ ಖುರ್ಷಿದ. ಕುವರ ಚಾಂದಕರಣಜಿ ಶಾರದಾ ಪಂಡಿತ ವಿನಾಯಕರಾವ ವಿದ್ಯಾಲಂಕಾರ ಮುಂತಾದ ಮಹನೀಯರ ನಿತ್ಯ ಸಹವಾಸ, ಸಂಪರ್ಕದಿಂದ ವಿದ್ಯಾಧರ ಗುರೂಜಿ ಅವರ ಹೃದಯ ಹಿಂಜಿದ





ಅರಳಿಯಂತಾಗಿತ್ತು. ಇವರೆಲ್ಲರೂ ಹಿಂದಿ ಭಾಷೆಯಲ್ಲಿ ಮಾತಾಡುತ್ತಿರುವುದರಿಂದ ಗುರೂಜಿ ಅವರಿಗೆ ಭಾಷೆ ಒಳ್ಳೆಯ ಸಂಪರ್ಕ ಕಲ್ಪಿಸಿಕೊಟ್ಟಿತು. ಆತ್ಮೀಯತೆ ಕಟ್ಟಿಕೊಟ್ಟಿತು. ಹಿಂದಿ ರಾಷ್ಟ್ರಭಾಷೆಯ ಮಾನ್ಯತೆ ಪಡೆದ ಮೇಲೆ ಗುರೂಜಿಯವರು ರಾಷ್ಟ್ರದಾದ್ಯಂತ ಇದ್ದ ತಮ್ಮ ಒಡನಾಡಿಗಳೊಡನೆ ಮಾತು-ಕತೆ, ಪತ್ರವ್ಯವಹಾರ ನಿರರ್ಗಳವಾಗಿ ಮಾಡತೊಡಗಿದರು. ಗುಲಬರ್ಗಾ ಹಿಂದಿ ಪ್ರಚಾರ ಸಭೆ ತಮ್ಮ ಅಂಕಿತಕ್ಕೆ ತೆಗೆದುಕೊಂಡ ಮೇಲೆ ಅವರಿಗೆ ಹೈದರಾಬಾದ್ ಹಿಂದಿ ಪ್ರಚಾರ ಸಭಾ ಇವರನ್ನು ಕೈಮಾಡಿ ಕರೆಯಿತು. 1980ರಲ್ಲಿ ಹೈದರಾಬಾದ್ ಹಿಂದಿ ಪ್ರಚಾರಸಭಾ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು.

ಹೈದರಾಬಾದ್ ಹಿಂದಿ ಪ್ರಚಾರ ಸಭಾ ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಸೇವೆ ಸಲ್ಲಿಸುತ್ತಲಿತ್ತು. ವಿದ್ಯಾಧರ ಗುರೂಜಿ ಅವರು ಈ ಮೂರು ರಾಜ್ಯಗಳ ಜನರೊಡನೆ ಸಂಪರ್ಕ ಇಟ್ಟುಕೊಂಡು ಹಿಂದಿಭಾಷೆಯ ಪ್ರಚಾರ, ಪ್ರಸಾರ ಕಾರ್ಯಕ್ರಮವನ್ನು ತುಂಬ ದಕ್ಷತೆಯಿಂದ ಮಾಡತೊಡಗಿದರು.

ವಿದ್ಯಾಧರ ಗುರೂಜಿ ಅವರಿಗೆ ರಾಷ್ಟ್ರಭಕ್ತಿ, ಹಿಂದುಳಿದ ಜನಾಂಗಗಳ ಕ್ಷೇಮಾಭಿವೃದ್ಧಿಗಳೊಡನೆ ಅವರಿಗೆ ಅತ್ಯಂತ ಪ್ರಿಯವಾದ ಇನ್ನೊಂದು ಸಂಗತಿಯೆಂದರೆ ರಾಷ್ಟ್ರಭಾಷಾ ಹಿಂದಿ ಪ್ರಚಾರ ಮತ್ತು ಪ್ರಸಾರ. ವಿದ್ಯಾಧರ ಗುರೂಜಿ ಅವರು ಸ್ವೀಕರಿಸಿದ ಆರ್ಯಸಮಾಜದ ಬೋಧನಾ ವಿಧಾನ ಹಿಂದಿಭಾಷೆಯ ಮಾಧ್ಯಮದಲ್ಲಿಯೇ ಇತ್ತು. ಈ ಕಾರಣಕ್ಕಾಗಿ ಹಿಂದಿ ಭಾಷೆ ಭಾರತದ ಸಂಪರ್ಕ ಭಾಷೆಯಾಗಬೇಕೆಂದು ಕನಸಾಗಿತ್ತು. ಅವರ ಕನಸು ನನಸಾಗಬೇಕೆಂದು ವಿದ್ಯಾಧರ ಗುರೂಜಿ ಅವರ ಆಶಯವಾಗಿತ್ತು. ಭಾರತದಲ್ಲಿ ಹಿಂದೂ, ಮುಸ್ಲಿಂ, ಸಿಖ್, ಇಸಾಯಿ ಜನರ ಆಡುವ ಭಾಷೆ ಹಿಂದಿಯೇ ಆಗಿತ್ತು. ಈ ಎಲ್ಲ ಜನರನ್ನು ಆತ್ಮೀಯವಾಗಿ ಬೆಸೆಯುವ ಐಕ್ಯೈಕ ಭಾಷೆಯಂದರೆ ಹಿಂದಿ. ಈ ಕಾರಣಕ್ಕಾಗಿ ಹಿಂದಿಭಾಷಯ ಪ್ರಚಾರ, ಪ್ರಸಾರ ಕಾರ್ಯದಲ್ಲಿ ಗುರೂಜಿ ಅವರು ತಮ್ಮನ್ನು ತಾವು ಅರ್ಪಿಸಿಕೊಂಡರು.

ಗುಲಬರ್ಗಾ ಹಿಂದಿ ಪ್ರಚಾರ ಸಭಾ ವತಿಯಿಂದ ಇಲ್ಲಿಯ ಜನರಿಗೆ ಅನುಕೂಲವಾಗಲೆಂದು ಹಿಂದಿ ಡಿ.ಇಡಿ. ಬಿ.ಈಡಿ ಕಾಲೇಜುಗಳನ್ನು ಪ್ರಾರಂಭ ಮಾಡಿದರು. ಇದೇ ರೀತಿ ಬೀದರ ಜಿಲ್ಲೆಯ ಬಸವಕಲ್ಯಾಣ, ರಾಯಚೂರು, ಬಳ್ಳಾರಿ, ಬೆಂಗಳೂರು, ವಿಜಾಪುರ, ಯಾದಗಿರಿ ಜಿಲ್ಲೆಗಳಲ್ಲಿ ಏಳುಕಡೆ ಪ್ರಶಿಕ್ಷಣ ಕೇಂದ್ರಗಳನ್ನು ಪ್ರಾರಂಭಿಸಿ ಉತ್ತಮ ಶಿಕ್ಷಣ ಪಡೆದ ಪ್ರಾಧ್ಯಾಪಕರನ್ನು ಆಯ್ಕೆ ಮಾಡಿಕೊಂಡು ಅವರಿಗೆ ಕೈ ತುಂಬ ಸಂಬಳ ಕೊಟ್ಟು ತುಂಬ ವ್ಯವಸ್ಥಿತವಾಗಿ ಹಿಂದಿ ಭಾಷೆಯ ಶಿಕ್ಷಣ ಕೊಟ್ಟು ಪ್ರಚಾರ, ಪ್ರಸಾರ ಕಾರ್ಯ ನಡೆಸಿದರು. ಈ ಕಾರ್ಯ ತುಂಬ ಅಚ್ಚುಕಟ್ಟಾಗಿ ನಡೆಯಲು ಅವರ ಹಿರಿಯ ಮಗ ಅಶೋಕ ಗುರೂಜಿ ಅವರನ್ನು ಮತ್ತು ಚಿಕ್ಕ ಮಗ ಅನಿಲ ಗುರೂಜಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಕಾರ್ಯ ಕಲಾಪಗಳನ್ನು ನೋಡಿಕೊಳ್ಳಲು ಅವರಿಗೆ ಒಪ್ಪಿಸಿದರು.

ಹೈದರಾಬಾದ್ ಹಿಂದಿ ಪ್ರಚಾರ ಸಭಾ ಅಧ್ಯಕ್ಷರಾಗಿ ಕನಿಷ್ಠ 20–23 ವರ್ಷಗಳವರೆಗೆ ಸೇವೆ ಸಲ್ಲಿಸಿದರು. ಅಪ್ಪಟ ಗಾಂಧಿವಾದಿಯಾದ ವಿದ್ಯಾಧರ ಗುರೂಜಿ ಅವರು ಭಾರತದಲ್ಲಿ ಆಯಾ ರಾಜ್ಯದ ಮಾತೃಭಾಷೆಯೊಂದಿಗೆ ರಾಷ್ಟ್ರಭಾಷೆ ಹಿಂದಿ ಕಲಿಯಬೇಕೆಂದು ರಾಷ್ಟ್ರದಾದ್ಯಂತ ಹಿಂದಿ ಭಾಷೆಯ ಪ್ರಚಾರ, ಪ್ರಸಾರಕ್ಕೆ ಆದ್ಯತೆ ನೀಡಿದರು. ಹಿಂದಿ ರಾಷ್ಟ್ರಭಾಷೆ. ಹಿಂದಿ

ಕಲಿತುಕೊಂಡರೆ ಇಡೀ ಜಗತ್ತನ್ನು ಸಲೀಸಾಗಿ ಸುತ್ತಿಬರಬಹುದು ಎಂದು ಹೇಳತೊಡಗಿದರು. ನಮ್ಮ ವ್ಯವಹಾರಕ್ಕೆ ಬೇಕಾದಷ್ಟು ಇಂಗ್ಲಿಷ್ ಇರಲಿ, ಮಾತೃಭಾಷೆ, ರಾಷ್ಟ್ರಭಾಷೆ ಕಡೆಗಣಿಸಿ ಇಂಗ್ಲಿಷ್ ಭಾಷೆಗೆ ಆದ್ಯತೆ ನೀಡಬಾರದು ಎಂದು ಹಿಂದಿಭಾಷೆಯ ಪ್ರಾಮುಖ್ಯತೆಯನ್ನು ಅದರ ಪ್ರಾಚೀನತೆಯನ್ನು ಹಿಂದಿಭಾಷೆಯಲ್ಲಿ ಮೂಡಿ ಬಂದ ಮಹಾನ್ ಗ್ರಂಥಗಳನ್ನು ಉದಾಹರಿಸಿ ಅವರು ಮಾಡಿದ ಭಾಷಣ ಕೇಳಿ ಜನರು ಹಿಂದಿ ಭಾಷೆಗೆ ಒಲಿದು ಬರುತ್ತಿದ್ದರು.

ವಿದ್ಯಾಧರ ಗುರೂಜಿ ಅವರು ಸ್ವಾತಂತ್ರ್ಯ ಹೋರಾಟಗಾರರು ದೇಶಕ್ಕೆ ಸ್ವಾತಂತ್ರ್ಯ ಲಭಿಸಲಿ ಎಂದು ಸಮರ್ಪಣಭಾವದಿಂದ ಹೋರಾಡಿದರು. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ದೇಶದ ಏಳಿಗೆಗಾಗಿ ಜನತೆಯ ಹಿತಕ್ಕಾಗಿ ಭಾಷೆಯ ಅಭಿವೃದ್ಧಿಗಾಗಿ ಹೋರಾಡುತ್ತಲಿದ್ದಾರೆ.

ಶ್ರೀಯುತರು ಶಾಸಕರಾಗಿ ಅತ್ಯಂತ ನಿಷ್ಠೆಯಿಂದ ಪ್ರಾಮಾಣಿಕತೆಯಿಂದ ಜನರ ಏಳಿಗೆಗಾಗಿ ಹಗಲಿರುಳು ದುಡಿದರು. ಇನ್ನೂ ದುಡಿಯುತ್ತಲೇ ಇದ್ದಾರೆ. ಅವರ ದುಡಿತಕ್ಕೆ ಪ್ರಾಮಾಣಿಕ ಹೋರಾಟಕ್ಕೆ ದೇವರು ಅವರಿಗೆ ಆರೋಗ್ಯವನ್ನು ಕೊಟ್ಟಿದ್ದಾನೆ. ಆಯುಷ್ಯವನ್ನು ಕೊಟ್ಟಿದ್ದಾನೆ. ಇಂತಹ ಕೆಟ್ಟಕಾಲದಲ್ಲಿ ದೇಶಾಭಿಮಾನವನ್ನು, ಭಾಷಾಭಿಮಾನವನ್ನು, ಆತ್ಮಾಭಿಮಾನ ವನ್ನು ಇಟ್ಟುಕೊಂಡು ದೇಶಕ್ಕೆ ಮಾದರಿಯಾಗಿ ಬಾಳುತ್ತಿದ್ದಾರೆ. ಅವರ ಬಾಳು ಬಂಗಾರ, ಜೀವನ ಶೃಂಗಾರ.

ಅಸ್ಪೃಶ್ಯತಾ ನಿವಾರಣೆ

ಭಾರತ ಜಗತ್ತಿನ ಪರಂಧಾಮ. ಆಧ್ಯಾತ್ಮದ ಆಗರ, ಋಷಿಮುನಿಗಳ ನೆಲೆವೀಡು, ಸಾಧು-ಸಂತರ ತೂಗು ತೊಟ್ಟಿಲು. ಸಮಾನತೆಯನ್ನು ಸಾರಿದ ಹರಿಕಾರರ ಆಡುಂಬೊಲ. ಇಂತಹ ಪವಿತ್ರವಾದ, ಪರಮೋಚ್ಚವಾದ ಭಾರತ ದೇಶದಲ್ಲಿ ಬಹುಸಂಖ್ಯಾತರೆನಿಸಿಕೊಂಡವರು ಹಿಂದುಗಳು. ಈ ಹಿಂದುಗಳಲ್ಲಿ ಒಂದು ಅನಿಷ್ಟವೆಂದರೆ 'ಜಾತಿ ಪದ್ಧತಿ'. ಈ ಜಾತಿ ಪದ್ಧತಿಯ ಪಿಡುಗು ವಿಶ್ವದ ಬೇರೆಲ್ಲಿಯೂ ಕಾಣಸಿಗದಿದ್ದರೂ ಭಾರತದಲ್ಲಿ ವ್ಯವಸ್ಥಿತವಾಗಿ ಬೇರೂರಿದೆ. ಪ್ರಬಲವಾಗಿ ರೂಪುಗೊಂಡಿದೆ. ಇಂದು ದೇಶದ ಪ್ರಗತಿಗೆ, ಉನ್ನತಿಗೆ ಮತ್ತು ಒಂದು ಬಲಿಷ್ಠ ರಾಷ್ಟ್ರವನ್ನಾಗಿ ಭಾರತವನ್ನು ರೂಪಿಸಲು ಅಡ್ಡಗಾಲು ಹಾಕುತ್ತಲಿದೆ; ಈ ಜಾತಿ ಪದ್ಧತಿ.

ಭಾರತದೇಶದ ಈ ಜಾತಿ ವ್ಯವಸ್ಥೆಯನ್ನು, ಐತಿಹಾಸಿಕ ಹಿನೆಲೆಯನ್ನು ಇತಿಹಾಸಕಾರರು, ಸಮಾಜ ಶಾಸ್ತ್ರಜ್ಞರು ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸುತ್ತಾರೆ. ಕ್ರಿಸ್ತಪೂರ್ವ 5000ದಲ್ಲಿ



ನೆಲೆಗೊಂಡಿದ್ದ ಸಿಂಧುನಗರ ನಾಗರಿಕತೆಯು ಇಡೀ ವಿಶ್ವದಲ್ಲಿಯೇ ಅತ್ಯಂತ ಪ್ರಬಲವಾಗಿ ವಿಕಾಸಗೊಂಡ, ನಾಗರಿಕಗೊಂಡ ನಾಗರೀಕತೆಯಾಗಿತ್ತು. ಈ ನಾಗರೀಕತೆಯ ಸ್ಥಾಪಕರು ದ್ರಾವಿಡರು.

ಏಷ್ಯಾದಿಂದ ತಿನ್ನಲು ಕೂಳಿನ ಹುಡುಕಾಟದಲ್ಲಿ ಭಾರತಕ್ಕೆ ವಲಸೆ ಬಂದು ಇಲ್ಲಿ ಉದಾತ್ತ ನಾಗರಿಕತೆಯನ್ನು ಹೊಂದಿದಂತಹ ದ್ರಾವಿಡರನ್ನು ದಮನಗೊಳಿಸಿ ಭಾರತದಲ್ಲಿ ನೆಲೆಸಿದವರು ಆರ್ಯರು. ಮುಂದೆ ಇದೇ ಆರ್ಯರು ತಮ್ಮ ಪ್ರಾಬಲ್ಯವನ್ನು ಬೆಳೆಸಿಕೊಂಡರು ಬರಬರುತ್ತ ತಾವೇ ಶ್ರೇಷ್ಠರೆಂಬ ಭಾವನೆಯಿಂದ ದ್ರಾವಿಡರನ್ನು ಹತ್ತಿಕ್ಕುತ್ತಿತ್ತು. ಸಿಂಧು ನದಿಯ ನಾಗರಿಕತೆಯ ಜನರ ಮೇಲೆ ತಮ್ಮ ಪ್ರಭುತ್ವವನ್ನು ಸಾಧಿಸಿದರು. ಕ್ರಮೇಣ ಈ ಆರ್ಯರು ಭಾರತದೇಶದಲ್ಲಿ ವ್ಯಾಪಿಸಿ ವೇದಗಳನ್ನು, ಉಪನಿಷತ್ತುಗಳನ್ನು ರಚಿಸಿಕೊಂಡು ಜಾತಿ ರಹಿತ ಸಮಾಜದಲ್ಲಿ ವರ್ಣ ವ್ಯವಸ್ಥೆಯನ್ನು ಜಾರಿಗೆ ತಂದರು. ನಾಲ್ಕು ಪ್ರಬಲ ಜಾತಿಗುಂಪುಗಳನ್ನಾಗಿ ವಿಂಗಡಿಸಿದರು. ನಾವು ಈ ಮೊದಲು ತಿಳಿಸಿದ ಹಾಗೆ ಈ ದೇಶದ ಮೂಲನಿವಾಸಿಗಳು ಆದ ಪಂಚಮರನ್ನು ಈ ವರ್ಣಾಶ್ರಮದ ವ್ಯವಸ್ಥೆಯಿಂದ ದೂರವಿಟ್ಟರು. ಅವರನ್ನು ಅಸ್ಪೃಶ್ಯರನ್ನಾಗಿ ಮಾಡಿದರು. ಈ ವ್ಯವಸ್ಥೆಯ ಪರಿಣಾಮವಾಗಿ ಮೇಲಿನ ಮೂರು ವರ್ಗಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂದು ಕರೆದರು. ಇವರು ಸಮಾಜದಿಂದ ಸಿಗುವ ಸೌಲತ್ತುಗಳನ್ನು, ಸೌಲಭ್ಯಗಳನ್ನು ಸ್ಥಾನ ಮಾನಗಳನ್ನು ಪಡೆಯುವ ವ್ಯವಸ್ಥೆಯನ್ನು ಹುಟ್ಟುಹಾಕಿದರು. ಬಹುಸಂಖ್ಯಾತರಾದ ಶೂದ್ರರನ್ನು ಈ ಮೂರು ವರ್ಗದ ಜನರ ಹಿತೈಷಿಯಾಗಿ ಅವರ ಜೀತದಾಳುಗಳಾಗಿ ದುಡಿಯುವ ವರ್ಗವನ್ನು ಸೃಷ್ಟಿಮಾಡಿದರು. ಬಹು ಸಂಖ್ಯಾತ ಶೂದ್ರರು ಜೀತದಾಳಿನಂತೆ ಬಾಳಬೇಕಾಯಿತು. ಈ ಸಂದರ್ಭ ದಲ್ಲಿಯೇ ವೃತ್ತಿ ಆಧಾರದ ಮೇಲೆಯೇ ಈ ದೇಶದ ಜಾತಿ ಪದ್ಧತಿ ಅಸ್ತಿತ್ವಕ್ಕೆ ಬಂದಿತ್ತು. ಇದು ದೇಶಕ್ಕೆ ಬಂದ ಕಪ್ಪು ಚುಕ್ಕೆಯೆಂದು ಬಗೆದು ಈ ವ್ಯವಸ್ಥೆಯ ವಿರುದ್ಧ ಸಮಾಜ ಸುಧಾರಕರು, ಸಮಾಜದಲ್ಲಿ ಕಾಳಜಿ ಇದ್ದಂಥ ಧಾರ್ಮಿಕ ಬೋಧಕರು, ದಾರ್ಶನಿಕರು, ಸಮಾಜ ಹಿತಚಿಂತಕರು ಉದಾತ್ತ ಮನೋಭಾವವುಳ್ಳ ಮಹನೀಯರು ಈ ಜಾತಿ ಪದ್ಧತಿಯ ವಿರುದ್ಧ ಹೋರಾಟ ನಡೆಸಿದರು. ಫಲಿತಾಂಶ ಮಾತ್ರ ಶೂನ್ಯವಾಗುತ್ತಲೇ ಬಂದಿತು. ಯಾರು ಶೂದ್ರರೆಂದ ಬಲವಾಗಿ ತಳ್ಳಲ್ಪಟ್ಟರೋ ಅವರು ಬಡತನ, ನಿರಕ್ಷರತೆ,

ನಿರುದ್ಯೋಗ, ಅನಾರೋಗ್ಯದಿಂದ ಬಳಲತೊಡಗಿದರು. ಇಂತಹ ಜನರನ್ನು ಕಣ್ಣಾರೆ ಕಂಡು ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಬಸವಣ್ಣನವರು ದೊಡ್ಡ ಚಳುವಳಿಯನ್ನೇ ಮಾಡಿದರು. ಆಧುನಿಕ ಕಾಲಕ್ಕೆ ಬಂದು ಹೇಳುವುದಾದರೆ ಶಾಹು ಮಹಾರಾಜರು ಹಾಗೂ ಮಹಾರಾಷ್ಟ್ರದ ಮಹಾತ್ಮಾಜ್ಯೋತಿಬಾ ಫುಲೆ, ಮಹಾತ್ಮಾಗಾಂಧೀಜಿ, ಭಾರತ ರತ್ನ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್, ತಮಿಳುನಾಡಿನ ಪೆರಿಯಾರ್ ಅವರು, ಕೇರಳದ ರಮಣ ಮಹರ್ಷಿಯವರು, ಕರ್ನಾಟಕ ದೇವರಾಜ ಅರಸ್ ಅವರು, ಬಿಹಾರದ ಕರ್ಪೂರಿ ಠಾಕೂರ್ ಜಾತಿ ಪದ್ಧತಿಯ ವಿರುದ್ಧ ಧ್ವನಿ ಎತ್ತಿದರು, ಹೋರಾಡಿದರು.

ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ಮೇಲೆ ವಿದ್ಯಾಧರ ಗುರೂಜಿ ಅವರು ಶೋಷಿತ ಜನಾಂಗವನ್ನು ಒಂದುಗೂಡಿಸಿ ಅವರಿಗೆ ಶಿಕ್ಷಣ ಕೊಟ್ಟು ಅರಿವು ಮೂಡಿಸತೊಡಗಿದರು. ವಿದ್ಯಾಧರ ಗುರೂಜಿ ಅವರು ಇವರನ್ನು ಹುಡುಕಿಕೊಂಡು ಹೋಗುವ ಅವಶ್ಯಕತೆಯೇ ಇರಲಿಲ್ಲ.

ಶ್ರೀಯುತರು ಯಾದಗಿರಿಯಲ್ಲಿ ಶ್ರೀಮತಿ ಅಂಬವ್ವನ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿಯೇ ಇರುತ್ತಿದ್ದರು. ಇವರು ಬಾಡಿಗೆಗೆ ಹಿಡಿದ ಮನೆ ಮಾರವಾಡಿಗಳ ಧರ್ಮಶಾಲೆಯ ಬೀದಿಯಲ್ಲಿಯೇ ಇತ್ತು. ಇವರು ವಾಸಿಸುವ ಮನೆಯ ಸುತ್ತುಮುತ್ತಲು ಮಾರವಾಡಿ ಜನರನ್ನು ಬಿಟ್ಟರೆ ಅಲ್ಲಿರುವವರೆಲ್ಲ ಅತ್ಯಂತ ಹಿಂದುಳಿದ ವರ್ಗಕ್ಕೆ ಸೇರಿದ ತುಳಿಯಲ್ಪಟ್ಟ ಮೇದಾರರು, ಕೊರವರು, ಕಬ್ಬಲಿಗರು ಬೇಡರು ಈಡಿಗರು ಕುಂಬಾರರು, ಕಂಬಾರರು ಮೊದಲಾದವರು ತಮ್ಮ ಕುಲ ಕಸಬುಗಳನ್ನು ಮಾಡುತ್ತಲೇ, ಹಮಾಲಿ ಇಲ್ಲವೆ ಕೈ ಕೂಲಿ ಮಾಡುತ್ತಲೋ ತುಂಬ ಕಷ್ಟಕರ ಜೀವನ ಸಾಗಿಸುತ್ತಿದ್ದರು. ಈ ಜನಾಂಗದಲ್ಲಿದ್ದ ಗಂಡುಮಕ್ಕಳು ದನಕರು ಕುರಿಮರಿ ಗಳನ್ನು ಕಾಯುವ ಕೆಲಸ ಮಾಡುತ್ತಿದ್ದರು. ಇದನ್ನು ದಿನಾಲು ನೋಡುತ್ತಲಿದ್ದ ವಿದ್ಯಾಧರ ಗುರೂಜಿ ಅವರಿಗೆ ಹಿಡಿಸಲಾರದಷ್ಟು ಸಂಕಟ. ನೋವು ಆಗುತ್ತಿತ್ತು. ಸ್ವತಂತ್ರ ಭಾರತದ ನಾಳಿನ ಸತ್ಪ್ರಜೆಗಳಾಗಬೇಕಿದ್ದ ಮಕ್ಕಳು ದನ, ಕರು, ಕುರಿ ಮರಿಗಳನ್ನು ಕಾಯುತ್ತ ಅನಕ್ಷರಸ್ಥರಾಗಿಯೇ ಉಳಿದಿರುವರಲ್ಲ ಎಂಬ ಕೊರಗು ಒಂದುಕಡೆಯಾದರೆ ಜನತೆಯಲ್ಲಿರುವ ಅಂಧಶ್ರದ್ಧೆ ಮೂಢನಂಬಿಕೆ

ಸಮಾಜದಲ್ಲಿರುವ ಅಸಮಾನತೆ ಜಾತಿ ಜಾತಿಗಳಲ್ಲಿರುವ ತಾರತಮ್ಯ ಈ ಎಲ್ಲ ವಿಷಮತೆಯನ್ನು ಕಂಡ ವಿದ್ಯಾಧರ ಗುರೂಜಿ ಅವರ ಕರುಳು ಚುರ್ ಎನ್ನುತ್ತಿತ್ತು.

ಭಾರತ ದೇಶದಿಂದ ಆಂಗ್ಲರು ಕಾಲು ಕಿತ್ತಿದ್ದರೂ ಅವರ ಮಿಷನರಿಗಳು ಇಲ್ಲಿಯೇ ತಳ ಊರಿದ್ದವು. ಆ ಮಿಷನರಿಗಳು ಸುಮ್ಮನೆ ಕುಳಿತಿರಲಿಲ್ಲ. ಸಮಯ ಬಂದಾಗ ಜನರ ಮನ ಒಲಿಸಿ ಮತಾಂತರ ಕಾರ್ಯ ನಡೆಸಿದ್ದವು. ಅದೇ ರೀತಿ ಹೊಸಳ್ಳಿಯಲ್ಲಿಯೇ ಕ್ರೈಸ್ತಮಿಷನರಿಗಳು ಹರಿಜನರ ಮನ ಒಲಿಸಿ ಜನರನ್ನು ಮತಾಂತರಗೊಳಿಸತೊಡಗಿದ್ದವು. ಈ ವಿಷಯ ತಿಳಿದು ಹೊಸಳ್ಳಿಯ ಮಲರಡ್ಡಿ ಪಾಟೀಲರು ವಿದ್ಯಾಧರ ಗುರೂಜಿ ಹತ್ತಿರ ಬಂದು ಈ ವಿಷಯ ತಿಳಿಸಿದರು. ಈ ವಿಷಯ ಕೇಳಿ ಗುರೂಜಿ ಅವರಿಗೆ ಭಾರಿ ಆಘಾತವಾಯಿತು. ಕೂಡಲೇ ಹೊಸಳ್ಳಿಗೆ ಹೊರಟರು. ಅವರ ಜೊತೆಗೆ ಕೊಂಕಲ್ಲದ ನಾರಾಯಣಪ್ಪ, ಶೆಟ್ಟರ ಗೋವಿಂದಪ್ಪ, ಸಿನ್ನೂರು ರುದ್ರಪ್ಪ ಮಾರವಾಡಿಗಳಲ್ಲಿ ಪುಖರಾಜ ದೋಖಾ, ಸೂರಜ ಮಲ್, ಜೀತಾಣಿ, ಈಶ್ವರಲಾಲ ಭಟ್ಟಡ ಮತ್ತು ಹೊಸಳ್ಳಿಯ ಮಲ್ಲರೆಡ್ಡಿ ಪಾಟೀಲ ಭೀಮಳ್ಳಿ ಮುಂತಾದವರು ಪಾಲುಗೊಂಡಿದ್ದರು.

ಈ ಸಮಯದಲ್ಲಿ ಗುರೂಜಿ ಅವರು ಹೊಸಳ್ಳಿ ಹರಿಜನ ಕೇರಿಗೆ ಹೋಗಿ ಹರಿಜನರನ್ನೆಲ್ಲ ಕರೆಸಿ ಭಾರತದ ಮೂಲನಿವಾಸಿಗಳೇ ನೀವು ನಿಮಗೆ ಒಂದು ದಿನ ಒಳ್ಳೆಯ ಕಾಲ ಬರುತ್ತದೆ. ನೀವು ಭಾರತೀಯರು ಎಂದು ಕೈಸ್ತಮತವನ್ನು ಸ್ವೀಕರಿಸಬಾರದು. ಬೌದ್ಧಮತವನ್ನು ಸ್ವೀಕರಿಸಬಾರದು ನೀವು ಅಪ್ಪಟ ಭಾರತೀಯರು ಎಂದು ಹೇಳಿ ಆರ್ಯ ಸಮಾಜದವತಿಯಿಂದ ಅವರನ್ನು ಶುದ್ಧೀಕರಿಸಿದರು.

ಈ ಸಂದರ್ಭದಲ್ಲಿ ಗುರೂಜಿ ಅವರು ಈ ಜಾತಿ ನಿರ್ಮೂಲನಕ್ಕೆ ತಾವೇ ಮಾದರಿ ಆಗಬೇಕೆಂದು ಹೇಳಿ ಹೊಸಳ್ಳಿ ಮಲರೆಡ್ಡಿ ಪಾಟೀಲರ ಮಧ್ಯಸ್ಥಿಕೆಯಲ್ಲಿ ಹೊಸಳ್ಳಿ ಹರಿಜನ ನಾಟೀಕಾರ ಹಣಮಂತಪ್ಪ ಕರೆಮ್ಮ ಅವರ ಮಗಳು ಸವಿತಾದೇವಿಯನ್ನು ಮದುವೆ ಮಾಡಿಕೊಂಡು ಜಾತಿ ನಿರ್ಮೂಲನೆಗೆ ನಾಂದಿ ಹಾಡಿದ್ದು ಇಲ್ಲಿ ನೆನೆಯಬಹುದು.

ವಿದ್ಯಾಧರ ಗುರೂಜಿ ಅವರು ವರ್ಣಾಶ್ರಮಗಳ ಗೋಡೆಯನ್ನು ಕೆಡವಲು

ಊಟ, ಉಡುಗೆ ತೊಡುಗೆಯೊಡನೆ ಕೊಡು-ಕೊಳ್ಳುವಿಕೆಯೂ ನಡೆಯಬೇಕು. ಅದಕ್ಕಾಗಿ ಅಂತರಜಾತಿಯ ವಿವಾಹ ಬಹಳ ಅವಶ್ಯವೆಂದು ಮನಗಂಡು ತಾವು ಹರಿಜನ ಮಹಿಳೆಯನ್ನು ಮದುವೆ ಮಾಡಿಕೊಂಡು ಆದರ್ಶ ಪ್ರಾಯರಾದರು. ಅವರ ಸಂಸಾರವು ಅಷ್ಟೇ ಮಧುರತೆಯಿಂದ ಕೂಡಿದ್ದು, ಜನರ ಕಣ್ಣಿಗೆ ಕಾಣುತ್ತಿತ್ತು. ಮನಸ್ಸಿಗೆ ಮುದನೀಡುತ್ತಿತ್ತು.

ಗುರುಮಠಕಲ್ಲ ಗ್ರಾಮದಲ್ಲಿ ಹಟಗಾರ ಜಾತಿಯ ಶೇಷರಾವ್ ಕಂಬದ ಅವರು ಮದುವೆ ಮಾಡಿಕೊಳ್ಳಲು ಓಡಾಡತೊಡಗಿದರು. ಆ ಕಡೆ ಈ ಕಡೆ ಕನ್ಯಾ ನೋಡುತ್ತಿರುವಾಗ ವಿದ್ಯಾಧರ ಗುರೂಜಿ ಅವರು ಕಂದಕೂರ ಗ್ರಾಮದ ಶಾಂತಾದೇವಿ ಎಂಬ ಮಾದರ ಹುಡುಗಿ ಕಿಶ್ಚನ್ ಧರ್ಮ ಸ್ವೀಕರಿಸಿ ಸುಶಿಕ್ಷಿತ ಮಹಿಳೆ ಎಂದು ಹೆಸರು ಪಡೆದಿದ್ದಳು. ಅವಳು ಇನ್ನು ಕನ್ಯಾ. ಈ ಹುಡುಗಿಯನ್ನು ಗುರೂಜಿ ಅವರು ಶೇಷರಾವರಿಗೆ ತೋರಿಸುತ್ತಲೇ 'ವರ-ಕನ್ಯಾ' ಪರಸ್ಪರ ಒಪ್ಪಿಗೆಯಾಗುತ್ತಲೇ ಅತ್ಯಂತ ಸರಳ-ಸುಂದರ ಶೈಲಿಯಲ್ಲಿ ಮದುವೆ ಕಾರಣ ಮುಗಿಸಿಬಿಟ್ಟರು. ಇಂದು ಈ ದಂಪತಿಗಳು ನಿಜವಾಗಿಯೂ ಆದರ್ಶ ಪ್ರಾಯರಾಗಿದ್ದಾರೆ.

ಯಡಳ್ಳಿ ಚೆನ್ನಪ್ಪಗೌಡ ಲಿಂಗಾಯತ ಸಮಾಜಕ್ಕೆ ಸೇರಿದವರು. ಇವರ ಹೆಂಡತಿ ಶರಣಮ್ಮ ಇವರು ಬಸ್ಸೆಟೆಪ್ಪ ಕೋಟರಕಿ, ಯಮುನಾಬಾಯಿ ಅವರು ಸುಪುತ್ರಿ. ಹೀಗೆ ಲಿಂಗಾಯತ ಬ್ರಾಹ್ಮಣರು ನೆಂಟಸ್ಥಿಕ್ಕೆ ಪ್ರಯತ್ನಿಸಿದವರು ಗುರೂಜಿ ಅವರು.

ಕರೇನಗೌಡ ಲಿಂಗಾಯತರು. ಇವರು ಮುಸಲ್ಮಾನ ಹುಡುಗಿಯನ್ನು ಮದುವೆ ಮಾಡಿಕೊಂಡಿದ್ದರು. ಇವರಿಗೆ ಒಂದು ಗಂಡುಮಗ ಜನಿಸಿತು. ಈ ತಾಯಿ-ತಂದೆ ಈ ಮಗುವಿಗೆ 'ಸಬಜಿಲಿ' ಎಂದು ನಾಮಕರಣ ಮಾಡಿದರು. ಈ ಹುಡುಗ ಬೆಳೆದು ದೊಡ್ಡವನಾದ ಮೇಲೆ ಇವನಿಗೆ ಮುಸಲ್ಮಾನ್ ಹುಡುಗಿಯೊಡನೆ ಮದುವೆಯಾಗಿತ್ತು. ಈ ಹುಡುಗಿ ಮದುವೆಯಾದ ಕೆಲದಿನಗಳ ಮೇಲೆ ತೀರಿಕೊಂಡಳು. ಆಗ 'ಸಬಜಿಲಿ' ಎಂಬ ಹುಡುಗನ ಹೆಸರು ಬದಲಿಸಿ 'ಸಬ್ಬನಗೌಡ' ಎಂದು ನಾಮಕರಣ ಮಾಡಿ 'ಶಕುಂತಲಾ' ಎಂಬ ಹುಡುಗಿಯೊಡನೆ ವಿದ್ಯಾಧರ ಗುರೂಜಿ ಅವರು ಮದುವೆ ಮಾಡಿಸಿದರು. ಈಗ ಈ ದಂಪತಿಗಳಿಗೆ 'ಮದಸೂದನ' ಎಂಬ ಮಗ ಸಮಾಜದಲ್ಲಿಯೇ ಈಗ ಗಣ್ಯವ್ಯಕ್ತಿ.

ಕಾಕಲವಾರ ಗ್ರಾಮದ ಕುಲಸಂಬಿ ನಿಜವಾಗಿ ಮುಸಲ್ಮಾನ ಹುಡುಗಿ ಈಕೆ ಆರ್ಯ ಸಮಾಜದ ಪ್ರಣಾಳಿಕೆಗೆ ಒಲಿದು ಬಂದಳು. ಅದರಂತೆ ಎಡ್ವಿನ್ ಕ್ರಿಶ್ಚನ್ ಹುಡುಗ ಇವನೂ ಆರ್ಯಸಮಾಜದ ರೂಪುರೇಷೆಗಳನ್ನು ತಿಳಿದುಕೊಂಡ. ಆಗ ಈ ಇಬ್ಬರ ಮನಸ್ಸು, ಕನಸ್ಸು ಅರ್ಥ ಮಾಡಿಕೊಂಡು ವಿದ್ಯಾಧರ ಗುರೂಜಿ ಅವರು ಇವರಿಬ್ಬರಿಗೂ ಮದುವೆ ಮಾಡಿದರು. ಹೀಗೆ ತತ್ವ, ಪ್ರಣಾಳಿಕೆ ಒಪ್ಪಿಕೊಂಡ ಇಬ್ಬರಿಗೂ ಮದುವೆ ಮಾಡಿದರು. ಹೀಗೆ ತತ್ವ, ಪ್ರಣಾಳಿಕೆ ಅರ್ಥಮಾಡಿಕೆಂಡು ವಿಶಾಲ ಜೀವನ ಶೈಲಿಗೆ ಒಳಪಡುತ್ತಿದ್ದ ಹುಡುಗರಿಗೆ, ಹುಡುಗಿಯರಿಗೆ ಅಂತರ ಜಾತಿಯ ವಿವಾಹ ಏರ್ಪಡಿಸಿ ಹೊಸ ಮನ್ವಂತರಕ್ಕೆ ಹಾದಿ ಮಾಡಿಕೊಟ್ಟ ವಿದ್ಯಾಧರ ಗುರೂಜಿ ಅವರನ್ನು ಈ ಭಾಗದಲ್ಲಿ ಹೃದಯ ತುಂಬಿ ನೆನೆಸುತ್ತಾರೆ. ಇಂತಹ ಸಾವಿರಾರು ಯುವಕ ಯುವತಿಯರಿಗೆ ಹೊಸ ಹಾದಿ ತೋರಿಸಿದ ವಿದ್ಯಾಧರ ಗುರೂಜಿ ಅವರು ಮಾನವತೆಗೆ ನೀಡಿದ ಆದ್ಯತೆ ಅಷ್ಟಿಷ್ಟಲ್ಲ. ಗುರುಮಠಕಲ್ಲದಲ್ಲಿ ಕಾಲರಾ ತಲೆದೋರಿದಾಗ, ಪ್ಲೇಗ್ ಬೇನೆಯ ಹಾವಳಿ ಹೆಚ್ಚಾದಾಗ ಊರ ಜನರು ಅಂಜಿ ಮೂಲೆ ಹಿಡಿದರೆ ವಿದ್ಯಾಧರ ಗುರೂಜಿ ಅವರು ತಮ್ಮ ಆತ್ಮೀಯ ಸ್ನೇಹಿತ ಈಶ್ವರಲಾಲಭಟ್ಟಡ ಅವರೊಡನೆ ಕೂಡಿಕೊಂಡು ಹೆಣಗಾಡಿದ ರೀತಿ ನೋಡಿದವರು ಬೆರಗಾಗಿ ಬೆರಳು ಕಚ್ಚಿಕೊಂಡಿದ್ದರು.

ಮಹಾತ್ಮಾಗಾಂಧೀಜಿಯವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ವಿಶ್ವನಾಥ ರೆಡ್ಡಿ ಮುದ್ನಾಳ ಅವರು ಅಸ್ಪೃಶ್ಯತಾ ನಿವಾರಣೆ ಕಾರ್ಯಕ್ರಮ ಕೈಗೆತ್ತಿಕೊಂಡಾಗ ವಿದ್ಯಾಧರ ಗುರೂಜಿ ಅವರು ಅವರಿಗೆ ನೈತಿಕ ಬೆಂಬಲ ನೀಡಿ ಪ್ರೋತ್ಸಾಹಿಸಿದರು.

ವಿದ್ಯಾಧರ ಗುರೂಜಿ ಅವರು ನುಡಿದಂತೆ ನಡೆದ ಧೀಮಂತ ವ್ಯಕ್ತಿ. ಅಮದ್ಯಶಕ್ತಿ. ಇಪ್ಪತ್ತನೆಯ ಶತಮಾನದಲ್ಲಿ ಇಂಥ ಒಬ್ಬ ವ್ಯಕ್ತಿ ಹೀಗೆ ಬಾಳಿ ಬದುಕಿ ಹೋಗಿದ್ದಾರೆಂದು ಮುಂದಿನ ಜನ ನಂಬಲಿಕ್ಕಿಲ್ಲ. ಅಷ್ಟು ಮಾದರಿಯಾಗಿ, ಆದರ್ಶರಾಗಿ ಬಾಳಿ ಬದುಕಿ ಕೆಳವರ್ಗದ ಜನರ ಬಾಳಿಗೆ ಬೆಳಕಾದರು ವಿದ್ಯಾಧರ ಗುರೂಜಿ ಅವರು.

ಕುಲ ಬಾಂಧವರಿಗೆ ತೋರಿಸಿದ ಕರುಣೆ

ವಿದ್ಯಾಧರ ಗುರೂಜಿ ಅವರು ಗುರುಮಠಕಲ್ಲ ಒಂದು ಬಡ ಮಡಿವಾಳ ಮನೆತನದಲ್ಲಿ ಜನಿಸಿದರು. ಅವರಿಗೆ ತಾಯಿ-ತಂದೆಗಳು ಜೋಗುಳ ಹಾಡಿ ಇಟ್ಟ ಹೆಸರು ಭಿಕ್ಷಪ್ಪ. ಭಿಕ್ಷಪ್ಪ ತನ್ನ ಉತ್ತಮ ನಡೆ-ನುಡಿಗಳಿಂದ, ಸೇವಾ ಮನೋಭಾವನೆಯಿಂದ, ದೇಶಪ್ರೇಮದಿಂದ, ಸ್ವಾಭಿಮಾನದಿಂದ ಸದ್ಗುರುಗಳನ್ನು ಪಡೆದು ಕೊಂಡು ದೇಶದ ಐಕ್ಯತೆಗೆ, ಸಮಾಜದ ಸಮಾನತೆಗೆ, ಜನತೆಯ ಜಾಗೃತಿಗೆ ಹುಟ್ಟಿಕೊಂಡು ಬಂದ 'ಆರ್ಯ ಸಮಾಜದ' ಅನುಯಾಯಿ ಆಗಿ ಉತ್ತಮ ಸಂಸ್ಕಾರ, ಸಂಸ್ಕೃತಿ ಪಡೆದುಕೊಂಡ ಈ ಸಂಸ್ಕೃತಿ, ಸಭ್ಯತೆಯಿಂದ ಅವರ ದೀಕ್ಷಾ ಗುರುಗಳು 'ವಿದ್ಯಾಧರ' ಎಂದು ಬಾಯ್ತುಂಬ ಕರೆದರು. 'ವಿದ್ಯಾಧರ' ಉತ್ತಮ ಶಿಕ್ಷಣ ಪಡೆದು ತಾನು ಪಡೆದ ಶಿಕ್ಷಣ ಎಲ್ಲರಿಗೂ ಹಂಚಲು ಮನಸ್ಸು ಮಾಡಿದ. ಇವರಿಂದ ಶಿಕ್ಷಣ ಪಡೆದು ಜನರು ವಿದ್ಯಾಧರ ಎಂದು ಕರೆಯದೆ 'ಗುರೂಜಿ' ಎಂದು ಹೃದಯ ತುಂಬಿ ಕರೆದರು. ತಮ್ಮ



ಸದ್ವರ್ತನೆ, ಸದ್ವಿವೇಕ ಸೇವಾ ಮನೋಭಾವನೆಯಿಂದ ಸಮಾಜದಲ್ಲಿ 'ವಿದ್ಯಾಧರ ಗುರೂಜಿ' ಎಂದು ಹೆಸರು ಪಡೆದರು. ದೇಶ ಸ್ವಾತಂತ್ರ್ಯ ಚಳುವಳಿಯಲ್ಲಿ, ಹೈದರಾಬಾದ್ ಸಂಸ್ಥಾನದ ವಿಮೋಚನೆಯಲ್ಲಿ ದೇಶದ ನೇತಾರರ ಬಾಯಲ್ಲಿ 'ವಿದ್ಯಾಧರ ಗುರೂಜಿ' ಎಂಬ ಹೆಸರು ಜನಜನಿತವಾಗಿತ್ತು. ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ಮೇಲೆ, ಹೈದರಾಬಾದ್ ವಿಮೋಚನೆಗೊಂಡ ಮೇಲೆ 'ವಿದ್ಯಾಧರ ಗುರೂಜಿ' ತನು, ಮನ, ಧನದಿಂದ ಸಮಾಜಸೇವೆಗೆ ಕಂಕಣಬದ್ಧರಾದರು. ಈಗ 'ವಿದ್ಯಾಧರ ಗುರೂಜಿ' ಅವರು ಯಾವುದೇ ಒಂದು ಜಾತಿಗೆ, ಕೋಮಿಗೆ ಸೇರಿದ ವ್ಯಕ್ತಿಯಾಗಿರಲಿಲ್ಲ. ಇಡೀ ಸಮಾಜದ ಆಸ್ತಿಯಾಗಿದ್ದರು. ಸಮಾಜದಲ್ಲಿದ್ದ ಎಲ್ಲ ಬಡವರಿಗೆ ಸಮಾಜದಲ್ಲಿದ್ದ ಎಲ್ಲ ಕೆಳವರ್ಗದ ದೀನದಲಿತರಿಗೆ ಆಶಾದೀಪವಾಗಿದ್ದರು 'ವಿದ್ಯಾಧರ ಗುರೂಜಿ' ಅವರು. ಅವರಿಗೆ 'ಮನುಕುಲ ಮಂದಾರ'ವೆಂದರೂ ಹಿಗ್ಗಿ ಹಿರೇಕಾಯಿ ಆಗುತ್ತಿರಲಿಲ್ಲ. 'ರಜಕ ರತ್ನ' ಎಂದು ಕರೆದರೂ ಉಬ್ಬಿ ಮೇಲೆ ಹೋಗುತ್ತಿರಲಿಲ್ಲ. ನಾನು ಒಬ್ಬ ಮನುಷ್ಯ ಮನುಷ್ಯನಂತೆ ಬಾಳಿ ಬದುಕಬೇಕು ಎಂದು ಗುರಿ ಇಟ್ಟುಕೊಂಡವರು. ಸಮಾಜದ ಎಲ್ಲ ಜನರೂ ಇಂತಹ ಅಪೇಕ್ಷೆ ಇಟ್ಟುಕೊಂಡು ನಡೆದರೆ ಸಮಾಜ ತನ್ನಷ್ಟಕ್ಕೆ ತಾನೇ ಸರಿಪಡುತ್ತದೆ ಎಂದು ಬಗೆದ ಮೊದಲ ಮಾನವರು 'ವಿದ್ಯಾಧರ ಗುರೂಜಿ'.

ಹೀಗೆ ನಾನೊಬ್ಬನೆ ನನ್ನಷ್ಟಕ್ಕೆ ನಾನು ತಿಳಿದುಕೊಂಡು ನಡೆದರೆ ಸಮಾಜ ಸುಧಾರಿಸುವುದಿಲ್ಲ. ನನ್ನ ಕುಲಬಾಂಧವರ ಉದ್ಧಾರವಾಗುವುದಿಲ್ಲ ಎಂದು ಗುರೂಜಿ ಅವರು ಕುಲಬಾಂಧವರ ಹತ್ತಿರ ಹೋಗಿ ನಮಗೆ ಸುಖ ಸಿಗಬೇಕಾದರೆ ನಮ್ಮ ಮಕ್ಕಳು ಮೊದಲು ಶಿಕ್ಷಣ ಪಡೆಯಬೇಕು ಶಿಸ್ತು ಅವರಲ್ಲಿ ಬರಬೇಕು. ಶಿಸ್ತು ಶಿಕ್ಷಣದ ಮೊದಲ ಪಾವಟಿಗೆ ಶಿಕ್ಷಣದಿಂದ ನಮಗೆ ತಿಳುವಳಿಕೆ ಬರುತ್ತದೆ. ಶಿಕ್ಷಣ ನಮಗೆ ಅರಿವು ಮೂಡಿಸುತ್ತದೆ. ಈ ಅರಿವು ನಮಗೆ ಕಾಯಕದ ಪ್ರಜ್ಞೆ ಮೂಡಿಸುತ್ತದೆ. ಕಾಯಕ ನಮ್ಮ ಬಾಳಿಗೆ ಬದುಕಿಗೆ ಶಕ್ತಿ ತಂದುಕೊಡುತ್ತದೆ. ಈ ಶಕ್ತಿ, ಸಾಮರ್ಥ್ಯ ನಮಗೆ ಸಮಾಜದಲ್ಲಿ ಸ್ಥಾನ–ಮಾನ ತಂದುಕೊಡುತ್ತದೆ. ಆಗ ನಾವೂ ಸಮಾಜದ ಒಬ್ಬ ಸದಸ್ಯ ಎಂದು ಗುರುತಿಸಿಕೊಳ್ಳುತ್ತೇವೆ. ಕೆಲಸವನ್ನು ಹುಡುಕಿಕೊಂಡು ಹೋಗುವುದು ಬೇಡ, ಕೆಲಸವೇ ನಮ್ಮನ್ನು ಹುಡುಕಿಕೊಂಡು ಬರಬೇಕು. ಅದಕ್ಕಾಗಿ ನೀವು (ಲಾಂಡ್ರಿ) ಅಂಗಡಿಗಳನ್ನು ಪ್ರಾರಂಭಿಸಿರಿ. ನಿಮ್ಮ ಕೆಲಸಕ್ಕೆ ತಕ್ಕ ಹಣವನ್ನು

ಪಡೆಯಿರಿ. ತುಂಬ ಗೌರವದಿಂದ ನಿಮ್ಮ ಕೆಲಸವನ್ನು ನೀವು ಮಾಡಿರಿ. ವಾರದಲ್ಲಿ ಒಂದು ದಿನ ನಿಮ್ಮ (ಲಾಂಡ್ರಿ) ಅಂಗಡಿಗಳನ್ನು ಮುಚ್ಚಿ ವಿಶ್ರಾಂತಿ ಪಡೆಯಿರಿ. ಆ ಒಂದು ದಿನ ನಿಮ್ಮ 'ಕಾಯಕ' ನಿಮ್ಮ ಬದುಕು ನಿಮ್ಮನ್ನು ಸಮಾಜ ಕಾಣುವ ದೃಷ್ಟಿಯನ್ನು ಕುರಿತು ನಿಮ್ಮ ನಿಮ್ಮೊಳಗೆ ಚರ್ಚಿಸಿರಿ. ನೀವು ಸಮಾಜದಲ್ಲಿ ಎದ್ದು ಕಾಣುವಂತೆ ಒಗೆದು ಇಸ್ತ್ರಿ ಮಾಡಿದ ಬಟ್ಟೆಗಳನ್ನು ಧರಿಸಿರಿ. ನಿಮ್ಮ ಆದಾಯಕ್ಕೆ ಮೀರಿ ಖರ್ಚು ಮಾಡಬೇಡಿರಿ. ಹಾಸಿಗೆ ಇದ್ದಷ್ಟು ಕಾಲು ಚಾಚುವುದನ್ನು ಕಲಿಯಿರಿ. ನಿಮ್ಮಲ್ಲಿ 'ಕಾಯಕ' ನಿಷ್ಠೆ ಬಂದಾಗ ನಿಮ್ಮ ಕೈಗಳಲ್ಲಿ 'ಕಾಸು' ಬರುತ್ತದೆ. ಕಾಸು ಬಂದಾಗ ನಿಮ್ಮ ಕಣ್ಣುಗಳಲ್ಲಿ ಕಾಂತಿ ಬರುತ್ತದೆ. ನಿಮ್ಮಕಣ್ಣಲ್ಲಿ ಕಾಂತಿ ಬಂದಾಗ ನಿಮ್ಮ ಬದುಕಿನಲ್ಲಿ 'ಶಾಂತಿ', 'ಸಮಾಧಾನ' ನೆಲೆಯೂರುತ್ತದೆ. ಆಗ ನೀವು ಸಮಾಜದಲ್ಲಿ ಗಣ್ಯವ್ಯಕ್ತಿಗಳಾಗಿ ಕಾಣುತ್ತೀರಿ. ಆಗ ಶಾಲೆ, ಕಾಲೇಜುಗಳಲ್ಲಿ ಓದುವ ನಿಮ್ಮ ಮಕ್ಕಳಿಗೆ, ಸಮಾಜದಲ್ಲಿ ಸೇವೆ ಸಲ್ಲಿಸುವ ವ್ಯಕ್ತಿಗೆ ಗೌರವ ಸಿಗುತ್ತದ. ಸಮಾಜದಲ್ಲಿ ನಿಮಗೆ ಗೌರವ ಸಿಕ್ಕರೆ ಪ್ರಜಾಪ್ರಭುತ್ವದಲ್ಲಿ ನೀವೂ ಸಹ ರಾಜಕೀಯ ಕ್ಷೇತ್ರಕ್ಕೆ ಇಳಿಯಬಹುದು. ರಜಕ ರಾಜನಾದರೆ ಪ್ರಜಾಪ್ರಭುತ್ವಕ್ಕೆ ದೊರೆತ ಜಯವೆಂದು ಹೇಳಬಹುದು. ಹೀಗೆ ಸಮಯಸಿಕ್ಕಾಗ ಕುಲ ಬಾಂಧವರಿಗೆ ತಿಳಿಸಿ ಹೇಳಿ ಸಾಮಾಜಿಕ, ತಿಳುವಳಿಕೆ, ರಾಜಕೀಯ ಪ್ರಜ್ಞೆಯನ್ನು ಮೂಡಿಸುತ್ತಿದ್ದರು. ಸಮಾಜದ ಕಟ್ಟಕಡೆಯ ಮನುಷ್ಯ ಸಮಾಜದ ಮುಖ್ಯ ವಾಹಿನಿಗೆ ಬಂದರೆ ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿದ ನಮ್ಮ ಶ್ರಮ ಸಾರ್ಥಕವೆಂದು ನಾವೂ ಸಂತಸ ಪಡುತ್ತೇವೆ ಎಂದು ಹೇಳುತ್ತ ಬಂದರು. ಅದರ ಫಲವೆಂಬಂತೆ ಇಂದು 'ಮಡಿವಾಳ ಮಾಚಿದೇವರ ಹೆಸರಿನಲ್ಲಿ' ಸಂತಗಾಡಗೆ ಬಾಬಾ ಹೆಸರಿನಲ್ಲಿ ಮಡಿವಾಳರು ಸಂಘಟನೆ ಯಾಗುತ್ತಿದ್ದಾರೆ. ಮಡಿವಾಳರ ಮಕ್ಕಳ ಶಿಕ್ಷಣ ಪಡೆದು ಸರಕಾರಿ ನೌಕರಿಯಲ್ಲಿದ್ದು ಸೇವೆ ಸಲ್ಲಿಸತೊಡಗಿದ್ದಾರೆ. ರಾಜಕೀಯ ರಂಗಕ್ಕೆ ಧುಮುಕಿ ರಾಜಕೀಯ ಚುಕ್ಕಾಣಿಯನ್ನು ಹಿಡಿಯುತ್ತಿದ್ದಾರೆ. ಇದು ಶುಭದ ಸೂಚನೆಯಲ್ಲವೆ? 'ಸುಖದಿ ತಾನಿದ್ದುದೇ ಸ್ವರಾಜ್ಯ' ಅಂತಹ ಸ್ವರಾಜ್ಯ, ಸುರಾಜ್ಯ ನಮ್ಮದಾಗಬೇಕೆಂದು ಮಹಾತ್ಮರ ಕನಸಿತ್ತು. ಅವರ ಕನಸು ನನಸು ಮಾಡೋಣವೆ?

ಕೆಸರಿನಲ್ಲಿದ್ದ ಕಮಲ

ಶುಭ್ರ ಧವಳ ಖಾದಿ ವಸ್ತ್ರಧಾರಿ ವಿದ್ಯಾಧರ ಗುರೂಜಿ ಅವರನ್ನು ನೋಡಿದರೆ ಇವರು ಅಪ್ಪಟ ದೇಶಭಕ್ತರು. ರಾಜ ನೀತಿಜ್ಞರು, ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ದೇವರೆಂದು ಅವರ ಆರಾಧನೆಯಲ್ಲಿ ತನು, ಮನ, ಧನ ಮುಡುಪಿಟ್ಟು ಮುನ್ನಡೆದ ಮಾನವತಾವಾದಿ. ಇವರು ಗುರುಮಠಕಲ್ಲ ವಿಧಾನಸಭೆಗೆ ಆರಿಸಿ ಬಂದಾಗ ಶ್ರೀ ವೀರೇಂದ್ರ ಪಾಟೀಲರು ಇವರನ್ನು ಉಳಿದ ಸದಸ್ಯರಿಗೆ ಪರಿಚಯ ಮಾಡಿಕೊಡುವಾಗ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ ಬ್ರಿಟಿಷರ ವಿರುದ್ಧ ಎದೆಂಯೊಡ್ಡಿ ನಿಂತರು. ಹಾಗೆಂಯೇ ಹೈದರಾಬಾದ್ ವಿಮೋಚನಾ ಚಳುವಳಿಯಲ್ಲಿ ರಜಾಕಾರರ ವಿರುದ್ಧ ಎದೆಗುಂದದೆ ಹಗಲು ರಾತ್ರಿ ಎನ್ನದೆ ಅವರೊಡನೆ ಸೆಣಸಾಡುತ್ತಾ ಹೈದರಾಬಾದ್ ಸಂಸ್ಥಾನ ವಿಮೋಚನೆಗೊಳಿಸಿ ದರು. ಈಗ ಗುರುಮಠಕಲ್ಲ ಮತಕ್ಷೇತ್ರದಿಂದ ಪ್ರಚಂಡ ಮತದಿಂದ ಆರಿಸಿ ಬಂದ ವಿದ್ಯಾಧರ ಗುರೂಜಿ. ನಮ್ಮ ಮುಂದಿನ 'ಹುಲಿ' ಎಂದು



ಹೃದಯ ತುಂಬಿ ಹೇಳಿದರು. ನಿಜವಾಗಿ ವಿದ್ಯಾಧರ ಗುರೂಜಿ ಅವರ ವ್ಯಕ್ತಿತ್ವ ಕಾಸಿ ಸೋಸಿದ ಬಂಗಾರ.

ಹಿಂದಿ ಸಾಹಿತ್ಯ, ಕನ್ನಡ ಸಂಸ್ಕೃತಿ ಮೈಗೂಡಿಸಿಕೊಂಡ ವಿದ್ಯಾಧರ ಗುರೂಜಿ ಅವರು ತಮ್ಮ ರಾಜಕೀಯ ಬದ್ಧತೆಯನ್ನು ಮರೆತವರಲ್ಲ. ರಾಜಕೀಯ ಕೆಸರು ನೋಡಿ ಮುಖ ತಿರುವಿದವರೂ ಅಲ್ಲ. ಸ್ವಜನ ಪಕ್ಷಪಾತ, ಜಾತಿ ರಾಜಕಾರಣ, ಲಂಚಗುಳಿತನ, ಕಲಬೆರಕೆಯ ಕಾಳಸಂತೆಯಲ್ಲಿ ಕೈಕಪ್ಪುಗೊಳಿಸಿಕೊಂಡ ರಾಜಕೀಯ ಮುಖಂಡರಿಗೆ "ಇತಿಹಾಸವನ್ನು ಮರೆತವರು ಇತಿಹಾಸವನ್ನು ಹುಟ್ಟು ಹಾಕಲಾರರು" ಎಂದು ಗಟ್ಟಿಯಾಗಿ ಹೇಳುತ್ತಿದ್ದರು. ದೇಶ ಸ್ವಾತಂತ್ರ್ಯಗೊಂಡ ಕೆಲವೇ ವರ್ಷಗಳಲ್ಲಿ ಭ್ರಷ್ಟಾಚಾರದಿಂದ ತುಂಬಿ ತುಳುಕುತ್ತಿರುವುದನ್ನು ಕಂಡು ಭ್ರಷ್ಟಾಚಾರದ ವಿರುದ್ಧ ಹೋರಾಟ ಮೆಲ್ಲನೆ ಪ್ರಾರಂಭವಾಯಿತು. ಇವರು ಶಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾಗ ಒಂದು ಸಣ್ಣ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿಯೇ ಇರುತ್ತಿದ್ದರು. ಇವರಿಗೆ ಆಡಂಬರ ಹಿಡಿಸುತ್ತಿದ್ದಿಲ್ಲ. ಡಂಭಾಚಾರ ಬೇಕಾಗಿರಲಿಲ್ಲ. ಇವರಿಗೆ ಬೇಕಾದುದು ತುಳಿತಕ್ಕೊಳಗಾದ ಜನರ ಸೇವೆ. ನೊಂದವರ ಧ್ವನಿಯಾಗಿ ಬಾಳಬೇಕೆಂಬ ಹಂಬಲ ಇವರದು.

ರಾಷ್ಟ್ರನಿಷ್ಠೆಯ ಸ್ವಾತಂತ್ರ್ಯಯೋಧ ವಿಶ್ವನಾಥರೆಡ್ಡಿ ಅವರೊಡನೆ ಇವರ ಸ್ನೇಹ ಬೆಳೆಯಿತು. ಇವರಿಬ್ಬರೂ ಒಂದೇ ನಾವೆಯಲ್ಲಿ ಹುಟ್ಟು ಹಾಕಿದರು. ಒಂದೇ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು ಮುನ್ನಡೆದರು.

1966 ಹಂಪಿಯಿಂದ ಬಸವ ಕಲ್ಯಾಣದವರೆಗೆ ಪಾದಯಾತ್ರೆ ಮಾಡುವ ಸಂಕಲ್ಪ ವಿಶ್ವನಾಥರೆಡ್ಡಿ ಮುದ್ನಾಳ ಅವರಿಗೆ ಇತ್ತು. 1964ರಲ್ಲಿ ಬಸವ ಸಮಿತಿ ಸ್ಥಾಪನೆ ಮಾಡಿ ಅದರ ವ್ಯಾಪಕ ಪ್ರಚಾರದ ಬಗ್ಗೆ ತುಂಬ ಉತ್ಸುಕರಾಗಿದ್ದರು. ಶ್ರೀ ಬಿ.ಡಿ. ಜತ್ತಿಯವರು ಮದ್ರಾಸಿನಲ್ಲಿ ನಡೆದ ಬಸವ ಸಮಿತಿಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ವಿಶ್ವನಾಥರೆಡ್ಡಿ ಮುದ್ನಾಳ ಅವರನ್ನು ಪ್ರತ್ಯೇಕ ಕರೆದು ನಿಮ್ಮ ವೈಯಕ್ತಿಕ ಸಂಕಲ್ಪದ ಪಾದಯಾತ್ರೆಯನ್ನು ಬಸವತತ್ವ ಪ್ರಚಾರಾರ್ಥ ಬಸವಸಮಿತಿ ಪರವಾಗಿ ಕೈಗೊಳ್ಳಿರಿ ಎಂದು ಹೇಳಿದರು. ಈ ಪಾದಯಾತ್ರೆಯ ಸಂಚಾಲಕರನ್ನಾಗಿ ವಿಶ್ವನಾಥರೆಡ್ಡಿ ಮುದ್ನಾಳ ಅವರನ್ನೇ ಆಯ್ಕೆ ಮಾಡಿದರು. ಆಗ ಶಾಸಕರಾಗಿದ್ದ ವಿದ್ಯಾಧರ ಗುರೂಜಿ

ಅವರು ಈ ಪಾದಯಾತ್ರೆ ಯಶಸ್ವಿಯಾಗಲಿಕ್ಕೆ ತುಂಬ ನೆರವು ನೀಡಿದರು. ಅಂದು ಬಸವಸಮಿತಿಯ ಅಧ್ಯಕ್ಷರು ಆಹಾರ ಸಚಿವರು ಆಗಿದ್ದ ಶ್ರೀ ಬಿ.ಡಿ. ಜತ್ತಿ ಅವರು ಈ ಪಾದಯಾತ್ರೆಯಲ್ಲಿ ಪಾಲುಗೊಂಡಿದ್ದರು. ಅನೇಕ ಜನ ಶಾಸಕರು ರಾಜ್ಯಮಂತ್ರಿಗಳು ಈ ಪಾದಯಾತ್ರೆಯಲ್ಲಿ ಪಾಲುಗೊಂಡು ಪಾದಯಾತ್ರೆಗೆ ಒಂದು ಘನತೆ, ಗೌರವ ತಂದುಕೊಟ್ಟರು. ಈ ಪಾದಯಾತ್ರೆಯ ಮೇಲ್ವಿಚಾರಣೆ ಶಾಸಕರಾಗಿದ್ದ ವಿದ್ಯಾಧರ ಗುರೂಜಿ ಅವರು ವಹಿಸಿಕೊಂಡು ಬಸವಾಭಿಮಾನಿಗಳು ಎಂದು ಕೀರ್ತಿಗೆ ಭಾಜನರಾದರು. ಮುಂದೆ ಒಂದು ಅವಧಿಗೆ ಬಸವ ಸಮಿತಿಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿ ಬಸವ ತತ್ವಗಳನ್ನು ಅನುಷ್ಠಾನಕ್ಕೆ ತಂದರು. ವಿಶ್ವನಾಥರೆಡ್ಡಿ ಮುದ್ನಾಳ ಅವರಿಗೂ ಇದು ರಾಜಕೀಯ ರಹಿತ ಕಾರ್ಯಕ್ರಮವಾಗಿರುವುದರಿಂದ ಈ ಪಾದಯಾತ್ರೆಯು ಮುಂದೆ 1967ರಲ್ಲಿ ಬರುವ ಚುನಾವಣೆಗೆ ಒಳ್ಳೆಯ ಪ್ರಚಾರ ಸಿಕ್ಕಂತೆ ಆಯಿತು.

1967ರ ಚುನಾವಣೆಯ ಯಾವ ಮತಕ್ಷೇತ್ರದಿಂದಲೂ ವಿದ್ಯಾಧರ ಗುರೂಜಿಯವರು (ಚುನಾವಣೆಯ) ಕಣಕ್ಕಿಳಿದು ಸ್ಪರ್ಧಿಸುವ ಮನಸ್ಸು ಮಾಡಲಿಲ್ಲ. ಹಿಂದೆ ಆಗಿದ್ದ ಚುನಾವಣೆಯ ಸಾಲ ತೀರಿಸುತ್ತ ಹೊರಟಿದ್ದರು. ಮನೆಯಲ್ಲಿ ಇವರ ಧರ್ಮಪತ್ನಿ ತಾವು ಶಾಲಾ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತ ಮುಂದಿನ ತಮ್ಮ ಪರೀಕ್ಷೆಯ ಸಿದ್ಧತೆ ಮಾಡಿಕೊಳ್ಳುತ್ತ ಮಕ್ಕಳನ್ನು ಮನೆಗೆ ಬರಹೋಗುವ ಜನರ ಆದರ ಸತ್ಕಾರಕ್ಕೂ ಹೆಚ್ಚಿನ ಗಮನ ಹರಿಸಿ ತಮಗೆ ಬರುವ ಸಂಬಳದಲ್ಲಿ ಅಚ್ಚುಕಟ್ಟಾಗಿ ಸಂಸಾರ ನಡೆಸಿದ್ದರು. ಇವರು ಶಿಕ್ಷಣ ಕ್ಷೇತ್ರದಲ್ಲಿ ಆದರ್ಶ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಲಿದ್ದರೆ ವಿದ್ಯಾಧರ ಗುರೂಜಿ ಅವರು ರಾಜಕೀಯ ಕ್ಷೇತ್ರದಲ್ಲಿ ಮಾದರಿಯ ರಾಜಕಾರಣಿಯಾಗಿ ಸೇವೆ ಸಲ್ಲಿಸುತ್ತಲಿದ್ದರು. ಇವರಿಬ್ಬರೂ ದಂಪತಿಗಳಿಗೆ ಸೇವೆ ಮುಖ್ಯವಾಗಿತ್ತು. ಈ ಸೇವೆ ನಿರಂತರವಾಗಿ ನಡೆಯಬೇಕೆಂದು ಇವರ ಲಕ್ಷ್ಯ ಸೇವೆಯ ಕಡೆಗೆ ಇತ್ತು. ಜನರ ಕಡೆಗೆ ಇತ್ತು.

1967ರ ಚುನಾವಣೆ ಹಣಿಕೆ ಹಾಕತೊಡಗಿತು. ವಿಶ್ವನಾಥ ರೆಡ್ಡಿ ಅವರು ಯಾದಗಿರಿ ಮತಕ್ಷೇತ್ರದಿಂದ ಚುನಾವಣೆಯ ಕಣಕ್ಕಿಳಿದು ಸ್ಪರ್ಧಿಸುವುದು ನಿರ್ಧಾರವಾಗಿತ್ತು. ವಿದ್ಯಾದರ ಗುರೂಜಿ ಅವರು ವಿಶ್ವನಾಥರೆಡ್ಡಿ ಮುದ್ನಾಳ ಅವರು ಚುನಾವಣೆಯ ಸಿದ್ಧತೆಯಲ್ಲಿ ತೊಡಗಿದರು.

ವಿದ್ಯಾಧರ ಗುರೂಜಿಯವರು ಪರಿಶುಭ್ರ ಮನಸ್ಸಿನಿಂದ ಜಳಜಳ ಕೈಗಳಿಂದ ಜನರ ಸೇವೆ ಮಾಡಿ ಎಲ್ಲ ಕಡೆಗೂ ಪ್ರೀತಿ ವಿಶ್ವಾಸ ಗಳಿಸಿದರು. 1962ರಲ್ಲಿ ತಮ್ಮ ಚುನಾವಣೆಗೆ ಖರ್ಚಾದ ಹಣದ ಸಾಲ ವಿಶ್ವನಾಥರೆಡ್ಡಿ ಮುದ್ನಾಳ ಅವರಿಗೆ ಪೂರ್ಣ ಮುಟ್ಟಿಸಿ ಮುಂದೆ ಬರುವ 1967ರ ಚುನಾವಣೆಯ ಕಣಕ್ಕಿಳಿಯುತ್ತಿದ್ದ ವಿಶ್ವನಾಥರೆಡ್ಡಿ ಮುದ್ನಾಳ ಅವರನ್ನು ಈ ಸಲ ಅವರನ್ನು ಗೆಲ್ಲಿಸುವ ಹುನ್ನಾರದಲ್ಲಿದ್ದರು.

ಸಮಾಜದ ಕೆಳ ಸ್ತರಗಳಲ್ಲಿ ಜನಿಸಿ ತನ್ನ ಉತ್ತಮ ನಡೆ-ನುಡಿಗಳಿಂದ ವ್ಯಕ್ತಿತ್ವವನ್ನು ರೂಪಿಸಿಕೊಂಡ ಮನುಷ್ಯನಿಗೆ ಕೆಸರಿನಲ್ಲಿ ಹುಟ್ಟಿದ ಕಮಲ ಎಂದು ಕರೆಯುತ್ತಾರೆ. ಅದರಂತೆ ಅತ್ಯಂತ ತುಳಿಯಲ್ಪಟ್ಟ ದೋಬಿ ಸಮಾಜದ, ಕಡು ಬಡತನದಲ್ಲಿ ಜನಿಸಿದ ಭಿಕ್ಷಪ್ಪ ತನ್ನ ನಡೆ-ನುಡಿ ಧ್ಯೇಯ-ಧೋರಣೆ ಆಚಾರ-ವಿಚಾರಗಳಿಂದ ಸ್ವಾತಂತ್ರ್ಯಪ್ರೇಮಿಯಾಗಿ ದೇಶದ ಬಿಡುಗಡೆಗೆ ಮನಸ್ಸಿಟ್ಟು ಮುನ್ನಡೆಯಲು ಸ್ವಾಮಿ ರಾಮಗಿರಿಜಿಯಂತಹ ಶ್ರೇಷ್ಠ ಗುರುಗಳು ಲಭಿಸಿದ್ದು, 'ಆರ್ಯಸಮಾಜ' ಸಹವಾಸಕ್ಕೆ ಬರುವುದು ಒಂದು ಪೂರ್ವಜನ್ಮದ ಪುಣ್ಯವೆಂದೇ ಹೇಳಬೇಕು. ಅತ್ಯಂತ ತ್ಯಾಗ ನಿಷ್ಠೆ ಪ್ರಾಮಾಣಿಕತೆ, ನಿಷ್ಠುರತೆ, ನಿಸ್ಪೃಹತೆಯಿಂದ ಸೇವಾಧಾರಿಗಳ ಸಹವಾಸದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ, ಹೈದರಾಬಾದ ವಿಮೋಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ವಿದ್ಯಾಧರ ಗುರೂಜಿ ಅವರ ಜಾತಿಯ ಸೊಂಕು ತೊಳೆದು ಹೋಯಿತು. ರಾಜಕೀಯ ಕೆಸರು ಮೈಗೆ ಹತ್ತಲಿಲ್ಲ. ಪರಿಶುಭ್ರ ವ್ಯಕ್ತಿಗಳಾಗಿ ಗಾಂಧೀಜಿ ತತ್ವ ಅನುಷ್ಠಾನಕ್ಕೆ ತರಲು ಶ್ರಮಿಸತೊಡಗಿದರು. ಈಗ ಸುಭಾಷ್ ಚಂದ್ರರ ಸಾಹಸ, ಭಗತ್‌ಸಿಂಗ್ ಸುಖದೇವ, ರಾಜಗುರು ವೀರಸಾವಕರ ಅವರ ತ್ಯಾಗ ಬಲಿದಾನ ಗುರೂಜಿ ಅವರ ಜೀವನದಲ್ಲಿ ಕರ್ಪೂರದಂತೆ ಉರಿದು ಬೆಳಗುತ್ತಿದ್ದವು. ಇಂದಿಗೂ ಆ ಜ್ಯೋತಿ ಅದೇ ರೀತಿಯಾಗಿ ಪ್ರಕಾಶಮಾನವಾಗಿ ಪ್ರಜ್ವಲಿಸುತ್ತಲಿದೆ.

ರಂಗೇರಿದ ಚುನಾವಣೆಯ ಕಣ

1967ರಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಯಾದಗಿರಿ ಮತಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಲಿಂಗೇರಿ ಕೋನಪ್ಪನವರು ಲೋಕ ಸೇವಕ ಸಂಘದ ಅಭ್ಯರ್ಥಿಯಾಗಿ ವಿಶ್ವನಾಥರೆಡ್ಡಿ ಮುದ್ನಾಳ ಅವರು ಕಣಕ್ಕಿಳಿದರು. ಇವರಿಬ್ಬರೂ ಸಮತೂಕದ ವ್ಯಕ್ತಿಗಳು. ಇಬ್ಬರೂ ಶ್ರೀಮಂತರು. ಇವರಿಬ್ಬರೂ ಮೇಲ್ಜಾತಿಯವರು. ಇಬ್ಬರೂ ಬಡವರ ಬಂಧುಗಳು. ಹಿಂದುಳಿದವರ ಹಿತೈಷಿಗಳು ದೇಶ ಸೇವೆಯ ಆಕಾಂಕ್ಷೆಯುಳ್ಳ ಮನೋಧರ್ಮದವರು. ತೂಗಿದರೆ ಇಬ್ಬರೂ ಸಮಾನರು. ಮತಕ್ಷೇತ್ರದ ಮತದಾರ ದಿಗ್ಭ್ರಮೆಗೊಂಡ, ನೊಗಹೊತ್ತ ಜೋಡೆತ್ತಿನ ಕಾಂಗ್ರೆಸ್ ಪಕ್ಷದ ಗುರುತುಳ್ಳ ಬಣ್ಣಬಣ್ಣದ ಭಿತ್ತಿಪತ್ರಗಳು ಎಲ್ಲೆಡೆಗಳಲ್ಲಿ ಕಂಗೊಳಿಸ ತೊಡಗಿದವು. ಘಟಾನುಘಟಿಗಳಾದ ಕಾಂಗ್ರೆಸ್ ನಾಯಕರು ಒಂದುಗೂಡತೊಡಗಿದರು.

ಅದರಂತೆ ಲೋಕಸೇವಕ ಸಂಘದ ಗುರುತಿನ ಚಿನ್ಹೆ! ಸೇರಿಗೆ ಸವ್ವಾಸೇರಿನಂತೆ



ಹೊರಬಂದು ಹಳ್ಳಿ ಹಳ್ಳಿಗಳಿಗೆ ಹೋಗಿ ತಲುಪಿದವು. ವಿಶ್ವನಾಥರೆಡ್ಡಿ ಮುದ್ನಾಳ ಅವರ ಸಹೋದರ ಭೀಮರೆಡ್ಡಿ ಮುದ್ನಾಳ ವಿಶ್ವನಾಥರೆಡ್ಡಿ ಮುದ್ನಾಳ ಅವರ ಸೋದರ ಮಾವನ ಮಗ, ಪಂಪಾತಿ ರೆಡ್ಡಿ, ಲೋಕಸೇವಕ ಸಂಘದ ಧುರೀಣ ಶಿವಮೂರ್ತಿಸ್ವಾಮಿ ಅಳವಂಡಿ ಬಿ.ಎಸ್. ಪಾಟೀಲ, ಸದಾಶಿವರೆಡ್ಡಿ ವಿದ್ಯಾಧರ ಗುರೂಜಿ ಮುಂತಾದ ರಾಜಕೀಯ ನಾಯಕರು ಕಾರ್ಯಕರ್ತರು ಚುನಾವಣಾ ಕಣಕ್ಕಿಳಿದು ಹೋರಾಡಿದರು. ವಿಶ್ವನಾಥರೆಡ್ಡಿ ಮುದ್ನಾಳ ಅವರು ಜಯಭೇರಿ ಹೊಡೆದರು. ಹೂವು, ಹಾರಗಳ ಸುರಿಮಳೆ ಭರ್ಜರಿ ಮೆರವಣಿಗೆ ಪಟಾಕಿಗಳ ಸದ್ದು, ಆಟಂಬಾಂಬುಗಳು ಮುಗಿಲೆತ್ತರಕ್ಕೂ ಏರಿ ಕಣ್ಮನ ಸೆಳೆದವು. ಸಿಡಿಮದ್ದಿನಿಂದ ಕಿವಿಗಳು ಗಡಚಿಕ್ಕಿದವು.

ಈ ಚುನಾವಣೆಗಳಲ್ಲಿ ಪರಾಭವಗೊಂಡ ಲಿಂಗೇರಿ ಕೋನಪ್ಪನವರು ವಿಜಯ ಅಭ್ಯರ್ಥಿ ವಿಶ್ವನಾಥರೆಡ್ಡಿ ಮುದ್ನಾಳ ಅವರ ಸದಸ್ಯತ್ವ ಅನೂರ್ಜಿತಗೊಳಿಸಲು ನ್ಯಾಯಾಲಯದ ಕಟ್ಟೆ ಏರಿದರು ಹೈಕೋರ್ಟಿನಲ್ಲಿ ಕೇಸು ನಡೆಯಿತು. ಹೈಕೋರ್ಟಿನಲ್ಲಿ ವಿಜಯ ಅಭ್ಯರ್ಥಿ ವಿಶ್ವನಾಥರೆಡ್ಡಿ ಮುದ್ನಾಳ ಅವರು ಗೆದ್ದುಬಂದರೂ ಕಾಂಗ್ರೆಸ್ ಅಭ್ಯರ್ಥಿಗಳಾದ ಲಿಂಗೇರಿ ಕೋನಪ್ಪನವರು ಅಷ್ಟಕ್ಕೆ ಸುಮ್ಮನೇ ಕುಳಿತುಕೊಳ್ಳದೆ ಸುಪ್ರೀಂಕೋರ್ಟಿಗೆ ಹೋದರು. ಸುಪ್ರಿಂ ಕೋರ್ಟಿನಲ್ಲಿ ಲಿಂಗೇರಿಕೋನಪ್ಪನವರು ಗೆದ್ದುಬಂದರು. ಹೀಗೆ ಜಿದ್ದಾಜಿದ್ದಿನಲ್ಲಿ ಯಾದಗಿರಿ ಮತಕ್ಷೇತ್ರ ಚುನಾವಣೆಯ ಕಣವಾಗಿ ಉಳಿಯದೆ ಕುಸ್ತಿಯ ಕಣವಾಗಿ ಪರಿಣಮಿಸಿತು.

ವಿಶ್ವನಾಥರೆಡ್ಡಿ ಮುದ್ನಾಳ ಅವರ ಪರವಾಗಿ ಒಲವು ತೋರಿಸಿದ, ಅವರ ಪರವಾಗಿ ಜನಾಭಿಪ್ರಾಯದಂತೆ ಮಾತನಾಡಿದ ಸರಕಾರಿ ಶಿಕ್ಷಕರು, ಶಿಕ್ಷಕಿಯರಿಗೆ ಯಾದಗಿರಿ ಊರು, ಯಾದಗಿರಿ ತಾಲೂಕು ಬಿಡಿಸಿ ದೂರದ ಊರುಗಳಿಗೆ ಶಿಕ್ಷೆ ರೂಪದಲ್ಲಿ ವರ್ಗ ಮಾಡಲಾಯಿತು. ಅದರಂತೆ ವಿದ್ಯಾಧರ ಗುರೂಜಿ ಅವರ ಧರ್ಮಪತ್ನಿ ಶ್ರೀಮತಿ ಸವಿತಾ ದೇವಿ ಅವರನ್ನು ಯಾದಗಿರಿ ನಗರದಿಂದ ರಾಯಚೂರು ಜಿಲ್ಲೆಯ ಕುಷ್ಟಗಿ ತಾಲೂಕಿನ ಕೊನೆ ಹಳ್ಳಿ ಕಲಾಲಬಂಡಿ ಗ್ರಾಮಕ್ಕೆ ವರ್ಗಮಾಡಿದ್ದರು. ಅತ್ಯಂತ ಸ್ವಾಭಿಮಾನಿ, ಸಿಟ್ಟಿನ ಉಗ್ರಮೂರ್ತಿ ಸವಿತಾದೇವಿಯವರು ಈ ಸುದ್ದಿ ಕೇಳಿ ಕೆಂಡಾಮಂಡಲ ವಾದರು. ಎರಡು ಮಕ್ಕಳ ತಾಯಿ ಆಗಿದ್ದ ಸವಿತಾ ದೇವಿಯವರು ಅಷ್ಟು

ದೂರ ಹೋಗಿ ನೌಕರಿ ಮಾಡುವಂತಿರಲಿಲ್ಲ. ನೌಕರಿ ಬಿಟ್ಟು ಕುಳಿತುಕೊಳ್ಳುವಂತಿರಲಿಲ್ಲ. ಸುದೀರ್ಘ ರಜೆ ಹಾಕಿ ಮನೆಯೊಳಗೆ ಕುಳಿತರು. ಒಂದೆರಡು ತಿಂಗಳು ಗತಿಸುತ್ತಲೇ ಬರುವ ಸಂಬಳ ಇಲ್ಲದಂತಾಯಿತು. ಶೋಚನೀಯ ಸ್ಥಿತಿ ಮತ್ತೆ ಕಾಣುವಂತಾಯಿತು. ಸರಕಾರಿ ಶಾಲೆಗೆ ರಜೆ ಹಾಕಿದ್ದ ಸವಿತಾ ದೇವಿ ಅವರು ಮನೆಯ ಖರ್ಚಿಗಾಗಿ ಖಾಸಗಿ ಶಾಲೆಯಲ್ಲಿ ಕೆಲಸ ಮಾಡತೊಡಗಿದರು. ಸತತ ಪ್ರಯತ್ನದಿಂದ 1970ರಲ್ಲಿ ಕಲಾಲಬಂಡಿ ಹಳ್ಳಿಯಿಂದ ಯಾದಗಿರಿ ನಗರಕ್ಕೆ ವರ್ಗವಾಗಿ ಬಂದ ಮೇಲೆ ಸರಕಾರಿ ಶಾಲೆಯಲ್ಲಿ ಕೆಲಸ ಮಾಡತೊಡಗಿದರು.

1968ರ ತಾಲೂಕಾ ಅಭಿವೃದ್ಧಿ ಮಂಡಳಗಳ ಚುನಾವಣೆಗಳು ಬಂದವು. ವಿಧಾನಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ ವಿದ್ಯಾಧರ ಗುರೂಜಿ ಅವರನ್ನು ರಾಜಾಜಿ ಅವರ ಉದಾಹರಣೆ ಕೊಟ್ಟು ವಿಧಾನಸಭೆಯ ಮಾಜಿ ಸದಸ್ಯರಾಗಿದ್ದವರನ್ನು ನಿಲ್ಲಿಸಬಹುದೆಂದು ಅಭಿಪ್ರಾಯದಂತೆ ವಿದ್ಯಾಧರ ಗುರೂಜಿ ಅವರನ್ನು ಟಿ.ಡಿ.ಬಿ. ಚುನಾವಣೆಗೆ ನಿಲ್ಲಿಸಿದರು. ಗುರೂಜಿಯವರು ನನಗೆ ಯಾವ ಅಧಿಕಾರವು ಬೇಡ. ನಾನು ನನ್ನ ಕೈಲಾದ ಸೇವೆಯನ್ನು ಅತ್ಯಂತ ನಿಷ್ಠೆಯಿಂದ ಪ್ರಾಮಾಣಿಕತೆಯಿಂದ ಮಾಡುತ್ತೇನೆಂದು ಎಷ್ಟು ಹೇಳಿದರೂ ವಿಶ್ವನಾಥರೆಡ್ಡಿ ಮುದ್ನಾಳ ಅವರು ಸ್ಥಳೀಯ ಜನರ ಸಂಪರ್ಕ ಇಟ್ಟುಕೊಳ್ಳಲು ಇದು ನಮಗೆ ಅನುಕೂಲವಾಗುತ್ತದೆ ಅದಕ್ಕೆ ತಾವು ನಿಂತರೆ ಸರಳವಾಗಿ ಆರಿಸಿಬರುತ್ತೀರಿ ಎಂದು ಹೇಳಿ ಚುನಾವಣೆಯ ಕಣಕ್ಕಿಳಿಸಿದರು. ವಿದ್ಯಾಧರ ಗುರೂಜಿ ಅವರು ಆಯ್ಕೆಯಾಗಿ ಬಂದರು. ಜನಸೇವೆಗೆ ದಾರಿ ಆಯಿತೆಂದು ಗುರೂಜಿ ಅವರ ಹಿಂದೆ ಇದ್ದ ಕಾರ್ಯಕರ್ತರು ಸಂತಸಪಟ್ಟರು.

ಗುರೂಜಿ ಅವರು ಪ್ರಾರಂಭಿಸಿದ 'ಗಾಂಧಿ ಜನರಲ್ ಹಾಸ್ಟೆಲ್' ಈಗ ಎಲ್ಲ ಕಡೆಗೂ ಪ್ರಚಾರವಾಗಿತ್ತು. ಹಿಂದುಳಿದ ಬಡವರ ಮಕ್ಕಳು ಹಾಸ್ಟೆಲ್ಲಿಗೆ ಬಂದು ಶಿಕ್ಷಣ ಪಡೆಯುತ್ತಿದ್ದರು. ಗುರೂಜಿ ಅವರು ಅವರಿಗೆ ನೈತಿಕ ಶಿಕ್ಷಣವನ್ನು ಕೊಟ್ಟು ಮಕ್ಕಳು ಸ್ವಾವಲಂಬಿಗಳಾಗಿ, ಸ್ವಾಭಿಮಾನಿಗಳಾಗಿ ಬೆಳೆದು ನಾಳಿನ ನಾಡಿನ ಸತ್ಪ್ರಜೆಗಳಾಗಿ ಬಾಳಲು ತಿಳುವಳಿಕೆ ನೀಡುತ್ತಿದ್ದರು.

1967ರ ಚುನಾವಣೆಯ ಅಪಜಯದಿಂದ ನಿರಾಶರಾಗಲಾರದೆಂದು 1969ರಲ್ಲಿ ಸದಾಶಿವರೆಡ್ಡಿ, ಭೀಮರೆಡ್ಡಿ, ಪಂಪಾತಿರೆಡ್ಡಿ ಅವರನ್ನು ಕೂಡಿಕೊಂಡು

ವಿದ್ಯಾಧರ ಗುರೂಜಿ ಅವರು ವಿಶ್ವನಾಥರೆಡ್ಡಿ ಮುದ್ನಾಳ ಅವರ 44ನೇ ಹುಟ್ಟುಹಬ್ಬವನ್ನು ತುಂಬ ವಿಜೃಂಭಣೆಯಿಂದ ಆಚರಿಸಿ ವಿಶ್ವನಾಥರೆಡ್ಡಿ ಮುದ್ನಾಳ ಅವರಲ್ಲಿಯೂ ಕಾರ್ಯಕರ್ತರಲ್ಲಿಯೂ ಹೊಸ ಹುರುಪು, ಹುಮ್ಮಸ್ಸು ತಂದುಕೊಟ್ಟರು. ಅದರಿಂದ ವಿದ್ಯಾಧರ ಗುರೂಜಿ ವಿಶ್ವನಾಥರೆಡ್ಡಿ ಅವರ ಸ್ನೇಹ ಇನ್ನಷ್ಟು ಬಲಪಟ್ಟಿತು. 1971ರಲ್ಲಿ ಲೋಕಸಭೆಯ ಚುನಾವಣೆ ಹಣಿಕೆ ಹಾಕಿತು. ಸಂಸ್ಥಾ ಕಾಂಗ್ರೆಸ್ಸಿನಿಂದ ಕಲಬುರ್ಗಿ ಲೋಕಸಭೆಯ ಅಭ್ಯರ್ಥಿಯಾಗಿ ಪೂಜ್ಯ ಡಾ. ಶರಬಸವಪ್ಪ ಅಪ್ಪಾ ಶರಣಬಸವೇಶ್ವರ ಸಂಸ್ಥಾನ ಕಲಬುರ್ಗಿ ಅವರು ಸ್ಪರ್ಧಿಸಿದರು. ಇವರ ಎದುರಾಳಿಯಾಗಿ ಕಲಬುರ್ಗಿ ನಗರದ ಗಣ್ಯ ವಕೀಲರಾದ ಶ್ರೀಧರ್ಮರಾವ ಅಫಜಲಪೂರ ಅವರು ಕಾಂಗ್ರೆಸ್ (ಐ)ನಿಂದ ಚುನಾವಣೆಯ ಕಣಕ್ಕಿಳಿದರು. ಅದರಂತೆ ರಾಯಚೂರು ಮತಕ್ಷೇತ್ರದಿಂದ ಸಂಸ್ಥಾಕಾಂಗ್ರೆಸ್ ಅಭ್ಯರ್ಥಿ ಮಾಜಿ ಸಂಸತ್ ಸದಸ್ಯರಾಗಿದ್ದ ರಾಜಾವೆಂಕಟಪ್ಪ ನಾಯಕರನ್ನು ವಿದ್ಯಾಧರ ಗುರೂಜಿ ವಿಶ್ವನಾಥರಡ್ಡಿ ಮುದ್ನಾಳ ಕೂಡಿ ಚುನಾವಣೆಯ ಕಣಕ್ಕಿಳಿಸಿದರು. ಈ ಎರಡೂ ಮತಕ್ಷೇತ್ರಗಳಲ್ಲಿ ವಿದ್ಯಾಧರ ಗುರೂಜಿ ಅವರು ಅಭ್ಯರ್ಥಿಗಳ ಕುರಿತು ಪ್ರಚಾರ ಭಾಷಣ ಮಾಡಿದರು. ರಾಯಚೂರು ಅಭ್ಯರ್ಥಿ ಪರ ಭಾಷಣ ಮಾಡುವಾಗ ವಿದ್ಯಾಧರ ಗುರೂಜಿ ಅವರು ಎರಡೂ ಕಡೆಗೆ ನಮಗೆ ಜಯ ನಿಶ್ಚಿತ ಅದರಲ್ಲಿ ರಾಯಚೂರು ಮತಕ್ಷೇತ್ರ ನಿಶ್ಚಯವಾಗಿ ಗೆಲುವನ್ನು ಪಡೆಯುತ್ತದೆ. ಒಂದು ವೇಳೆ ಸೋತರೆ ನಾನು ಖಾದಿ ಬಟ್ಟೆ ಬಿಟ್ಟು ಕಾವಿ ಬಟ್ಟೆ ತೊಡುತ್ತೇನೆ ಎಂದು ಪ್ರತಿಜ್ಞೆ ಮಾಡಿದರು. ಇಂದಿರಾಗಾಂಧಿ ಬಿರುಗಾಳಿಯಲ್ಲಿ ಸಂಸ್ಥಾ ಕಾಂಗ್ರೆಸ್ಸಿನ ಅಭ್ಯರ್ಥಿಗಳು ಧೂಳಿಪಟವಾಗಿ ಹಾರಿಹೋದರು. ಖಾದಿ ಬಟ್ಟೆಯ ಬದಲು ಕಾವಿ ಉಡುತ್ತೇನೆ ಎಂದು ಪ್ರತಿಜ್ಞೆ ಮಾಡಿದ ವಿದ್ಯಾಧರ ಗುರೂಜಿ ಅವರಿಗೆ ವಿಶ್ವನಾಥರೆಡ್ಡಿ ಮುದ್ನಾಳ ಅವರು ನೀವು ಖಾದಿ ಬಟ್ಟೆ ಬಿಟ್ಟು ಕಾವಿ ತೊಡಬೇಕೆಂದು ಒತ್ತಾಯ ಮಾಡಿದರು.

ಮುಂದೆ 1970ರ ಮೇ ತಿಂಗಳಲ್ಲಿ ಬರುವ ಬಸವ ಜಯಂತಿ ಉತ್ಸವವನ್ನು ವಿಶ್ವನಾಥರೆಡ್ಡಿ ಮುದ್ನಾಳ ಅವರು ತಮ್ಮ ಊರು ಮುದ್ನಾಳದಲ್ಲಿ ಏರ್ಪಡಿಸಿದ್ದರು. ಈ ಜಯಂತ್ಯೋತ್ಸವಕ್ಕೆ ವಿದ್ಯಾಧರ ಗುರೂಜಿ ಅವರು ಆಗಮಿಸಿದರು. ಅವರು ಮುದ್ನಾಳಕ್ಕೆ ಆಗಮಿಸುತ್ತಲೇ ವಿಶ್ವನಾಥರೆಡ್ಡಿ ಮುದ್ನಾಳ ಅವರು ಅವರಿಗಾಗಿ ತರಿಸಿ ಇಟ್ಟಿದ್ದ ಕಾವಿಬಟ್ಟೆ ಧರಿಸಿಕೊಳ್ಳಲು ಕೊಟ್ಟರು.

ಅಸಂಖ್ಯಾತ ಕಾರ್ಯಕರ್ತರ ಮಧ್ಯದಲ್ಲಿ ವಿದ್ಯಾಧರ ಗುರೂಜಿ ಅವರು ಬಸವ ಜಯಂತಿಯಂದು ಖಾದಿಧೋತರ, ಖಾದಿ ಶರ್ಟ್ ಕಳಚಿ ಕಾವಿಧೋತರ, ಕಾವಿ ಜುಬ್ಬಾ ಧರಿಸಿದರು. "ನಾನು ನನ್ನ ಪ್ರತಿಜ್ಞೆಯಂತೆ ಇಂದು ಕಾವಿ ತೊಟ್ಟು ಈ ಬಟ್ಟೆಗೆ ಗೌರವ ಬರುವಂತೆ ನಡೆದುಕೊಳ್ಳುತ್ತೇನೆ. ಎಂದು ವಿಶ್ವನಾಥರೆಡ್ಡಿ ಮುದ್ನಾಳ ಅವರು ಯಾದಗಿರಿ ಮತ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿ ಬರುತ್ತಾರೆ, ಅಲ್ಲಿಯವರೆಗೆ ಈ ಕಾವಿ ನನ್ನ ಪ್ರೀತಿಯ ಉಡುಪು. ತೊಡವು ಎಂದು" ಮತ್ತೆ ಪ್ರತಿಜ್ಞೆ ಎಂಬಂತೆ ಮಾತನಾಡಿದರು. ಹೀಗೆ ಗುರೂಜಿ ಅವರು ನುಡಿದಂತೆ ನಡೆದು ತೋರಿಸುವ ಧೀರರು, ಶೂರರು ಅಂತೆಯೇ ಅವರ ಪಣ ತೊಟ್ಟು ಭಾರತಕ್ಕೆ ಸ್ವಾತಂತ್ರ್ಯ ತಂದುಕೊಡುವಲ್ಲಿ ಭಾಗಿಯಾದರು. ಹೈದರಾಬಾದ್ ಸಂಸ್ಥಾನದ ವಿಮೋಚನೆ ಗೊಳಿಸಿದರು. ಸ್ವತಂತ್ರ ಭಾರತದ ಏಳಿಗೆಗಾಗಿ, ಪ್ರಜಾಪ್ರಭುತ್ವದ ಪಾವಿತ್ರತೆಗಾಗಿ ಕಾವಿ ತೊಡಲು ಸಿದ್ಧರಾದರು. ಇಂತಹ ದೇಶಭಕ್ತ ರಾಜಕಾರಣಿಗಳ ಹೈದರಾಬಾದ್ ಕರ್ನಾಟಕದ ಕೊನೆಯ ಕೊಂಡಿ ವಿದ್ಯಾಧರ ಗುರೂಜಿ ಎಂದು ಬರೆಯಲು ನನಗೆ ಎಲ್ಲಿಲ್ಲದ ಆನಂದವಾಗುತ್ತದೆ.

ಕಾವಿ ಬಟ್ಟೆ ಉಟ್ಟರೂ ಸನ್ಯಾಸಿ ಅಲ್ಲ

ವಿದ್ಯಾಧರ ಗುರೂಜಿ ಅವರು ಖಾದಿ ಬಟ್ಟೆ ಬಿಟ್ಟು ಕಾವಿ ಉಟ್ಟುಕೊಂಡರೂ ಸನ್ಯಾಸಿಗಳಂತೆ ಆಶ್ರಮವಾಸಿಗಳಾಗಲಿಲ್ಲ. ಜನರ ಮಧ್ಯದಲ್ಲಿದ್ದು ಸೇವೆ ಸಲ್ಲಿಸುತ್ತಿದ್ದರು. ಅವರ ಧರ್ಮಪತ್ನಿ ಶ್ರೀಮತಿ ಸವಿತಾ ದೇವಿ ಅವರು ತಮ್ಮ ಅಧ್ಯಾಪನದೊಡನೆ ಅಧ್ಯಯನ ಮುಂದು ವರಿಸಿದ್ದರು. ಅವರು ಪಿಯೂಸಿ ಮುಗಿಸಿ ಬಿ.ಎ. ಪರೀಕ್ಷೆಗೆ ಓದುತ್ತಿದ್ದರು. ಅವರ ಐಚ್ಛಿಕ ವಿಷಯ ಹಿಂದಿ ಭಾಷೆಯೇ ಆಗಿತ್ತು.

ವಿದ್ಯಾಧರ ಗುರೂಜಿ ಅವರು ಟಿ.ಡಿ.ಬಿ. ಸದಸ್ಯರಾಗಿ ತಾಲೂಕಿನ ಸರ್ವಾಂಗೀಣ ಉನ್ನತಿ ಗಾಗಿ ಉಳಿದ ಸದಸ್ಯರಿಗೆ ಮಾರ್ಗದರ್ಶನ ಮಾಡುತ್ತ ಸೇವೆ ಸಲ್ಲಿಸುತ್ತಿದ್ದರು. ವಿಶ್ವನಾಥರೆಡ್ಡಿ ಮುದ್ನಾಳ ಅವರ ರಾಜಕೀಯ ಚಟುವಟಿಕೆ, ಚರ್ಚೆ ಮುಂದುವರಿಸಿದ್ದರು.

ವಿದ್ಯಾಧರ ಗುರೂಜಿ ಅವರು ಸ್ವಾತಂತ್ರ್ಯ ಹೋರಾಟ ಹೈದರಾಬಾದ್ ವಿಮೋಚನೆಯಲ್ಲಿ ತಂದೆ-ತಾಯಿ, ಅಕ್ಕ-ತಂಗಿ ತಮ್ಮಂದಿರನ್ನು



ಮರೆತುಬಿಟ್ಟಿದ್ದರು. ಸವಿತಾದೇವಿಯವರು ಬಂದ ಮೇಲೆ ಒಂದು ಮನೆ ಎನ್ನುವಂತಾಯಿತು. ಆಗ ಇವರ ಬಂಧು ಬಳಗ ಮನೆಗೆ ಬಂದು ಹೋಗ ತೊಡಗಿದರು. ಮನೆಗೆ ಬಂದು ಹೋಗುವ ತಾಯಿ-ತಂದೆಗಳನ್ನು, ಅಣ್ಣ ತಮ್ಮಂದಿರನ್ನು ಬಂಧು ಬಳಗದವರನ್ನು ಬಹಳ ಪ್ರೀತಿಯಿಂದ ಕಂಡು ಅವರಿಗೆ ಬೇಕಾದುದನ್ನು ಪೂರೈಸುತ್ತಿದ್ದರು. ಎಲ್ಲರು ಕೂಡಿ ಮನೆಯಲ್ಲಿ ಊಟ ಮಾಡಿ ಸುಖ ದುಃಖವನ್ನು ಹಂಚಿಕೊಳ್ಳುತ್ತಿದ್ದರು.

ವಿದ್ಯಾಧರ ಗುರೂಜಿ ಅವರಿಗೆ ಆಗ ಐವತ್ತೈದು ಐವತ್ತಾರರ ಹರೆಯ ಕಾವಿ ಉಟ್ಟರೂ ದೇಶಭಕ್ತರಂತೆ ಕಾಣುತ್ತಿದ್ದರು. ಅವರು ನಿಜವಾದ ಅರ್ಥದಲ್ಲಿ ತ್ಯಾಗಿಗಳು. ಅತ್ಯಂತ ಸಾದಾ ಸರಳ ಊಟ, ಕೊಬ್ಬುಳ್ಳ ಪದಾರ್ಥಗಳನ್ನು ಅವರು ಸ್ವೀಕರಿಸುತ್ತಿರಲಿಲ್ಲ. ಇಂತಹ ಸರಳ ಸಾದಾ ಜೀವಿ ಗುರೂಜಿ ಅವರನ್ನು ಕಾಣಲು ಬರುವವರು ಕಾಲು ಮುಟ್ಟಿ ನಮಸ್ಕರಿಸುತ್ತಿದ್ದರು. ಗುರೂಜಿ ಅವರು ನಾನು ನಿಮ್ಮಂತೆ ಸಾಮಾನ್ಯ ಮನುಷ್ಯ. ನನಗೇಕೆ ನಮಸ್ಕಾರ ಎಂದು ಕೇಳುತ್ತಿದರು. ನೀವು ನಮಗೆ ಒಬ್ಬ 'ಸಾಧು' ವಿನಂತೆ 'ಸ್ವಾಮಿ'ಗಳಂತೆ ಕಾಣುತ್ತೀರಿ. ನಿಮ್ಮನ್ನು ಕಂಡು ಕೂಡಲೆ ನಮಸ್ಕಾರ ಮಾಡಬೇಕೆಂಬ ಭಾವನೆ ಉಕ್ಕಿಬರುತ್ತದೆ ಎಂದು ಒಳ್ಳೆಯ ಗೌರವದಿಂದ ಹೇಳುತ್ತಿದ್ದರು.

ಹೀಗೆ ನಮ್ಮೊಳಗಿದ್ದು ಓರ್ವ ಸಾಧುವಿನಂತೆ ಜೀವನ ಸಾಗಿಸುತ್ತಿದ್ದರು ಗುರೂಜಿ ಅವರು. ಅವರ ಮನಸ್ಸು ಜಳಜಳ, ಹೃದಯವೂ ಹಸನ, ಕೆಲಸವೂ ಚೊಕ್ಕ ಚೆನ್ನ.

ಶಾಪವಾಗಿ ಬಂದ ಬರಗಾಲ

1972ರಲ್ಲಿ ಗುಲಬರ್ಗಾ ಜಿಲ್ಲೆಗೆ ಬರಗಾಲ ತಲೆದೋರಿತು. ಕೇವಲ ಗುಲಬರ್ಗಾ ಜಿಲ್ಲೆಗಷ್ಟೇ ಅಲ್ಲ ಇಡೀ ಹೈದರಾಬಾದ್ ಕರ್ನಾಟಕಕ್ಕೆ ಈ ಬರಗಾಲ ಆವರಿಸಿತ್ತು.

ಹೊಲದಲ್ಲಿ ಬೆಳೆದು ಬರಬೇಕಾದ ಆ ವರ್ಷದ ಬೆಳೆ ಬೆಳೆದು ಬರಲಿಲ್ಲ. ಏಪ್ರಿಲ್-ಮೇ ತಿಂಗಳು ಹಣಿಕೆ ಹಾಕಿತು. ಕಡು ಬಿಸಿಲು, ಹೇಳತೀರದಷ್ಟು ಝಳ. ದನ ಕರುಗಳಿಗೆ ತಿನ್ನಲು ಮೇವು ಇಲ್ಲ. ಕುಡಿಯಲು ನೀರಿಲ್ಲ. ದನ ಕರು ಕುರಿಮರಿಗಳ ಬವಣೆ ಈ ರೀತಿಯಾದರೆ ಮನುಷ್ಯರು ಪಡುವ ಪರಿಪಾಟ ಇನ್ನೊಂದು ಪರಿ. ಜನರ ಸಂಕಟ, ದನಕರುಗಳ ಬವಣೆ ಬಿಡಿಸಲು ವಿಶ್ವನಾಥರೆಡ್ಡಿ ಮುದ್ನಾಳ, ವಿದ್ಯಾಧರ ಗುರೂಜಿ ಅವರು ಕೂಡಿ 'ಬರಗಾಲ ಕ್ರಿಯಾ ಸಮಿತಿ'ಯನ್ನು ರಚಿಸಿದರು.

ಇದು ಒಂದು ಪಕ್ಷಾತೀತವಾದ ಸಮಿತಿ. ಹೈದರಾಬಾದ್ ಕರ್ನಾಟಕದ ಇಪ್ಪತ್ತೊಂಬತ್ತು ವಿಧಾನಸಭಾ ಮತಕ್ಷೇತ್ರಕ್ಕೂ ಸೇವೆ ಸಲ್ಲಿಸುವ



ಕ್ರಿಯಾಸಮಿತಿ ಈ ಸಮಿತಿಯ ಅಡಿಯಲ್ಲಿ ಸದಾಶಿವರೆಡ್ಡಿ ವಿದಾಧರ ಗುರೂಜಿ ಅವರು ಒಂದೊಂದು ಕಡೆ ಹೋಗಿ ಗಂಜಿ ಕೇಂದ್ರಗಳನ್ನು ಪ್ರಾರಂಭಿಸಿದರು. ದನಕರುಗಳಿಗೆ ಮೇವು ಕುಡಿಯಲು ನೀರಿನ ವ್ಯವಸ್ಥೆ ಮಾಡಿದರು.

ಸರಕಾರದಿಂದ ಬರುವ ದವಸ ಧಾನ್ಯ ನ್ಯಾಯಬೆಲೆ ಅಂಗಿಡ ತಲುಪಿಸಿ ನ್ಯಾಯ ಬೆಲೆ ಅಂಗಡಿ ಮೂಲಕ ಎಲ್ಲ ಬಡಜನರಿಗೆ ಹರಿದು ಹಂಚಿ ಹೋಗುವಂತೆ ತುಂಬ ದಕ್ಷತೆ ವಹಿಸಿ ನೋಡಿಕೊಳ್ಳುತ್ತಿದ್ದರು. ಈ ಕಾಲ ಬಹಳ ದಿನ ಇರುವುದಿಲ್ಲ. ಬಹು ಬೇಗನೆ ಒಳ್ಳೆಯ ಕಾಲ ಬರುತ್ತದೆ ನಿಮ್ಮ ನಿಮ್ಮ ದನ ಕರುಗಳನ್ನು ಕಾಪಾಡಿಕೊಳ್ಳಬೇಕು. ನಿಮ್ಮ ನಿಮ್ಮ ಹೆಂಡಿರು ಮಕ್ಕಳನ್ನು ನೋಡಿಕೊಳ್ಳಬೇಕೆಂದು ಜನರಿಗೆ ದವಸ ಧಾನ್ಯ ಹಂಚಿ ಧೈರ್ಯ ತುಂಬುತ್ತಿದ್ದರು. ಜನರು ಪಡುವ ದುಃಖವನ್ನು ನೋಡದೆ ತಾವು ಅವರೊಡನೆ ಒಮ್ಮೊಮ್ಮೆ ಕಣ್ಣೀರು ಸುರಿಸುತ್ತಿದ್ದರು. ಗುರೂಜಿ ಅವರ ಮಾತು ಮೃದು. ಮನಸ್ಸು ಇನ್ನೂ ಮೃದು. ಬಡತನವನ್ನು ಅನುಭವಿಸಿದ ಅವರಿಗೆ ಬಡವರು ಪಡುವ ಸಂಕಟ ಅರ್ಥವಾಗುತ್ತದೆ.

ಗುರೂಜಿ ಅವರು ಎಲ್ಲೆಲ್ಲಿ ತೀರ ಸಂಕಟವಿದೆ, ಯಾವ ಜನರಿಗೆ ಹೆಚ್ಚಿನ ನೆರವು, ಆಶ್ರಯ ಬೇಕಾಗಿದೆ ಅಲ್ಲಲ್ಲಿ ಓಡಾಡಿ ನೆರವು ನೀಡುತ್ತಿದ್ದರು.

ಕೈಲಾಗದವರು ತಮ್ಮ ದನ ಕರುಗಳನ್ನು ಕುಣಿಕೆ ಬಿಚ್ಚಿ ಹೇಗಾದರೂ ಬದುಕಿಕೊಳ್ಳಲಿ ಎಂದು ಹೊಡೆದು ಹೊರಗೆ ಹಾಕುತ್ತಿದ್ದರು. ಹಾಗೆ ದನ ಕರುಗಳನ್ನು ಹೊಡೆದು ಹಚ್ಚಿದವರಿಗೆ ಇವು ನಿಮ್ಮ ಆಸ್ತಿ ನಿಮ್ಮ ಆಸ್ತಿಯನ್ನು ನೀವು ಕಾಪಾಡಿಕೊಳ್ಳಬೇಕು ಎಂದು ಧೈರ್ಯ ಹೇಳಿ ದನ ಕರುಗಳ ಮೈಮೇಲೆ ಕಯ್ಯಾಡಿಸಿ ಅವುಗಳ ಕಣ್ಣಲ್ಲಿ ಬಂದ ನೀರು ಒರೆಸುತ್ತಿದ್ದರು.

ಉಳ್ಳವರ ಮನೆಗೆ ಹೋಗಿ ಸಂಕಟದಲ್ಲಿದ್ದ ಜನರನ್ನು ಹಸಿದು ತಡಬಡಿಸುತ್ತಿದ್ದ ದನ ಕರುಗಳಿಗೆ ಕಾಪಾಡುವುದು ಮನುಷ್ಯರಾದ ನಮ್ಮ ಧರ್ಮವೂ ಹೌದು. ಕರ್ತವ್ಯವೂ ಆಗಿದೆ ಎಂದು ಹೇಳಿ ಅಂತಹವರ ಕಡೆಯಿಂದ ಗಂಜಿಗಾಗಿ ಧಾನ್ಯವನ್ನು, ದನ ಕರುಗಳಿಗೆ ಮೇವು ಕಣಿಕೆ ತಂದು ಹಾಕಿ ದನಕರುಗಳನ್ನು ಸಲುವಿದ್ದಾರೆ.

ದಕ್ಷಿಣ ಭಾರತದ ಸ್ವಾತಂತ್ರ್ಯ ಹೋರಾಟಗಾರರ ಸಮ್ಮೇಳನ

ದಿನಾಂಕ 11.11.1983ರಂದು ಗುಲಬರ್ಗಾ ನಗರ ಬಾಲಕಿಯರ ಸರಕಾರಿ ಪದವಿಪೂರ್ವ ಮಹಾವಿದ್ಯಾಲಯದ ಆವರಣದಲ್ಲಿ ದಕ್ಷಿಣ ಭಾರತದ ಸ್ವಾತಂತ್ರ್ಯ ಹೋರಾಟಗಾರರ ಸಮ್ಮೇಳನ ತುಂಬ ಅರ್ಥಪೂರ್ಣವಾಗಿ ವಿದ್ಯಾಧರ ಗುರೂಜಿ ಅವರ ಕಾರ್ಯಾಧ್ಯಕ್ಷತೆಯಲ್ಲಿ ತುಂಬ ಅಚ್ಚುಕಟ್ಟಾಗಿ, ನಡೆಯಿತು. ಈ ಸಮ್ಮೇಳನದಲ್ಲಿ ಗುಜರಾತ, ಪಂಡಿಚೇರಿ, ಗೋವಾ, ಕೇರಳ, ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಕರ್ನಾಟಕವೂ ಕೂಡಿಕೊಂಡು ಎಂಟು ರಾಜ್ಯದ ಸ್ವಾತಂತ್ರ್ಯ ಹೋರಾಟಗಾರರು ಈ ಸಮ್ಮೇಳನದಲ್ಲಿ ಸಮಾವೇಶಗೊಂಡಿದ್ದರು. ಈ ಸಮ್ಮೇಳನ ಸಿದ್ಧತೆಗಾಗಿ ವಿದ್ಯಾಧರ ಗುರೂಜಿ, ವಿಶ್ವನಾಥರೆಡ್ಡಿ ಮುದ್ನಾಳ ತುಂಬ ಶ್ರಮ ಪಟ್ಟಿದ್ದರು.

ಅತ್ಯಂತ ಮಹತ್ವಪೂರ್ಣವಾದ ಈ ಸಮ್ಮೇಳನವನ್ನು ಕರ್ನಾಟಕ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ ಅವರು ಉದ್ಘಾಟಿಸಿದರು. ಈ ಸಮ್ಮೇಳನದಲ್ಲಿ ಎಂ.ಡಿ. ವಿಭೂತೆಭಾಯಿ ಮಹಾದೇವಸಿಂಗ, ಜಗನ್ನಾಥರಾವ್ ಚಂಡರಕಿ ಶಿವಮೂರ್ತಿ ಸ್ವಾಮಿ ಅಳವಂಡಿ ಮುಂತಾದ ಘಟಾನುಘಟಿ ಸ್ವಾತಂತ್ರ್ಯ ಹೋರಾಟಗಾರರು ಸಮ್ಮೇಳನದಲ್ಲಿ ಪಾಲುಗೊಂಡಿದ್ದರು. ಬೃಹತ್ತು ಮತ್ತು ಮಹತ್ತು ಪಡೆದುಕೊಂಡ ಈ ಸಮ್ಮೇಳನ ಅಧ್ಯಕ್ಷತೆಯನ್ನು ಕರ್ನಾಟಕ ಸರಕಾರ ಪಶು ಸಂಗೋಪನಾ ಮಂತ್ರಿಗಳಾದ ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ ಅವರು ವಹಿಸಿಕೊಂಡರು.



ದಕ್ಷಿಣ ಭಾರತ ಸ್ವಾತಂತ್ರ್ಯ ಹೋರಾಟಗಾರರ ಸಮ್ಮೇಳನ
ದಿನಾಂಕ 12.11.1983
ವಿದ್ಯಾಧರ ಗುರೂಜಿ ಅವರು ಸ್ವಾಗತ ಭಾಷಣ ಮಾಡುತ್ತಿದ್ದಾರೆ.
ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ,
ದೊರೆರಾಜು ತಮಿಳುನಾಡು ಗಾಂಧಿ, ದತ್ತಾತ್ರೇಯ ರಾವ್ ಅವರಾದಿ



ಸಿಕಂದರಾಬಾದ ಮಹಾದೇವ ಭಾಯಿ, ಸಮಾಜವಾದಿ ಮುಖಂಡ
ಕ್ರಾಂತಿಕಾರಿ ಲೇಖಕ ಮನ್ಮಥನಾಥ ಗುಪ್ತಾ, ನಜೀರ ಸಾಹೇಬ, ಹಕೀಕತರಾವ್,
ಕರ್ನಾಟಕ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ ಅವರು
ಉಪಸ್ಥಿತರಿದ್ದಾರೆ.

ಈ ಸಮ್ಮೇಳನದಲ್ಲಿ ಸ್ವಾತಂತ್ರ್ಯಕಾಗಿ ದುಡಿದ ಮಹನಿಯರನ್ನು, ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನು ಕೊಟ್ಟ ಹುತಾತ್ಮರ ತಾಯಿ-ಇಲ್ಲವೆ ತಂದೆ ಅವರನ್ನು ಸನ್ಮಾನಿಸಲಾಯಿತು.

ಈ ಸಮ್ಮೇಳನವನ್ನು ಉದ್ಘಾಟಿಸುತ್ತ ಶ್ರೀರಾಮಕೃಷ್ಣ ಹೆಗಡೆ ಅವರು 'ಸ್ವಾತಂತ್ರ್ಯ ಹೋರಾಟಗಾರರ ದೇಶ ಸೇವೆ ಯಾವುದಕ್ಕೂ ಸಾಟಿಯಿಲ್ಲ. ಸ್ವಾತಂತ್ರ್ಯ ಸಂಗ್ರಾಮಕ್ಕೆ ತಮ್ಮ ಜೀವಿತವನ್ನೇ ಧಾರೆ ಎರೆದ ಪುಣ್ಯಪುರುಷರು. ಭಾರತ ಮಾತೆಯ ಸುಪುತ್ರರರು' ಎಂದು ಹೇಳುತ್ತ

'ಸಂಗ್ರಾಮದಲ್ಲಿ ಸಾವಿರಾರು ಜನರು ತಮ್ಮ ಪ್ರಾಣವನ್ನೇ ಬಲಿಕೊಟ್ಟಿದ್ದಾರೆ. ಲಕ್ಷಾಂತ ಜನರು ಸೆರೆಮನೆಯಲ್ಲಿ ಕಠಿಣಶಿಕ್ಷೆ ಅನುಭವಿಸಿದ್ದಾರೆ. ಸಾವಿರಾರು

ಜನರು ಹುತಾತ್ಮರಾಗಿದ್ದಾರೆ ಇವರ ಜೊತೆ ಬೆರೆಯುವ ಅವಕಾಶ ಒಂದು ಮಹಾ ಸೌಭಾಗ್ಯ' ಎಂದು ಹೇಳಿದರು.

ಸ್ವಾತಂತ್ರ್ಯ ಹೋರಾಟಗಾರರ ಜೀವಿತ ಚರಿತ್ರಾರ್ಹ ಅಂಶಗಳನ್ನು ಕುರಿತಂತೆ ಪ್ರದರ್ಶನ ಏರ್ಪಡಿಸಲಾಗಿತ್ತು. ಈ ಪ್ರದರ್ಶನವನ್ನು ಕ್ರಾಂತಿಕಾರಿ ಲೇಖಕ ಶ್ರೀ ಮನ್ಮಥನಾಥ ಗುಪ್ತ ಅವರು ಉದ್ಘಾಟಿಸಿದರು. ಈ ಸಮಾರಂಭದಲ್ಲಿ ಸುಮಾರು ಏಳೆಂಟು ಸಾವಿರ ಜನರು ಪಾಲುಗೊಂಡಿದ್ದರು. ಇದೊಂದು ಐತಿಹಾಸಿಕ ಸಮ್ಮೇಳನವೆಂದು ಮಾಧ್ಯಮಗಳು ಬಣ್ಣಿಸಿದವು.

ಗುಲಬರ್ಗಾ ಮತ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧೆ

1984ರಲ್ಲಿ ಲೋಕಸಭೆಯ ಚುನಾವಣೆಗಳು ಬಂದವು. ಚುನಾವಣೆಯ ಸಿದ್ಧತೆಗಳು ಭರದಿಂದ ಸಾಗಿದವು. ಗುಲಬರ್ಗಾ ಲೋಕಸಭೆಯ ಮತಕ್ಷೇತ್ರದಿಂದ ಮಾಜಿ ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರ ಪಾಟೀಲರು ಕಾಂಗ್ರೆಸ್ ಅಭ್ಯರ್ಥಿ ಎಂದು ಕಣಕ್ಕಿಳಿದರು. ಆಗ ಇವರನ್ನು ಎದುರಿಸುವ ಹುರಿಯಾಳು, ಕಣ್ಣಿಗೆ ಕಾಣುವ ವ್ಯಕ್ತಿ ಮಹಾನ್ ಶಕ್ತಿ, ಹಿಂದುಳಿದ ಸಮಾಜದ ಧುರೀಣರು ಎಂದು ಹೆಸರಾಗಿದ್ದ ವಿದ್ಯಾಧರ ಗುರೂಜಿ ಅವರು. ಆಗ ರಾಜ್ಯದಲ್ಲಿ ಜನತಾ ಪಕ್ಷದಲ್ಲಿ ತಂಪಾದ ಗಾಳಿ ಬೀಸುತ್ತಿತ್ತು. ವಿದ್ಯಾಧರ ಗುರೂಜಿ ಅವರು ಸ್ವಾತಂತ್ರ್ಯ ಹೋರಾಟಗಾರರು, ಮೌಲ್ಯಾಧಾರಿತ ರಾಜಕಾರಣಿಗಳು, ಜನತಾಪಕ್ಷದ ಉಪಾಧ್ಯಕ್ಷರು ಎಂಬ ಧವಳ ಕೀರ್ತಿ ಎಲ್ಲ ಕಡೆಗೂ ಹರಡಿತ್ತು. ಆಗ ವಿದ್ಯಾಧರ ಗುರೂಜಿ ಅವರಿಗೆ ಎಪ್ಪತ್ತು ವರ್ಷ. ಎಪ್ಪತ್ತರ ಹರೆಯದಲ್ಲಿ ಜನತಾಪಕ್ಷದ ಹುರಿಯಾಳುಗಳಾಗಿ ವಿದ್ಯಾಧರ ಗುರೂಜಿ ಅವರು ಲೋಕಸಭೆಯ ಅಭ್ಯರ್ಥಿ





1984ರಲ್ಲಿ ಲೋಕಸಭಾ ಚುನಾವಣೆಯಲ್ಲಿ ವಿದ್ಯಾಧರ ಗುರೂಜಿಯವರು ಪ್ರಚಾರ ಭಾಷಣ ಮಾಡುತ್ತಿರುವುದು. ಕರ್ನಾಟಕದ ಮುಖ್ಯಮಂತ್ರಿ ಶ್ರೀ ರಾಮಕೃಷ್ಣಹೆಗಡೆ ಮತ್ತು ಇತರರು

ಯಾಗಿ ಚುನಾವಣೆಯ ಕಣಕ್ಕಿಳಿದರು. ಕಾಂಗ್ರೆಸ್ ಪಕ್ಷದಲ್ಲಿ ಹಿಂದುಳಿದ ವರ್ಗಗಳ ಜನರು, ಅಲ್ಪಸಂಖ್ಯಾತರೇ ಮತ ನೀಡಿ ಅಭ್ಯರ್ಥಿಯನ್ನು ಆಯ್ಕೆಮಾಡಿ ಕಳಿಸುವವರು. ವಿದ್ಯಾಧರ ಗುರೂಜಿ ಅವರನ್ನು ಗೌರವಿಸುವವರು ಹಿಂದುಳಿದ ಜನಾಂಗದವರು, ಅಲ್ಪಸಂಖ್ಯಾತರು. ಕಾಂಗ್ರೆಸ್ಸಿನಲ್ಲಿ ಮೇಲ್ವರ್ಗದ ಜನರು. ಜನತಾ ಪಕ್ಷದಲ್ಲಿ ಜನತಾಪಕ್ಷ ಅಭ್ಯರ್ಥಿ ಹಿಂದುಳಿದ ವರ್ಗಕ್ಕೆ ಸೇರಿದ ವಿದ್ಯಾಧರ ಗುರೂಜಿ ಅವರು – ಲೋಕಸಭೆಯ ಚುನಾವಣೆ ಮತದಾರರನ್ನು ಗೊಂದಲಕ್ಕೆ ಸಿಕ್ಕಿಸಿತು. ಆದರೂ ಜಾಗೃತರಾದ ಮತದಾರರು ಈ ಚುನಾವಣೆಯಲ್ಲಿ ಜಾತಿಮತ, ಪಂಥ, ಪಂಗಡಗಳಿಗೆ ಮಹತ್ವ ನೀಡದೆ. ವ್ಯಕ್ತಿಯ ಗುಣ, ಸ್ವಭಾವ, ಅವರು ಮಾಡಿದ ಸಾಧನೆಗೆ ವಿಶೇಷ ಗಮನ ಹರಿಸಿ ಮತ ಚಲಾಯಿಸುವ ಸಿದ್ಧತೆ ಮಾಡಿಕೊಳ್ಳತೊಡಗಿದರು. ವೀರೇಂದ್ರ ಪಾಟೀಲರು, ವಿದ್ಯಾಧರ ಗುರೂಜಿ ಲೋಕಸಭೆಗೆ ಸಮತೂಕದ ವ್ಯಕ್ತಿಗಳು. ಇಬ್ಬರ ಬಗ್ಗೆಯೂ ಸಮಾಜದಲ್ಲಿ ಸಮಾನ ಸ್ಥಾನ ಮಾನವಿತ್ತು. ಗೌರವವಿತ್ತು. ಪ್ರೀತಿ ಇತ್ತು ವಿಶ್ವಾಸವಿತ್ತು.

ಹಣದ ಅಬ್ಬರ ಇರಲಿಲ್ಲ. ಹೆಂಡದ ಹೊಳೆ ಹರಿಯಲಿಲ್ಲ. ಪ್ರಚಾರದ ಬಾಣ ಬಿರುಸು ಎಲ್ಲ ಕಡೆಗೂ ತನ್ನ ಛಾಪು ಮೂಡಿಸಿತ್ತು. ಆಗ ಜನತಾ ಪಕ್ಷ ಕರ್ನಾಟಕದಲ್ಲಿ ರಾಜಕೀಯ ಚುಕ್ಕಾಣಿ ಹಿಡಿದಿತ್ತು. ಪರಿಶುದ್ಧ ಆಡಳಿತ ನಡೆಸಿತ್ತು. ಸಮಾಜದ ಎಲ್ಲ ವರ್ಗದ ಜನರನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಸೇವೆ ಸಲ್ಲಿಸುತ್ತಿತ್ತು. ಒಂದು ದೃಷ್ಟಿಯಿಂದ ನೋಡಿದರೆ ವಿದ್ಯಾಧರ ಗುರೂಜಿಯವರ ಗೆಲವು ಸುಲಭವೇನೋ ಅನಿಸುತ್ತಿತ್ತು. ಇನ್ನೊಂದು ಕಡೆ ಮಾಜಿ ಮುಖ್ಯಮಂತ್ರಿಗಳಾಗಿ ಜನಮನ್ನಣೆಗೆ ಪಾತ್ರರಾದವರೇ ವೀರೇಂದ್ರ ಪಾಟೀಲರ ಗೆಲವು ನಿಶ್ಚಿತವೆಂದು ಜನರ ಬಾಯಿಯಲ್ಲಿ ಜನ ಜನಿತವಾಗಿತ್ತು. ಇದೇ ಸಮಯಕ್ಕೆ (ಐ) ಕಾಂಗ್ರೆಸ್ಸಿನ ರೂವಾರಿ ಶ್ರೀಮತಿ ಇಂದಿರಾಗಾಂಧಿ ಅವರ ಹತ್ಯೆ ಆಯಿತು. ಆಗ ಕಾಂಗ್ರೆಸ್ ಪಕ್ಷದಲ್ಲಿ ಅನುಕಂಪದ ಅಲೆಗಳು, ಕಾಂಗ್ರೆಸ್ ಪಕ್ಷದ ಗಾಳಿ ಜೋರಾಗಿ ಬೀಸತೊಡಗಿತು. ಬಡವರ ಬಾಳಿಗೆ ಬೆಳಕಾದ "ಗರೀಬಿ ಹಟಾವೊ" ಎಂದು ಕೂಗಾಡಿ ಹೋರಾಡಿ ಕೊನೆಗೆ ಹತ್ಯೆಗೀಡಾದ ಇಂದಿರಾಗಾಂಧಿ ಪಕ್ಷದ ಕಾಂಗ್ರೆಸ್ ಅಭ್ಯರ್ಥಿ ವೀರೇಂದ್ರ ಪಾಟೀಲರ ಕಡೆಗೆ ಸಹಜವಾಗಿ ಒಲವು ಮೂಡಿತು. ಲೋಕಸಭೆಯ ಚುನಾವಣೆಯಲ್ಲಿ ವೀರೇಂದ್ರ ಪಾಟೀಲರು ವಿಜಯ ಸಾಧಿಸಿದರು. ವಿದ್ಯಾಧರ ಗುರೂಜಿ ಅವರು ಸೋಲನ್ನು ಅನುಭವಿಸಿದರು. ಜನತೆಯ ತೀರ್ಮಾನಕ್ಕೆ ತಲೆಬಾಗಿದರು. ತಮಗೆ ಮತ ನೀಡಿದ ಜನರಿಗೆ ಅಭಿನಂದನೆ ಪತ್ರ ನೀಡಿ ಗೌರವಿಸಿ ವಿಜಯ ಅಭ್ಯರ್ಥಿ ವೀರೇಂದ್ರ ಪಾಟೀಲರಿಗೆ ಹೂಮಾಲೆ ಹಾಕಿ ಅಭಿನಂದನೆ ಸಲ್ಲಿಸಿದರು. ಇಂತಹ ಸುಸಂಸ್ಕೃತ ವ್ಯಕ್ತಿ, ಅದಮ್ಯ ಶಕ್ತಿ ವಿದ್ಯಾಧರಗುರೂಜಿ ಅವರು. ದೇಶಭಕ್ತ, ರಾಜಕಾರಣಿಗೆ ಸೋಲು ಅಷ್ಟೆ. ಗೆಲುವು ಸಹಜ. ಈ ಸೋಲು-ಗೆಲವುಗಳ ಮಧ್ಯದಲ್ಲಿ ಜನಹಿತವನ್ನು, ದೇಶಪ್ರೇಮವನ್ನು ಮರೆಯಬಾರದು. ತನ್ನತನವನ್ನು ಕಳೆದುಕೊಳ್ಳಬಾರದು ಎಂಬ ಅವರ ದೃಢನಿಲುವು, ಆತ್ಮವಿಶ್ವಾಸ. ಯುವಕರಲ್ಲಿ ಗುಪ್ತಗಾಮಿನಿಯಾಗಿ, ಹರಿಯುತ್ತಿದ್ದ ಸುಪ್ತಶಕ್ತಿಯನ್ನು ಜಾಗೃತಗೊಳಿಸುತ್ತಿತ್ತು. ವಿದ್ಯಾಧರ ಗುರೂಜಿ ಅವರ ಮುಖದಲ್ಲಿ ಮೂಡಿದ ಮಂದಹಾಸ, ಸಹಜ ನಗೆಯು ಜನಮನವನ್ನು ಆಕರ್ಷಿಸುತ್ತಿತ್ತು. ಇದು ವಿದ್ಯಾಧರ ಗುರೂಜಿ ಅವರು ಅಳವಡಿಸಿಕೊಂಡ ಬಂದ ರಾಜಕೀಯ ಶಕ್ತಿ ಜನಶಕ್ತಿ.

ವಿಧಾನ ಪರಿಷತ್ತು ಸದಸ್ಯರು

ರಾಮಕೃಷ್ಣ ಹೆಗಡೆ ಅವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿ ಭಾರತ ದೇಶದಲ್ಲಿಯೇ ಸುಪ್ರಸಿದ್ಧ ಮುಖ್ಯಮಂತ್ರಿಗಳೆಂದು ಮೌಲ್ಯಾಧಾರಿತ ರಾಜಕಾರಣಿಗಳೆಂದು ಕೀರ್ತಿ ಭಾಜನರಾದರು. ವಿಶ್ವನಾಥರೆಡ್ಡಿ ಮುದ್ನಾಳ, ವಿದಾಧರ ಗುರೂಜಿ ಅವರು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ ಆಪ್ತ ಸ್ನೇಹಿತರಾದರು. ಈ ಸಮಯದಲ್ಲಿ ವಿಶ್ವನಾಥರೆಡ್ಡಿ ಮುದ್ನಾಳ ಅವರು ತಮ್ಮ ಸಹೋದರ ಸದಾಶಿವ ರೆಡ್ಡಿ ಅವರನ್ನು ವಿಧಾನಪರಿಷತ್ತು ಸದಸ್ಯರನ್ನಾಗಿ ಮಾಡಲು ಪ್ರಯತ್ನಿಸತೊಡಗಿದರು. ವಿದಾಧರ ಗುರೂಜಿ ಅವರೂ ವಿಶ್ವನಾಥರೆಡ್ಡಿ ಅವರಿಗೆ ಬೆಂಬಲಿಸಿದರು. ಇವರಿಬ್ಬರೂ ಕೂಡಿ ಸದಾಶಿವರೆಡ್ಡಿ ಅವರನ್ನು ವಿಧಾನ ಪರಿಷತ್ತು ಸದಸ್ಯರನ್ನಾಗಿ ನಾಮಕರಣ ಮಾಡಬೇಕೆಂದು ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆ ಅವರನ್ನು ಕೇಳಿದರು. ಆಗ ರಾಮಕೃಷ್ಣ ಹೆಗಡೆ ಅವರು ಯಾರನ್ನೇ ವಿಧಾನಪರಿಷತ್ತು ಸದಸ್ಯರನ್ನಾಗಿ



ವಿಧಾನಪರಿಷತ್ತು ಸದಸ್ಯತ್ವ ಸ್ವೀಕಾರ ಸಮಾರಂಭ

ಮಾಡಲು ಅವರ ಹಿನ್ನೆಲೆ, ಸಮಾಜಕ್ಕೆ ಸಲ್ಲಿಸಿದ ಸೇವೆ ಅವರ ಹೋರಾಟದ ಬದುಕು ಗಣನೆಗೆ ತೆಗೆದುಕೊಂಡು ವಿಧಾನಪರಿಷತ್ತಿಗೆ ಅವರನ್ನು ಸದಸ್ಯರನ್ನಾಗಿ ಆಯ್ಕೆ ಮಾಡಬೇಕು. ಈ ಸ್ಥಾನಕ್ಕೆ ಸದಾಶಿವರೆಡ್ಡಿ ಅವರನ್ನು ಬೇಡವೆಂದು ತುಂಬ ಆತ್ಮೀಯವಾಗಿ ಚರ್ಚಿಸುತ್ತ, ವಿದಾಧರ ಗುರೂಜಿ ಅವರು ಸ್ವಾತಂತ್ರ್ಯ ಹೋರಾಟಗಾರರು, ತಮ್ಮ ಜೀವವನ್ನೇ ಸಮಾಜಸೇವೆಗೆ, ಹಿಂದಿ ಭಾಷಾ ಅಭಿವೃದ್ಧಿಗೆ ಮೀಸಲಾಗಿಟ್ಟ ಮಹನೀಯರು. ಗಾಂಧೀಜಿ ಅವರು ಅಸ್ಪೃಶೋದ್ಧಾರಕ್ಕೆ ಕೈಕೊಂಡ ಚಳವಳಿಗೆ ಪ್ರಭಾವಿತರಾಗಿ "ಅಸ್ಪೃಶ್ಯತೆ" ಭಾರತದ ಸಾಮಾಜಿಕ ಕ್ಷೇತ್ರದಲ್ಲಿ ಮೂಡಿದ 'ಕಪ್ಪುಚುಕ್ಕೆ' ಅದನ್ನು ಅಳಿಸಬೇಕೆಂದು ಅದೆಷ್ಟೋ ಜನ ಹೋರಾಡುತ್ತ ಬಂದರು. ಆದರೆ ಪ್ರಜ್ಞಾವಂತ ಯುವಕರಾಗಿದ್ದ ವಿದ್ಯಾಧರ ಗುರೂಜಿ ಅವರು ಹರಿಜನ ಮಹಿಳೆ ಸವಿತಾದೇವಿಯವರನ್ನು ಕೈಹಿಡಿದು ಧರ್ಮಪತ್ನಿಯೆಂದು ಸ್ವೀಕರಿಸಿ ನೀವು ಕೈಕೊಂಡ ಅಸ್ಪೃಶ್ಯತಾ ನಿವಾರಣ ಚಳುವಳಿಗೆ ಅರ್ಥಪೂರ್ಣ ಬೆಂಬಲ ನೀಡಿದ ನಮ್ಮ ನಿಮ್ಮ ಮಧ್ಯದಲ್ಲಿದ್ದ 'ಮಹಾತ್ಮ ಗುರೂಜಿ' ಎಂದು ಅವರ ತ್ಯಾಗ ಮನೋಭಾವನೆಯನ್ನು ಬಣ್ಣಿಸಿದರು. ಅವರು ಹಿಂದಿ ಭಾಷೆಯಲ್ಲಿ

ಚೆನ್ನಾಗಿ ಅಭ್ಯಾಸ ಮಾಡಿ ಹಿಂದಿ ಭಾಷಾ ಪ್ರಸಾರ, ಪ್ರಚಾರಕ್ಕೆ ಶ್ರಮಿಸಿ ನಿರರ್ಗಳವಾಗಿ ಮಾತನಾಡುತ್ತಾರೆ. ನನಗೆ ವಿದ್ಯಾಧರ ಗುರೂಜಿ ಅವರನ್ನು ರಾಜ್ಯಸಭೆಯ ಸದಸ್ಯರನ್ನಾಗಿ ಮಾಡುವ ಗುರಿ ಇತ್ತು. ಅವರನ್ನು ಕೇಂದ್ರಕ್ಕೆ ರಾಜ್ಯಸಭೆಯ ಸದಸ್ಯರನ್ನಾಗಿ ಮಾಡಿದರೆ ನಮ್ಮ ರಾಜ್ಯಕ್ಕೆ ಅವರಿಂದ ತುಂಬ ಉಪಕಾರವಾಗುತ್ತಿತ್ತು. ಈಗ ಅವರನ್ನೇ ವಿಧಾನಪರಿಷತ್ತು ಸದಸ್ಯರನ್ನಾಗಿ ಮಾಡಿದರೆ ಕರ್ನಾಟಕ ರಾಜ್ಯ ವಿಧಾನಪರಿಷತ್ತು ಓರ್ವ ಯೋಗ್ಯ ಅತ್ಯಂತ ಸಮರ್ಥ ವ್ಯಕ್ತಿಯನ್ನು ಪಡೆದಂತಾಗುತ್ತದೆ ಎಂದು ಹೇಳಿ 1988ರಲ್ಲಿ ವಿದ್ಯಾಧರ ಗುರೂಜಿ ಅವರನ್ನು ಅವಿರೋಧವಾಗಿ ವಿಧಾನ ಪರಿಷತ್ತು ಸದಸ್ಯರನ್ನಾಗಿ ಆಯ್ಕೆ ಮಾಡಿದರು. ಇದು ವಿದ್ಯಾಧರ ಗುರೂಜಿ ಅವರಿಗೆ 'ಬಯಸದೇ ಬಂದ ಭಾಗ್ಯ' ಎಂದು ಹೇಳಬಹುದು.



ಸನ್ಮಾನ್ಯ ಶ್ರೀ ಜೇಲಸಿಂಗ್, ಭಾರತದ ರಾಷ್ಟ್ರಪತಿಗಳು ಅವರೊಡನೆ ವಿದ್ಯಾಧರ ಗುರೂಜಿ ಸಂಭಾಷಣೆಯಲ್ಲಿ ನಿರತರಾಗಿದ್ದಾರೆ. ಅವರೊಡನೆ ಜೈನಭುವ, ಮ್ಯಾನೇಜರ್ ಮದನಲಾಲ ಶರ್ಮಾ, ಧೊಂಡಿರಾವ ಜಾಧವ, ಶ್ರೀಮಂತ ಕೊಂಡೇರ

ವಿವಿಧ ಆಯೋಗಗಳ ಸಮಿತಿ ಸದಸ್ಯರು

ಎರಡನೆಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರು:

ವಿದ್ಯಾಧರ ಗುರೂಜಿ ಅವರು ಶ್ರೀ ಟಿ. ವೆಂಕಟಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ರಚನೆ ಗೊಂಡ ಎರಡನೆಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿ ನೇಮಕಗೊಂಡರು.

ರಾಮಕೃಷ್ಣಹೆಗಡೆ ಅವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ 1983 ಏಪ್ರಿಲ್ 18ರಂದು ಶ್ರೀ ಟಿ. ವೆಂಕಟಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಎರಡನೆಯ ಹಿಂದುಳಿದ ವರ್ಗಗಳ ಆಯೋಗವು ರಚನೆಗೊಂಡಿತು. ಈ ಆಯೋಗದಲ್ಲಿ ಸ್ವಾತಂತ್ರ್ಯ ಹೋರಾಟಗಾರರು, ಮಾಜಿ ಶಾಸಕರು, ಅತ್ಯಂತ ಅನುಭವಿಗಳೂ ಆದ ವಿದ್ಯಾಧರ ಗುರೂಜಿಯವರು ಸದಸ್ಯರಾಗಿ ಗಣನೀಯ ಸೇವೆ ಸಲ್ಲಿಸಿದರು. ಟಿ. ವೆಂಕಟಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ರಚನೆಗೊಂಡ ಈ ಆಯೋಗವು ಹಿಂದುಳಿದಿರುವಿಕೆಯನ್ನು ಗುರುತಿಸಲು ತನ್ನದೇ ಆದ ಹದಿನೇಳು ಸೂಚನೆಗಳನ್ನು ನಿರ್ಣಾಯಕ ಸೂತ್ರವಾಗಿಟ್ಟುಕೊಂಡು

ರಾಜ್ಯಾದ್ಯಂತ ಎಲ್ಲ ಜಾತಿ, ಕೋಮುಗಳ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸುದೀರ್ಘ ಸಮೀಕ್ಷೆ ನಡೆಸಿತು. ಸಮಾಜದಲ್ಲಿದ್ದ ಜಾತಿ ಶ್ರೇಣೀಕರಣ, ಮಕ್ಕಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ–ವೃತ್ತಿಪರ ಕೋರ್ಸುಗಳಲ್ಲಿ, ಸರಕಾರಿ ಉದ್ಯೋಗಗಳಲ್ಲಿ ಪ್ರತಿ ಜಾತಿಗೂ ಪ್ರಾತಿನಿಧ್ಯತೆ ವಾಸಿಸುವ ಸ್ಥಳ, ಹೊಂದಿರುವ ಮನೆ, ಆದಾಯ, ಗ್ರಾಮೀಣ ಅಥವಾ ನಾಗರಿಕ ವಾತಾವರಣ ವಾಸದ ಪರಿಸರ ಇತ್ಯಾದಿ ಅಂಶಗಳ ಆಧಾರದ ಮೇಲೆ ರಾಜ್ಯದ ಹಿಂದುಳಿದ ಜಾತಿಗಳನ್ನು ಎರಡು ಗುಂಪುಗಳಾಗಿ ವಿಂಗಡಸಿದ ಪಟ್ಟಿಯನ್ನು ಒಳಗೊಂಡು ಮೂರು ಸಂಪುಟಗಳ ವರದಿಯನ್ನು 1986ರಲ್ಲಿ ಮಾರ್ಚ್ ತಿಂಗಳಲ್ಲಿ ಈ ಆಯೋಗವು ಸಲ್ಲಿಸಿತು. ಈ ಆಯೋಗವು ಅತ್ಯಂತ ಕಾಳಜಿಯಿಂದ ಸಂಗ್ರಹಿಸಿದ ಹಲವಾರು ಅತ್ಯಂತ ಉಪಯುಕ್ತ ಮಾಹಿತಿಗಳಲ್ಲಿ, ಜನಸಂಖ್ಯಾ ಮಾಹಿತಿಯನ್ನು ಸರಕಾರ ಒಪ್ಪಿದರೂ ಕೆಲವು ಜಾತಿಗಳನ್ನು ನೇಮಕಾತಿಯಲ್ಲಿ, ಶಿಕ್ಷಣದಲ್ಲಿ ಈ ಎರಡು ಉದ್ದೇಶಗಳಿಗೆ ಹಿಂದುಳಿದವರೆಂದು ಪರಿಗಣಿಸದ ಕಾರಣ ಈ ವರದಿಯ ಬಗ್ಗೆ ಚಳುವಳಿಗಳು ತಕ್ಷಣದ ಪ್ರತಿಭಟನೆಗಳೂ, ಆಕ್ಷೇಪಣೆಗಳೂ ನಡೆದು ಸರ್ಕಾರ ಟಿ. ವೆಂಕಟಸ್ವಾಮಿ ವರದಿಯನ್ನು ಅನುಷ್ಠಾನಕ್ಕೆ ತರಲು ಸಾಧ್ಯವಾಗಲಿಲ್ಲ. ಹಲವಾರು ಕಾರಣಗಳಿಗಾಗಿ ಟಿ. ವೆಂಕಟಸ್ವಾಮಿ ವರದಿಯನ್ನು ಸಂಪೂರ್ಣ ತಿರಸ್ಕರಿಸಿ ಶಿಕ್ಷಣ ಹಾಗೂ ಉದ್ಯೋಗಗಳಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಒಂದು ಮಧ್ಯಂತರ ಮೀಸಲಾತಿ ಆದೇಶವನ್ನು ಸರ್ಕಾರ 13.10.1989ರಲ್ಲಿ ಹೊರಡಿಸಿತು. 1994ರವರೆಗೆ ಈ ಆದೇಶ ಜಾರಿಯಲ್ಲಿತ್ತು.

ಎರಡನೆಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿದ್ದ ವಿದ್ಯಾಧರ ಗುರೂಜಿ ಅವರು ಹಿರಿಯರು, ಅನುಭವಿಗಳು ಆಗಿದ್ದರು. ಇವರಿಗೆ ತಳಪಾಯದಿಂದಲೇ ಹಿಂದುಳಿದ ವರ್ಗಗಳ ಜನಾಂಗದ ಬಗ್ಗೆ ಸಂಪೂರ್ಣ ಮಾಹಿತಿ ಇತ್ತು. ಅದರಲ್ಲಿ ಅತ್ಯಂತ ತುಳಿಯಲ್ಪಟ್ಟ, ಕೊಳಚೆ ಪ್ರದೇಶದ, ಅಲೆಮಾರಿ ಜನಾಂಗದ ಬಗ್ಗೆ ಬಹಳ ಕಾಳಜಿ ಹೊಂದಿದವರು. ಇಂತಹ ಜನಾಂಗಕ್ಕೆ ಧ್ವನಿ ನೀಡಲು ಆಯೋಗದ ಸದಸ್ಯರಾಗಿದ್ದ ವಿದ್ಯಾಧರ ಗುರೂಜಿ ಅವರು ಬಹಳ ಶ್ರಮಪಟ್ಟರು. ಪಟ್ಟಭದ್ರ ಹಿತಾಸಕ್ತಿಗಳು, ಸಮಾಜದ ಬಗ್ಗೆ ಕಾಳಜಿ ಇಲ್ಲದ ಜನರಿಂದ ಆ ಎಲ್ಲ ಜನಾಂಗಗಳ ಸ್ಥಿತಿ, ಗತಿ ಇನ್ನೂ ಶೋಚನೀಯ ಸ್ಥಿತಿಯಲ್ಲಿಯೇ ಇದೆ.

ಸಮಾಜದ ಎಲ್ಲ ವರ್ಗದ ಜನರಿಗೆ ಸರಕಾರದ ಹುದ್ದೆಗಳು ದೊರಕಲಿ ಎಂದು ಘನ ಉದ್ದೇಶ ಇಟ್ಟುಕೊಂಡು ಬೇರೆ ಬೇರೆ ಇಲಾಖೆಗಳಲ್ಲಿ ಅಭ್ಯರ್ಥಿಗಳನ್ನು ಆಯ್ಕೆಮಾಡುವ ಸಮಿತಿಗಳು ಸರಕಾರದಿಂದಲೇ ರಚನೆ ಆಗುತ್ತಿದ್ದವು. ಅದರಂತೆ ಕಿರಿಯ ಅಭಿಯಂತರನ್ನು ಆರಿಸುವ ಆಯ್ಕೆ ಸಮಿತಿಯ ಸದಸ್ಯರಾಗಿ ವಿದ್ಯಾಧರ ಗುರೂಜಿ ಅವರು ಆಯ್ಕೆಯಾದರು. ಇಂತಹ ಸಮಿತಿಗಳು ಹಣಮಾಡುವ ಸಂತೆಗಳಾಗಿ ಪರಿಣಮಿಸಿದವು. ಇದರಿಂದ ಭ್ರಷ್ಟಾಚಾರ ವ್ಯವಸ್ಥಿತವಾಗಿ ಹರಡಿತು. ಹಣ ಕೊಡದ ಬಡವರ ಮಕ್ಕಳಿಗೆ ನೌಕರಿ ಗಗನ ಕುಸುಮವಾಗತೊಡಗಿತು. ಹಣವಿಲ್ಲದ ಬಡವರ ಮಕ್ಕಳು ತಮ್ಮ ಹೊಲವನ್ನಾಗಲಿ, ಮನೆಯನ್ನಾಗಲಿ ಮಾರಿ ಬಂದು ಹಣ ಕೊಟ್ಟು ನೌಕರಿಗೆ ಬರತೊಡಗಿದರು. ಈ ವಿಷಯ ಎಲ್ಲರಿಗೂ ಗೊತ್ತಿದ್ದರೂ ಅದನ್ನು ತಡೆಗಟ್ಟುವುದಕ್ಕೆ ಯಾರೂ ಪ್ರಯತ್ನಿಸದೆ ತಾವೂ ಅದರಲ್ಲಿ ಪಾಲುಗೊಂಡು ಹಣ ಸಂಪಾದಿಸುತ್ತಿದ್ದರು.

ಆಗ ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿಗಳಾಗಿದ್ದ ಕಾಲ. ಕರ್ನಾಟಕದಲ್ಲಿ ಹಣಕೆ ಹಾಕಿದ ಸುವರ್ಣ ಕಾಲ ಅದಾಗಿತ್ತು. ಅಂತೆಯೇ ವಿದ್ಯಾಧರ ಗುರೂಜಿಯವರು ಸಹ ನಿಷ್ಠಾವಂತ ಪ್ರಾಮಾಣಿಕ ವ್ಯಕ್ತಿಗಳು ಆಯ್ಕೆ ಸಮಿತಿಯ ಸದಸ್ಯರಾಗಿ ಬರತೊಡಗಿದರು.

ಕಿರಿಯ ಅಭಿಯಂತರ ಆಯ್ಕೆ ಪ್ರಕ್ರಿಯೆ ಪ್ರಾರಭವಾಗುತ್ತಲೆ ಕೆಲವು ಜನರು ವಿದ್ಯಾಧರ ಗುರೂಜಿ ಅವರ ಹತ್ತಿರ ಬಂದ ಅಭ್ಯರ್ಥಿಗಳಿಗೆ ಯಾವ ಸದಸ್ಯರಿಗೂ ಲಂಚ ಕೊಡಬಾರದು. ನಮ್ಮ ಕೆಲಸವಾಗಲಿ ನಿಮಗೇನು ಮುಟ್ಟಿಸಬೇಕು ಅದನ್ನು ಮುಟ್ಟಿಸುತ್ತೇವೆ ಎಂದು ಹೇಳಬಾರದು, ಎಂದು ತಾಕೀತು ಮಾಡುತ್ತಿದ್ದರು. ಆಯ್ಕೆ ಸಮಿತಿಯ ನಿಯಮಾವಳಿಯ ಪ್ರಕಾರ ಅಭ್ಯರ್ಥಿಗಳನ್ನು ಅವರ ಯೋಗ್ಯತೆ, ಆದಾಯ, ಜಾತಿ ಆಧಾರದ ಮೇಲೆ ಆಯ್ಕೆ ಮಾಡಿ ಯಾವ ಜನರಿಗೂ ಅನ್ಯಾಯವಾಗದಂತೆ ತುಂಬ ಎಚ್ಚರಿಕೆ ವಹಿಸಿ 'ಆಯ್ಕೆ' ಕಾರ್ಯ ಪ್ರಾರಂಭಿಸುತ್ತೇವೆ ಎಂದು ಹೇಳಿ ಜನ ಮೆಚ್ಚುವಂತಹ ಕಾರ್ಯ ಮಾಡಿ ವಿದ್ಯಾಧರ ಗುರೂಜಿ ಅವರು ತಮ್ಮ ಘನತೆ, ಗೌರವವನ್ನು ಮೆರೆದರು. ತಮ್ಮ ಮುಂದೆ ತಾಂಡವ ನೃತ್ಯ ನಡಿಸಿದ ಭ್ರಷ್ಟಾಚಾರಕ್ಕೆ ಬರೆ ಎಳೆದರು.

ಸ್ವಜನ ಪಕ್ಷಪಾತಕ್ಕೆ ಮಣೆಹಾಕದೆ, ಲಂಚಾವತಾರಕ್ಕೆ ಅವಕಾಶ ಕೊಡದೆ, ಮೋಸ–ಅಸೂಯೆಗಳಿಗೆ ಅಂಜದೆ – ಅಳುಕದೆ ಕಾರ್ಯ ನಿರ್ವಹಿಸಿದ ವಿದ್ಯಾಧರ ಗುರೂಜಿ ಅವರನ್ನು ಅಂದು ಆಯ್ಕೆಯಾದ ಇಂಜಿನಿಯರವರು ಇಂದು ಗುರೂಜಿ ಅವರನ್ನು ದೇವರೆಂದು ಪೂಜಿಸುತ್ತಾರೆ. ವಿದ್ಯಾಧರ ಗುರೂಜಿ ಅವರು ತಮ್ಮ ಇಡೀ ಜೀವನದಲ್ಲಿ ಇಂತಹ ಪೂಜನೀಯವಾದ ಕೆಲಸವನ್ನು ಮಾಡುತ್ತ ಬಂದಿದ್ದಾರೆ. ಅವರಿಗೆ ಇನ್ನೂ ಭವ್ಯ ಭವಿತವ್ಯ ಕಾದಿದೆ.

ಸಂಸಾರದಲ್ಲಿ ಸಂತ

ವಿದ್ಯಾಧರ ಗುರೂಜಿ ಅವರನ್ನು ಶಾಲೆಯಿಂದ ಹೊರ ಹಾಕುವುದೊಂದೇ ತಡ ಇನ್ನೊಮ್ಮೆ ಅವರು ಶಾಲೆಯ ಕಡೆ ಹೋಗಲಿಲ್ಲ. ಶಾಲೆಯ ಮುಖ ನೋಡಲಿಲ್ಲ. ಅವರು ನೇರವಾಗಿ ಬಂದದ್ದು 'ಆರ್ಯಸಮಾಜ' ಕಾರ್ಯಾಲಕ್ಕೆ. ಆರ್ಯ ಮಸಾಜದ ಕಾರ್ಯಾಲಯದಲ್ಲಿ ಮಧ್ಯ ಉತ್ತರ ಭಾರತದ ಹರಿದ್ವಾರದಿಂದ ಸ್ವಾಮಿ ರಾಮಗಿರಿಜಿ ಅವರು 'ಆರ್ಯ ಸಮಾಜ' ಪ್ರಣಾಳಿಕೆಯ ಪ್ರಚಾರಕರಾಗಿ 'ಗುರುಮಠಕಲ್ಲ' ಗ್ರಾಮಕ್ಕೆ ಆಗಮಿಸಿದ್ದರು. ಅಲ್ಲಿಯೇ ಅವರ ದರ್ಶನಾಶೀರ್ವಾದ ವಿದ್ಯಾಧರ ಗುರೂಜಿ ಅವರಿಗೆ ಆಯಿತು. ಅಂದೇ ವಿದ್ಯಾಧರ ಗುರೂಜಿ ಪ್ರತಿಜ್ಞೆ ಮಾಡಿದರು. 'ದೇಶಕ್ಕೆ ಸ್ವಾತಂತ್ರ್ಯ ಲಭಿಸುವ ತನಕ ನಾನು ಮದುವೆ ಮಾಡಿ ಕೊಳ್ಳುವುದಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಲಭಿಸದ ಮೇಲೆ ನನಗೆ ಕನ್ಯಾ ಕೊಡಲು ಮುಂದೆ ಬಂದರೆ ನಾನು ಹರಿಜನ ಮಹಿಳೆಯನ್ನೇ ಮದುವೆ ಮಾಡಿ ಕೊಳ್ಳುವೆ' ಎಂದು ತಮ್ಮ ಮನದ ಇಂಗಿತವನ್ನು



ಪ್ರಕಟಿಸಿದರು. ದೇಶಕ್ಕೆ ಸ್ವಾತಂತ್ರ್ಯ ಲಭಿಸಿತು. ಗುರೂಜಿ ಅವರು ಸಮಾಜ ಸೇವೆಗೆ ಕಂಕಣಬದ್ಧರಾದರು. ಅವರಿಗೆ ಮದುವೆ ಮಾಡಿಕೊಳ್ಳುವ ಮನಸ್ಸಿರಲಿಲ್ಲ. ತಮ್ಮ ಮನದ ಬಯಕೆಯಂತೆ ಹರಿಜನ ಮಹಿಳೆ ದೊರಕಬೇಕು. ಅದಕ್ಕಾಗಿ ಅವರು ಕಾಯಲಿಲ್ಲ. ಮದುವೆ ಮಾಡಿಕೊಳ್ಳಬೇಕೆಂಬ ಬಲವಾದ ಬಯಕೆಯೂ ಇರಲಿಲ್ಲ. ಕಾಲ ಕೂಡಿ ಬಂದಿತು. ಅವರ ಬಯಕೆಯಂತೆ ಸುಶಿಕ್ಷಿತ ಮಹಿಳೆ ಹೊಸಳ್ಳಿ (ಕೆ) ಗ್ರಾಮದ ಸವಿತಾ ದೇವಿಯ ತಾಯಿ ತಂದೆಗಳು ವಿದ್ಯಾಧರ ಗುರೂಜಿ ಅವರಿಗೆ ತಮ್ಮ ಮಗಳನ್ನು ಧಾರೆ ಎರೆದು ಕೊಡಲು ಮುಂದೆ ಬಂದರು. ಅತ್ಯಂತ ಸರಳ ಸುಂದರವಾಗಿ ಮದುವೆಯ ಕಾರ್ಯ ನೆರವೇರಿತು. ಸವಿತಾದೇವಿ ವಿದ್ಯಾಧರ ಗುರೂಜಿ ಅವರ ಕೈಹಿಡಿದು ಮುತ್ತೈದಿ ಸಾವಿತ್ರಿಯಾಗಿ ವಿದ್ಯಾಧರ ಗುರೂಜಿ ಅವರ ಮನೆ ತುಂಬಿದರು. ಮನ ತುಂಬಿದರು.

ವಿದ್ಯಾಧರ ಗುರೂಜಿ ಅವರು ನಿಜವಾಗಿ ಬಹಳ ಸುದೈವಿಗಳು. ಇಂತಹ ಮಹಿಳಾಮಣಿಯ ಕೈ ಹಿಡಿದು ಬಾಳುವ ಭಾಗ್ಯ ಅವರದಾದದ್ದು ಪೂರ್ವ ಜನ್ಮ ಪುಣ್ಯ ವಿಶೇಷವೆಂದೇ ಹೇಳಬೇಕು. ಸವಿತಾದೇವಿ ವಿದ್ಯಾಧರ ಗುರೂಜಿ ಅವರ ಮನೆಗೆ ಬಂದಾಗ ಅವರ ಮನೆಯಲ್ಲಿ ಇದ್ದುದು ಒಂದು ಲುಂಗಿ, ಒಂದು ಅಂಗಿ. ನಿಜವಾದ ಅರ್ಥದಲ್ಲಿ ಅವರೂ ತಮ್ಮ ದೀಕ್ಷಾಗುರುಗಳಾಗಿದ್ದ ಸ್ವಾಮಿ ರಾಜಗಿರಿಜಿ ಅವರಂತೆ ಸನ್ಯಾಸಿಗಳೇ ಆಗಿದ್ದರು. ಇವರಲ್ಲಿ ಹಣ ಸಂಪಾದಿಸಿ ಬದುಕು ಮಾಡಬೇಕೆಂಬ ಗುಣವೇ ಇರಲಿಲ. ಇದನ್ನು ಚನ್ನಾಗಿ ಅರಿತುಕೊಂಡ ಅವರ ಧರ್ಮಪತ್ನಿ ಸವಿತಾದೇವಿ ವಿದ್ಯಾಧರ ಗುರೂಜಿ ಯವರನ್ನು ಕೂಡಿಕೊಂಡು ಅರ್ಥಪೂರ್ಣ ಬಾಳನ್ನು ಸಾಗಿಸಿದರು.

ಶ್ರೀಮತಿ ಸವಿತಾದೇವಿ ಈ ಹೊತ್ತಿಗೆ ಎಚ್.ಎಸ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ 'ಪಿಯೂಸಿ'ಗೆ ಪ್ರವೇಶ ಪಡೆದಿದ್ದರು ಶಿಕ್ಷಕಿಯಾದ ಅವರು ಮಕ್ಕಳಿಗೆ ಓದಿಸುತ್ತ ತಾವೂ ಅಭ್ಯಾಸ ಮಾಡತೊಡಗಿದರು. ನೆಮ್ಮದಿ, ತಾಳ್ಮೆ, ಕಷ್ಟ ಸಹಿಷ್ಣುತೆ ಅವರ ಜೀವನದ ಉಸಿರಾಗಿತ್ತು. ತಾವು ಸರಕಾರಿ ಮಾಧ್ಯಮಿಕ ಶಾಲೆಯ ಶಿಕ್ಷಕಿಯಾಗಿ ತುಂಬ ಅಚ್ಚುಕಟ್ಟು ಶಿಸ್ತಿನ ಸಾಕಾರ ಮೂರ್ತಿಯಾಗಿ ನಡೆದುಕೊಳ್ಳುತ್ತಿದ್ದರು. ವಿದ್ಯಾಧರ ಗುರೂಜಿಯುವರು ಕೇವಲ ರಾಜಕಾರಣಿಯಾಗಿರಲಿಲ್ಲ. ಅವರು ನಿಜವಾದ ಅರ್ಥದಲ್ಲಿ ದೇಶಭಕ್ತರು.

ರಾಜನೀತಿಜ್ಞರು. ಹೀಗಾಗಿ ಇವರಿಬ್ಬರ ಮನಸ್ಸು ಒಂದಾಗಿತ್ತು. ಧ್ಯೇಯ ಧೋರಣೆಗಳು ಒಂದಾಗಿದ್ದವು.

ಕೇವಲ ಶಿಕ್ಷಕ ವೃತ್ತಿಯಲ್ಲಿ ಬರುವ ಸಂಬಳದಲ್ಲಿ ಜೀವನ ಸಾಗಿಸುವುದು ತುಂಬಾ ಕಷ್ಟವೆನಿಸತೊಡಗಿತು. ಚಾಣಾಕ್ಷರಾದ ಸವಿತಾ ದೇವಿ ಪುಟಪಾಕ ಗ್ರಾಮದಲ್ಲಿರುವ ವಿದ್ಯಾಧರ ಗುರೂಜಿ ಅವರ ಸಹೋದರಿ ಶ್ರೀಮತಿ ಬಂದೆಮ್ಮ ಅವರ ನೆರವು ಪಡೆದು ಪುಟಪಾಕದಲ್ಲಿ ಒಂದು ಹೊಲ ಒತ್ತಿ ಹಾಕಿಕೊಂಡರು. ಆ ಹೊಲದಿಂದ ಬರುವ ಕಾಳು ಕಡಿ ಮನೆಯ ಸಂಸಾರಕ್ಕೆ ಆಶ್ರಯ ನೀಡಿತು. ತಮ್ಮ ತವರೂರು ಹೊಸಳ್ಳಿ(ಕೆ)ಯ ರೈತರಿಗೆ ಹೊಲ ಲಾಗೋಡಿಗೆಂದು ಹಣ ಕೊಡುತ್ತಿದ್ದರು. ಅದರಿಂದ ಬರುವ ದವಸ ಧಾನ್ಯಗಳಾಗಲಿ, ಹಣವಾಗಲಿ ಪ್ರಪಂಚ್ಕೆ ಆಶ್ರಯ ನೀಡುತ್ತಿತ್ತು.

ವಿದ್ಯಾಧರ ಗುರೂಜಿ ಅವರು ಹುಟ್ಟಿದಾರಭ್ಯ ಅಭಾವದಲ್ಲಿಯೇ ಬಂದರು. ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕದ ಅವರಿಗೆ ರಕ್ಷಣೆಯೇ ಇರಲಿಲ್ಲ. ನಿಜವಾಗಿಯೂ ಅರಣ್ಯದಲ್ಲಿ ಅರಳಿದ ಅಲರಿನಂತಾ ಜೀವನ ವಿದ್ಯಾಧರ ಗುರೂಜಿ ಅವರದು. ಸವಿತಾದೇವಿ ಬರುವದರಿಂದ ಅವರಿಗಿದ್ದ ಅಭಾವ ಮೆಲ್ಲನೆ ಮರೆಯಾಯಿತು. ಸಮರ್ಥ ರಕ್ಷಣೆಯೂ ಸಿಕ್ಕಿತು. ಅರಣ್ಯದಲ್ಲಿ ಅರಳಿದರೂ ಅವರ ಜೀವನ ಪವಿತ್ರವಾದ 'ಕುಸುಮ' ದಂತೆ ಪರಿಮಳಿಸಿತು.

ಓರ್ವ ಪುರುಷ ಬೆಳೆಯುವುದಕ್ಕೆ ಅವರ ಹಿಂದೆ ಇದ್ದ ಮಹಿಳೆಯೇ ಸ್ಫೂರ್ತಿ ದೇವತೆ. ಒಂದು ನೂರು ವರುಷ ತುಂಬಿ ನಗುನಗುತ್ತ ಬಾಳುವುದಕ್ಕೆ ಧರ್ಮಪತ್ನಿ ಸವಿತಾದೇವಿ ಅವರೇ ಕಾರಣ. ಇದು ಮುಖ ಸ್ತುತಿಯಲ್ಲಿ ವಾಸ್ತವ.

1958 ಅಕ್ಟೋಬರ್ 16 ರಂದು ಅವರಿಗೆ ಗಂಡುಮಗು ಜನಿಸಿತು. ಈ ಮಗುವಿಗೆ ಈ ದಂಪತಿಗಳು 'ಅಶೋಕ' ಎಂದು ನಾಮಕರಣ ಮಾಡಿದರು. ಈಗ ಈ ದಂಪತಿಗಳ ಬಾಳಿಗೆ ಬೆಳಕು ಮೂಡಿತು. ವಿದ್ಯಾಧರ ಗುರೂಜಿ ಸವಿತಾದೇವಿ ಅವರಿಗೆ ಮೂರು ಜನ ಗಂಡುಮಕ್ಕಳು ಅವರ ಹೆಸರು 'ಅಶೋಕ' 'ಅರವಿಂದ' 'ಅನಿಲ'. ಆರತಿಗೆ ಒಬ್ಬ ಮಗಳು 'ಅರ್ಚನಾ'. ತಮ್ಮ ಮಕ್ಕಳಿಗೆ ಇಟ್ಟ ಹೆಸರುಗಳನ್ನು ಗಮನಿಸಿದರೆ ಈ ದಂಪತಿಗಳು



ವಿದ್ಯಾಧರ ಗುರೂಜಿ ಅವರ
ಸುಪುತ್ರ ಅಶೋಕ

ಎಷ್ಟು ರಸಿಕರು ಮಕ್ಕಳಿಗೆ ನಾಮಕರಣ ಮಾಡುವಲ್ಲಿ ಇವರು ತಳೆದ ಭಾವ ಎಷ್ಟು ಮಧುರ ಎಂದು ಎಂತಹವರಿಗೂ ಅರ್ಥವಾಗುತ್ತದೆ.

ಮಾಧ್ಯಮಿಕ ಶಾಲಾ ಶಿಕ್ಷಕಿಯಾದ ಸವಿತಾದೇವಿ ಅವರು ಈ ಮಕ್ಕಳ ಪಾಲನೆ, ಪೋಷಣೆ ಮಾಡುತ್ತ ವಿದ್ಯಾಧರ ಗುರೂಜಿ ಅವರ ರಾಜಕೀಯ ಜೀವನಕ್ಕೆ ಸಹಕಾರ ನೀಡುತ್ತ 'ಪಿಯೂಸಿ' ಮುಗಿಸಿದರು. ಬಿ.ಎ. ಪದವಿ ಪಡೆದರು ಬಿ.ಈಡಿ ಪಾಸು ಮಾಡಿಕೊಂಡರು. ಪ್ರೌಢಶಾಲಾ ಶಿಕ್ಷಕಿಯಾಗಿ ಭಡ್ತಿ ಹೊಂದಿದರು. ಇಷ್ಟಕ್ಕೆ ಅವರಿಗೆ ಸಮಾಧಾನವಾಗಲಿಲ್ಲ. ಹಿಂದಿ ಮುಖ್ಯ ವಿಷಯವಾಗಿಟ್ಟುಕೊಂಡು ಗುಲಬರ್ಗಾ ಪಿ.ಜಿ. ಸೆಂಟರಿನಿಂದ ಎಂ.ಎ. ಮುಗಿಸಿದರು. ಅಷ್ಟಕ್ಕೆ ಸಮಾಧಾನಪಡದೆ ಮಹಾನ್ ಕ್ರಾಂತಿಕಾರಿ 'ಮನ್ಮಥನಾಥ ಗುಪ್ತಾ' ಅವರನ್ನು ಕುರಿತು ಮಹಾ ಪ್ರಬಂಧ ಬರೆದು ಪಿ.ಎಚ್‌ಡಿ ಪದವಿ ಸಂಪಾದಿಸಿದರು. ಇವರಿಗೆ ನಿವೃತ್ತಿಯೂ ಆಯಿತು. ಇಡೀ ಜೀವನ ಓದಿಸುವಲ್ಲಿ, ಓದುವದರಲ್ಲಿ ಕಳೆದುಹೋಯಿತು.



ಹೀಗೆ ಈ ಇಬ್ಬರು ದಂಪತಿಗಳು ಶಿಕ್ಷಣ, ಸಾಹಿತ್ಯ, ಸಂಸ್ಕೃತಿಗೆ ಆದ್ಯತೆ ನೀಡುತ್ತ ಶಿಕ್ಷಣ, ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಬೆಳ್ಳನೇ ಬೆಳಗತೊಡಗಿದರು. ವಿದ್ಯಾಧರ ಗುರೂಜಿ ಅವರು ಹುಟ್ಟಿದ ಊರು ಗುರುಮಠಕಲ್ಲ. ಇವರ ಧರ್ಮಪತ್ನಿ ಜನಿಸಿದ್ದು ಕೆ. ಹೊಸಳ್ಳಿ. ಇಬ್ಬರ ಕಾರ್ಯಕ್ಷೇತ್ರ ಯಾದಗಿರಿ. ಈಗ ನೆಲೆಸಿದ್ದು ಗುಲಬರ್ಗಾ ನಗರದಲ್ಲಿ. ಇವರು ಯಾದಗಿರಿ ಪಟ್ಟಣ ಪಂಚಾಯತಿ ಸದಸ್ಯರಾಗಿ ತಾಲೂಕ ಬೋರ್ಡ್ ಸದಸ್ಯರಾಗಿ, ಗುರುಮಠಕಲ್ಲ ಮತಕ್ಷೇತ್ರದ ವಿಧಾನಸಭಾ ಸದಸ್ಯರಾಗಿ, ವಿಧಾನಪರಿಷತ್ತು ಸದಸ್ಯರಾಗಿ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿ ಕಿರಿಯ ಅಭಿಯಂತರ ಆಯ್ಕೆ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿ ಅಸಂಖ್ಯಾತ ಹಿಂದುಳಿದ, ಅಲ್ಪಸಂಖ್ಯಾತ, ತುಳಿಯಲ್ಪಟ್ಟ ಅಲೆಮಾರಿ ಜನಾಂಗಕ್ಕೆ ದಾರಿದೀಪವಾದರು. ಹೀಗೆಂದ ಮಾತ್ರಕ್ಕೆ ಇವರು ಕೇವಲ ಬಡವರ ಬಾಳಿಗಷ್ಟೇ ಬೆಳಕು ನೀಡಿದರೆಂದು ತಿಳಿದುಕೊಳ್ಳಬಾರದು. ಇವರಿಗೆ ಬಡವರು-ಬಲ್ಲಿದರು ಎಂಬ ಭೇದ ಭಾವವೇ ಇರಲಿಲ್ಲ. ಇವರ ಸ್ನೇಹಿತರು ಮಾರವಾಡಿ ಜನಾಂಗದ ಈಶ್ವರಲಾಲ ಭಟ್ಟಡ, ಲಕ್ಷ್ಮೀನಾರಾಯಣ ಶರ್ಮಾ, ದ್ವಾರಕಲಾಲ ಜೀತಾಣಿ ಅವರು, ಆಗರ್ಭ ಶ್ರೀಮಂತರಾಗಿದ್ದ ವಿಶ್ವನಾಥರೆಡ್ಡಿ ಮುದ್ನಾಳ, ಕೊಂಡ ನಾರಾಯಣಪ್ಪ, ಚನಬಸಪ್ಪ ಕುಳಗೇರಿ, ಹಣಮಂತರಾವ ದೇಸಾಯಿ, ವೀರಣ್ಣ ಚಟ್ನಳ್ಳಿ, ದೇವಿಕಿಶನ್ ರಾಠಿ ಪುಕರಾಯದೋಕಾ ರೇವಣಸಿದ್ಧಪ್ಪ ಅರುಣಿ ಗುರುನಾಥರೆಡ್ಡಿ ಪಾಟೀಲ ಮುಂತಾದವರೊಡನೆ ಅತ್ಯಂತ ಪ್ರೀತಿ-ವಿಶ್ವಾಸದಿಂದ ಸ್ನೇಹಮಯ ಜೀವಿಗಳಾಗಿ ಬಾಳಿದರು. ಹೀಗೆ ಇವರ ಮಿತ್ರಮಂಡಳಿ ಉತ್ತರ ಭಾರತದಲ್ಲಿಯೂ ಇದ್ದಾರೆ. ದಕ್ಷಿಣ ಭಾರತದಲ್ಲಿಯೂ ಇದ್ದಾರೆ.

ವಿದ್ಯಾಧರ ಗುರೂಜಿ ಅವರು ಒಳ್ಳೆಯ ಪತಿಯಾಗಿ ಒಳ್ಳೆಯ ತಂದೆಯಾಗಿ ಒಳ್ಳೆಯ ಮಾವನಾಗಿ, ಒಳ್ಳೆಯ ಅಜ್ಜನಾಗಿ ಬಾಳಿದರು. ಅಪಾರವಾದ ಮಿತ್ರಮಂಡಳಿ, ಬಂಧು ಬಳಗ ಹೊಂದಿದ ವಿದ್ಯಾಧರ ಗುರೂಜಿ ಅವರು ತಮ್ಮ ಜೀವನದಲ್ಲಿ ಏನನ್ನೂ ಗಳಿಸಲಿಲ್ಲ. ಉಳಿಸಲಿಲ್ಲ ಅವರು ಮಕ್ಕಳಿಗಾಗಿ ಆಸ್ತಿಯನ್ನು ಮಾಡಲು ಪ್ರಯತ್ನಿಸಲಿಲ್ಲ. ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಲು ಪ್ರಯತ್ನಿಸಿದರು. ಆದೇ ರೀತಿಯಾಗಿ ಬೆಳೆಸಿದರು. ಒಬ್ಬೊಬ್ಬ ಮಗ ಇಂದು ಸಮಾಜದ ಒಂದೊಂದು ಆಸ್ತಿಯಾಗಿ ಬೆಳೆಯುತ್ತಿದ್ದಾರೆ.

ಹಿರಿಯ ಮಗ ಅಶೋಕ ಅವರು ಬಿ.ಟೆಕ್. ಟೆಕ್ಸ್ಟೈಲ್ ಪದವೀಧರರಿದ್ದಾರೆ. ಇವರ ಧರ್ಮಪತ್ನಿ ಶ್ರೀಮತಿ ವಾಸಂತಿ. ಇವರು ಬಿ.ಎ., ಬಿ.ಈಡಿ ಪದವೀಧರರು. ಎರಡನೆಯ ಮಗ ಅರವಿಂದ. ಬಿ.ಈ (ಸಿವಿಲ್) ಪದವೀಧರರು. ಇವರ ಧರ್ಮಪತ್ನಿಯಾಗಿದ್ದ ಡಾ. ಕಾವ್ಯ ಇವರು ಎಂ.ಎ., ಪಿ.ಎಚ್‌ಡಿ. ಇವರ ಮೂರನೆಯ ಮಗ 'ಅನಿಲ' ಇವರು ಬಿ.ಎಸ್‌ಸಿ (ಅಗ್ರಿ) (ಎಂ.ಎಸ್.ಸಿ), ಹಿಂದಿ ಎಂ.ಎ ಪದವೀಧರರು. ಇವರ ಸುಪುತ್ರಿ ಅರ್ಚನಾ ಎಂ.ಎ. ಬಿ.ಕಾಂ. ಪದವೀಧರೆ. ಇವಳ ಪತಿ ಅನಿಲ ಹುಂಡೇಕಾರ್ ಬಿ.ಟೆಕ್, ಟೆಕ್ಸ್ಟೈಲ್. ಇವರ ಮನೆ ಸಾರಸ್ವತ ವಾತಾವರಣದಿಂದ ತುಂಬಿ ತುಳುಕುತ್ತಿದೆ.



ಶ್ರೀ ಟಿ.ಎಂ. ಹುಂಡೇಕಾರ ಬಾಗಲಕೋಟ ಇವರು ಜಿಲ್ಲಾ ಪುನರ್ ರಚನೆಯ ಸಮಿತಿ ಅಧ್ಯಕ್ಷರಾಗಿದ್ದರು. ಇವರು ಲಿಂಗಾಯತ ಕುಟುಂಬಕ್ಕೆ ಸೇರಿದವರು. ವಿದ್ಯಾಧರ ಗುರೂಜಿ ಅವರ ಮಾನವೀಯ ಮೌಲ್ಯಗಳನ್ನು ಅರ್ಥಮಾಡಿಕೊಂಡು ಅವರ ಮಗಳು ಅರ್ಚನಾಳನ್ನು ಸೊಸೆಯಾಗಿ ಸ್ವೀಕರಿಸಿದ್ದಾರೆ.
ಶ್ರೀ ಅನಿಲ ಹುಂಡೇಕಾರ ಶ್ರೀಮತಿ ಅರ್ಚನಾ ದಂಪತಿಗಳು

ವಿದ್ಯಾಧರ ಗುರೂಜಿಯವರಂತೆ ಇವರ ಮಕ್ಕಳೂ ಸಹ ಅಂತರಜಾತಿ ವಿವಾಹಕ್ಕೆ ಮನಸ್ಸು ಮಾಡಿ ಅಶೋಕ ಗುರೂಜಿ ಅವರು ಹರಿಜನ ಮಹಿಳೆಯನ್ನು, ಅರವಿಂದ ಗುರೂಜಿ ಅವರು ಕೋಳಿ ಸಮಾಜದ ಕನ್ಯೆಯನ್ನು, ಅನಿಲ ಗುರೂಜಿ ಬ್ರಾಹ್ಮಣರ ಹೆಣ್ಣು ಮಗಳನ್ನು ಮದುವೆ ಮಾಡಿಕೊಂಡರೆ ಇವರ ಸುಪುತ್ರಿ ಲಿಂಗಾಯತ ಹುಡುಗನನ್ನು ಮದುವೆ ಮಾಡಿಕೊಂಡು ಜಾತಿಯ ಬೀಜವನ್ನು ಹುರಿದು ಮನುಕುಲಕ್ಕೆ ಮಣೆ ಹಾಕಿ ಹೊಸ ಮನ್ವಂತರಕ್ಕೆ ನಾಂದಿ ಹಾಡಿದ್ದಾರೆ. ಇಂದು ಇವರ ಮನೆ ಒಂದು ವಿಶ್ವ ಕುಟುಂಬವಾಗಿ ಪರಿಣಮಿಸಿದೆ. ತಾಯಿ, ತಂದೆ ಮಕ್ಕಳು ಸೊಸೆಯಂದಿರು, ಅಳಿಯಂದಿರು ಎಲ್ಲರೂ ಅತ್ಯಂತ ಪ್ರೀತಿ, ವಿಶ್ವಾಸ ಅಂತಃಕರಣದಿಂದ ಸ್ವತಂತ್ರವಾಗಿ ಬಾಳುತ್ತಿದ್ದಾರೆ. ಜೀವನದಲ್ಲಿ ಇನ್ನೇನು ಬೇಕು? ಇಷ್ಟಾಗಿ ವಿದ್ಯಾಧರ ಗುರೂಜಿ ಅವರು ತಮ್ಮ ದೇಹವನ್ನು ದಾನಮಾಡಿಬಿಟ್ಟಿದ್ದಾರೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ, ಆದರ್ಶ ಬದುಕಿಗೆ ಈಡಾಡಿದ ಈ ದೇಹ ಸುಟ್ಟು ಬೂದಿಯಾಗಬಾರದು. ಮಣ್ಣಲ್ಲಿ ಕೊಳೆತು ಹೋಗಬಾರದು ಎಂಬುದೇ ಇವರ ತತ್ವ, ವಿದ್ಯಾಧರ ಗುರೂಜಿ ಅವರ ಈ ತ್ಯಾಗ, ನಿಷ್ಠೆ ಪ್ರಾಮಾಣಿಕತೆ ನಾವು ಅವರಲ್ಲಿಯೇ ಕಾಣಬೇಕು!

ವಿದ್ಯಾಧರ ಗುರೂಜಿ ಇಡೀ ಜೀವಮಾನ ಬಾಡಿಗೆ ಮನೆಯಲ್ಲಿಯೇ ಕಳೆಯಿತು. ಶ್ರೀಮತಿ ಸವಿತಾ ದೇವಿಯವರು ಸರಕಾರಿ ಪ್ರೌಢಶಾಲಾ ಶಿಕ್ಷಕಿಯಾಗಿದ್ದರಿಂದ ಸರಕಾರಿ ನೌಕರರಿಗೆ ವಿತರಣೆಯಾಗುವ ಎನ್.ಜಿ.ಓ. ಕ್ವಾಟರ್ಸಿನಲ್ಲಿಯೇ ಬಹಳ ದಿನಗಳವರೆಗೆ ಇದ್ದರು. ಮಾಜಿ ಶಾಸಕರೆಂದು ಈಗ ಅವರಿಗೆ ಆದರ್ಶ ಕಾಲೋನಿಯಲ್ಲಿ ಹೌಸಿಂಗ್ ಬೋರ್ಡ್ ಮನೆ ದೊರಕಿದೆ. ಈ ಮನೆಯಲ್ಲಿ ಹೆಂಡರು ಮಕ್ಕಳು, ಮೊಮ್ಮಕ್ಕಳು ತುಂಬ ಪ್ರೀತಿಯಿಂದ, ಸಂತೋಷದಿಂದ ನಗುನಗುತ್ತ ಬಾಳುತ್ತಲಿದ್ದಾರೆ. ಈಗ ಅವರದು ಸಂತೃಪ್ತಿಯ ಜೀವನ. ಸಮೃದ್ಧಿಯ ಜೀವನ ಅವರಿಗೆ ಇಂದು ಏನೂ ಬೇಕಾಗಿಲ್ಲ. ದೇಶ ಶಕ್ತಿಯುತವಾಗಿ ಬೆಳೆಯಬೇಕು. ಸಮಾಜದ ಕಟ್ಟಕಡೆಯ ಮನುಷ್ಯ ಎಲ್ಲರಂತೆ ಸಂತೋಷದಿಂದ ಬದುಕು ಬೇಕು. ಹೀಗೆ ಬಯಸುವವರು ಶರಣರು, ಸಂತರು, ವಿದ್ಯಾಧರ ಗುರೂಜಿ ಅವರು ಸಂಸಾರದಲ್ಲಿದ್ದ ಸಂತರು, ಶರಣರು ಎಂದು ಹೇಳಲು ಹೆಮ್ಮೆ ಅನಿಸುತ್ತದೆ.

ಲೋಕ ಸಾಹಿತ್ಯ ಮಂಚ

ಇತ್ತೀಚೆಗೆ ವಿದ್ಯಾಧರ ಗುರೂಜಿ ಅವರು ನಾಗಾಲೋಟವಾಗಿ ಬೆಳೆಯುತ್ತಿರುವ ನಗರದಲ್ಲಿ ಎಲ್ಲ ಭಾಷೆ ಸಾಹಿತಿಗಳನ್ನು, ಕವಿಗಳನ್ನು, ಚಿಂತಕರನ್ನು, ವಿಮರ್ಶಕರನ್ನು, ಸಂಶೋಧಕ ರನ್ನು ಬರಮಾಡಿಕೊಂಡು ತಮ್ಮ ತಮ್ಮ ಚಿಂತನಗಳನ್ನು ಹಂಚಿಕೊಳ್ಳಲು "ಲೋಕ ಸಾಹಿತ್ಯ ಮಂಚ" ಎಂಬ ಸಾಂಸ್ಕೃತಿಕ ಸಂಸ್ಥೆಯನ್ನು ಹುಟ್ಟು ಹಾಕಿದರು. ಈ ಸಂಸ್ಥೆಯ ಕಾರ್ಯಾಲಯ ಕರ್ನಾಟಕ ಹಿಂದಿ ಪ್ರಚಾರ ಸಭೆಯ ಆವರಣದಲ್ಲಿಯೇ ಮಾಡಿಕೊಂಡಿದ್ದರು. ಲೋಕಸಾಹಿತ್ಯ ಮಂಡಲಿ ಸಂಸ್ಥಾಪಕ ಅಧ್ಯಕ್ಷರು ವಿದ್ಯಾಧರ ಗುರೂಜಿ ಅವರೇ ಆಗಿದ್ದರು. ಈ ಸಂಸ್ಥೆ ತನ್ನ ಮೈಕೈ ತುಂಬಿ ಬೆಳೆಯಲಿಕ್ಕೆ ಹಿರಿಯ ಸಾಹಿತಿಗಳು, ಚಿಂತಕರು ಆದ ಮುಜುಬುರ್ ರಹಮಾನ, ಉರ್ದು ಕವಿ ಡಾ. ಮಾಜಿದ ದಾಘಿ ಅವರು. ಒಂದೆರಡು ವರ್ಷಗಳಲ್ಲಿ 'ಲೋಕ ಸಾಹಿತ್ಯ ಮಂಚ' ತನ್ನದೇ ಆದ ಅಸ್ತಿತ್ವ ಬೆಳೆಸಿಕೊಂಡು ಕನ್ನಡ, ಹಿಂದಿ, ಮರಾಠಿ,






ಉರ್ದು ಕವಿ, ಚಿಂತಕ, ಆದರ್ಶವಾದಿ ಶ್ರೀ ಮುಜುಬುರ್ ರಹಮಾನ ಅವರು ವಿದ್ಯಾಧರ ಗುರೂಜಿಯವರನ್ನು ಗೌರವಿಸುತ್ತಿರುವುದು.

ತೆಲುಗು, ಇಂಗ್ಲೀಷ್ ಮುಂತಾದ ಭಾಷೆಯ ಕವಿಗಳ ಕಾವ್ಯಧಾರೆಗೆ ದಾರ್ಶನಿಕರಿಗೆ ತಮ್ಮ ಚಿಂತನ ಹಂಚಿಕೊಳ್ಳುವ ಸಮರ್ಥ ವೇದಿಕೆಯಾಗಿ ಬೆಳೆಯಿತು.

'ಲೋಕ ಸಾಹಿತ್ಯ ಮಂಚ'ದಲ್ಲಿ ಬಿ. ಮಹಾದೇವಪ್ಪ ಪ್ರೊ॥ ಭೀಮಪ್ಪ ಸುರಪೂರ, ಶ್ರೀಮತಿ ಕಮಲಾ ಶುಕ್ಲಾ. ವಿಶ್ವನಾಥರೆಡ್ಡಿ ಮುದ್ನಾಳ, ಸ್ವಾತಂತ್ರ್ಯ ಹೋರಾಟಗಾರ ಶ್ರೀ ಅನಂತಶರ್ಮಾ, ಎ.ಕೆ. ರಾಮೇಶ್ವರ, ನ್ಯಾಯಮೂರ್ತಿ ಶಿವ ರಾಜ ವಿ. ಪಾಟೀಲ, ಶ್ರೀಮತಿ ಶಕುಂತಲಾ ಎಸ್. ಪಾಟೀಲ, ಶ್ರೀಮತಿ ಶಾಮಲಾ ಕುಲಕರ್ಣಿ, ಪೂಜ್ಯಶ್ರೀ ಬಸವರಾಜ ದೊಡ್ಡಪ್ಪ ಅಪ್ಪಾ, ಶ್ರೀ ಭೀಮಾಚಾರ್ಯ ಮಠದ ಶ್ರೀಯಲ್ಲಪ್ಪ, ಚಂದನಕೇರಿ ಶ್ರೀ ನಾಗಶೆಟ್ಟಿ ಗಾರಂಪಳ್ಳಿ, ಶ್ರೀ ಚನ್ನಬಸಪ್ಪ ಯರಗೋಳ, ಶ್ರೀ ಅಯ್ಯಣ್ಣ ಹುಂಡಾಕಾರ, ಶ್ರೀ ಅಯ್ಯಣ್ಣ ಅಗಸರ, ಸ್ವಾತಂತ್ರ್ಯ ಹೋರಾಟಗಾರ ಶ್ರೀ ಕೆ. ಚನ್ನಬಸಪ್ಪ, ಡಾ. ಇಂದಿರಾ ಸಂಪತ್‌ಕುಮಾರ ಲೋಯಾ, ಶ್ರೀ ಬನ್ನಪ್ಪ ಬಿ.ಕೆ. ಅವರು ತಮ್ಮ ಚಿಂತನೆಗಳನ್ನು ಹಂಚಿಕೊಂಡು ಜನಮನ್ನಣೆಯನ್ನು ಪಡೆದರು.




ಲೋಕ ಸಾಹಿತ್ಯ ಮಂಚ ಕಾರ್ಯ ಕಲಾಪಗಳನ್ನು ವಿದ್ಯಾಕುಮಾರ ತಿವಾರಿ ಅವರು ಅಚ್ಚುಕಟ್ಟಾಗಿ ನಡೆಸಿಕೊಂಡು ಬರುವಲ್ಲಿ ಅಗ್ರ ಪಾತ್ರ ವಹಿಸಿದರು.

'ಲೋಕ ಸಾಹಿತ್ಯ ಮಂಚ' ಸ್ಥಾಪಿಸುವ ಉದ್ದೇಶ ಭಾರತದಲ್ಲಿ ಅನೇಕ ಜಾತಿ, ಮತ ಪಂಥ ಪಂಗಡಗಳ ಜನರುಂಟು. ಅದರಂತೆ ಹಲವು ಭಾಷೆಗಳನ್ನು ಆಡುವ ಜನರೂ ಉಂಟು. ಈ ಎಲ್ಲ ಜಾತಿಯ ಜನರು, ಭಾಷೆಯ ಜನರು ಒಡಗೂಡಿ ಅನೇಕತೆಯಲ್ಲಿ ಏಕತೆಯನ್ನು ಸಾಧಿಸುವ ಮುಖ್ಯ ವಿಷಯ ಇಟ್ಟು ಭಾರತೀಯರ ಭಾವೈಕ್ಯತೆಗೆ ಈ 'ಲೋಕ ಸಾಹಿತ್ಯ ಮಂಚ' ಶ್ರಮಿಸತೊಡಗಿತು. ಈ 'ಮಂಚ'ದ ಹಿಂದೆ ವಿದ್ಯಾಧರ ಗುರೂಜಿ ಅವರ ಹೃದಯದೊಲುಮೆಯ 'ಮಿಂಚು' ಗುಪ್ತ ಗಾಮಿನಿಯಾಗಿ ಸಂಚರಿಸುತ್ತಿತ್ತು. 'ಲೋಕ ಸಾಹಿತ್ಯ ಮಂಚ' ಕರ್ನಾಟಕ ಹಿಂದಿ ಪ್ರಚಾರ ಸಭಾ ಅಂಗಸಂಸ್ಥೆಯಾಗಿತ್ತು. ಈ ಸಂಸ್ಥೆ ಏಳಿಗೆಗೆ ಅಶೋಕ ಗುರೂಜಿ ಅವರು ಅವಿಶ್ರಾಂತವಾಗಿ ಸೇವೆ ಸಲ್ಲಿಸುತ್ತಿದ್ದರು.



ಸಾಗರದಾಚೆ ಸಾಗಿದ ಹಿಂದಿ ಪ್ರಚಾರ, ಪ್ರಸಾರ

ಭಾರತದೇಶ ಒಂದು ಬಲಿಷ್ಟ ರಾಷ್ಟ್ರ. ನಮ್ಮ ರಾಷ್ಟ್ರ ಭಾಷೆ 'ಹಿಂದಿ' ನಮ್ಮ ನಮ್ಮ ಮಾತೃಭಾಷೆಯೊಡನೆ ರಾಷ್ಟ್ರಭಾಷೆ ಹಿಂದಿ ಕಲಿತುಕೊಳ್ಳುವುದು ಅಷ್ಟೇ ಅವಶ್ಯವಿದೆ; ಅವಸರವಿದೆ. ವಿದ್ಯಾಧರ ಗುರೂಜಿ ಅವರು ದಕ್ಷಿಣ ಭಾರತದಲ್ಲಿಯೇ ಹಿಂದಿ ಭಾಷಾ ಪಂಡಿತರೆಂದು ಖ್ಯಾತಿಪಡೆದಿದ್ದಾರೆ. ಹಿಂದಿ ಭಾಷೆಯ ಮೇಲೆ ಇದ್ದ ಇವರ ಪ್ರಭುತ್ವವನ್ನು ಗಮನಿಸಿ ಲಂಡನ್ ನಗರದಲ್ಲಿ ದಿನಾಂಕ 14 ರಿಂದ 16 ಸೆಪ್ಟೆಂಬರ್ 1999ರಲ್ಲಿ ಆಯೋಜಿಸ ಲಾಗಿದ್ದ ಆರನೆಯ ವಿಶ್ವ ಹಿಂದಿ ಭಾಷಾ ಸಮ್ಮೇಳನದಲ್ಲಿ ಆಮಂತ್ರಿತ ಅತಿಥಿಗಳಾಗಿ ಗುರೂಜಿ ಅವರು ಭಾಗವಹಿಸಿದ್ದರು. ಇವರ ಸಂಗಡ ಹೈದರಾಬಾದ್ ಹಿಂದಿ ಪ್ರಚಾರ ಸಭೆಯ ಪ್ರಧಾನ ಮಂತ್ರಿ ಶ್ರೀ ಪಾಂಡುರಂಗ ಥಗೆ. ಧೋಂಢಿರಾವ ಜಾಧವ ಪರೀಕ್ಷಾಮಂತ್ರಿ ಅವರು ಪಾಲುಗೊಂಡಿದ್ದರು.



ಈ ಸಮ್ಮೇಳನದಲ್ಲಿ ವಿದ್ಯಾಧರ ಗುರೂಜಿ ಅವರು 'ಈಗಿನ ಯಾಂತ್ರಿಕ ಯುಗದಲ್ಲಿ ಹಿಂದಿ ಭಾಷೆಯ ಉಪಯೋಗ' ಎಂಬ ವಿಷಯ ಕುರಿತು ಅರ್ಥಪೂರ್ಣವಾದ ತಮ್ಮ ವಿಚಾರವನ್ನು ಮಂಡಿಸಿದರು. ಅಸ್ಖಲಿತವಾದ ಇವರ ವಾಣಿ ಹಿಂದಿ ಭಾಷೆ ಮೇಲೆ ಇದ್ದ ಇವರ ಪ್ರಭುತ್ವವನ್ನು ಗಮನಿಸಿ ವಿದ್ಯಾಧರ ಗುರೂಜಿ ಅವರನ್ನು ತುಂಬ ಗೌರವದಿಂದ ಕಾಣುತ್ತಿದ್ದರು.

ಪ್ರಾರಂಭದಲ್ಲಿ ಹಿಂದಿ ಭಾಷಾ ಪ್ರಚಾರ, ಪ್ರಸಾರ ಕಾರ್ಯ ಹಳ್ಳಿಯಲ್ಲಿ ಕೈಗೊಂಡ ಗುರೂಜಿ ಅವರು ಈಗ ಸಮುದ್ರದಾಚೆ ಬ್ರಿಟನ್ನಿನ ಪ್ರತಿಷ್ಠಿತ ನಗರ 'ಲಂಡನ್' ನಗರದಲ್ಲಿಯೂ ಹಿಂದಿ ಭಾಷೆಯ ಮಹತ್ವವನ್ನು ಒತ್ತಿಹೇಳಿ ನಿರ್ದೇಶನ ನೀಡುವಲ್ಲಿ ತಮ್ಮ ಛಾಪು ಮೂಡಿಸಿ ಬಂದರು.

ವಿದ್ಯಾಧರ ಗುರೂಜಿ ಅವರು 'ಹಿಂದಿಯೇ ನನ್ನ ಪ್ರಾಣ, ಹಿಂದಿಯೇ ನನ್ನ ಉಸಿರು' ಎಂದು ನೆರೆ ನಂಬಿ ಹಿಂದಿಭಾಷೆಯ ಮೇಲೆ ಅಭಿಮಾನ ಇಟ್ಟು ಹೋರಾಡಿದವರು. ಈ ಹೋರಾಟ ಅವರನ್ನು ಸಮುದ್ರದಾಚೆಗೂ ಕರೆದುಕಂಡು ಹೋಯಿತು. ಅವರ ಅಮರವಾಣಿ ಸಿಂಹಗರ್ಜನೆ ಅಲ್ಲಿಯೂ ಮೊಳಗಿತು.

ಬ್ರಿಟನ್ ದೇಶದಲ್ಲಿ ಪ್ರವಾಸ ಕೈಕೊಂಡ ಗುರೂಜಿ ಅವರು 'ಆ ದೇಶದ ಜನರ ದೇಶಪ್ರೇಮ, ಸಮಯ ಪ್ರಜ್ಞೆ, ಪ್ರಾಮಾಣಿಕತೆ, ಸಚ್ಚಾರಿತ್ರ್ಯ ಅವರಿಂದ ನಾವು ಕಲಿಯಬೇಕಾಗಿದೆ' ಎಂದು ಹೇಳುತ್ತಾರೆ.

ಯಾವ ಬ್ರಿಟಿಷರನ್ನು ಭಾರತ ಬಿಟ್ಟು ತೊಲಗಿಸಲು ಹೋರಾಡಿದರೋ ಆ ಬ್ರಿಟಿಷರ ದೇಶಕ್ಕೆ ಪ್ರಯಾಣ ಬೆಳೆಸಿ ನಮ್ಮ ರಾಷ್ಟ್ರಭಾಷೆಯ ಮಹತ್ವವನ್ನು ಎತ್ತಿ ಹೇಳಿ ಅಲ್ಲಿಯೂ ದೇಶಾಭಿಮಾನ, ಸ್ವಾಭಿಮಾನ ಮೂಡಿಸಿ ಬಂದ ಗುರೂಜಿ ಅವರು ನಿಜವಾಗಿಯೂ ನಮ್ಮ ಮಧ್ಯದಲ್ಲಿ ಇದ್ದ ಅತ್ಯಂತ ಮಹತ್ವಶದ ವ್ಯಕ್ತಿ, ದೊಡ್ಡ ಶಕ್ತಿ ಅಲ್ಲವೆ?

ಕರ್ನಾಟಕ ಹಿಂದಿ ಪ್ರಚಾರ ಸಭೆಯ ಆವರಣದಲ್ಲಿ ಸೇವೆ ಸಲ್ಲಿಸುತ್ತಲಿದ್ದ ಸಂಸ್ಥೆಗಳು

371ಕಲಂ ಹುಟ್ಟಿ ಕಾರ್ಯರೂಪಕ್ಕೆ ಬಂದ ಸ್ಥಳ ಕರ್ನಾಟಕ ಹಿಂದಿ ಪ್ರಚಾರಸಭೆ.

ಹುಟ್ಟು ಹಾಕಿದವರು: ಶ್ರೀ ವೈಜನಾಥ ಪಾಟೀಲ. ಅವರಿಗೆ ಬೆಂಬಲಿಸಿದವರು ಶ್ರೀ ವಿದ್ಯಾಧರ ಗುರೂಜಿ, ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ ಶ್ರೀ ಹನುಮಂತಾರಾವ್ ದೇಸಾಯಿ ಮತ್ತು ಅಶೋಕ ಗುರೂಜಿ.

'ಹೈದರಾಬಾದ್ ಪ್ರದೇಶ' ರಾಜ್ಯವಾಗಬೇಕೆಂದು ಕೂಗಿ ಕರೆ ಕೊಟ್ಟ ಸ್ಥಳ.


1. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಕ್ರಿಯಾ ಸಮಿತಿ.

2. ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿ.

3. ಶೈಕ್ಷಣಿಕ, ಸಾಹಿತ್ಯಕ, ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳಿಗೆ ನೆಲೆವೀಡು.

ಈಗಿನ ಅಧ್ಯಕ್ಷರು: ಶ್ರೀ ನಾಗಣ್ಣ ಗಣಜಲಖೇಡ

ಕಾರ್ಯದರ್ಶಿಗಳು: ಶ್ರೀ ಅಶೋಕ ಗುರೂಜಿ



ಕರ್ನಾಟಕ ಹಿಂದಿ ಪ್ರಚಾರಸಭೆಗೆ ಸಂದರ್ಶನ ನೀಡಿದ ಪ್ರಮುಖ ಮಹನೀಯರು

1. **ಶ್ರೀ ಖೈನಾಗರ್**
   ಮಾಜಿ ಆಯುಕ್ತರು ಮುಂಬಯಿ
   ಮಹಾನಗರ ಪಾಲಿಕೆ

2. **ಶ್ರೀ ನಾರಾಯಣ ಬಾಬು ಪವಾರ**
   ಹೈದರಾಬಾದ್ ನಿಜಾಮರಿಗೆ ಬಾಂಬು ಹಾಕಿದ ಮಹಾನ್ ವ್ಯಕ್ತಿ

3. **ಶ್ರೀಮತಿ ಲಕ್ಷ್ಮಿ ಸೈಗಲ್**
   ಅಜಾದ ಹಿಂದ್ ಫೌಜ ಝಾಂಸಿರಾಣಿ
   ರೆಜಿಮೆಂಟ್ ಕರ್ನಲ್

4. **ಶ್ರೀ ಮನ್ಮಥನಾಥ ಗುಪ್ತ**
   ಮಹಾನ್ ಕ್ರಾಂತಿಕಾರಿ ಹಾಗೂ ಕ್ರಾಂತಿಕಾರಿ ಬರಹಗಾರರು

5. **ಶ್ರೀ ರಾಮರಾವ್**
   ಇಂಡಿಯನ್ ನ್ಯಾಶನಲ್ ಆರ್ಮಿ

6. **ಶ್ರೀ ಖಮರುಲ್ ಇಸ್ಮಾಯಿಲ್ ಹೈದರಾಬಾದ್**
   ಇಂಡಿಯನ್ ನ್ಯಾಶನಲ್ ಆರ್ಮಿ

7. **ಶ್ರೀ ಸಿ.ವ್ಹಿ. ಚಾರಿ**
   ಆಂಧ್ರಪ್ರದೇಶ ಭೂದಾನಯಜ್ಞ ಬೋರ್ಡಿನ ಅಧ್ಯಕ್ಷರು

8. **ಶ್ರೀ ರಾಜೀವ ದೀಕ್ಷಿತ್**
   ಆಜಾದಿ ಬಚಾವ್ ಆಂದೋಲನ ರೂವಾರಿ
   ಇವರ ವಾಸಸ್ಥಾನ ಕರ್ನಾಟಕ ಹಿಂದಿ ಪ್ರಚಾರಸಭಾ, ಕಲಬುರ್ಗಿ

9. **ಶ್ರೀ ತರುಣ ವಿಜಯ**
   ಪಾಂಚಜನ್ಯ ಸಂಪಾದರು ಹಾಗೂ ಎಂ.ಪಿ. ಅವರು



10. **ಶ್ರೀ ಗೋವಿಂದಾಚಾರ್ಯ**
ರಾಷ್ಟ್ರೀಯ ಹಿತಚಿಂತಕರು

11. **ಶ್ರೀ ಮುಝುಫರ್ ಹುಸೇನ**
'ಪದ್ಮ ಭೂಷಣ' ಪ್ರಶಸ್ತಿ ವಿಜೇತರು, ಮುಂಬಯಿ

12. **ಜಾರ್ಜ್ ಫರ್ನಾಂಡೀಸ್**
ಕಾರ್ಮಿಕ ಹೋರಾಟಗಾರರು ಹಾಗೂ ಮಾಜಿ ರಕ್ಷಣಾ ಸಚಿವರು

13. **ಶ್ರೀಮತಿ ಮೇಧಾಪಾಟಕ್**
ಸುಪ್ರಸಿದ್ಧ ಸಮಾಜ ಸೇವಕಿ

14. **ಶ್ರೀ ಬಾಬು ಕೃಷ್ಣಮೂರ್ತಿ**
ಪ್ರಸಿದ್ಧ ಬರಹಗಾರರು. ಬೆಂಗಳೂರು

15. **ಶ್ರೀ ಚಕ್ರವರ್ತಿ ಸೂಲಿಬೆಲೆ**
ಪ್ರಸಿದ್ಧ ಬರಹಗಾರರು

16. **ಶ್ರೀ ಸಂಜಯ ಖಾನ್**
ಹಿಂದಿ ಚಲನಚಿತ್ರ ನಟ

17. **ಶ್ರೀಮತಿ ಮಾಳವಿಕಾ**
ಚಲನಚಿತ್ರ ಸುಪ್ರಸಿದ್ಧ ನಟಿ

18. **ಗೌರವಾನ್ವಿತ್ ಶ್ರೀ ತ್ರಿವೇದಿ**
ರಾಜ್ಯಪಾಲರು, ಕರ್ನಾಟಕ ಸರ್ಕಾರ

19. **ಶ್ರೀ ಡಾ. ಶಿವರಾಜ ಸಿ. ಪಾಟೀಲ**
ನಿವೃತ್ತ ನ್ಯಾಯಮೂರ್ತಿಗಳು
ಉಚ್ಚ ನ್ಯಾಯಾಲಯ

20. **ಶ್ರೀ ರಾಮಾಜೋಯಿಸ್**
ನಿವೃತ್ತ ರಾಜಪಾಲರು

21. ಶ್ರೀ ವಿಜಯ ಮಲ್ಯ
ಖ್ಯಾತ ಉದ್ಯಮಿಗಳು ಬೆಂಗಳೂರು

22. ಶ್ರೀ ಬಿ.ಡಿ. ಜತ್ತಿ
ಉಪ ರಾಷ್ಟ್ರಪತಿಗಳು

23. ಶ್ರೀಮತಿ ಸುಷ್ಮಾ ಸ್ವರಾಜ್ಯ
ವಾರ್ತಾ ಮತ್ತು ಪ್ರಚಾರ ಇಲಾಖೆ. ಸಚಿವರು

24. ಶ್ರೀ ರಾಮಕೃಷ್ಣ ಹೆಗಡೆ
ಮುಖ್ಯಮಂತ್ರಿಗಳು ಕರ್ನಾಟಕ ಹಾಗೂ
ಯೋಜನಾ ಆಯೋಗದ ಉಪಾಧ್ಯಕ್ಷರು

25. ಶ್ರೀ ಧರ್ಮಸಿಂಗ ಜಿ.
ಮುಖ್ಯಮಂತ್ರಿಗಳು, ಕರ್ನಾಟಕ

26. ಶ್ರೀ ಬಿ.ಎಸ್. ಯಡಿಯೂರಪ್ಪ
ಮುಖ್ಯ ಮಂತ್ರಿಗಳು, ಕರ್ನಾಟಕ

27. ಶ್ರೀ ಬಸವರಾಜ ಯತ್ನಾಳ
ಮಾಜಿ ಕೇಂದ್ರ ಸಚಿವರು

ಇದಲ್ಲದೆ ಕರ್ನಾಟಕ ರಾಜ್ಯ ಆಂಧ್ರಪ್ರದೇಶದ ಹಲವಾರು ಮಂತ್ರಿಗಳು ವಿರೋಧ ಪಕ್ಷದ ನಾಯಕರು ಅಗ್ರಗಣ್ಯ ಲೇಖಕರು ವಿಮರ್ಶಕರು, ಚಿಂತಕರು ಚಲನಚಿತ್ರ ನಟ ನಟಿಯರು ಕರ್ನಾಟಕ ಹಿಂದಿ ಪ್ರಚಾರ ಸಭೆಗೆ ಬಂದು ಭೇಟಿ ನೀಡಿ ಹೋಗಿದ್ದಾರೆ.

ಪದವಿ ಪ್ರಶಸ್ತಿಗಳ ಸುರಿಮಳೆ

ಏರಾಕಿದ ತಿಂಗಳುಗಳನ್ನು ಕೂಡಿಸಿಕೊಂಡು ಇದೇ 2012 ದಿಶೆಂಬರ್ 30 ರಂದು ವಿದ್ಯಾಧರ ಗುರೂಜಿ ಅವರಿಗೆ ನೂರು ವರುಷಗಳು ತುಂಬುತ್ತಲಿವೆ. ನೂರು ವರ್ಷದ ಈ ಕಾಲಾವಧಿಯಲ್ಲಿ ಅವರು ಒಂದು ದಿವಸವೂ ಹಾಯಾಗಿ ಇದ್ದು ವಿಶ್ರಾಂತಿ ಪಡೆಯಲಿಲ್ಲ. ನೆಮ್ಮದಿಯ ಉಸಿರು ಬಿಡಲಿಲ್ಲ. ಹುಟ್ಟು ಹೋರಾಟಗಾರರಾದ ಇವರು ಹೋರಾಟ, ಹೋರಾಟ ಎಂದು ಒಂದಿಲ್ಲ ಒಂದು ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಬಂದಿದ್ದಾರೆ.

ದೇಶ ಸ್ವಾತಂತ್ರ್ಯ ಪಡೆದ ಕೇವಲ 60–65 ವರ್ಷಗಳಲ್ಲಿ ಭಾರತ ದೇಶದಲ್ಲಿ ಸ್ವಜನ ಪಕ್ಷಪಾತ ತುಂಬಿ ತುಳುಕತೊಡಗಿತು. ಭ್ರಷ್ಟಾಚಾರ ತಾಂಡವ ನೃತ್ಯ ನಡೆಸಿತು. ಮೋಸ–ವಂಚನೆಗಳು ಡಗಾ–ಡಂಗ ನಡೆಯುವಂತಾಯಿತು. ಹಳ್ಳಿಗಳು ವ್ಯವಸ್ಥಿತವಾಗಿ ಹಾಳಾಗತೊಡಗಿದವು. ನಾಡಿಗೆ ಅನ್ನ ನೀಡುವ ಅನ್ನದಾತ ರೈತ ಆತ್ಮಹತ್ಯ ಮಾಡಿಕೊಳ್ಳುವಂತಾಯಿತು. ಹೊಟ್ಟೆಯಪಾಡಿಗೆ



ಮಕ್ಕಳನ್ನು ಮಾರಿಕೊಳ್ಳುವ ದುರಂತ ಭಾರತದ ಪ್ರಜೆಗಳ ಪಾಲಿಗೆ ಬಂದಿತು. ಇಂದು ಯಾರೂ ನೆಮ್ಮದಿಯಾಗಿ ಸರಕಾರಿ ಸೇವೆ ಮಾಡುವಂತಿಲ್ಲ. ಒಂದು ಕಡೆ ರಾಜಕಾರಣಿಗಳು ವ್ಯವಸ್ಥಿತವಾಗಿ ಸಮಾಜ, ಸರಕಾರದ ಸಲುಗೆ ಮಾಡುತ್ತಲಿದ್ದಾರೆ. ಇನ್ನೊಂದು ಕಡೆ ಸರಕಾರಿ ಅಧಿಕಾರಿಗಳು ಹಗಲು ದರೋಡೆ ಹಾಕುತ್ತಲಿದ್ದಾರೆ. ಇಷ್ಟೆಲ್ಲ ಕಣ್ಣಾರೆ ಕಂಡರೂ ಕಾಣದಂತೆ ನಮಗೇಕೆ ಬೇಕು? ಎಂದು ಭಾರತದ ಪ್ರಜೆಗಳು ದಿವ್ಯಮೌನ ತಾಳಿದ್ದಾರೆ. ದುಷ್ಟರಾಜಕಾರಣಿಗಳ, ಭ್ರಷ್ಟ ಅಧಿಕಾರಿಗಳ, ಕಪ್ಪುಹಣದ ಕುಬೇರರ ವಿರುದ್ಧ ಸಿಡಿದೇಳುವ ಜನರು ಸಮಾಜದಲ್ಲಿ ಇಲ್ಲದಂತಾಗಿದೆಯೆಂದು ವಿದ್ಯಾಧರ ಗುರೂಜಿ ಅವರು ಹಗಲಿರುಳು ಚಿಂತಿಸುತ್ತಲಿದ್ದಾರೆ. ನಾವು ನಮ್ಮ ಜೀವನವನ್ನು ಪಣಕ್ಕೆ ಒಡ್ಡಿ ಸ್ವಾತಂತ್ರ್ಯ ಸಂಪಾದಿಸಿದ್ದು ಇದಕ್ಕಾಗಿಯೇ? ಎಂದು ತಮ್ಮಷ್ಟಕ್ಕೆ ತಾವೇ ಪ್ರಶ್ನೆ ಹಾಕಿಕೊಳ್ಳುತ್ತಲಿದ್ದಾರೆ.

ಈ ವ್ಯವಸ್ಥೆ ಹೀಗೆ ಮುಂದುವರಿಯಬಾರದು. ತರುಣ ಭಾರತೀಯರು ಈ ವ್ಯವಸ್ಥೆಯ ವಿರುದ್ಧ ಸಿಡಿದೇಳುವ ಮನೋಧರ್ಮ ಬೆಳೆಸಿಕೊಳ್ಳಬೇಕೆಂದು ಹಂಬಲಿಸುತ್ತಲಿದ್ದಾರೆ. ದೇಶಭಕ್ತ ಮೌಲ್ಯಾಧಾರಿತ ರಾಜಕಾರಣಿ ವಿದ್ಯಾಧರ ಗುರೂಜಿ ಅವರು ಇಂದೂ ಸಹ ಅವರ ಮನಸ್ಸಿನಲ್ಲಿ ತುಮುಲ ಯುದ್ಧ ನಡೆದೇ ಇದೆ. ಎಂದಿಗಿಂತಲೂ ಇಂದು ತೀರಾ ಚಿಂತಾಕ್ರಾಂತರಾಗಿದ್ದಾರೆ.

ಸುಮಾರು 1934 ರಿಂದ 1994ರವರೆಗೆ ಅರವತ್ತು ವರ್ಷ ಸುದೀರ್ಘ ಕಾಲ ಅವರ ಹೋರಾಟದ ಹಾದಿಯನ್ನು ಗಮನಿಸಿದರೆ ನಿಜವಾಗಿಯೂ ಅದು ದುರ್ಗಮವಾದ ದಾರಿ. ಈ ದಾರಿಯಲ್ಲಿ ಅವರು ಹಿಂದುಳಿದ ವರ್ಗಗಳ ಜನರಿಗೆ ದಿಕ್ಕು ದಿಶೆಗಳಿಲ್ಲದೆ ಬಳಲುತ್ತಲಿದ್ದ ಕಡುಬಡವರಿಗೆ ತೋರಿಸಿದ ಪ್ರೇಮ, ನೀಡಿದ ಸಹಕಾರ, ಮಾಡಿದ ಉಪಕಾರ ಗಮನಿಸಿ 1995ರಲ್ಲಿ ಹಿಂದುಳಿದ ಜನಾಂಗದ ಏಳಿಗೆಗೆ ಅವರ ಜಾಗೃತಿಗೆ ಶ್ರಮಿಸಿದ ಮಹನೀಯರಿಗೆ ಮೀಸಲಾಗಿದ್ದ ಒಂದು ಲಕ್ಷ ರೂಪಾಯಿ ಮೌಲ್ಯದ 'ದೇವರಾಜ ಅರಸು ಪ್ರಶಸ್ತಿ' ವಿದ್ಯಾಧರ ಗುರೂಜಿ ಅವರಿಗೆ ಲಭಿಸಿತು. ಈ ಪ್ರಶಸ್ತಿ ತುಂಬ ಪ್ರತಿಷ್ಠಿತ ಪ್ರಶಸ್ತಿ. ಈ ಪ್ರಶಸ್ತಿ ವಿದ್ಯಾಧರ ಗುರೂಜಿ ಅವರಿಗೆ ಲಭಿಸಿದ್ದು ಬಂಗಾರಕ್ಕೆ ಕುಂದಣವಿಟ್ಟಂತಾಯಿತು.



ನಿಜವಾಗಿ ವಿದ್ಯಾಧರ ಗುರೂಜಿ ಅವರು ಮೇಲು ಕೀಳುತನಗಳನ್ನು ತೊಡೆದುಹಾಕಿ ಎಲ್ಲರೊಳೊಂದಾಗಿ ಬೆರೆತು ಬಂದ ಮಹನೀಯರು. ಇವರನ್ನು ಸಮೀಪದಿಂದ ಕಂಡವರು ಜಾತ್ಯಾತೀತ ವ್ಯಕ್ತಿ ಎಂದು ಬಣ್ಣಿಸಿದರು. ಹಾಗೆ ಬಣ್ಣಿಸಿದವರು ಬಸವ ಸಮಿತಿ ಸಂಸ್ಥಾಪಕ ಅಧ್ಯಕ್ಷರಾದ ಬಿ.ಡಿ. ಜತ್ತಿ ಅವರು ಬಿ.ಡಿ. ಜತ್ತಿ ಅವರು ವಿದ್ಯಾಧರ ಗುರೂಜಿ ಅವರನ್ನು 1970ರಲ್ಲಿ ಬಸವ ಸಮಿತಿ ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ಆಯ್ಕೆ ಮಾಡಿದರು. ಇದು ವಿದ್ಯಾಧರ ಗುರೂಜಿ ಅವರಿಗೆ ಸಂದ ಅಪರೂಪದ ಗೌರವವೆಂದು ಹೇಳಬಹುದು.

ಜಾತಿಯನ್ನು ಸುಟ್ಟು ಬೂದಿ ಮಾಡಿ ಗಾಳಿಗೆ ತೂರಿದ ವಿದ್ಯಾಧರ ಗುರೂಜಿ ಅವರ ಸ್ವಭಾವ, ಸಭ್ಯತೆ, ಸತ್ ಪ್ರವೃತ್ತಿ ಗಮನಿಸಿದ ಪ್ರಭುರಾವ ಕಂಬಳಿ ಬಾಬಾ ಬೀದರ ಅವರು ವಿದ್ಯಾಧರ ಗುರೂಜಿ ಅವರ ಆಪ್ತಸ್ನೇಹಿತರು. ಕಂಬಳಿ ಬಾಬಾ ಅವರು ಬೀದರದಲ್ಲಿ 'ಭಾರತ ಶರಣ ಸಮಾಜ' ಸಂಸ್ಥಾಪಕರು ಶ್ರೀಯುತರು ವಿದ್ಯಾಧರ ಗುರೂಜಿ ಅವರನ್ನು 'ಆಧುನಿಕ ಮಡಿವಾಳ ಮಾಚಯ್ಯ' ಎಂದು ಬಾಯ್ತುಂಬ ಕರೆದರಲ್ಲದೆ 1979ರಲ್ಲಿ 'ಜಾತಿ ಭಗ್ನ ವೀರರು' ಎಂಬ ಅಭಿದಾನ್ನವನ್ನಿತ್ತು ಬಸವಣ್ಣನವರ ಕಾರ್ಯಕ್ಷೇತ್ರ ಬಸವ ಕಲ್ಯಾಣದಲ್ಲಿ ಸತ್ಕರಿಸಲಾಯಿತು.

ದಿನಾಂಕ 23.3. 1986ರಂದು ಹೈದರಾಬಾದ್ ನಗರ ಹಿಂದಿ ಪ್ರಚಾರ ಸಭೆಯ ರಜತ ಮಹೋತ್ಸವದ ಅಂಗವಾಗಿ ಹಿಂದಿ ಪ್ರಚಾರ ಕಾರ್ಯದಲ್ಲಿ ಅಮೋಘ ಯೋಗದಾನವನ್ನು ಉಪಲಕ್ಷಿಸಿ ವಿದ್ಯಾಧರ ಗುರೂಜಿ ಅವರಿಗೆ ಅತ್ಯಂತ ವೈಭವದಿಂದ ಸನ್ಮಾನಿಸಲಾಯಿತು.

ದಿನಾಂಕ 8.5.1989ರಂದು ಮಂಡ್ಯ ಜಿಲ್ಲೆಯ ಮಡಿವಾಳ ಮಾಚಿದೇವ ಸಂಘವು ವಿದ್ಯಾಧರ ಗುರೂಜಿ ಅವರನ್ನು ಆತ್ಮೀಯವಾಗಿ ಸನ್ಮಾನಿಸಿ 'ಪ್ರಶಸ್ತಿ ಪತ್ರ' ಸಮರ್ಪಿಸಿತು.

ದಿನಾಂಕ 7.1.1989ರಂದು ವಿದ್ಯಾಧರ ಗುರೂಜಿ ಅವರು ಹಿಂದಿಯಲ್ಲಿ ಬರೆದ ಪುಸ್ತಕಕ್ಕೆ ಗುಲಬರ್ಗಾ ವಿಶ್ವವಿದ್ಯಾಲಯವು ಹಿಂದಿ ವಿಭಾಗದಲ್ಲಿ ರಚನೆಗೊಂಡ ಉತ್ತಮ ಗ್ರಂಥವೆಂದು ಪರಿಗಣಿಸಿ ಬಹುಮಾನ ನೀಡಿ ಗೌರವಿಸಿತು.



ನವಹೆದಲಿಯ ಅಖಿಲ ಭಾರತ ಹಿಂದಿ ಸಂಸ್ಥಾ ಸಂಘವು ದಿನಾಂಕ 26.3.1992ರಲ್ಲಿ ದೀರ್ಘ ಕಾಲದ ಹಿಂದಿ ಪ್ರಚಾರ ಸೇವೆಯನ್ನು ಪರಿಗಣಿಸಿ ಆಗಿನ ಭಾರತದ ಉಪರಾಷ್ಟ್ರಪತಿ ಶ್ರೀಶಂಕರ ದಯಾಳ ಶರ್ಮಾ ಅವರು ತಮ್ಮ ಅಮೃತಹಸ್ತದಿಂದ ಸತ್ಕರಿಸಿದರು. ಈ ಪ್ರಶಸ್ತಿಗೆ ರಾಷ್ಟ್ರದಾದ್ಯಂತದಿಂದ ಕೆಲವೆ ಜನರನ್ನು ಆರಿಸಿಕೊಳ್ಳಲಾಗಿತ್ತು. ಅವರಲ್ಲಿ ವಿದ್ಯಾಧರ ಗುರೂಜಿ ಒಬ್ಬರು.

ಭಾರತ ಛೋಡೋ ಆಂದೋಲನದ ಸುವರ್ಣ ಮಹೋತ್ಸವದ ಅಂಗವಾಗಿ ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಯೋಧರ ಸಂಘವು ದಿನಾಂಕ 12.12.1993ರಂದು ಶ್ರೀ ವಿದ್ಯಾಧರ ಗುರೂಜಿ ಅವರನ್ನು **'ಪ್ರಶಸ್ತಿ ಪತ್ರ', 'ಸ್ಮರಣ ಫಲಕ'** ನೀಡಿ ತುಂಬ ಅದ್ಧೂರಿಯಿಂದ ಸನ್ಮಾನಿಸಲಾಯಿತು.

ಬೀದರ ನಗರದ ಶ್ರೀ ಪ್ರಭುರಾವ ಕಂಬಳಿ ಬಾಬಾ ಅವರ ಸ್ಮರಣಾರ್ಥ ಸ್ಥಾಪಿಸಿರುವ ಪ್ರಥಮ ಪ್ರಶಸ್ತಿಯನ್ನು ಸಮಾಜ ಸೇವಾ ಕ್ಷೇತ್ರದಲ್ಲಿ ಗಣನೀಯ

ಸೇವೆ ಸಲ್ಲಿಸಿದ ವಿದ್ಯಾಧರ ಗುರೂಜಿ ಅವರಿಗೆ ದಿ. 1.11.1995 ರಾಜ್ಯೋತ್ಸವದಂದು ಪ್ರದಾನ ಮಾಡಲಾಯಿತು.


ಹೈದರಾಬಾದ್ ಹಿಂದಿ ಪ್ರಚಾರ ಸಭೆಯು 11.9.1996 ರಂದು ವಿದ್ಯಾಧರ ಗುರೂಜಿ ಅವರಿಗೆ **"ಸಾಹಿತ್ಯ ವಿಭೂಷಣ"** ಎಂಬ ಪ್ರಶಸ್ತಿಯನ್ನು ನೀಡಿ ಆತ್ಮೀಯವಾಗಿ ಗೌರವಿಸಿತು.

ದಿನಾಂಕ 23.11.1996ರಂದು ಗುಲಬರ್ಗಾದಲ್ಲಿ ನಡೆದ ಭಾವೈಕ್ಯತಾ ಸಮ್ಮೇಳನದಲ್ಲಿ ಶ್ರೀ ವಿದ್ಯಾಧರ ಗುರೂಜಿ ಅವರನ್ನು ಶಾಲು ಹೊದಿಸಿ ಸನ್ಮಾನಿಸಲಾಯಿತು. 1996 ಡಿಶೆಂಬರ್ 23 ರಿಂದ 25ರವರೆಗೆ ನಡೆದ ಹೈದರಾಬಾದ್ ಹಿಂದಿ ಪ್ರಚಾರ ಸಭಾ ವಜ್ರಮಹೋತ್ಸವ ಸಮಾರಂಭದಲ್ಲಿ ವಿಶೇಷ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಅಂಗವಾಗಿ ದಿನಾಂಕ 4.9.1997 ರಂದು ಹತ್ತು ಸಾವಿರ ರೂಪಾಯಿ ನಗದು ಹಮ್ಮಿಣಿ ನೀಡುವುದರ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೋಸ್ಕರವಾಗಿ ಸನ್ಮಾನಿಸಲಾಯಿತು.

ಇದೇ ರೀತಿ ಶ್ರೀರಂಗಪಟ್ಟಣ ತಾಲೂಕ, ತಾಲೂಕ ಮಡಿವಾಳ ಮಾಚಿದೇವ ಸಂಘವ 1.4.1999 ರಂದು ಪ್ರಶಸ್ತಿ ಪತ್ರವನ್ನು ಪ್ರದಾನ ಮಾಡಿ ಆತ್ಮೀಯವಾಗಿ ಸನ್ಮಾನಿಸಿತು.

ಸಾರಾಂಶ



ಗುರುಮಠಕಲ್ಲ ಒಂದು ಐತಿಹಾಸಿಕ ಸ್ಥಳ. ಧಾರ್ಮಿಕ ನೆಲೆವೀಡು. ಕೈಗಾರಿಕಾ ಕೇಂದ್ರ ಒಕ್ಕಲುತನಕ್ಕೆ ಪ್ರಸಿದ್ಧವಾದುದು. ಈ ಗ್ರಾಮದ ದೋಬಿ ಸಮಾಜದ ಬಡಕುಟುಂಬದಲ್ಲಿ ಹುಟ್ಟಿ ಬಂದ ಭಿಕ್ಷಪ್ಪ ವಿದ್ಯಾಧರ ಎಂದು ನಾಮಕರಣಗೊಂಡ ವ್ಯಕ್ತಿ. ನೂರು ತುಂಬಿದ ಸ್ವಾತಂತ್ರ್ಯ ಹೋರಾಟಗಾರ. ಶಿಕ್ಷಣ, ಸಾಕ್ಷರತೆಯ ರೂವಾರಿ. ಅಸ್ಪೃಶ್ಯತಾ ನಿವಾರಣೆಯ ಹರಿಕಾರ. ಜಾತೀಯತೆಯ ಬೀಜ ಹುರಿದು ಬೂದಿ ಮಾಡಿದ ಮಾಂತ್ರಿಕ.

ವಿದ್ಯಾರ್ಥಿ ದಿಸೆಯಲ್ಲಿಯೇ ಭಗತ್‌ಸಿಂಗ್, ಸುಖದೇವ, ರಾಜಗುರು ತರುಣ ವೀರರನ್ನು ಹಿಡಿದು ಗಲ್ಲಿಗೇರಿಸಿದ ಕರಾಳ ಸುದ್ದಿ ಕೇಳಿ ದಿಗ್ಭ್ರಮೆಗೊಂಡು ತರುಣ ಮಿತ್ರರನ್ನು ಸಂಘಟಿಸಿ ಗುರುಮಠ ಗ್ರಾಮದಲ್ಲಿ ದೊಡ್ಡ ಮೆರವಣಿಗೆಯನ್ನು ಹೊರಡಿಸಿ ಜನಜಾಗೃತಗೊಳಿಸಿದರು.



ಬ್ರಿಟಿಷ್ ಸರಕಾರದ ವಿರುದ್ಧ ಕೂಗಿದ ಘೋಷಣೆ ಕೇಳಿ ಹೈದರಾಬಾದ್ ನಿಜಾಂ ಸರಕಾರದ ಆದೇಶದಂತೆ ಇವನನ್ನು ಶಾಲೆಯಿಂದ ಶಾಶ್ವತವಾಗಿ ಹೊರಗೆ ಹಾಕಲಾಯಿತು. ತಾಲೂಕ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಿ ನಾಬಾಲಕನೆಂದು ಹೊರಬಂದರು.

ಈ ವಿಚಾರಣೆಯೇ ತರುಣ ಭಿಕ್ಷಪ್ಪನಿಗೆ ರಾಷ್ಟ್ರದ ವಿಮೋಚನೆಯ ದೀಕ್ಷೆಯಾಯಿತು. ಶಾಲೆ ಕಲಿಯಬೇಕೆಂಬ ಕುತೂಹಲವಿದ್ದರೂ ತಮ್ಮನ್ನು ಶಾಲೆಯಿಂದ ಕಡ್ಡಾಯವಾಗಿ ಹೊರ ಹಾಕಿದ ನಿಜಾಂ ಸರಕಾರಕ್ಕೂ ಧಿಕ್ಕಾರ ಹಾಕುತ್ತ ಜನ ಜಾಗೃತಿಗಾಗಿ ಊರೂರು ಅಲೆಯತೊಡಗಿದ. ಈ ಸಮಯದಲ್ಲಿ ಮಧ್ಯ ಉತ್ತರ ಭಾರತದ ಹರಿದ್ವಾರದ ಆರ್ಯ ಸಮಾಜದ ಪ್ರಚಾರಕರಾಗಿ ಶ್ರೀ ಸ್ವಾಮಿ ರಾಮಗಿರಿಜಿ ಅವರು ಗುರುಮಠಕಲ್ಲ ಗ್ರಾಮಕ್ಕೆ ಬಂದರು. ಬಹಳ ಸುದೈವದಿಂದ ಅವರ ಪರಿಚಯ ಇವರಿಗಾಯಿತು. ಅವರಿಂದ ರಾಜಕೀಯ ಸ್ವಧರ್ಮ ದೀಕ್ಷೆ ಪಡೆದು "ವಶಿಷ್ಠ ಕುಲೋತ್ಪನ್ನ ಪುತ್ರ ವಿದ್ಯಾಧರ" ಎಂದು ನಾಮಕರಣ ಹೊಂದಿ ಕುಲದ ಕಲಂಕವನ್ನು ತೊಳೆದುಕೊಂಡರು. 'ಆರ್ಯ ಸಮಾಜ'ದ ನಿಷ್ಠಾವಂತ ಕಾರ್ಯಕರ್ತರಾಗಿ ವಿದ್ಯಾಧರ ಎಂದು ಎಲ್ಲ ಕಡೆಗೂ ಗುರುತಿಸಿಕೊಂಡರು.

ಈ ಸಂದರ್ಭದಲ್ಲಿ ಪಂಡಿತ ನರೇಂದ್ರಜಿ, ವಿನಾಯಕರಾವ ವಿದ್ಯಾಲಂಕಾರ ನಾರಾಯಣಲಾಲ ಪಿತ್ತಿ ಮುಂತಾದ ಘಟಾನುಘಟಿಗಳ ಪರಿಚಯವಾಯಿತು. ಪ್ರಚಂಡ ಹೋರಾಟಗಾರ ಶೂರ ಸುಭಾಶ್‌ಚಂದ್ರ ಬೋಸ, ವೀರ ಸಾವರಕರ ಹೆಸರನ್ನು ಕೇಳಿದರು. ಅವರ ಕಾರ್ಯ ಚಟುವಟಿಕೆಗಳನ್ನು ಗಮನಿಸಿದರು. 1937ನೆಯ ಇಸವಿ ಶೂರ ಸುಭಾಶ್ಚಂದ್ರ ಬೋಸರು ಮದರಾಸಿನಿಂದ ಮುಂಬೈಗೆ ಹೋಗುತ್ತಿದ್ದಾರೆಂದು ಸಮೀಪ ವಲಯದಿಂದ ತಿಳಿದುಕೊಂಡರು. ಗೆಳೆಯರ ಗುಂಪು ಕಟ್ಟಿಕೊಂಡು ಗುರುಮಠಕಲ್ಲ ಗ್ರಾಮದಿಂದ ಕಾಲು ನಡಿಗೆಯಿಂದಲೇ ಯಾದಗಿರಿಗೆ ಆಗಮಿಸಿ ಯಾದಗಿರಿ ರೈಲುನಿಲ್ದಾಣದಲ್ಲಿ ಸುಭಾಶ್ಚಂದ್ರ ಬೋಸರ ದರ್ಶನ ಲಾಭ ಇವರಿಗೆ ಆಯಿತು. ಈಗ 'ವಿದ್ಯಾಧರ' ಅವರಿಗೆ ಸೋಲಾಪುರದಲ್ಲಿ ನಡೆದ ಐತಿಹಾಸಿಕ ಅಧಿವೇಶನ ಇವರಿಗೆ ರಾಷ್ಟ್ರೀಯ ಚಳವಳಿಯಲ್ಲಿ ಧುಮುಕಲು ಮತ್ತಷ್ಟು ಪ್ರೇರಣೆ ನೀಡಿತು.

ಆರ್ಯ ಸಮಾಜದ ಧುರೀಣ ಭಾಯಿ ಶ್ರೀ ಬನ್ಸಿಲಾಲರ ಸಲಹೆ ಮೇರೆಗೆ 1938ರಲ್ಲಿಯೇ ಪರಿಶುದ್ಧ ಹಿಂದಿಭಾಷೆಯನ್ನು ಕಲಿಯಲು ಇಂದು ಪಾಕಿಸ್ತಾನದಲ್ಲಿರುವ ಲಾಹೋರಿಗೆ ಹೋದರು. ಅಲ್ಲಿಯ ಗುರುದತ್ತ ಭವನ ಉಪದೇಶಕರ ಮಹಾವಿದ್ಯಾಲಯದಲ್ಲಿ 3–4 ವರ್ಷಗಳವರೆಗೆ ಇದ್ದು ಶಿಕ್ಷಣ ಪಡೆದು ಹಿಂದಿ ಭಾಷೆಯಲ್ಲಿ ಸ್ನಾತಕ ಪದವಿ, ಜೊತೆಗೆ 'ಶಾಸ್ತ್ರಿ'ಯ ಪದವಿಯನ್ನು ಪಡೆದು ಯಾದಗಿರಿಗೆ ಹಿಂದಿರುಗಿದರು. ಈ ಪ್ರಶಸ್ತಿಗಳು ಎಂ.ಎ., ಪಿ.ಎಚ್‌ಡಿ ಸಮಾನವೆಂದು ಹೇಳುತ್ತಾರೆ.

ಆಗ 1942 ಭಾರತ ಬಿಟ್ಟು ತೊಲಗಿ ಚಳವಳಿಗೆ ಕಾವು ಏರಿತ್ತು. ಅಷ್ಟರಲ್ಲಿ ಇವರಿಗೆ ವಿದ್ವತ್ತಿನ ಬಲ ಬಂದಿತ್ತು. ತಾರುಣ್ಯ ತುಂಬಿ ತುಳುಕುತ್ತಿತ್ತು. ಹೃದಯದಲ್ಲಿದ್ದ ಸ್ವಾಭಿಮಾನ ಪ್ರಕಾಶಮಾನವಾಗಿ ಪ್ರಜ್ವಲಿಸುತ್ತಿತ್ತು. ಮಗ ಹೀಗೆ ಅಡ್ಡಾಡುತ್ತಾನೆ. ಅವನ ಕೊರಳಿಗೆ ಕುಣಿಕೆ ಹಾಕಿದರೆ ದಾರಿಗೆ ಬರಬಹುದೆಂದು ತಂದೆ ಸಾಯಣ್ಣ –ಭೀಮಕ್ಕ ತಾಯಿ ಇಬ್ಬರು ಕೂಡಿ 'ವಿದ್ಯಾಧರ'ಗೆ ಮದುವೆ ಮಾಡಲು ಓಡಾಡತೊಡಗಿದರು. ಸುದ್ದಿ ತಿಳಿದ 'ವಿದ್ಯಾಧರ' "ನಾನು ದೇಶಕ್ಕೆ ಸ್ವಾತಂತ್ರ್ಯ ದೊರಕುವತನಕ ಮದುವೆ ಮಾಡಿಕೊಳ್ಳುವುದಿಲ್ಲ" ಎಂದು ತಾಯಿ–ತಂದೆಗಳಿಬ್ಬರಿಗೂ ನಮಸ್ಕರಿಸಿ ಉಗ್ರ ರೂಪ ಪಡೆದುಕೊಳ್ಳುತ್ತಲಿದ್ದ ಚಲೇಜಾವ ಚಳುವಳಿಯಲ್ಲಿ ಧುಮುಕಿ ಮನೆಮಾರುಗಳನ್ನು ಸಂಪೂರ್ಣ ತೊರೆದು ಹೋರಾಟದ ಕಣಕ್ಕಿಳಿಸಿದರು.

ನಿಜಾಮಪ್ರಾಂತ ಸರಕಾರವು ಎಷ್ಟೇ ಪ್ರತಿಬಂಧಕ ಹೇರಿದರೂ ತರುಣ ವೀರ 'ವಿದ್ಯಾಧರ' ತನ್ನ ಹಿಂದಿ ಭಾಷೆಯ ವಿದ್ಯಾರ್ಥಿಗಳೊಂದಿಗೆ ಹೈದರಾಬಾದ್ ನಿಜಾಮರ ವಿರುದ್ಧವೂ ಬ್ರಿಟಿಷ್ ಸರಕಾರದ ವಿರುದ್ಧವೂ ಘೋಷಣೆಗಳನ್ನು ಹಾಕುತ್ತ ಉಗ್ರ ಚಳುವಳಿ ಪ್ರಾರಂಭಿಸಿದ ಜೈಲಿಗೂ ಹೆದರಲಿಲ್ಲ. ಬಯಲಿಗೂ ಹೆದರಲಿಲ್ಲ. ಯಾದಗಿರಿ ಮಾರವಾಡಿ ಧರ್ಮಶಾಲೆಯಲ್ಲಿ ಇವರ ವಾಸ. ಯಾರಾದರೂ ಕರೆದು ಮಾಡಿಸಿದರೆ ಊಟ, ಇಲ್ಲವೆ ಉಪವಾಸ.

ಹೈದರಾಬಾದ್ ಹಿಂದಿ ಪ್ರಚಾರಸಭಾ ನಡೆಸುತ್ತಿದ್ದ ಹಿಂದಿ ಪರೀಕ್ಷೆಗಳ ಕೇಂದ್ರ ಯಾದಗಿರಿಯಲ್ಲಿ ಪ್ರಾರಂಭಿಸಿದರು. ಹಿಂದಿ ಭಾಷೆಯ ಪ್ರಚಾರ, ಪ್ರಸಾರಕ್ಕಾಗಿ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಪ್ರೋತ್ಸಾಹಿಸಿ ಹಿಂದಿ

ಭಾಷಾ ಪರೀಕ್ಷೆಗೆ ಕೂಡ್ರಿಸಿದರು. ಆರ್ಯಸಮಾಜದ ಸಂಸ್ಕಾರ, ಹಿಂದಿ ಭಾಷೆಯಲ್ಲಿ 'ಸ್ನಾತ ಕೋತ್ತರ' 'ಶಾಸ್ತ್ರಿ' ಪದವಿ ಪಡೆದುಕೊಂಡು ಬಂದ 'ವಿದ್ಯಾಧರ'ರು ಹಿಂದಿ ಭಾಷೆಯ ಸಮರ್ಥ ಬೋಧಕರೆನಿಸಿಕೊಂಡರು. ಇವರ ಪ್ರತಿಭೆ, ಪಾಂಡಿತ್ಯ, ಸಭ್ಯತೆ-ಸರಳತೆ, ಸೌಜನ್ಯತೆ – ಸೌಹಾರ್ದತೆ ಅರಿತುಕೊಂಡ ವಿದ್ಯಾರ್ಥಿಗಳು ಇವರನ್ನು ಅತ್ಯಂತ ಪ್ರೀತಿಯಿಂದ 'ಗುರೂಜಿ' ಎಂದು ಕರೆಯತೊಡಗಿದರು. ವಿದ್ಯಾರ್ಥಿಗಳು ಪ್ರೀತಿಯಿಂದ ಕರೆದ 'ಗುರೂಜಿ' ಪದವಿ 'ವಿದ್ಯಾಧರ' ಅವರ ಹೆಸರಿಗೆ ಬಂಗಾರಕ್ಕೆ ಕುಂದಣವಿಟ್ಟಂತಾಯಿತು. ಈಗ "ವಿದ್ಯಾಧರ ಗುರೂಜಿ" ಎಂಬ ಹೆಸರು ಸ್ವಾತಂತ್ರ್ಯ ಚಳುವಳಿ, ಹೈದರಾಬಾದ್ ಸಂಸ್ಥಾನ ವಿಮೋಚನೆಯ ಉದ್ದಕ್ಕೂ ಪಸರಿಸಿ ಓರ್ವ ಸಾಂಸ್ಕೃತಿಕ ಸಾತ್ವಿಕ ವ್ಯಕ್ತಿಯಾಗಿ ಕಂಗೊಳಿಸತೊಡಗಿದರು.

ಹೈದರಾಬಾದ್ ಪ್ರಾಂತೀಯ ನಾಲ್ಕನೆಯ ಆರ್ಯ ಸಮಾಜದ ಸಮ್ಮೇಳನ 1945ರಲ್ಲಿ ಗುಲಬರ್ಗಾ ನಗರದಲ್ಲಿ ನಡೆಸಲು ನಿರ್ಧರಿಸಲಾಗಿತ್ತು. ಅಷ್ಟರಲ್ಲಿ ಸ್ಥಾಪಿಸಿದ "ಇತ್ತೇಹಾದ' ಸಂಸ್ಥೆ ಅಸ್ತಿತ್ವಕ್ಕೆ ಬಂದು ರಜಾಕಾರ ಗುಂಪು ಎಂದು ಹಿಂದುಗಳ ಮೇಲೆ ಭಯ ಹಾಕತೊಡಗಿತ್ತು. ಗುಲಬರ್ಗಾ ನಗರದಲ್ಲಿ ನಡೆಯುವ ಈ ಐತಿಹಾಸಿಕ ಸಮಾವೇಶಕ್ಕೆ ಅಡ್ಡಿಮಾಡುವ ಅಂಜಿಕೆಯನ್ನು ಹಾಕಿತ್ತು. ಹಿಂದುಗಳಲ್ಲಿ ಈ ಸಮಾವೇಶ ಮಾಡುವ ಛಲವೂ ಮೂಡಿತ್ತು. ಗುರೂಜಿ ಅವರು ಈ ಸಮಾವೇಶಕ್ಕೆ ನಾಲ್ವತ್ತು ಜನ ಶಿಸ್ತಿನ ಸಿಪಾಯಿಗಳಂತೆ ಇದ್ದ ವಿದ್ಯಾರ್ಥಿಗಳನ್ನು ಕರೆದುಕೊಂಡು ಬಂದಿದ್ದರು. ಇವರ ಜೊತೆಗೆ ಆರ್ಯ ಸಮಾಜದ ಧುರೀಣ. ಈಶ್ವರಲಾಲ ಭಟ್ಟದ ಅವರು ತಮ್ಮ ಧರ್ಮಪತ್ನಿ ಸಮೇತ ಆಗಮಿಸಿದ್ದರು. ನಿರೀಕ್ಷಿಸಿದಂತೆ ಈ ಸಮಾವಶದಲ್ಲಿ ರಜಾಕಾರರ ಧಾಳಿ ಪ್ರಾರಂಭವಾಯಿತು. ಈ ಸಮಯದಲ್ಲಿ ಲಾತೂರು ಜಿಲ್ಲೆ ನಿಲಂಗಾ ಗ್ರಾಮದ ಶೇಷರಾವ ವಾಘ್ಮಾರೆ, ವಿದ್ಯಾಧರ ಗುರೂಜಿ ಅವರು ತೋರಿದ ಧೈರ್ಯ ಮಾಡಿದ ಸಾಹಸ ತಳೆದ ಚಾಣಾಕ್ಷತನ ಸಮಾವೇಶಕ್ಕೆ ಆಗಮಿಸಿದ ಜನರು ಸಜ್ಜನರನ್ನು ನೋಡಿ ಬೆರಗಾಗಿ ಬೆರಳು ಕಚ್ಚಿಕೊಂಡರು.

ಮುಂದೆ 1946ರಲ್ಲಿ ಸರಕಾರದ ವಿರುದ್ಧ ಜನರನ್ನು ಎತ್ತಿ ಕಟ್ಟುತ್ತಾರೆಂದು ಇವರ ಮೇಲೆ ವಾರೆಂಟ್ ಜಾರಿಯಾಯಿತು. ಈ ವಾರೆಂಟ್‌ದಲ್ಲಿ ಅವರು

ಜೀವಂತ ಇದ್ದರೂ ಹಿಡಿದುತನ್ನಿ. ಒಂದು ವೇಳೆ ಜೀವಂತ ಇರದಿದ್ದರೂ ಹಿಡಿದು ತನ್ನಿ ಎಂದು ಉಲ್ಲೇಖಿಸಲಾಗಿತ್ತು. ಗುರೂಜಿ ಅವರು ಈ ಸುದ್ದಿ ಕೇಳಿ ರುದ್ರಣ್ಣ ಎಂಬ ವಿದ್ಯಾರ್ಥಿಯನ್ನು ತಮ್ಮ ಜತೆಗೆ ಕರೆದುಕೊಂಡು ಆರ್ಯಸಮಾಜ ಪ್ರಬಲ ಸಂಘಟನೆ ಇದ್ದ ಸೋಲಾಪುರಕ್ಕೆ ಬಂದುಬಿಟ್ಟರು.

ಪೋಲಿಸರ ಕಣ್ಣುತಪ್ಪಿಸಿ ಸೋಲಾಪುರಕ್ಕೆ ಆಗಮಿಸಿದ್ದ ಗುರೂಜಿ ಅವರು ತಣ್ಣಗೆ ಕೂಡ್ರುವಂತಿರಲಿಲ್ಲ. ತಮ್ಮಕ್ಕಿಂತಲೂ ಮೊದಲೇ ಆಗಮಿಸಿದ್ದ ವಲಸೆ ಬಂದ ಜನರ ವ್ಯವಸ್ಥೆಗಾಗಿ 'ನಿರ್ವಾಸಿತ ಸೇವಾಸಮಿತಿ' ಸ್ಥಾಪನೆ ಮಾಡಿ ವಲಸೆ ಬಂದ ಜನರ ರಕ್ಷಣೆ ಟೊಂಕಕಟ್ಟಿ ನಿಂತುಕೊಂಡರು.

15ನೇ ಆಗಸ್ಟ್ 1947 ಭಾರತದೇಶಕ್ಕೆ ಸ್ವಾತಂತ್ರ್ಯ ಲಭಿಸಿತು. ಆದರೆ ನಿಜಾಮರ ದಬ್ಬಾಳಿಕೆಯಿಂದ ಹೈದರಾಬಾದ್ ಸಂಸ್ಥಾನ ವಿಮೋಚನೆಗೊಳ್ಳಲಿಲ್ಲ. ಹೈದರಾಬಾದ್ ವಿಮೋಚನೆಗಾಗಿ ಸ್ವಾತಂತ್ರ್ಯ ಯೋಧರು ತಮ್ಮ ಪ್ರಾಣವನ್ನು ಪಣಕ್ಕೆ ಇಟ್ಟು ಹೋರಾಟ ಮಾಡಿದರು. 1948 ಸೆಪ್ಟೆಂಬರ್ ಹದಿನೇಳರಂದು ವಿಮೋಚನೆಗೊಂಡಿತು. ಹೈದರಾಬಾದ್ ಸಂಸ್ಥಾನ ವಿಮೋಚನೆಯ ನಂತರ ಸೋಲಾಪುರಕ್ಕೆ ವಲಸೆ ಹೋಗಿದ್ದ ಅಸಂಖ್ಯಾತ ನಿರಾಶ್ರಿತರ ಜೊತೆಯಲ್ಲಿ ವಿದ್ಯಾರ್ಥಿ ಗುರೂಜಿ ಅವರು ಯಾದಗಿರಿ ರೈಲು ನಿಲ್ದಾಣದಲ್ಲಿ ಬಂದು ಇಳಿದರು. ಅಂದು ರೈಲು ನಿಲ್ದಾಣದಲ್ಲಿ ಗುರೂಜಿ ಅವರಿಗೆ ಭವ್ಯ ಸ್ವಾಗತ ನೀಡಿ ಬರಮಾಡಿಕೊಂಡರು. ಅಂದಿನ ಅಭಿಮಾನಿಗಳ ಜೈಕಾರ ಮುಗಿಲು ಮುಟ್ಟಿತ್ತು. ಅಂದು ಗುರೂಜಿ ಅವರು ರಾಷ್ಟ್ರ ನಾಯಕರ ಸಾಲಿನಲ್ಲಿ ಕಂಗೊಳಿಸುತ್ತಿದ್ದರು.

ಯಾದಗಿರಿಗೆ ಬರುವುದೊಂದೇ ತಡ ಮಕ್ಕಳಿಗೆ ಶಿಕ್ಷಣ ನೀಡಲು ಶಾಲೆಗಳನ್ನು ಪ್ರಾರಂಭಿಸಿದರು. ಅವರಿಗಾಗಿ "ಬ್ಯಾಕ್ವರ್ಡ್ ಕ್ಲಾಸ್ ಹಾಸ್ಟೆಲ್" ತೆರೆದರು. ಹೀಗೆ ಮಕ್ಕಳು ಸರ್ವಾಂಗ ಸುಂದರವಾಗಿ ಬೆಳೆಯಲು ಅನುಕೂಲ ಮಾಡಿಕೊಟ್ಟರು.

ಮುಂದೆ ಕೋಲೂರು ಮಲ್ಲಪ್ಪನವರಿಗೂ ತಮಗೂ ತುಸು ವೈಮನಸ್ಸು ಬರುತ್ತಲೇ ಕಾಂಗ್ರೆಸ್ ಪಕ್ಷ ಬಿಟ್ಟು ಸ್ವತಂತ್ರ ಪಕ್ಷಕ್ಕೆ ಬಂದರು. ಆಗ "ಬ್ಯಾಕ್ವರ್ಡ್ ಕ್ಲಾಸ್ ಹಾಸ್ಟೆಲ್" ಬಿಟ್ಟು ಬಂದು ತಾವು "ಗಾಂಧಿ ಜನರಲ್ ಹಾಸ್ಟೆಲ್"



ಪ್ರಾರಂಭಿಸಿದರು. 62ರಲ್ಲಿ ವಿಧಾನಸಭೆ ಸದಸ್ಯರಾಗಿ 'ಗಾಂಧಿ ಜನರಲ್ ಹಾಸ್ಟೆಲ್'ನ ಬಲಪಡಿಸಿದರು.

1949 ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾಗಿ ಹೈದರಾಬಾದ್ ರಾಜ್ಯದ ಸುಧಾರಣಾ ಸಮಿತಿಯ ಸದಸ್ಯರಾಗಿಯೂ ಆಗಿನ ಹೈದರಾಬಾದ್ ರಾಜ್ಯದ ಮುಖ್ಯಮಂತ್ರಿಗಳಾದ ಬಿ. ರಾಮಕಿಶನ್ ರಾವ್ ಅಂದಿನ 'ಹೈದರಾಬಾದ ಪ್ರಾಂತ ಸುಧಾರಣಾ ಪ್ರಾಧಿಕಾರ"ಕ್ಕೆ ನೇಮಕ ಮಾಡಿದರು. 1952ರಲ್ಲಿ ಪ್ರಥಮ ಸಾರ್ವತ್ರಿಕ ಚುನಾವಣೆ ಬರುವುದರೊಳಗೆ ಇವರು ಗುಲಬರ್ಗಾ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಚಾರ ಕಾರ್ಯದರ್ಶಿಗಳಾಗಿ ಪದೋನ್ನತಿ ಪಡೆದರು. 1954ರಲ್ಲಿ ಮದುವೆ ಮಾಡಿಕೊಂಡು ಬಾಳ ನೊಗಕ್ಕೆ ಹೆಗಲು ಕೊಟ್ಟರು. ಕಾಂಗ್ರೆಸ್ ಪಕ್ಷಕ್ಕೆ ಶರಣು ಹೊಡೆದರು. 1962 ಎರಡನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಗುರುಮಠಕಲ್ಲ ಮತಕ್ಷೇತ್ರದಿಂದ ಸ್ವತಂತ್ರ ಪಕ್ಷದ ಅಭ್ಯರ್ಥಿಯಾಗಿ ಚುನಾವಣೆಯ ಕಣಕ್ಕಿಳಿದರು. ಕಾಂಗ್ರೆಸ್ ಪಾರ್ಟಿಯ ಜನಪ್ರಿಯ ಅಭ್ಯರ್ಥಿ ಕೋಲೂರು ಮಲ್ಲಪ್ಪನವರನ್ನು ಸೋಲಿಸಿ ವಿಜಯ ಸಂಪಾದಿಸಿದರು. ವಿಶ್ವನಾಥರೆಡ್ಡಿ ಮುದ್ನಾಳ್ ಅವರೊಡನೆ ಕೂಡಿ ಅಸ್ಪೃಶ್ಯತಾ ನಿವಾರಣೆ ಬೃಹತ್ ಪ್ರಮಾಣದ ಆಂದೋಲ ಏರ್ಪಡಿಸಿ ಜಾತೀಯತೆಯ ಬೀಜವನ್ನು ಹುರಿದು ಹಾಕಲು ಪ್ರಯತ್ನಿಸಿದರು.

1984ರಲ್ಲಿ ಜನತಾ ಪಕ್ಷದ ಅಭ್ಯರ್ಥಿಯಾಗಿ ಲೋಕಸಭೆಗೆ ಸ್ಪರ್ಧಿಸಿದರು. 1988ರಲ್ಲಿ ವಿಧಾನ ಪರಿಷತ್ತಿನ ಸದಸ್ಯರೆಂದು ಆಯ್ಕೆಯಾಗಿ ಆರು ವರ್ಷ ತುಂಬ ಉಪಯುಕ್ತ ಸೇವೆ ಸಲ್ಲಿಸಿ ಮನುಕುಲದ ಮಾಂತ್ರಿಕರೆಂದು ಗೌರವಿಸಲ್ಪಟ್ಟರು.

ಕರ್ನಾಟಕದಲ್ಲಿ ಜನತಾ ಪಕ್ಷದ ಆಳ್ವಿಕೆ ಮುಂದುವರಿದಾಗ ಎರಡನೆಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿ, ಲೋಕೋಪಯೋಗಿ ಇಲಾಖೆಯ ಕಿರಿಯ ಅಭಿಯಂತರನ್ನು ಆರಿಸುವ ಆಯ್ಕೆ ಸಮಿತಿಯ ಸದಸ್ಯರಾಗಿ, ಜನತಾ ಪಕ್ಷದ ಉಪಾಧ್ಯಕ್ಷರಾಗಿ ಉತ್ತಮ ಸೇವೆ ಸಲ್ಲಿಸಿ ಜನಾನುರಾಗಿ ನಾಯಕರೆಂದು ಹೆಸರು ಗಳಿಸಿದರು. ಹೀಗೆ ಸತತ ಆರು-ಆರುವರೆ ದಶಕಗಳಿಂದಲೂ ಶ್ರುತಿ ಇಟ್ಟ ವೀಣೆಯಂತೆ ಸೇವೆ ಸಲ್ಲಿಸಿದ ವಿದ್ಯಾಧರ ಗುರೂಜಿ ಅವರಿಗೆ 1995ರಲ್ಲಿ ದೇವರಾಜ ಅರಸು ಪ್ರಶಸ್ತಿ

ನೀಡಿ ಕರ್ನಾಟಕ ಸರಕಾರ ಇವರನ್ನು ಗೌರವಿಸಿತು. ಆಗ ಇವರು ಭಾರತದ ಭೀಷ್ಮನಂತೆ ಕಂಗೊಳಿಸುತ್ತಿದ್ದರು.

ಇಂತಹ ಉನ್ನತ ತತ್ವ, ಆದರ್ಶ ಸತ್ವವನ್ನು ಒಳಗೊಂಡ ವಿದ್ಯಾಧರ ಗುರೂಜಿ ಅವರಿಗೆ ಹಿಂದೂ ಪಂಚಾಂಗದ ಪ್ರಕಾರ 2012 ಡಿಸೆಂಬರ್ 30ಕ್ಕೆ ಸಂಪೂರ್ಣ ನೂರು ವರ್ಷಗಳು ತುಂಬುತ್ತಲಿವೆ. ಈ ಸಂದರ್ಭದಲ್ಲಿ ಅವರಿಗೆ ಶತಮಾನೋತ್ಸವ ಹಾಗೂ ತುಲಾಭಾರ ಕಾರ್ಯಕ್ರಮವನ್ನು ಏರ್ಪಡಿಸಿ ಅವರಿಗೆ ಇನ್ನೂ ಹೆಚ್ಚಿನ ಆಯುಷ್ಯವನ್ನು, ಆರೋಗ್ಯ ಭಾಗ್ಯವನ್ನು ನೀಡಿ ಕಾಪಾಡಲಿ ಎಂದು ಪರಮದಯಾಳು ಪರಮಾತ್ಮನಲ್ಲಿ ಪ್ರಾರ್ಥಿಸಿ ಸ್ವಾತಂತ್ರ್ಯ ಹೋರಾಟಗಾರ ವಿದ್ಯಾಧರ ಗುರೂಜಿ ಎಂಬ ಕೃತಿಯನ್ನು ಕನ್ನಡಿಗರ ಕೈಗೆ ಕೊಟ್ಟು ನಮಸ್ಕರಿಸಲು ಸಂತೋಷವೆನಿಸುತ್ತದೆ.

ಗುರೂಜಿ ಸ್ಮೃತಿಪಟಲದಿಂದ

ಕುಶಾಲ ಚಂದ ಕುರುಸಂದ



ಕುಶಾಲಚಂದ ಕುರುಸಂದ ಅವರು ಪಂಜಾಬದ ಆರ್ಯ ಸಮಾಜದ ಪ್ರತಿನಿಧಿ ಸಭಾ ಅಧ್ಯಕ್ಷರು. ಅಪ್ಪಟ ದೇಶ ಭಕ್ತ ಸಂನ್ಯಾಸಿಗಳು. ಇವರು ಸಂನ್ಯಾಸ ಧರ್ಮವನ್ನು ಸ್ವೀಕರಿಸಿದ ಮೇಲೆ ಇವರಿಗೆ "ಮಹಾತ್ಮಾ ಆನಂದ ಸ್ವಾಮಿ" ಎಂದು ಕರೆಯತೊಡಗಿದರು.

ಲಾತೂರು ನಿವಾಸಿ ಖಾಸಿಂ ರಜವಿ "ಇತ್ತೇಹಾದ" ಸಂಘ ಕಟ್ಟಿಕೊಂಡು ನಿಜಾಂ ಪ್ರಾಂತದ ಹಿಂದುಗಳ ಮೇಲೆ ನಡೆಸಿದ ಅನ್ಯಾಯ, ಅತ್ಯಾಚಾರ, ಕ್ರೂರಹಿಂಸೆಯಿಂದ ಉಸ್ಮಾನಾಬಾದ ಬೀದರ, ಗುಲಬರ್ಗಾ, ರಾಯಚೂರು ಜಿಲ್ಲೆಯ ಜನರು ಜೀವ ಕೈಯಲ್ಲಿ ಹಿಡಿದುಕೊಂಡು ಓಡಾಡುತ್ತಿದ್ದರು. ಅದು 1948 ನೆಯ ಇಸ್ವಿ.

ವಿದ್ಯಾಧರ ಗುರೂಜಿ ಅವರು ಸೋಲಾಪುರದಲ್ಲಿ ನಿರ್ವಾಸಿತ ಸೇವಾ ಸಮಿತಿ ರಚಿಸಿ ಜನರ ರಕ್ಷಣೆಗೆ ನಿಂತಾಗ ಪ್ರತಿ ತಿಂಗಳು ಮೂರು ಸಾವಿರ ರೂ. ಕಳಿಸಿಕೊಟ್ಟು ನಿರಾಶ್ರಿತರಿಗೆ ನೆರವಾದರು.

1948 ಸೆಪ್ಟೆಂಬರ್ 17, 18 ರಂದು ನಿಜಾಂರು ಸರದಾರ್ ವಲ್ಲಭ ಭಾಯಿ ಪಟೇಲರಿಗೆ ಶರಣಾಗತರಾಗುವ ತನಕ ಆನಂದಸ್ವಾಮಿ ಈ ಭಾಗದ ಜನರ ಜೀವ ಉಳಿಸುವುದಕ್ಕೆ ಅಹೋರಾತ್ರಿ ಹೋರಾಡಿದರು. ಈ ಭಾಗದ ಸ್ಥಿತಿ-ಗತಿಯನ್ನು ಚೆನ್ನಾಗಿ ಅರಿತು ಆಗ ಗೃಹ ಮಂತ್ರಿಗಳು, ಉಪಪ್ರಧಾನಿಗಳೂ ಆಗಿದ್ದ ಸರ್ದಾರ್ ವಲ್ಲಭಬಾಯಿ ಪಟೇಲರಿಗೆ ನಿಜವಾದ ಹಕೀಕತನ್ನು ತಿಳಿಸಿದವರು ವೀರ ಸನ್ಯಾಸಿ ಆನಂದಸ್ವಾಮಿ.

ಸರ್ದಾರ್ ವಲ್ಲಭಬಾಯಿ ಪಟೇಲರು ಜನರಲ್ ಚೌಧರಿ ಅವರೊಂದಿಗೆ ಸೈನ್ಯ ಸಮೇತ ಬಂದು ಖಾಸಿಂ ರಜವಿ ಸ್ಥಾಪಿಸಿದ ಇತ್ತೇಹಾದ ಸಂಸ್ಥೆಯನ್ನು ಕೂಡಿಕೊಂಡು ಹೋರಾಡುತ್ತಲಿದ್ದ ಸೈನ್ಯವನ್ನು ಬಗ್ಗು ಬಡಿಯುವತನ ಆನಂದ ಸ್ವಾಮಿ ಪಟೇಲರೊಡನೆ ಇದ್ದರು.

ಹೈದರಾಬಾದ್ ಸಂಸ್ಥಾನ ವಿಮೋಚನೆಗೊಂಡಮೇಲೆ ಸಂಪೂರ್ಣ ನಿಸ್ತೇಜರಾಗಿದ್ದ ಹೈದರಾಬಾದ್ ಸಂಸ್ಥಾನ, ಅದರಲ್ಲಿ ಲಾತೂರು ಜನರು ತುಂಬ ಭಯಗ್ರಸ್ಥವಾಗಿದ್ದರು. ಈ ಜನರು ಕಂಡ ಸಾವುಗಳನ್ನು ತೋಡಿಕೊಂಡು ದುಃಖ ಹೇಳಲಾರದಷ್ಟು. ಈ ಜನರಿಗೆ ಧೈರ್ಯ ಹೇಳಿ ಊರುಬಿಟ್ಟು ವಲಸೆ ಹೋದ ಜನರನ್ನು ಮರಳಿ ಊರಿಗೆ ಕರೆಸಿಕೊಳ್ಳಲು ಮನೆಯಲ್ಲಿದ್ದವರಿಗೆ ಹೇಳತೊಡಗಿದರು.

ಈ ಸಂದರ್ಭದಲ್ಲಿ ಈ ವೀರ ಸಂನ್ಯಾಸಿಯ ಜೊತೆಗೆ ಅಷ್ಟೇ ನಿಸ್ಪೃಹ ವ್ಯಕ್ತಿ, ವೈರಾಗ್ಯನಿಧಿ ವಿದ್ಯಾಧರ ಗುರೂಜಿ ಅವರಿದ್ದರು. ಹಗಲು, ರಾತ್ರಿ

ಊರಿಂದ ಊರಿಗೆ ಅಲೆದು ಜನರಲ್ಲಿ ಧೈರ್ಯ ತುಂಬುತ್ತಿದ್ದರು. ಮನೆ-ಮಾರು ಕಳೆದುಕೊಂಡವರಿಗೆ, ಉಳ್ಳವರಿಗೆ ಸಹಕರಿಸಲು ತಿಳಿಸುತ್ತಿದರು. ವಿಷಮತೆಯಿಂದ ಹೊಯ್ದಾಡುತ್ತಿದ್ದ ಜನರಲ್ಲಿ ಸೌಹಾರ್ದ್ರತೆ ಬೆಳೆಸಲು ಪ್ರಯತ್ನಿಸಿದರು.

ಇದು ನಿಜಾಂ ಪ್ರಾಂತ ಜನರಿಗೆ ಬಿದ್ದ ದುಸ್ವಪ್ನ. ಸ್ವಪ್ನವನ್ನು ಮರೆಯಬೇಕೆಂದು ಧಾರಾಕಾರವಾಗಿ ಹರಿಯುತ್ತಲಿದ್ದ ಜನರ ಕಣ್ಣೀರು ಒರೆಸಿದರು. ಇದು ಒಂದು ಎರಡು ದಿನದ ಕೆಲಸವಲ್ಲ. ವರ್ಷಾನುಗಟ್ಟಲೆ ಅಲೆದಾಡುತ್ತ ಮಾಡಿದ ಕೆಲಸ.

ಈ ಸಂದರ್ಭದಲ್ಲಿ (ಕುಶಾಲ ಚಂದ ಕುರುಸಂದ) ಅಂದರೆ ಮಹಾತ್ಮಾ ಆನಂದ ಸ್ವಾಮಿ ಅವರ ಸೇವೆಯೊಡನೆ ಜನ ಸೇವೆ ಮಾಡಿ ಧನ್ಯರಾದರು. ವಿದ್ಯಾಧರ ಗುರೂಜಿ ಅವರು.

ಶ್ರೀಮತಿ ಪ್ರಕಾಶವತಿ ಪಾಲ



ಗುಲಬರ್ಗಾದಲ್ಲಿ 1983 ದಕ್ಷಿಣ ಭಾರತ ಫ್ರೀಡಂ ಫಾಯಟರ್ ಕಾನ್ಫರೆನ್ಸ್‌ದ ಸಂದರ್ಭದಲ್ಲಿ ಕರ್ನಾಟಕ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ ಅವರು ಶ್ರೀಮತಿ ಪ್ರಕಾಶವತಿ ಪಾಲರವರನ್ನು ಸನ್ಮಾನಿಸುತ್ತಿರುವುದು.

ಲಾಹೋರಿನ ಸಂಭ್ರಾಂತ ಖತ್ರಿ ಸಮಾಜದ 16 ವರ್ಷದ ವಿದ್ಯಾರ್ಥಿನಿ 'ಪ್ರಕಾಶವತಿ'. ಅದೇ ಲಾಹೋರಿನ ಕ್ರಾಂತಿಕಾರಿ ಕವಿ, ಸ್ವಾತಂತ್ರ್ಯ ಹೋರಾಟಗಾರ 'ಜಯಪಾಲ' ಕ್ರಾಂತಿಕಾರಕ ಕಾವ್ಯ ಬರೆಯುವ ಕವಿಯೂ ಹೌದು, ಕತ್ತಿ ಹಿಡಿದು ಹೋರಾಡುವ ಕಲಿಯೂ ಹೌದು ಬಂದೂಕು ಹಿಡಿದು ಗುಂಡು ಹಾರಿಸುವಲ್ಲಿ ಬಹಾದ್ದೂರನೂ ಹೌದು.

ಕಲಕತ್ತಾ ನಗರದಿಂದ ದಿಲ್ಲಿಗೆ ರಾಜಧಾನಿಯನ್ನು ಸ್ಥಳಾಂತರಿಸುವ ಭರದಲ್ಲಿದ್ದ ಲಂಡನ್ ಹಾರ್ಡಿಂಜನ ಮೇಲೆ ಕವಿ, ಕ್ರಾಂತಿಕಾರ ಯಶಪಾಲ ಮತ್ತು ಅವನ ಸಂಗಡಿಗರು ಗುಂಡುಹಾರಿಸಿದರು. ಈ ಘಟನೆಯಲ್ಲಿ ಯಶಪಾಲ ಮತ್ತು ಸಂಗಡಿಗರು ಸಿಕ್ಕುಬಿದ್ದರು. ವಿಚಾರಣೆಯ ನಂತರ 'ಯಶಪಾಲ'ನಿಗೆ ಗಲ್ಲುಶಿಕ್ಷೆಯಾಯಿತು. ಕ್ರಾಂತಿಕಾರಿ ಕವಿಯ ಉಗ್ರಕಾವ್ಯ ಓದಿ ಕ್ರಾಂತಿಕಾರಳಾಗಿದ್ದ ಹದಿನಾರು ವರುಷದ ವಿದ್ಯಾರ್ಥಿನಿ ಪ್ರಕಾಶವತಿ ಯಶಪಾಲ ಗಲ್ಲಿಗೇರಿಸುವ ಮೊದಲೇ ಅವನನ್ನು ಮದುವೆ ಮಾಡಿಕೊಳ್ಳುವ ನಿರ್ಧಾರವನ್ನು ಪ್ರಕಟಿಸಿದಳು.

ಪ್ರಕಾಶವತಿಯ ತಾಯಿ-ತಂದೆ, ಅಣ್ಣ ತಮ್ಮ ಬಂದು ಬಳಗ, ಕ್ರಾಂತಿಕಾರಿ ಕವಿ ಯಶಪಾಲನಿಗೆ ಗಲ್ಲು ಶಿಕ್ಷೆಯಾಗಿದೆ. ಅವನು ಸಾಯುತ್ತಾನೆ ಅವನೊಡನೆ ಲಗ್ನವಾಗುವುದು ಬೇಡವೆಂದು ಎಲ್ಲರೂ ಹೇಳಿದರು. ಯಶಪಾಲ ಸತ್ತಮೇಲೆ ನೀನು ರಂಡೆ ಮುಂಡಿಯಾಗುತ್ತಿ ವಿಚಾರ ಮಾಡಿ ನೋಡು ಎಂದು ಎಲ್ಲರೂ ಒಕ್ಕೊರಲಿನಿಂದ ಹೇಳಿದರು.

ಆಗ 'ಪ್ರಕಾಶವತಿ' 'ನನ್ನ ಗಂಡ' ಯಶಪಾಲ ಇಹಲೋಕಯಾತ್ರೆ ಮುಗಿಸುವ ಮೊದಲೆ ನಾನು ಮುತ್ತೈದಿ ಸಾವಿತ್ರಿಯಾಗಿ ಪ್ರಾಣಾರ್ಪಣೆ ಮಾಡುತ್ತೇನೆ' ಎಂದು ಸಿಡಿಲು ಬಡಿದಂತೆ ಮಾತಾಡಿದಳು.

ಕ್ರಾಂತಿಕಾರಿ ಕವಿ ಯಶಪಾಲನ ಕಾವ್ಯ ಓದಿ ದೇಶಾಭಿಮಾನ, ಸ್ವಾಭಿಮಾನ ಅಳವಡಿಸಿಕೊಂಡ ಪ್ರಕಾಶವತಿಯ ಮನದ ಇಂಗಿತವನ್ನು ಅರಿತ ಬ್ರಿಟಿಷ್ ಸರಕಾರ ಯಶಪಾಲನಿಗೆ ಜೀವಂತವಾಗಿ ಜೇಲಿನಿಂದ ಬಿಡುಗಡೆ ಮಾಡಿತು. ಆಗ 'ಪ್ರಕಾಶವತಿ'ಯು ಪ್ರಕಾಶವತಿ ಪಾಲ ಎಂದು ಕರೆಯತೊಡಗಿದರು. ಇವರಿಬ್ಬರೂ ದೇಶದ ಸ್ವಾತಂತ್ರ್ಯಕ್ಕಾಗಿ ಹಗಲಿರುಳು ದುಡಿದು 'ಆದರ್ಶ ದಂಪತಿಗಳು' ಎಂದು ಹೊಸ ಇತಿಹಾಸ ನಿರ್ಮಿಸಿದರು. ಇಂತಹ ಧೀರ ಮಹಿಳೆಯನ್ನು ಕರೆಯಿಸಿ ವಿದ್ಯಾಧರ ಗುರೂಜಿ ಅವರು ದಕ್ಷಿಣ ಭಾರತ ಫ್ರೀಡಂ ಫೈಯಟರ್ ಕಾನ್ಫರೆನ್ಸ್‌ದಲ್ಲಿ ಆತ್ಮೀಯವಾಗಿ ಸನ್ಮಾನಿಸಿದರು.



ಗುರುನಾಥ ರೆಡ್ಡಿ ಮಾಲಿಪಾಟೀಲ
ಗುರುಮಠಕಲ್ಲ



ಶ್ರೀಯುತರು ವಿದ್ಯಾರ್ಥಿ ದಿಸೆಯಲ್ಲಿಯೇ ದೇಶ ಸ್ವಾತಂತ್ರ್ಯಕ್ಕಾಗಿ ಟೊಂಕ ಕಟ್ಟಿನಿಂತರು. ಓದು ಬರಹದಲ್ಲಿಯೂ ಚುರುಕಾಗಿದ್ದರು. ಮನೆತನದಿಂದಲೂ ಒಳ್ಳೆಯ ಸ್ಥಿತಿವಂತರು. ದೇಶಾಭಿಮಾನ, ಸ್ವಾಭಿಮಾನ ಇವರ ಹುಟ್ಟಿನೊಂದಿಗೆ ಬೆನ್ನಟ್ಟಿ ಬಂದಿದ್ದವು. ಜಾತ್ಯಾತೀತ ಮನೋಭಾವನೆಯ ಸ್ನೇಹ ಜೀವಿಗಳು.

ಗುರುಮಠಕಲ್ಲ ಗ್ರಾಮದ ಮಾಲಿ ಪಾಟೀಲರಾದ ಇವರು ಊರಿನ ಪ್ರಮುಖ ವ್ಯಕ್ತಿಗಳಾಗಿದ್ದರು. ಆಗಿನ ಕಾಲದಲ್ಲಿ ಇವರ ಮನೆತನಕ್ಕೆ ತುಂಬ ಗೌರವವಿತ್ತು. ಇವರೂ ಸಹ ಊರಜನರನ್ನು ಅತ್ಯಂತ ಪ್ರೀತಿ ವಿಶ್ವಾಸದಿಂದ ಕಾಣುತ್ತಿದ್ದರು. ಅದರಿಂದ ಊರಲ್ಲಿ ಒಕ್ಕಟ್ಟು ಇತ್ತು.

ವಿದ್ಯಾಧರ ಗುರೂಜಿ ಅವರು ಸ್ವಾತಂತ್ರ್ಯಕ್ಕಾಗಿ ಎತ್ತಿದ ಧ್ವನಿಗೆ ಊರಿನ ಯುವಕರು ಸ್ಪಂದಿಸಿದರು. ಗುರುನಾಥ ರೆಡ್ಡಿ ಮಾಲಿಪಾಟೀಲರು ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಅವರ ಸಂಗಡ ಸುಮಾರು ನಾಲ್ವತ್ತು ಜನ ಯುವಕರು ಪಣತೊಟ್ಟರು. ಇವರು ತೊಟ್ಟ ಪಣಕ್ಕೆ ಇಡೀ ಊರು ಇವರ ಬೆನ್ನು ಹಿಂದೆ ಭೀಮರಕ್ಷೆಯಾಗಿ ನಿಂತಿತು.

ಅಂತೆಯೇ ಸ್ವಾತಂತ್ರ್ಯ ಚಳುವಳಿಯಲ್ಲಿ, ಹೈದರಾಬಾದ್ ಸಂಸ್ಥಾನದ ವಿಮೋಚನೆಯಲ್ಲಿ ಊರಜನರಿಗೆ ಸಾವು-ನೋವು ಆಗದಂತೆ ನೋಡಿಕೊಂಡರು.

ಗುರುನಾಥ ರೆಡ್ಡಿ ಮಾಲಿಪಾಟೀಲರು ಹಣಮಂತರಾವ ಗೋಂಫಲೆ ಶಂಕ್ರಯ್ಯ ಪಸ್ಪೂಲ ಮುಂತಾದವರು ಸೆರೆಮನೆ ಸೇರಿದರು, ನಂತರ ಜಾಮೀನು ಮೇಲೆ ಹೊರಬಂದರು. ಚಿನ್ನಪ್ಪ ಚೌದರಿ ಗುಂಡಪ್ಪ ಶಿರವಾಳ ನಿಂಗಣ್ಣ ನೌದಿ, ನರಸಪ್ಪ ಹಜಾಮ, ನರಸಿಂಹ ರಾವ, ಶ್ರೀ ಗಿರಿ ಬುಡ್ಡಪ್ಪ. ಬಂಡಾ ಛಪ್ಪರ, ಖಂಡೇರಾವ ಪೋಳ ಮುಂತಾದವರು ವಿದ್ಯಾಧರ ಗುರೂಜಿ ಅವರ ಸಂಗಡ ಭೂಗತರಾದರು.

'ಸೋಲಾಪುರದಲ್ಲಿ ನಿರ್ವಾಸಿತ ಸೇವಾಸಮಿತಿ'



1946ರಲ್ಲಿ ಸೋಲಾಪುರದಲ್ಲಿ ರಚನೆಯಾದ 'ನಿರ್ವಾಸಿತ ಸೇವಾ ಸಮಿತಿ'ಗೆ ಆಶ್ರಯ ನೀಡಿದ ಕನ್ನಡದ ಹೆಮ್ಮೆಯ ಕವಯತ್ರಿ ಜಯದೇವಿ ತಾಯಿ ಲಿಗಾಡೆ ಅವರು.

ರಜಾಕಾರರ ಉಪಟಳಕ್ಕೆ ಅಂಜಿ ನಿಜಾಂಪ್ರಾಂತದ ಜನರು ನಿಜಾಂ ಪ್ರಾಂತದ ಗಡಿದಾಟಿ ಸುರಕ್ಷಿತ ಸ್ಥಳವೆಂದು ಸೋಲಾಪುರಕ್ಕೆ ವಲಸೆ ಬಂದರು. ಹೀಗೆ ಬಂದ ನಿರಾಶ್ರೀತರಿಗೆ ರಕ್ಷಣೆ ನೀಡಲು ವಿದ್ಯಾಧರ ಗುರೂಜಿ ಅವರು

ಟೊಂಕ ಕಟ್ಟಿನಿಂತರು. ಅದಕ್ಕಾಗಿ ಒಂದು ಸಮಿತಿಯನ್ನು ರಚಿಸಿದರು. ಅದೇ 'ನಿರ್ವಾಸಿತ ಸೇವಾ ಸಮಿತಿ'.

1946ರಲ್ಲಿ ಅತ್ಯಂತ ಸಂಕಟ ಸಮಯದಲ್ಲಿ ರಚನೆಯಾದ ಈ ನಿರ್ವಾಸಿತ ಸೇವಾ ಸಮಿತಿಯ ಅಧ್ಯಕ್ಷರೆಂದು ಶ್ರೀ ಫೂಲಚಂದ ಗಾಂಧಿ ಅವರು ಆಯ್ಕೆಯಾದರು. ಪಂಡಿತ ಮನೋಹರ ಲಾಲಜಿ ಅವರು ಕಾರ್ಯದರ್ಶಿಗಳಾಗಿ ಆಯ್ಕೆಯಾದರು. ವ್ಯವಸ್ಥಾಪಕ ಕಾರ್ಯದರ್ಶಿಗಳಾಗಿ ವಿದ್ಯಾಧರ ಗುರೂಜಿ ಅವರು ಬಹುದೊಡ್ಡ ಹೊಣೆ ಹೊತ್ತರು.

ತಮ್ಮ ಹೊಲ ಮನೆ ಆಸ್ತಿ ಪಾಸ್ತಿ ದನ ಕರುಗಳನ್ನು ಬಿಟ್ಟು ನಿಂತ ಕಾಲಮೇಲೆಯೇ ಓಡಿ ಸೋಲಾಪುರಕ್ಕೆ ವಲಸೆ ಬಂದ ನಿರಾಶ್ರಿತರ ರಕ್ಷಣೆಗಾಗಿ ಈ ಮೊದಲೆ ತಮಗೆ ಗೊತ್ತಿದ್ದ ಕರುನಾಡ ಹೆಮ್ಮೆಯ ಕವಯತ್ರಿ ಜಯದೇವಿ ತಾಯಿ ಲಿಗಾಡೆ ಅವರ ಮನೆಗೆ ವಿದ್ಯಾಧರ ಗುರೂಜಿ ಅವರು ಬಂದು ನಡೆದ ವೃತ್ತಾಂತವನ್ನು ಜಯದೇವಿ ತಾಯಿ ಲಿಗಾಡೆ ಅವರಿಗೆ ವಿವರಿಸುತ್ತಲೇ ಲಿಗಾಡೆ ತಾಯಿ ಅವರು ನಿರಾಶ್ರಿತರ ಹತ್ತಿರ ಬಂದು ಧೈರ್ಯ ಬಿಡಬೇಡಿರಿ ಎಂದು ಹೇಳಿ ಸಿದ್ರಾಮೇಶ್ವರ ದೇವಸ್ಥಾನದಲ್ಲಿ ನಿರಾಶ್ರಿತರು ಉಳಿದುಕೊಳ್ಳಲು ಸ್ಥಳದ ಅವಕಾಶ ಕಲ್ಪಿಸಿಕೊಟ್ಟರು. ಅವರ ಊಟಕ್ಕೆ ಬೇಕಾಗುವ ದವಸಧಾನ್ಯಗಳನ್ನು ಒದಗಿಸಿದರು. ಸಾಲದ್ದಕ್ಕೆ ಅವರ ಇತರ ಖರ್ಚಿಗಾಗಿ ಹಣವನ್ನು ನೀಡಿದರು.

ಜಯದೇವಿ ತಾಯಿ ಲಿಗಾಡೆ ಅವರು ಗುರುಮಠಕಲ್ಲ ಶಾಂತವೀರ ಮಹಾಸ್ವಾಮಿಗಳು ಖಾಸಾಮಠದ ಪರಮಭಕ್ತರು. ಆಗಾಗ್ಗೆ ಗುರುಮಠಕಲ್ಲ ಶಾಂತವೀರ ಮಹಾಸ್ವಾಮಿಗಳ ಹತ್ತಿರ ಬಂದು ದರ್ಶನಾಶೀರ್ವಾದ ಪಡೆದು ಹೋಗುತ್ತಿದ್ದರು. ಆಗ ಗುರೂಜಿಯವರಿಗೂ ಜಯದೇವಿ ತಾಯಿ ಲಿಗಾಡೆ ಅವರಿಗೂ ನಿಕಟ ಸಂಬಂಧ ಬೆಳೆಯಿತು. ಚಿರ ಪರಿಚಿತರೂ ಆದರು. ಈಗ ನಿರ್ವಾಸಿತ ಸೇವಾ ಸಮಿತಿಗೆ ಆಶ್ರಯದಾತರೂ ಆದರು. ಅವರನ್ನು ಇಲ್ಲಿ ನೆನೆಯುವುದು ತೀರ ಅವಶ್ಯ.

ಶ್ರೀಮತಿ ಸುಶಿಲಾ ದೇವಿ ವಿದ್ಯಾ ಅಲಂಕೃತಾ



ಪಂಜಾಬಿ ಮೂಲದ ಸುಶೀಲಾದೇವಿ ವಿದ್ಯಾಲಂಕೃತಾ ಆಗರ್ಭ ಶ್ರೀಮಂತ ಮನೆತನದ ರಾಮ ರಖಾಜಿ ಅವರ ಸುಪುತ್ರಿ ಸುಶಿಕ್ಷಿತ ಮಹಿಳೆ 'ಆರ್ಯ ಸಮಾಜದ' ಧುರಿಣೆ. ದೇಶಾಭಿಮಾನಿ ಗಾಂಧಿ ಅವರ ಸಮೀಪವರ್ತಿ. ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತೆ.


ಗುರುಕುಲ ಸ್ನಾತಕೋತ್ತರ ಪದವೀಧರೆ ಇವರು ಉತ್ತಮ ಸಾಹಿತಿಗಳು, ಪ್ರಚಂಡ ವಾಗ್ಮಿಗಳು ದೇಶ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಇವರು ಮಾತನಾಡುತ್ತಿದ್ದರೆ ಸಾವಿರಾರು ದೇಶಭಕ್ತರು ಹೊರಬಂದು ರಾಷ್ಟ್ರೀಯ ಚಳುವಳಿಯಲ್ಲಿ ಪಾಲುಗೊಳ್ಳುತ್ತಿದ್ದರು. ಅಂತಹ ಚತುರ ಮಾತುಗಾರರು ಶ್ರೀಮತಿ ಸುಶೀಲಾದೇವಿ ವಿದ್ಯಾಲಂಕೃತ ಅವರು.

ಇವಳ ತಂದೆ ದೊಡ್ಡ ಉದ್ದಿಮೆ ಇದ್ದಂತೆ ಮಹಾದಾನಿಗಳೂ ಆಗಿದ್ದರು. ದೇಶ ಸ್ವಾತಂತ್ರ್ಯ ಚಳುವಳಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಮುಕ್ತ ಮನಸ್ಸಿನಿಂದ ಸಹಾಯ ನೀಡಿ ಸಹಕರಿಸುತ್ತಿದ್ದರು.

ಸ್ವಾತಂತ್ರ್ಯ ಹೋರಾಟಗಾರ ವಿದ್ಯಾಧರ ಗುರೂಜಿ ಅವರಿಗೆ ಅಣ್ಣಾ ಎಂದು ಕರೆಯುತ್ತಿದ್ದರು. ವಿದ್ಯಾಧರ ಗುರೂಜಿ ಅವರು 1962ರಲ್ಲಿ ಗುರುಮಠಕಲ್ಲ ಮತ ಕ್ಷೇತ್ರದಿಂದ ವಿಧಾನ ಸಭೆಗೆ ಸ್ವತಂತ್ರ ಪಕ್ಷದಿಂದ ಸ್ಪರ್ಧಿಸಿದಾಗ ಕಾಂಗ್ರೆಸ್ ಅಭ್ಯರ್ಥಿ ಕೋಲೂರು ಮಲ್ಲಪ್ಪನವರು ಇವರನ್ನು ಪ್ರಚಾರಭಾಷಣ ಮಾಡಲು ಒತ್ತಾಯ ಪಡಿಸಿದಾಗ ನನ್ನ ಅಣ್ಣ ವಿದ್ಯಾಧರ ಗುರೂಜಿ ಅವರ ವಿರುದ್ಧ ನಾನು ಭಾಷಣ ಮಾಡಲಾರೆ ಎಂದು ಖಡಾ ಖಂಡಿತವಾಗಿ ಹೇಳಿ ತಟಸ್ಥ ಧೋರಣೆ ತಳೆದ ಸ್ನೇಹಮಯಿ ಧೀರಮಹಿಳೆ ಸುಶೀಲಾದೇವಿ ವಿದ್ಯಾಲಂಕೃತ ಅವರು.

ವಿದ್ಯಾಧರ ಗುರೂಜಿ ಇವರನ್ನು ತಮ್ಮ ಸಹೋದರಿಯೆಂದು ಪಾಲಿಸಿಕೊಂಡು ಬರುತ್ತಿದ್ದಾರೆ. ಈಗಲೂ ದೂರವಾಣಿಯ ಮೂಲಕ ಮಾತನಾಡುತ್ತಾರೆ. ಯೋಗಕ್ಷೇಮ ಕೇಳಿ ತಿಳಿದುಕೊಂಡು ಸಂತೋಷ ಪಡುತ್ತಾರೆ.

ರಾಜನ ಕೋಳೂರು ಹುತಾತ್ಮ ವಿರೂಪಾಕ್ಷಪ್ಪಗೌಡರ ತಾಯಿ



ವೀರಮಾತೆ ಗೌಡಶಾನಿ ಗೌರಮ್ಮ ಗೌಡತಿ ಅವರಿಗೆ ಗೌರವ ಸಮರ್ಪಣೆ

ಸುರಪುರ ತಾಲೂಕಿನ ರಾಜನ ಕೋಳೂರು ಸುಮಾರು ಹತ್ತುಸಾವಿರ ಜನ ಸಂಖ್ಯೆಯುಳ್ಳ ಒಂದು ದೊಡ್ಡ ಊರು. ಇಲ್ಲಿ ಕೃಷಿಯೇ ಪ್ರಧಾನವಾದ ಕೆಲಸ. ಈ ಊರಿನ ಜನರು ಒಕ್ಕಲುತನದ ಕೆಲಸದಲ್ಲಿ ತುಂಬಾ ಅಭಿರುಚಿಯುಳ್ಳವರು. ಈ ಊರಿನ ಆಗರ್ಭ ಶ್ರೀಮಂತ ಹೊಸಮನಿ ಬಸವಂತರಾಯಗೌಡರು, ಅವರ ಧರ್ಮಪತ್ನಿ ಗೌಡಶಾನಿ ಗೌರಮ್ಮ ಗೌಡತಿ. ಇವರ ಪುಣ್ಯಗರ್ಭದಲ್ಲಿ ಪದ್ಮಾವತಿ, ವೆಂಕಟಮ್ಮ ಎಂಬ ಇಬ್ಬರು ಹೆಣ್ಣುಮಕ್ಕಳು ವಿರೂಪಾಕ್ಷಪ್ಪ ಗೌಡ ಏಕೈಕ ಪುತ್ರ.

ಮಗು ಜನಿಸಿದ ಮೇಲೆ ಬಸವಂತರಾಯಗೌಡರು ಸಂಪ್ರದಾಯದಂತೆ

ಆಗಿನ ಕಾಲದಲ್ಲಿ ಜ್ಯೋತಿಷ್ಯ ಶಾಸ್ತ್ರದಲ್ಲಿ ಹೆಸರಾದ ಅಡಿವೆಪ್ಪನವರ ಹತ್ತಿರ ಮಗನ ಭವಿಷ್ಯ ತಿಳಿದುಕೊಳ್ಳಲು ಜಾತಕ ಬರೆಸಿದರು.

ಜ್ಯೋತಿಷ್ಯಶಾಸ್ತ್ರದಲ್ಲಿ ಪಾರಂಗತರಾಗಿದ್ದ ಅಡಿವೆಪ್ಪನವರು ನಿಮ್ಮ ಚಿರಂಜೀವ ವಿರೂಪಾಕ್ಷಪ್ಪಗೌಡರ ಭವಿಷ್ಯ ತುಂಬ ಉಜ್ವಲವಾಗಿದೆ. "ವಿರೂಪಾಕ್ಷಪ್ಪಗೌಡ ತುಂಬ ಬುದ್ಧಿವಂತ, ಕುಶಲಮತಿ ಚಾಣಾಕ್ಷ, ಶೂರ, ಧೀರ, ಪರಾಕ್ರಮಿ ದೇಶಾಭಿಮಾನಿ, ಸ್ವಾಭಿಮಾನಿ ಇವನು ತನ್ನ ಹನ್ನೆರಡನೆಯ ವಯಸ್ಸಿಗೆ ಕುದುರೆ ಸವಾರಿ, ಬಂದೂಕ ಧಾರಿಯಾಗಿ ಬೇಟೆಯಾಡುವುದರಲ್ಲಿ ನಿಷ್ಣಾತ. ಇವನು ತನ್ನ ಇಪ್ಪತ್ಮೂರು ವರುಷಕ್ಕೆ ದೇಶಕ್ಕಾಗಿ ಕಾದಾಡಿ ವೀರ ಮರಣವನ್ನಪ್ಪುತಾನೆ" ಎಂದು ಜಾತಕ ಬರೆದುಕೊಟ್ಟರು. ಜ್ಯೋತಿಷ್ಯ ಶಾಸ್ತ್ರ ಪ್ರವೀಣ ಅಡಿವೆಪ್ಪನವರು ವಿರೂಪಾಕ್ಷಪ್ಪಗೌಡರು ಪ್ರಾಥಮಿಕ ಶಿಕ್ಷಣವನ್ನು ರಾಜನಕೊಳ್ಳೂರು ಸ್ವಗ್ರಾಮದಲ್ಲಿ ಮುಗಿಸಿ ಹೆಚ್ಚಿನ ಓದಿಗಾಗಿ ಗುಲಬರ್ಗಾ ನಗರಕ್ಕೆ ಆಗಮಿಸಿದರು. ಪ್ರೌಢಶಾಲೆಯಲ್ಲಿ ಓದುತ್ತಿರುವಾಗಲೇ ಆರ್ಯಸಮಾಜದೊಡನೆ ಸಂಪರ್ಕ ಬೆಳೆಯಿತು. ಅಲ್ಲಿಯೇ ದೇಶಾಭಿಮಾನ, ಸ್ವಾಭಿಮಾನದ ದೀಕ್ಷೆ ಪಡೆದರು. ಮುಂದಿನ ಅಭ್ಯಾಸಕ್ಕಾಗಿ ಹೈದರಾಬಾದಿಗೆ ಪ್ರಯಾಣ ಬೆಳೆಸಿ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಇಂಟರ್‌ಮೀಡಿಯೆಟ್ ಮುಗಿಯುವುದರೊಳಗೆ ಸ್ವದೇಶಿ ಚಳುವಳಿಗೆ ಪದಾರ್ಪಣೆ ಮಾಡಿದರು.

1947ರ ಆಗಸ್ಟ್ 15 ರಂದು ದೇಶಕ್ಕೆ ಸ್ವಾತಂತ್ರ್ಯ ಲಭಿಸಿತು. ಹೈದರಾಬಾದ್ ವಿಮೋಚನಾ ಚಳವಳಿ ಜೋರಾಯಿತು. ಆರ್ಯಸಮಾಜದ ರೂವಾರಿ ಚಂದ್ರಶೇಖರ ಗುರೂಜಿ ಅವರು ಸಾಲವಾಡಿಗಿಯಲ್ಲಿದ್ದು ಜನರಲ್ಲಿ ಸ್ವಾಭಿಮಾನ, ದೇಶಾಭಿಮಾನ ಹುಟ್ಟಿಸಿದರು. ಯುದ್ಧವೀರ, ಯುದ್ಧಕರೆಯನ್ನು ಜನರಿಗೆ ತಿಳಿಸಿಕೊಟ್ಟರು. ವಿದ್ಯಾಧರ ಗುರೂಜಿ ಅವರ ನಿರಂತರ ಸಹವಾಸದಲ್ಲಿ ಹಗರಟಿಗಿಯ ಮಹಾಂತ ಗೌಡರು, ಬಸವಂತರಾಯ ಗೌಡರು, ಹನುಮಂತರಾಯ, ಹನುಮರೆಡ್ಡಿ ಗೌಡ ಗುರುಬಸಪ್ಪಗೌಡ ಇನ್ನೂ ಅನೇಕ ಶಕ್ತಿಶಾಲಿಗಳು ಬುದ್ಧಿಜೀವಿಗಳು ಸಾಹಸಿಗಳು ಒಟ್ಟುಗೂಡಿದರು.

ಖಾಸಿಂ ರಜವಿಯ ನೇತೃತ್ವದ ಇತ್ತೇಹಾದ ಪಕ್ಷದ ಇನ್ನೊಂದು ಮುಖವೆ ರಜಾಕಾರರ ಪಡೆ. ಈ ಪಡೆಯು ಗಡಿಭಾಗದ ಜನರನ್ನು ನಿತ್ಯಹಿಂಸೆಗೆ ಒಳಗಾಗಿಸುತ್ತಿತ್ತು. ಈ ಪಡೆಯನ್ನು ಸಮರ್ಥವಾಗಿ ಎದುರಿಸಿ 1948 ಮೇ ಕೊನೆಯ ಶನಿವಾರ ಮಧ್ಯಾಹ್ನ ಮೂರುಗಂಟೆಗೆ ಹೋರಾಡುತ್ತ ವೀರಮರಣವನ್ನಪ್ಪಿದರು. ರಾಜನಕೊಳೂರು ವಿರೂಪಾಕ್ಷಪ್ಪಗೌಡರು.

'ಸುಷ್ಮಾ-ಸ್ವರಾಜ್ಯ'




ರಾಜಕೀಯ ಕ್ಷೇತ್ರದಲ್ಲಿ ಮೂಡಿಬಂದ ಅಪರೂಪದ ದಂಪತಿಗಳು. ಇಬ್ಬರೂ ಮುತ್ಸದ್ದಿಗಳು ಚಾಣಾಕ್ಷರು ಕುಶಲಮತಿಗಳು. ಭಾರತ ದೇಶದ ಕೂದಲು ಕೊಂಕಿದರೆ ಮುಡ್ಡಿ ಬಾರಿಸಿ, ಸೆಡ್ಡು ಹೊಡೆದು ಎದೆಯೊಡ್ಡಿ ನಿಲ್ಲುವ ಶಕ್ತಿಶಾಲಿಗಳು. ಸುಷ್ಮಾ-ಸ್ವರಾಜ್ಯ ದೇಶದ ಬಗ್ಗೆ ಮಾತಾಡುವಾಗ ಅವರ ಬಾಯಿಂದ ಕೆಂಡದುಂಡಿಗಳೇ ಹೊರ ಬರುತ್ತವೆ.

ನಿಷ್ಠಾವಂತ ಮೌಲ್ಯಾಧಾರಿತ ರಾಜಕಾರಣಿಗಳು. ದೇಶದ ಬಗ್ಗೆ ತಮ್ಮನ್ನು ತಾವು ಅರ್ಪಿಸಿಕೊಂಡು ಅತ್ಯಂತ ಪ್ರಾಮಾಣಿಕವಾಗಿ ಬೆಳೆದುಬಂದ ವಿದ್ಯಾಧರ ಗುರೂಜಿ ಅವರನ್ನು ಹತ್ತಿರದಿಂದ ಕಂಡು 'ಅಪ್ಪಾ' ಎಂದು ಅಪ್ಪಿಕೊಂಡ ದಂಪತಿಗಳು 'ಸುಷ್ಮಾ-ಸ್ವರಾಜ್ಯ'.

'ಸುಷ್ಮಾ-ಸ್ವರಾಜ್ಯ' ಅವರನ್ನು ಎರಡು ಸಲ ಗುಲಬರ್ಗಾ ಹಿಂದಿ ಪ್ರಚಾರ ಸಭಾ ಕಾರ್ಯಕ್ರಮಕ್ಕೆ ಕರೆಸಿ 'ಸುಷ್ಮಾ-ಸ್ವರಾಜ್ಯ' ಅವರನ್ನು ಮೌಲ್ಯಾಧಾರಿತ ಗಟ್ಟಿ ಹೆಜ್ಜೆ ದಿಟ್ಟ ಮಹಿಳೆಯೆಂದು ಅಕ್ಕರೆಯಿಂದ ಕರೆದು ಗೌರವಿಸಿದ್ದಾರೆ. ಗುರೂಜಿ ಅವರು 'ಸುಷ್ಮಾ-ಸ್ವರಾಜ್ಯ' ಅವರನ್ನು ಕಾಣಲು ದೆಹಲಿಯಲ್ಲಿ ಮನೆಗೆ ಹೋದಾಗ 'ಸ್ವಾತಂತ್ರ್ಯ ಹೋರಾಟಗಾರ' ವೀರಸೇನಾನಿ ಅಪ್ಪಟ ದೇಶಭಕ್ತ ಎಂದು ಎದೆಗೆ ಅಪ್ಪಿಕೊಂಡು 'ಅಪ್ಪಾ' ಎಂದು ಗೌರವಿಸಿದ್ದು ವಿದ್ಯಾಧರ ಗುರೂಜಿ ಅವರ ಮನಸ್ಸಿನಲ್ಲಿ ಹಚ್ಚ ಹಸಿರಾಗಿ ಉಳಿದಿದೆ. ವಿದ್ಯಾಧರ ಗುರೂಜಿ, 'ಸುಷ್ಮಾ-ಸ್ವರಾಜ್ಯ' ಅವರನ್ನು ಆತ್ಮೀಯತೆಯಿಂದ ಕಂಡು ಹಾಸ್ಯಭರಿತ ಅವರ ಮಾತನ್ನು ಕೇಳಿ ಹರುಷ ಪಟ್ಟಿದ್ದಾರೆ.

ಶ್ರೀ ಲಕ್ಷ್ಮೀ ನಾರಾಯಣ ಶರ್ಮಾ



ಶಹಾಬಾದ ಮೂಲದ ಲಕ್ಷ್ಮೀನಾರಾಯಣ ಶರ್ಮಾ ಅವರು ದೊಡ್ಡ ಉದ್ದಿಮೆಯಾಗಿ ಹೈದರಾಬಾದ್ ನಗರದಲ್ಲಿ ನೆಲೆಸಿದರು. ಇವರ ತಾಯಿ–ತಂದೆ ಶಹಾಬಾದದಲ್ಲಿ ವಾಸಿಸುತ್ತಿದ್ದರು. ಇವರ ಸಹೋದರ ರಘುನಾಥ ಶರ್ಮಾ ಯಾದಗಿರಿಯಲ್ಲಿ ಉದ್ದಿಮೆದಾರರಾಗಿ ತುಂಬ ಘನತೆ, ಗೌರವದಿಂದ ಬಾಳುತ್ತಿದ್ದರು.

ಶ್ರೀ ಲಕ್ಷ್ಮೀನಾರಾಯಣರು ತುಂಬಾ ಶ್ರೀಮಂತರು ಆಗಿರುವುದರಿಂದ

ಹೈದರಾಬಾದ್ ಸಂಸ್ಥಾನದ ನಿಜಾಮ ಮಕ್ಕಳೊಡನೆ ಇವರ ಸ್ನೇಹವಿತ್ತು. ಜಯಾನಾ ಏ ಜಂಗ್ ದೀನ ಯಾ ಜಂಗ್, ಬಹಾದೂರ ಯಾ ಜಂಗ ಎಂಬ ರಾಜಮುಮನೆತನದ ಸ್ನೇಹಿತರೊಡನೆ ವಿಲಾಸದಲ್ಲಿ ಕಾಲ ಕಳೆಯುತ್ತಿದ್ದರು. ಪ್ರಾರಂಭದಲ್ಲಿ ಲಕ್ಷ್ಮೀನಾರಾಯಣರು ಕಮ್ಯುನಿಷ್ಟರೊಡನೆ ಸೇರಿ ಅವರೊಡನೆಯೂ ಅಲೆದಾಡುತ್ತಲಿದ್ದರು. ಶಹಾಬಾದದಲ್ಲಿ ಇರುವ ಇವರ ತಂದೆ ಜಗನ್ನಾಥ ಶರ್ಮಾ ಅವರಿಗೆ ಮಗನ ಈ ನಡೆ–ನುಡಿ ಸರಿಕಾಣಲಿಲ್ಲ. ಯಾದಗಿರಿಗೆ ಬಂದಾಗೊಮ್ಮೆ ವಿದ್ಯಾಧರ ಗುರೂಜಿ ಅವರಿಗೆ ಹೇಳಿ ಮಗನ ಮನಸ್ಸನ್ನು ತಿರುಗಿಸಲು ಪ್ರಯತ್ನಿಸತೊಡಗಿದರು.

ಲಕ್ಷ್ಮೀನಾರಾಯಣ ಶರ್ಮಾ ತಮ್ಮ ಅಣ್ಣ ತಮ್ಮಂದಿರ ಕಡೆಗೂ ಮೇಲಿಂದ ಮೇಲೆ ಬರುತ್ತಿದ್ದರು. ಆಗ, ರಘುನಾಥ ಶರ್ಮಾ, ಕನ್ಯೆಲಾಲ ಶರ್ಮಾ ಅವರು ವಿದ್ಯಾಧರ ಗುರೂಜಿಯ ಪರಿಚಯ ಮಾಡಿಕೊಟ್ಟರು. ವಿದ್ಯಾಧರ ಗುರೂಜಿಯವರ ಪರಿಚಯವಾಗುವುದೊಂದೇ ತಡ ಲಕ್ಷ್ಮೀನಾರಾಯಣ ಶರ್ಮಾ ವಿದ್ಯಾಧರ ಗುರೂಜಿ ತಮ್ಮ ಸಹೋದರನೆಂದು ಬಗೆದು ಕೂಡಲೇ ಆರ್ಯ ಸಮಾಜದ ಅನುಯಾಯಿ ಆಗಿಯೇ ಬಿಟ್ಟರು. ಮನೆತನದಿಂದ ಬಡವರಾದರೂ ಮನದಿಂದ ಬಹು ದೊಡ್ಡ ಶ್ರೀಮಂತರು ವಿದ್ಯಾಧರ ಗುರೂಜಿ ಅವರು.

ವಿದ್ಯಾಧರ ಗುರೂಜಿ ಅವರ ವ್ಯಕ್ತಿತ್ವ ಲೋಹ ಚುಂಬಕವಿದ್ದಂತೆ. ಲಕ್ಷೀನಾರಾಯಣ ಅವರು ವಿದ್ಯಾಧರ ಗುರೂಜಿ ಅವರ ಸ್ಥಿತಿ–ಗತಿ ನೋಡಿಕೊಂಡರು. ಲಕ್ಷೀನಾರಾಯಣ ಅವರು ತಮ್ಮ ಮನೆಯಲ್ಲಿಯೇ ಊಟ ಮಾಡಿಕೊಂಡಿರಲು ಹೇಳಿದರು. ಆಗ ಇನ್ನೂ ವಿದ್ಯಾಧರ ಗುರೂಜಿ ಅವರಿಗೆ ಮದುವೆ ಆಗಿರಲಿಲ್ಲ.

ಮದುವೆ ನಿಶ್ಚಯವಾದ ಮೇಲೆ ವಿದ್ಯಾಧರ ಗುರೂಜಿ ಅವರ ಮದುವೆಯ ಸ್ವಲ್ಪ ಖರ್ಚು ಲಕ್ಷ್ಮೀನಾರಾಯಣ ಅವರೇ ಭರಿಸಿದರು. ಅಂದಿನಿಂದ ಇಬ್ಬರೂ ಅಣ್ಣ–ತಮ್ಮಂದಿರಂತೆ. ನಡೆದುಕೊಂಡರು.

'ಲಕ್ಷ್ಮೀನಾರಾಯಣ ಶರ್ಮಾ' ಅವರು ತುಂಬ ಸರಳ, ಸಜ್ಜನರು, ಆಗರ್ಭ ಶ್ರೀಮಂತರು ಒಂದಿನಿತು ಹಮ್ಮು ಬಿಮ್ಮುಗಳು ಇಲ್ಲ. ಗರ್ವ ಅಹಂಕಾರವಿಲ್ಲ. ವಿದ್ಯಾಧರ ಗುರೂಜಿ ಅವರನ್ನು ಕೂಡಿಕೊಂಡ ಮೇಲೆ ಇವರು ಸಂನ್ಯಾಸಿಯಂತೆ ಬಾಳಿದರು.



ವಿದ್ಯಾಧರ ಗುರೂಜಿ ಅವರಿಗೆ ಪ್ರಿಯವಾದದ್ದು

- ಹೆಣ್ಣುಮಕ್ಕಳ ಹಕ್ಕುಗಳು
- ಲೈಂಗಿಕ ತಿಳುವಳಿಕೆ
- ನೈರ್ಮಲ್ಯದ ಪಾಠ
- ಮಾಹಿತಿ ಹಕ್ಕು ಕಾಯ್ದೆ
- ಶಿಕ್ಷಣದ ಅರಿವು
- ಜಾಗತಿಕ ತಾಪಮಾನದ ಏರಿಕೆಯಂತಹ
- ಸಮಾಜದಲ್ಲಿದ್ದ ದುಷ್ಟಶಕ್ತಿಯಂತಹ
- ಸಾಮಾಜಿಕ ಸಂಗತಿಗಳತ್ತ

ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತಲ್ಲೀನರಾಗಿ ಯಶಸ್ಸು ಕಂಡ ಮಕ್ಕಳ ಹಾಗೂ ಯುವಕರ ಪರಿಚಯ ಮಾಡಿಕೊಂಡು ಅದನ್ನು ಜನರಿಗೂ ತಲುಪಿಸುವ ಕಾರ್ಯ **ವಿದ್ಯಾಧರ ಗುರೂಜಿ ಅವರಿಗೆ ಅತ್ಯಂತ ಪ್ರಿಯವಾದ ಕೆಲಸ.**

ಅದಕ್ಕಾಗಿ ಆ ಮಕ್ಕಳ ಸಾಹಸದ
ಕಥೆ ಇಲ್ಲಿದೆ



ನವ್ಹೆಂಬರ 10 ಮಲಾಲಾ ದಿನ



ಪಾಕಿಸ್ತಾನದ 14 ವರ್ಷದ ಬಾಲೆ ಮಲಾಲ ಝೂಸುಫ್ ಝ್ರಾಯ್, ಹೆಣ್ಣುಮಕ್ಕಳು ಓದಿ, ಬರೆದು ಸಮಾಜದ ಪ್ರೀತಿ ವಿಶ್ವಾಸ ಗಳಿಸಿ ಅವರೂ ತಮ್ಮ ಕಾಲ ಮೇಲೆ ತಾವು ನಿಲ್ಲಬೇಕೆಂದು ಹೋರಾಡಿದಳು. ಮಕ್ಕಳ ಹಕ್ಕುಗಳನ್ನು ಕಸಿದುಕೊಳ್ಳುವ ಹಕ್ಕು ಯಾರಿಗೂ ಇಲ್ಲವೆಂದು ಘಂಟಾಘೋಷ ವಾಗಿ ಹೇಳಿದಳು. ಅವಳ ಈ ಗುಡುಗು ತಾಲಿಬಾನ ಉಗ್ರರ ಎದೆಗೆ ಸಿಡಿಲು ಬಡಿದಂತಾಯಿತು. ಅವರ ಕಣ್ಣು ಕೆಂಪಾದವು. ತಾಲಿಬಾನ 14 ವರ್ಷದ ಈ ಬಾಲಿಕೆಯ ಮೇಲೆ ಗುಂಡಿನ ಮಳೆಗರೆಯಿತು. ಬಹಳ ಸುದೈವದಿಂದ ನ್ಯಾಯದೇವತೆ– ಈ ಗುಂಡಿನ ಏಟಿನಿಂದ ಪಾರು ಮಾಡಿದಳು. ಕು॥ ಮಲಾಲ ಯೂಸೂಫ್, ರಭಾಯ್ ತಾಲಿಬಾನಿನ ದಾಳಿಗೆ ಗುರಿಯಾಗಿ


ಸುದೈವದಿಂದ ಪಾರಾಗಿ ಬ್ರಿಟನ್‌ನ ಬರ್ಮಿಂಗಿ ಹಾಮ್ ಆಸ್ಪತ್ರೆಯಲ್ಲಿ ಚೇತರಿಸಿಕೊಂಡಳು.

ತನ್ನ 14ನೆಯ ವಯಸ್ಸಿನಲ್ಲಿ ಮಕ್ಕಳ ಹಕ್ಕುಗಳಿಗಾಗಿ ಹೋರಾಡಿದ ಮಲಾಲಳನ್ನು ಇಂದು ಇಡೀ ವಿಶ್ವವೇ ಕೊಂಡಾಡುತ್ತದೆ. ಶನಿವಾರ ನವ್ಹಂಬರ್ 10ನೇ ದಿನಾಂಕದಂದು ಕು॥ ಮಲಾಲಳನ್ನು ಹೃದಯ ತುಂಬಿ ಗೌರವಿಸಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬಾನ್‌ಕಿ ಮೂನ್ ಕು॥ ಮಲಾಳನ್ನು ಪ್ರಲ್ ಹೆಣ್ಣಿನ ಶಿಕ್ಷಣದ ಹಕ್ಕನ್ನು ಪ್ರತಿಪಾದಿಸುವ ಜಾಗತಿಕ ಸಂಕೇತವೆಂದು ಮನತುಂಬಿ ಕರೆದಿದ್ದಾರೆ.

ಬಾನ್ ಕಿ ಮೂನ್ ಅವರ ಜಾಗತಿಕ ಶಿಕ್ಷಣಕ್ಕೆ ಸಂಬಂಧಿಸಿದ ವಿಶೇಷ ರಾಯಭಾರಿ ಬ್ರಿಟನ್‌ನ ಮಾಜಿ ಪ್ರಧಾನಿ ಗಾರ್ಡನ್ ಬ್ರೌನ್ ಅವರು ಈ ಸಂದರ್ಭದಲ್ಲಿ ಕು॥ ಮಲಾಲಳಿಗೆ ಅವಳು ತನ್ನ ಚಿಕ್ಕ ವಯಸ್ಸಿನಲ್ಲಿ ಹೂಡಿದ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಇತ್ತೀಚೆಗಷ್ಟೇ ವಿಶ್ವದ ಸಾವಿರಾರು ಮಂದಿ ಮಲಾಲಳಿಗೆ ನೋಬಲ್ ಪ್ರಶಸ್ತಿ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿದರು.

ಜಗತ್ತಿನ ಯಾವುದೇ ಮೂಲೆಯಲ್ಲಿ ಇಂತಹ ಪ್ರತಿಭಾವಂತ ಮಕ್ಕಳು ಹುಟ್ಟಿಬಂದರೆ ಒಂದು ರಾಜ್ಯವಲ್ಲ, ಒಂದು ರಾಷ್ಟ್ರವಲ್ಲ ಇಡೀ ಜಗತ್ತೇ ಜಾಗೃತಗೊಳ್ಳುತ್ತದೆ. ಇಂತಹ ಮಕ್ಕಳನ್ನು ಶತಾಯಿಷಿ, ಸ್ವಾತಂತ್ರ್ಯ ಹೋರಾಟಗಾರ, ಶ್ರೇಷ್ಠ ರಾಜನೀತಜ್ಞ ವಿದ್ಯಾಧರ ಗುರೂಜಿ ಅವರು ಬಹಳ ಮೆಚ್ಚಿಕೊಳ್ಳುತ್ತಾರೆ. ಇಂತಹ ಸಾವಿರಾರು ಮಕ್ಕಳು ಹುಟ್ಟಿಬಂದರೆ ಮನುಕುಲವೇ ಜಾಗೃತವಾಗುತ್ತದೆ. ಹೆಣ್ಣುಮಕ್ಕಳು ತಮ್ಮ ಕಾಲಮೇಲೆ ತಾವು ನಿಂತು ಜಗತ್ತಿನ ತಾಯಿ ಎನಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲವೆಂದು ವಿದ್ಯಾಧರ ಗುರೂಜಿಯವರ ಸ್ಪಷ್ಟ ನಿಲುವು. ಮಕ್ಕಳ ಮೇಲೆ ಇದ್ದ ಒಲವು.

ಕೆಜ್



ಫಿಲಿಪೈನ್ಸ್ 13 ವರ್ಷದ ಈ ದಿಟ್ಟ ಹುಡುಗ ಹುಟ್ಟಿದ್ದು, ಬೆಳೆದದ್ದೆಲ್ಲಾ ಬೀದಿ ಬದಿಯಲ್ಲೆ. ಚಿಂದಿ ಆಯುವ ಕುಟುಂಬದಲ್ಲಿ ಜನಿಸಿದ ಈತನಿಗೆ ಬಾಲ್ಯದಲ್ಲೇ ನತದೃಷ್ಟ ಎಂಬ ಹಣೆಪಟ್ಟಿಯನ್ನು ಸುತ್ತಲಿನ ಮೂಢನಂಬಿಕೆಯ ಜಗತ್ತು ಅಂಟಿಸಿಬಿಟ್ಟಿತು. ತಮ್ಮ ಕುಲ ಕಸುಬಾದ ಭಿಕ್ಷಾಟನೆಗೆ ಈತ ಇಳಿಯಬೇಕಾಯಿತು.

ಭಿಕ್ಷೆ ಬೇಡುವುದನ್ನು ಇಷ್ಟಪಡದ ಈತನನ್ನು ಸ್ಥಳೀಯ ಶಿಕ್ಷಕರೊಬ್ಬರು ಶಾಲೆಗೆ ಸೇರಿಸಿ ಈತನ ಖರ್ಚಿನ ಹೊಣೆ ಹೊತ್ತರು. ಆದರೆ ಪೋಷಕರು ಈತನನ್ನು ಮತ್ತೆ ಭಿಕ್ಷಾಟನೆಗೆ ದೂಡಿದರು.

ತಮ್ಮ ನಿರೀಕ್ಷೆಗೆ ತಕ್ಕಂತೆ ಭಿಕ್ಷೆ ತರುತ್ತಿಲ್ಲ ಎಂದು ಪೋಷಕರು ಬರೆ ಹಾಕಿ ಚಿತ್ರಹಿಂಸೆ ನೀಡಲಾರಂಭಿಸಿದರು. ಇದನ್ನರಿತ ಸ್ಥಳೀಯ ಶಿಕ್ಷಕರು

ಈತನನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಿ ಭಿಕ್ಷಾಟನೆ ಮಾಡುವ ಮಕ್ಕಳ ಪರ ಹೋರಾಡುವಂತೆ ಹುರಿದುಂಬಿಸಿದರು.

ತನ್ನ ಏಳನೇ ವಯಸ್ಸಿಗೆ 'ಚಾಂಪಿಯನಿಂಗ್ ಕಮ್ಯುನಿಟಿ ಚಿಲ್ಡ್ರನ್' ಎಂಬ ಹೆಸರಿನ ಸರ್ಕಾರೇತರ ಸಂಸ್ಥೆ ಸ್ಥಾಪಿಸಿ ತನ್ನ ಹಾಗೆ ಇರುವ ಮಕ್ಕಳಿಗೆ ಆರೋಗ್ಯ, ನೈರ್ಮಲ್ಯ, ಶಿಕ್ಷಣ ಹಾಗೂ ಮಕ್ಕಳ ಹಕ್ಕುಗಳ ಬಗೆಗೆ ಅರಿವು ಮೂಡಿಸತೊಡಗಿದ. ತನ್ನ 13ನೇ ವಯಸ್ಸಿನವರೆಗೆ ಈತ ಸರಿಸುಮಾರು 10 ಸಾವಿರ ಮಂದಿ ಬೀದಿ ಮಕ್ಕಳಿಗೆ ನೈರ್ಮಲ್ಯ, ಆರೋಗ್ಯದ ಬಗ್ಗೆ ಸಂವಾದ ನಡೆಸಿ, ಸಫಲವಾಗಿದ್ದಾನೆ.

ಈತನ ಸಾಧನೆ ಗಮನಿಸಿದ ಅಂತರರಾಷ್ಟ್ರೀಯ ಸಮುದಾಯ 2012ರ ಅಂತರ ರಾಷ್ಟ್ರೀಯ 'ಮಕ್ಕಳ ಶಾಂತಿ ಪುರಸ್ಕಾರ' ನೀಡಿದೆ.

ದೀಪಾ ಗುಪ್ತ



ಆಸ್ಟ್ರೇಲಿಯಾದ ಸಿಡ್ನಿಯಲ್ಲಿ 1987ರಲ್ಲಿ ಹುಟ್ಟಿದ ಈ ಹೆಣ್ಣುಮಗಳು ಭಾರತದ ಮೂಲದವಳು. ವ್ಯವಹಾರ ಆಡಳಿತದಲ್ಲಿ ಪದವಿ ಪಡೆದಿರುವ ಈಕೆ ತನ್ನ 19ನೇ ವಯಸ್ಸಿನಲ್ಲೇ ಜಾಗತಿಕ ತಾಪಮಾನ ಹೆಚ್ಚಳದ ಸಂಬಂಧ ಯುವಕರಲ್ಲಿ ಅರಿವು ಮೂಡಿಸುವ ಒಂದು ದೊಡ್ಡ ಜಾಲವನ್ನೇ ಸಂಘಟಿಸಿದಳು. ನಂತರ 2008ರಲ್ಲಿ ಈ ಜಾಲವನ್ನು ಇಂಡಿಯನ್ ಕ್ಲೈಮೇಟ್ ನೆಟ್‌ವರ್ಕ್ ಎಂಬ ಹೆಸರಿನಲ್ಲಿ ಭಾರತಕ್ಕೂ ವಿಸ್ತರಿಸಿ ಇದರ ಸಹ-ಸಂಸ್ಥಾಪಕಳೂ ಆದಳು. ಈ ಮುಖೇನ ಜಾಗತಿಕ ತಾಪಮಾನ ಕುರಿತು ಯುವಕರಲ್ಲಿ ಅರಿವು ಮೂಡಿಸುವ ಕಾಯಕದಲ್ಲಿ ನಿರತಳಾಗಿದ್ದಾಳೆ. ಸೇವಾಕಾರ್ಯಕ್ಕಾಗಿ ಪೂರ್ವ ಆಸ್ಟ್ರೇಲಿಯಾದ ನ್ಯೂ ಸೌತ್ ವೇಲ್ಸ್ ರಾಜ್ಯ ನೀಡುವ ಅಂತರರಾಷ್ಟ್ರೀಯ ಪ್ರಶಸ್ತಿ ಎನಿಸಿದ ಗ್ರೀನ್ ಗ್ಲೋಬ್ ಪ್ರೀಮಿಯರ್ಸ್ ಪ್ರಶಸ್ತಿಯನ್ನು 2010ರಲ್ಲೇ ಅಂದರೆ ತನ್ನ 22ನೇ ವಯಸ್ಸಿನಲ್ಲೇ ಈಕೆ ಪಡೆದುಕೊಂಡಳು. ಇದರೊಂದಿಗೆ ಈ ಪ್ರಶಸ್ತಿ ಪಡೆದ ಅತ್ಯಂತ ಕಿರಿಯ ವ್ಯಕ್ತಿ ಎಂಬ ಕೀರ್ತಿಗೂ ಪಾತ್ರಳಾದಳು.

ಅರ್ಪಣಾ ಭೋಲಾ



ಇವರ ವಯಸ್ಸು ಕೇವಲ 16. ಆದರೆ ಈಕೆ ಸಮಾಜದ ಜಾಗೃತಿಗಾಗಿ ದುಡಿಯುತ್ತಿರುವ ಕ್ಷೇತ್ರ ಮಾತ್ರ ಎಂಥವರಿಗೂ ಹುಬ್ಬೇರಿಸುವಂತೆ ಮಾಡುತ್ತದೆ. ಲೈಂಗಿಕ ತಿಳಿವಳಿಕೆ ನೀಡುವ ಕಾಯಕದಲ್ಲಿ ನಿರಂತರವಾಗಿ ತನ್ನನ್ನು ತೊಡಗಿಸಿಕೊಂಡಿರುವ ಈಕೆ ಸಮಾಜದಲ್ಲಿ ಅಸುರಕ್ಷಿತ ಲೈಂಗಿಕತೆಯಿಂದ ಆಗುವ ಅಪಾಯದ ಬಗೆಗೆ ಲೈಂಗಿಕ ಕಾರ್ಯಕರ್ತರಲ್ಲಿ ಅರಿವು ಮೂಡಿಸುತ್ತಿದ್ದಾರೆ.

ಈಕೆಯ ಬದುಕೇ ಒಂದು ದೊಡ್ಡ ಸಾಹಸಗಾಥೆ. ಮೂಲತಃ ಕೋಲ್ಕತ್ತಾದಲ್ಲಿ ಲೈಂಗಿಕ ಕಾರ್ಯಕರ್ತೆಯೊಬ್ಬರಿಗೆ ಜನಿಸಿದ ಈಕೆ ಪಟ್ಟಪಾಡು ಅಷ್ಟಿಷ್ಟಲ್ಲ.

12ನೇ ವಯಸ್ಸಿಗೆ ಮದುವೆಯಾದ ಈಕೆಯ ತಾಯಿ ಮಾಲತಿ ಗಂಡನಿಂದಾಗುತ್ತಿದ್ದ ಕಿರುಕುಳದಿಂದ ಬೇಸತ್ತು ಬಲವಂತವಾಗಿ ವೇಶ್ಯೆಯಾಗುವಂತೆ ಮಾಡಿತು. 14ನೇ ವಯಸ್ಸಿಗೆ ತಾಯಿಯಾದ ಮಾಲತಿ ಜನ್ಮ ನೀಡಿದ್ದು ದಿಟ್ಟ ಹುಡುಗಿ ಅಪರ್ಣಾಗೆ. ಮುಂಬೈಗೆ ವಲಸೆ ಬಂದ ಇವರು ಇಲ್ಲಿನ ಕಾಮಾಟಿಪುರದಲ್ಲಿ ನೆಲೆ ನಿಂತರು.

ಇಲ್ಲಿನ ನಿವಾಸಿಗಳತ್ತ ಇಲ್ಲಿನ ವೈದ್ಯರು ತೋರುತ್ತಿದ್ದ ಅತೀವ ಅಸಡ್ಡೆ ಈಕೆಯನ್ನು ಬಾಲ್ಯದಲ್ಲೇ ಕಾಡುತ್ತಿತ್ತು. ವೈದ್ಯರ ನಿರ್ಲಕ್ಷ್ಯದ ಕುರಿತು ಜಿಗುಪ್ಸೆ ಮೂಡತೊಡಗಿತು. ಈಕೆಯ ತಾಯಿ ಮತ್ತೊಮ್ಮೆ ಗರ್ಭಿಣಿಯಾದಾಗಲಂತೂ ವೈದ್ಯರು ಮಾಡಿದ ಅವಹೇಳನ, ಕುಚೇಷ್ಟೆಗೆ ರೋಸಿಹೋದ ಈಕೆ ತಾನೊಬ್ಬಳು ಸ್ತ್ರೀ ರೋಗ ತಜ್ಞೆಯಾಗಬೇಕೆಂಬ ಗುರಿ ಹೊಂದಿ ಆ ನಿಟ್ಟಿನಲ್ಲಿ ಪ್ರಯತ್ನ ಆರಂಭಿಸಿದರು. 'ಕ್ರಾಂತಿ' ಎಂಬ ಸರ್ಕಾರೇತರ ಸಂಸ್ಥೆಯನ್ನು ಸೇರಿದ ಈಕೆ ಇದರ ನೆರವಿನಿಂದ ಲೈಂಗಿಕ ಶಿಕ್ಷಣ ಪಡೆದು ತನ್ನ ವಾಸಸ್ಥಳದ ಆಸುಪಾಸಿನ ಯುವಕ-ಯುವತಿಯರಿಗೆ ಲೈಂಗಿಕ ಶಿಕ್ಷಣವನ್ನು ನೀಡಲಾರಂಭಿಸಿದರು. ಜತೆಗೆ 12ನೇ ತರಗತಿಯಲ್ಲೂ ಉತ್ತೀರ್ಣರಾಗಿ ಸದ್ಯ ವೈದ್ಯಕೀಯ ಶಿಕ್ಷಣದ ಪ್ರವೇಶ ಪರೀಕ್ಷೆ ಬರೆಯಲು ಯತ್ನಿಸುತ್ತಿದ್ದಾರೆ.

ಸದ್ಯ ಮಹಾರಾಷ್ಟ್ರ ಸರ್ಕಾರದ ಯುವಸಂಪತ್ತನ್ನು ಪ್ರತಿನಿಧಿಸುತ್ತಿರುವ ಈಕೆ ಲೈಂಗಿಕ ಕಾಯಕರ್ತರಲ್ಲಿ ಅವರ ಮಕ್ಕಳಲ್ಲಿ ಲೈಂಗಿಕ ಶಿಕ್ಷಣವನ್ನು ನಿರಂತರವಾಗಿ ನೀಡುತ್ತಾ ಬರುತ್ತಿದ್ದಾರೆ.

ಐಶ್ವರ್ಯ ಪರಾಶರ



ಜನಸಾಮಾನ್ಯರ ಕೈಗೆ ಇತ್ತೀಚೆಗೆ ಸಿಕ್ಕ ದೊಡ್ಡ ಬ್ರಹ್ಮಾಸ್ತ್ರ ಮಾಹಿತಿ ಹಕ್ಕು ಕಾಯಿದೆ. ಮಾಹಿತಿ ಹಕ್ಕಿಗಾಗಿ ದೊಡ್ಡ ಆಂದೋಲನವೇ ದೇಶದಲ್ಲಿ ನಡೆಯುತ್ತಿದ್ದು, ಅದರಲ್ಲಿ ಸಕ್ರಿಯರಾದವರು ಅನೇಕರಿದ್ದಾರೆ. ಆದರೆ ಅತ್ಯಂತ ಕಡಿಮೆ ವಯಸ್ಸಿನ ಮಾಹಿತಿ ಹಕ್ಕು ಕಾರ್ಯಕರ್ತರಲ್ಲಿ ಐಶ್ವರ್ಯ ಪರಾಶರ ಒಬ್ಬರು. ಅಂದಹಾಗೆ ಇವರ ವಯಸ್ಸು ಬರೇ 10 ವರ್ಷ!

ಹೌದು, ಆಶ್ಚರ್ಯ ಎನಿಸಿದರೂ ಸತ್ಯ. ಮಹಾತ್ಮಗಾಂಧಿ ಅವರಿಗೆ 'ರಾಷ್ಟ್ರಪಿತ' ಎಂಬ ಬಿರುದನ್ನು ಯಾವಾಗ, ಯಾವ ಆದೇಶದ ಮೇರೆಗೆ ನೀಡಲಾಯಿತು? ಎಂದು ಇವರು ಪ್ರಧಾನಮಂತ್ರಿ ಸಚಿವಾಲಯಕ್ಕೆ ಮಾಹಿತಿ ಹಕ್ಕು ಕಾಯಿದೆ ಅಡಿ ಕೇಳಿದ ಪ್ರಶ್ನೆ ಇಡೀ ಸಿಬ್ಬಂದಿ ವರ್ಗವನ್ನೇ ಪೇಚಿಗೆ ಸಿಲುಕಿಸಿತು. ಎಲ್ಲಾ ಕಡತಗಳನ್ನು ಜಾಲಾಡಿದ ಸಚಿವಾಲಯ ಈ ತರಹದ

ಯಾವುದೇ ಆದೇಶಗಳು ಲಭ್ಯ ಇಲ್ಲ ಹೆಚ್ಚಿನ ಮಾಹಿತಿಗಾಗಿ ರಾಷ್ಟ್ರೀಯ ಸಂಗ್ರಹಾಲಯವನ್ನು ಸಂಪರ್ಕಿಸುವಂತೆ ಸಲಹೆ ನೀಡಿತು.

ರಾಷ್ಟ್ರೀಯ ಸಂಗ್ರಹಾಲಯವೂ ಈ ಸಂಬಂಧ ಯಾವುದೇ ದಾಖಲೆ ನೀಡದೆ ತಮ್ಮಲ್ಲಿಗೆ ಬಂದು ಹುಡುಕುವಂತೆ ಐಶ್ವರ್ಯಗೆ ಸಲಹೆ ನೀಡಿತು. ಇನ್ನೂ ಹಲವು ಉತ್ತರ ಸಿಗದ ಪ್ರಶ್ನೆಗಳನ್ನು ಸಂಬಂಧಪಟ್ಟ ಇಲಾಖೆಗೆ ನೀಡುತ್ತಾ ದಾಖಲೀಕರಣದಲ್ಲಿ ಈಕೆ ಇನ್ನೂ ತೊಡಗಿಸಿಕೊಂಡಿರುವುದು ವಿಶೇಷ.

ದುಷ್ಟಶಕ್ತಿ ವಿರುದ್ಧ ಜಯಿಸಿದ ದೇವಿಕಾ



ದೇವಿಕಾ ರೋತವಾನ ಎಂಬ 14 ವರ್ಷದ ಬಾಲೆ ಧೈರ್ಯದ ಸಾಕ್ಷಾತ್ ಪ್ರತಿರೂಪ. 2006ರಲ್ಲಿಯೇ ತಾಯಿಯನ್ನು ಕಳೆದುಕೊಂಡ ಈ ಪುಟ್ಟಬಾಲೆ 2008ರ ಮುಂಬೈ ಭಯೋತ್ಪಾದಕ ದಾಳಿಯಲ್ಲಿ ಕೂದಲೆಳೆ ಅಂತರದಲ್ಲಿ ಬದುಕುಳಿದಾಕೆ. ಈಕೆ ಅಜ್ಮಲ್ ಕಸಬ್ ವಿರುದ್ಧ ಪ್ರತ್ಯಕ್ಷದರ್ಶಿ ಸಾಕ್ಷಿಯಾಗಿ ಪರೀಕ್ಷಿಸಲ್ಪಟ್ಟಳು. ತಾನು ತೋರಿದ ಧೈರ್ಯಕ್ಕಾಗಿ ಶಾಲೆಯಲ್ಲಿ ಹಾಗೂ ನೆರೆಹೊರೆಯವರಿಂದ ತಾರತಮ್ಯವನ್ನು ಅನುಭವಿಸಬೇಕಾಯಿತು. ಆದರೂ ಆಗದು ಎಂದು ಕೈಕಟ್ಟಿ ಕೂಡಲಿಲ್ಲ ಈ ಬಾಲೆ.

ಅಜ್ಮಲ್ ಕಸಬ್ ವಿರುದ್ಧ ಸಾಕ್ಷಿದಾರರಲ್ಲಿ ಏಕೈಕ ಅಪ್ರಾಪ್ತ ಬಾಲಕಿಯಾಗಿದ್ದರೂ ಧೃತಿಗೆಡದ ದೇವಿಕಾ, ಅನೇಕ ಮೀಡಿಯಾ ಕ್ಯಾಮರಾಗಳು ಕ್ಲಿಕ್ಕಿಸುತ್ತಿದ್ದರೂ ಲೆಕ್ಕಿಸದೇ, ಅವನೇ ಆ ಪಾತಕಿ ಎಂದು ಬೊಟ್ಟು ಮಾಡಿ ತೋರಿಸಿದಳು. ಇಂದು ಆ ಪಾಪಿ ಗಲ್ಲಿಗೇರಿದ್ದರೆ ಅದಕ್ಕೆ ಮುಖ್ಯ ಕಾರಣಕರ್ತೆ ದೇವಿಕಾ.

ನವೆಂಬರ್ 26, 2008 ಎಂತಹ ಗಟ್ಟಿಗುಂಡಿಗೆಯನ್ನೂ ನಡುಗಿಸಿದಂತಹ ದಿನ. ಅಂದು ಅಜ್ಮಲ್ ಒಳಗೊಂಡಂತೆ 9 ಜನ ಮುಸ್ಲಿಂ ಭಯೋತ್ಪಾದಕರು ಮುಂಬೈನಲ್ಲಿ ಅಟ್ಟಹಾಸ ಮೆರೆಯುತ್ತಿದ್ದರು. ರಾಕ್ಷಸರಂತೆ ಸಿಕ್ಕಸಿಕ್ಕವರನ್ನು ಕೊಲ್ಲುತ್ತಿದ್ದರು. ಅಂದು ರಾತ್ರಿ ಸುಮಾರು 9.55ಕ್ಕೆ ಮುಂಬೈನ ಛತ್ರಪತಿ ಶಿವಾಜಿ ಟರ್ಮಿನಸ್‌ನಲ್ಲಿ ಮನಬಂದಂತೆ ಗುಂಡು ಹಾರಿಸುತ್ತಿದ್ದ ಕಸಬ್.

ಅವನು, ಹಾರಿಸಿದ ಗುಂಡಿನಿಂದ ಕೂದಲೆಳೆ ಅಂತರದಲ್ಲಿ ದೇವಿಕಾ ಪಾರಾದಳು. ಆದರೆ ಆಕೆಯ ಬಲಗಾಲಿಗೆ ಗುಂಡು ತಗುಲಿತ್ತು. ಕಾಲು ಉಳಿಯಿತಾದರೂ ನಡೆದಾಡಲು ಸಹಾಯವಾಗುವ ನಿಟ್ಟಿನಲ್ಲಿ ಕಾಲೊಳಗೆ ಸೇರಿಸಿರುವ ರಾಡ್ ಇಂದಿಗೂ ಪ್ರತಿಕ್ಷಣ ಆ ಘಟನೆಯನ್ನು ಆಕೆಗೆ ನೆನಪಿಸುತ್ತಲೇ ಇದೆ.

ಅವಳ ತಂದೆ ನಟವರ್ ಲಾಲ್ ಅವರಂತೂ ಆ ಭಯಾನಕ ಘಟನೆಯಿಂದ ಮಕ್ಕಳಿಗೆ ಮತ್ತಾವುದೇ ತೊಂದರೆಯಾಗದಂತೆ, ಅನೇಕ ದಿನಗಳಕಾಲ ಎದೆಗೆ ಅವುಚಿಕೊಂಡೇ ಭೀತಿಯ ಬದುಕು ಸಾಗಿಸಿದ್ದರು. ಯಾವುದೇ ಕಾರಣಕ್ಕೂ ಕಸಬ್ ಶಿಕ್ಷೆಯಿಂದ ತಪ್ಪಿಸಿಕೊಳ್ಳಬಾರದು. ಅದು ಸಾಧ್ಯವಾಗಬೇಕೆಂದರೆ ನೀವು ಹೆಚ್ಚು ಸಾರ್ವಜನಿಕವಾಗಿ ಕಾಣಿಸಿಕೊಳ್ಳಬಾರದು ಎಂದು ಸೂಚಿಸಿದ್ದ ಪೋಲೀಸರ ಮಾತನ್ನು ಚಾಚು ತಪ್ಪದೆ ಪಾಲಿಸುತ್ತಿದ್ದರು ನಟವರ್ ಲಾಲ್.

ಒಂದೆಡೆ ದೇವಿಕಾ ಕಸಬ್‌ನ ವಿರುದ್ಧ ಸಾಕ್ಷಿಯಾಗಿ ದೇಶದ ಸೇವೆಯಲ್ಲಿ ನಿರತವಾಗಿದ್ದೇ, ಸಮಾಜದ ದೃಷ್ಟಿಯಲ್ಲಿ ಮಹಾಘೋರ ತಪ್ಪಾಗಿತ್ತು. ಏಕೆಂದರೆ, ಭಯೋತ್ಪಾದಕ ಧಾಳಿಯಿಂದ ಚೇತರಿಸಿಕೊಳ್ಳುವ ಹೊತ್ತಿಗೆ ಒಂದು ವರ್ಷದ ಶಿಕ್ಷಣವನ್ನು ಆಕೆ ಕಳೆದುಕೊಂಡಿದ್ದಳು. ಆದರೆ ನಟವರ್‌ಲಾಲ್ ಹೇಳುವಂತೆ ಅನೇಕ ಶಾಲೆಗಳು ಆಕೆಗೆ ಶಿಕ್ಷಣವನ್ನು ನೀಡಲು ಹಿಂಜರಿದವು. ಕಾರಣ ಕೇಳಿದಾಗ, ಆಕೆ ಉಗ್ರಗಾಮಿಯ ವಿರುದ್ಧ ಸಾಕ್ಷಿಯಾಗಿದ್ದು ಮುಂದೊಂದು ದಿನ ಉಗ್ರಗಾಮಿಗಳು ನಮ್ಮ ಶಾಲೆಯ ಮೇಲೆ ದಾಳಿ ಮಾಡಿದರೆ ಏನು ಗತಿ? ಎಂದು ಪುಕ್ಕಲು ಪ್ರತಿಕ್ರಿಯೆ ನೀಡಿದ್ದವು. ಆದರೆ, ಪ್ರತಿಭಟನೆಯ ಪರಿಣಾಮ ಶಾಲೆಯೊಂದು ಕೊನೆಗೂ ಆಕೆಗೆ ಕಲಿಯಲು ಅವಕಾಶ ಮಾಡಿಕೊಟ್ಟಿದೆ. ಇದರಿಂದ ಅಂತರಾಷ್ಟ್ರೀಯ ಭಯೋತ್ಪಾದಕನ ವಿರುದ್ಧ ದಿಟ್ಟ ಸಾಕ್ಷಿ ನುಡಿದ ದೇವಿಕಾ ಇವತ್ತು ಹರೆಯದ ಮಕ್ಕಳ ಧೈರ್ಯದ ಮಾದರಿ ಎನಿಸಿದ್ದಾರೆ. ಅದೇ ವೇಳೆ ಇಂತಹ ದಿಟ್ಟೆಗೆ ಶಿಕ್ಷಣ ನೀಡಲು ಅಂಜಿದ ಸಂಸ್ಥೆಗಳು ತಲೆ ತಗ್ಗಿಸಿವೆ. ನಿಜವಾಗಿಯೂ ಅಂತಹ ಬಾಲೆಗೆ ಶಿಕ್ಷಣ ನೀಡಲು ಶಾಲೆಗಳು ಪುಣ್ಯಮಾಡಿರಬೇಕು ಎಂದು ಪ್ರಜ್ಞಾವಂತರು ಮಾತನಾಡಿಕೊಳ್ಳುವಂತಾಗಿದ್ದು ಸುಳ್ಳಲ್ಲ.


ಚಮತ್ಕಾರಿಕ ಉಳಿವು

ನಟವರ್ ಲಾಲ್ ಅಂದಿನ ಘಟನೆಯನ್ನು ಈ ರೀತಿ ಮೆಲಕು ಹಾಕುತ್ತಾರೆ ಅಂದು ನಾನು ನನ್ನ ಮಗಳಾದ ದೇವಿಕಾ ಮತ್ತು 12 ಮತ್ತು 13ನೇ ಪ್ಲಾಟ್‌ಫಾರ್ಮಿನ ಮಧ್ಯದಲ್ಲಿ ನಿಂತಿದ್ದೆವು. ನನ್ನ ಇನ್ನೊಬ್ಬ ಮಗ ಜಯೇಶ್ ಮೂತ್ರ ವಿಸರ್ಜಿಸಲು ಹೋಗಿದ್ದ. ನಮ್ಮ ಮುಂದಿನ ಮೂಲೆಯಲ್ಲಿದ್ದ ನಾಯಿಗೆ ಒಮ್ಮೆಲೆ ಗುಂಡೇಟು ಬಿದ್ದು ಅದು ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡತೊಡಗಿತ್ತು. ಆಗಲೇ ಅದರ ವಿರುದ್ಧ ದಿಕ್ಕಿನಲ್ಲಿ ಮನ ಬಂದಂತೆ ಗುಂಡು ಹಾರಿಸುತ್ತಿದ್ದ ಕಸಬ್ ಕಾಣಿಸಿದ. ಅವನ ಜೊತೆಗಾರನೊಬ್ಬ ಗ್ರೆನೆಡ್ ಎಸೆಯುತ್ತಿದ್ದ. ನಮ್ಮೆಡೆಗೆ ತಿರುಗಿದ ಕಸಬ್ ಹಾರಿಸಿದ ಗುಂಡಿನಿಂದ ನಾನು ಸ್ವಲ್ಪದರಲ್ಲಿಯೇ ಪಾರಾದೆನಾದರೂ, ದುರದೃಷ್ಟಕರವಾಗಿ ಆ ಗುಂಡು ದೇವಿಕಾಳ ಕಾಲಿಗೆ ಬಿದ್ದು, ಅವಳು ಕುಸಿದು ಬಿದ್ದಳು. ನಾನು, ಒಮ್ಮೆಲೆ ತಿರುಗಿ ಅವಳ ಮೇಲೆ ಬಿದ್ದೆ. ಕಸಬ್ ನನ್ನ ಹತ್ತಿರ ಬಂದು ಪರೀಕ್ಷಿಸಿದ. ಆಗ ನಾನು ಸತ್ತವರಂತೆ ನಟಿಸಿ ಬದುಕಿಕೊಂಡೆ. ಸುಮಾರು ಒಂದು ಗಂಟೆಯ ನಂತರ ನಾನು ಆ ಘಟನೆಯಿಂದ ಎಚ್ಚೆತ್ತಾಗ, ಸುತ್ತಲೂ ಅಂಬುಲೆನ್ಸ್‌ಗಳ ಶಬ್ದ ಕಿವಿಗೆ ಬೀಳುತ್ತಿತ್ತು. ನಾನು, ತಕ್ಷಣ ತಿರುಗಿ ಬಿದ್ದಿದ್ದರಿಂದ, ನನ್ನ ಕಾಲು ತಿರುವಿಕೊಂಡು ನನಗೆ ನಿಲ್ಲಲೂ ಆಗದಂತಾಗಿತ್ತು. ಹೀಗಾಗಿ ಕೆಳಗೆ ಬಿದ್ದ ದೇವಿಕಾಳನ್ನು ನೆಲದ ಮೇಲೆಯೇ ಎಳೆದುಕೊಂಡು ಹೋಗಿ ಸುರಕ್ಷಿತ ಜಾಗ ತಲುಪಿದೆ. ಆಗ, ಅಲ್ಲಿಗೆ ಬಂದ ಸಿಬ್ಬಂದಿ ನಮ್ಮನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಗುಂಡೇಟಿನಿಂದಾಗಿ ದೇವಿಕಾಳ ಬಲಗಾಲ ಎಲುಬು ಮೂರು ತುಂಡಾಗಿತ್ತು. ಹೀಗಾಗಿ, ಅವಳ ಕಾಲಿನಲ್ಲಿ ರಾಡನ್ನು ಸೇರಿಸಬೇಕಾಯಿತು. ನಂತರದಲ್ಲಿ ಅವಳು ನಡೆಯಬಲ್ಲಳಾದರೂ, ಮೆಟ್ಟಿಲು ಹತ್ತುವಾಗ ಇಲ್ಲವೇ ಭಾರವನ್ನೇನಾದರೂ ಹೊತ್ತರೆ ಅವಳು ನೋವನ್ನು ಅನುಭವಿಸುತ್ತಾಳೆ. ಅದನ್ನು ಕಂಡಾಗಲೊಮ್ಮೆ ನನ್ನ ಕರುಳು ಕಿತ್ತುಬಂದಂತಾಗುತ್ತದೆ.

ಸಾಕ್ಷಿಹೇಳಿದ ಧೀರೆ


ಕಸಬ್ ಮತ್ತು ತಂಡದ ಅಟ್ಟಹಾಸವನ್ನು ಕಣ್ಣಾರೆ ಕಂಡರೂ ಸಾಕ್ಷಿ ಹೇಳುವ ದಿಟ್ಟತನವನ್ನು ತೋರಲಿಲ್ಲ. ಆದರೆ, ದೇವಿಕಾ ಸಾಕ್ಷಿ ಹೇಳಲು

ಧೈರ್ಯವಾಗಿ ಮುಂದೆ ಬಂದಳು. ಆಕೆಗೆ ನಾಲ್ಕು ಜನರನ್ನು ತೋರಿಸಿ ಇದರಲ್ಲಿ ಯಾರು ನಿನ್ನ ಮೇಲೆ ದಾಳಿ ಮಾಡಿದ್ದು? ಎಂದು ನ್ಯಾಯಾಲಯದಲ್ಲಿ ಕೇಳಲಾಯಿತು. ಆಗ ನಿಖರವಾಗಿ ಕಸಬ್‌ನನ್ನು ಗುರ್ತಿಸಿದ ದೇವಿಕಾ, ಇವನೇ ನನಗೆ ಗುಂಡು ಹೊಡೆದದ್ದು ಎಂದು ತಿಳಿಸಿದಳು. ಆಗ ಅಜ್ಮಲ್ ಕಸಬ್ ಪರ ವಕೀಲ ನೀನು ಪೋಲೀಸರು ಹೇಳಿಕೊಟ್ಟಂತೆ ಸುಳ್ಳು ಹೇಳುತ್ತಿರುವಿ ಎಂದು ಆಕೆಯ ಮೇಲೆ ಆರೋಪವನ್ನು ಮಾಡಿದರು. ಅದಕ್ಕೆ 'ನಾನು ದೇವರ ಮೇಲೆ ಆಣೆ ಮಾಡುವೆ, ಸುಳ್ಳು ಹೇಳುತ್ತಿಲ್ಲ' ಎಂದು ಪಬ್ಲಿಕ್ ಪ್ರಾಸಿಕ್ಯೂಟರ್‌ಗೆ ತಿರುಗು ಬಾಣ ಬಿಟ್ಟಳು. ಆಗ ಮಧ್ಯ ಪ್ರವೇಶಿಸಿದ ನ್ಯಾಯಾಧೀಶರು 'ನಿನಗೆ ಆಣೆ, ಎಂದರೆ ಏನು ಗೊತ್ತೆ?' ಎಂದು ಕೇಳಿದರು. ಅದಕ್ಕೆ ಆಣೆ ಮಾಡಿ ಸುಳ್ಳು ಹೇಳಿದರೆ ದೇವರು ನಮ್ಮನ್ನು ಶಿಕ್ಷಿಸುತ್ತಾನೆ ಎಂದು ಮುಗ್ಧತೆಯಿಂದ ಪ್ರತ್ಯುತ್ತರಿಸಿದಳು. ಹೀಗೆ ಈ ವಾದ ಪ್ರತಿವಾದ ನಡೆದಾಗಲೊಮ್ಮೆ ಈ ಪುಟ್ಟ ಹುಡುಗಿ ದಿಟ್ಟತನದಿಂದ ಸಾಕ್ಷಿ ನುಡಿದಳು. ಕೊನೆಗೂ ಉಗ್ರ ಕಸಬ್‌ನನ್ನು ನೇಣಿಗೇರಿಸುವುದರ ಮೂಲಕ ಕರ್ನಾಟಕ ಸಂದೀಪ್ ಉನ್ನಿಕೃಷ್ಣನ್‌ರಂಥ ವೀರರ ಸಹಿತ ಅನೇಕ ದಿಟ್ಟ ಸಾಕ್ಷಿದಾರರಿಗೆ ಹಾಗೂ ಸಂತ್ರಸ್ತರಿಗೆ ನ್ಯಾಯ ದೊರೆತಿದೆ.





ಪತ್ರಗಳು
ಪ್ರಶಸ್ತಿ ಪತ್ರಗಳು



दूरभाष : 40745 कार्यालय : 46044 घर : 40128
तार : 'राष्ट्रभाषा', वर्धा

द्वारकादास जी. वेद
बी.ए., रा. रत्न

प्रधान-मंत्री,
राष्ट्रभाषा प्रचार समिति,
हिन्दीनगर, वर्धा - 442 003.

प्रचार/ 1968   दिनांक 4. 11. 1995

आदरणीय श्री गुरूजी,

सादर प्रणाम ।

आपका दिनांक 11 अक्टूबर का पत्र यथासमय मिला । धन्यवाद । आपके पत्र से ज्ञात हुआ कि गुलबर्गा में आपने हम चालीस शिविर का आयोजन किया था । कर्नाटक राज्य में आपके द्वारा किया गया यह प्रयास सभी के लिए उत्साहप्रेरक रहेगा । मुझे विश्वास है कि कर्नाटक के अन्य क्षेत्रों में भी इस अभियान का विचार करेंगे । हैदराबाद में भी काम जो हुआ है वह भी आपके नेतृत्व में पूरे आन्ध्र में भाई श्री प्रकाशकुमार जी, डॉ० कुलकर्णी जी के सहयोग से इस कार्य को और भी गति लाने में मदद करेंगे ।

आप जानते हैं कि आगामी 2 अक्टूबर को सभी राज्यों के प्रत्येक तहसील में चिन्तन दिन तथा हिन्दी में हस्ताक्षर करनेवाले 40-40 व्यक्तियों को एकत्र करना है और 1997 की 2 अक्टूबर को देश की राजधानी दिल्ली उपरांत प्रत्येक प्रदेश, जिलों, तहसीलों और गांव के स्तर पर सभी हम चालीस की विशाल रैली का आयोजन करना है जो इस अभियान का अंतिम चरण होगा । इसका एकमात्र उद्देश्य यह है कि हमारे देश में विदेशी भाषा की अनिवार्यता न रहे ।

विश्व हिन्दी सम्मेलन के बारे में आपका प्रस्ताव प्राप्त हुआ है । 5 वाँ सम्मेलन आगामी मार्च में त्रिनिडाड में आयोजित करने के बारे में वहाँ के लोग प्रयत्न कर रहे हैं । उसके बाद 6 वाँ विश्व हिन्दी सम्मेलन भारत में करने का विचार है जो पूर्ण रूप से राष्ट्रभाषा प्रचार समिति, वर्धा आप जैसे महानुभावों के सहयोग से सम्पन्न करने के लिए कटिबद्ध है । शेष कुशल, सादर


आपका,
द्वा जी वेद

श्री विद्याधर गुरूजी, गुलबर्गा

सी-1/103, योगीनगर, एक्सर मार्ग, बोरीवली (प.), बम्बई - 400 092   फोन : 8015057

कृपया पत्र व्यवहार वर्धा के पते पर ही करें।





हैदराबाद,
27.8.2005

श्रद्धेय श्री विद्याधर गुरुजी,

सादर प्रणाम।

आप का दिनांक 17.08.2005 का पत्र मिला। अत्यन्त आभारी हूँ।

70 वें जन्मदिन के उपलक्ष्य में आप की शुभकामनाएँ स्वीकार करते हुए आप की सहृदयता एवं हितैष्यता के लिए हार्दिक धन्यवाद अर्पित करता हूँ। आप सदैव मेरे परम हितैषी रहे हैं और रहते आ रहे हैं।


मैं सपरिवार सानंद हूँ।

आशा है आप स्वस्थ एवं सकुशल हैं।

भवदीय,

[signature]

डॉ. एन. पी. कुट्टन पिल्ल
190, स्टेट बैंक ऑफ इंडिया कॉलो
गांधीनगर, हैदराबाद-500 080,



ಪ್ರೀತಿಯ ಬಂಧುಗಳೇ !

ನಾನು ನನ್ನ ಜೀವನವನ್ನು ವಿದ್ಯಾರ್ಥಿ ಕಾಲದಿಂದಲೂ ರಾಷ್ಟ್ರಕ್ಕೆ ಸಮರ್ಪಿತ ಮಾಡಿದ್ದೇನೆ. ಕರ್ನಾಟಕದ ಗುರುಮಠಕಲ್ ಗ್ರಾಮದಲ್ಲಿ ಹುಟ್ಟಿದರೂ ವಿದ್ಯಾರ್ಥಿ ಕಾಲದಿಂದಲೇ ನೈಜಾಮ ಸರ್ಕಾರದ ದಬ್ಬಾಳಿಕೆ ವಿರುದ್ಧ ಹೋರಾಡಿದ್ದರಿಂದ ಹೈದರಾಬಾದ ಪ್ರಾಂತದಿಂದ ಗಡಿಪಾರು ಶಿಕ್ಷೆಗೆ ಒಳಗಾಗಿದ್ದರಿಂದ ಬಾಹೋಲಿನ (?) ಆರ್ಯ ಸಮಾಜದ ಆಶ್ರಯದಲ್ಲಿ ಹಿಂದಿ ಶಿಕ್ಷಣ ಪಡೆಯಬೇಕಾಯಿತು. ಕನ್ನಡ ನನ್ನ ಮಾತೃಭಾಷೆ. ನಾನೊಬ್ಬ ಸ್ವಾತಂತ್ರ್ಯ ಸೇನಾನಿ.

ಕ್ರಿ.ಶ. 1962ರಲ್ಲಿ ಗುರುಮಠಕಲ್ ಮತಕ್ಷೇತ್ರದಿಂದ ಆರಿಸಲ್ಪಟ್ಟ ಎಂ.ಎಲ್.ಎ. ಆಗಿದ್ದೆ. 1988ರಲ್ಲಿ ಹಿಂದುಳಿದವರ ನಾಯಕನೆಂದು ಮುಖ್ಯಮಂತ್ರಿ ಶ್ರೀ ಹೆಗಡೆ ಯವರೊಂದಿಗೆ ಸಹಕಾರ ಮಾಡಿದ್ದರಿಂದ ಆರು ವರ್ಷ ಎಂ.ಎಲ್.ಸಿ. ಆಗಿದ್ದೆ.

ನನ್ನ ಸೌಭಾಗ್ಯವೆನ್ನಬಹುದು. ಹಿಂದೆ 12ನೇ ಶತಮಾನದಲ್ಲಿ ಬಸವಣ್ಣನವರು ಮಾದಿಗರ (?) ಮಾಡಿದೇವರಿಗೆ (?) ಇನ್ನು ಭುವಮಂಡಲದಲ್ಲಿ ಪ್ರಾಶಸ್ತ್ಯ (?) ಕ್ರಾಂತ್ (?) ಡಾ. ಬಾ. ವಿ. ಪತ್ರಿ ಯವರು ಇದೇ ಮಾದಿಗರ (?) ಸಮಾಜದ ನನ್ನನ್ನು ಬಸವ ಸಮಿತಿ ಕಾರ್ಯಕಾರಿಣಿಯಲ್ಲಿ ಒಬ್ಬರನ್ನಾಗಿ (?) ನನಗೆ ಸ್ಥಾನ ಕಲ್ಪಿಸಿದ್ದರು.

ಈಗ ನೇರನಾವಿಯ (?) ... ಶ್ರೀ ವಿಶ್ವನಾಥರೆಡ್ಡಿ (?) ಯವರು ಹಾಗೂ ನಿಮ್ಮ (?) ಹೃದಯವಂತ ಶ್ರೀಯರವರಿಂದ (?) ಪತ್ರಿಯವರಿಗೆ ನನ್ನಿಂದಾದ ಸಹಕಾರ ನೀಡಿ ಬಸವತತ್ವ ಪ್ರಚಾರ ಕಾರ್ಯ ಮಾಡಬೇಕೆಂದು ಕಾರ್ಯಕಾರಿಣಿಗೆ ಸೂಚನೆ ನೀಡಿದ್ದೇನೆ. ಈ ಮೂಲಕ ಆಸಕ್ತರಾಗಿ (?) ನಿಮ್ಮ ಬೆಂಬಲ ಕೋರುತ್ತಿದ್ದೇನೆ.


ನಿಮ್ಮ
ವಿದ್ಯಾಧರ ಗುರೂಜಿ.

The High Commission of India
and
The Organising Committee of the Conference
have the pleasure to invite

Shri Vidyadhar Guruji

to the book exhibition, a photographic exhibition on the 14th century Indian writer, poet and philosopher Kabir, and a display of computer software in Hindi
on
Monday, 13 September 1999 at 1845 Hours to be
inaugurated by Ambassador of Uzbekistan to the UK
His Excellency Mr. Fatih Gulyamovich Teshabaev
at the Nehru Centre, 8 South Audley Street, London W1

R.S.V.P
0171 629 9841



Attested True Copy

NOTARY

M.S. Malipatil



اسپیشل مجسٹریٹ اضلاع سرکار عالی

نقل تجویز ۱۶/ خورداد سنہ ۱۳۵۸ ف

مقدمہ $\frac{۱۴}{۲}$ سنہ ۵۷ ف

بہ اجلاس مولوی حفظ الکبیر خان لیج۔ سی۔ ایس اسپیشل مجسٹریٹ

سرکار عالی ـــــ بہ نام ـــ ودیا دھر عرف گوروجی وغیرہ

علت ـــ امن و امان میں خلل و ارتکاب گرفتاری

حسب دفعہ (۳۳۰) تعزیرات آصفیہ

۱۶/ خورداد سنہ ۱۳۵۷ ف

آجکل ریاست ~~ہذا~~ ہماری علاقہ جات سے کچھہ اسطرح مربوط ہو گئی ہے کہ

غنڈہ گردی کا ہر پہلو ریاست جو از لئے ہوئے ہے۔

گرفتار شدہ ملزمین مسمی ناگپا و ملپا وغیرہ کے بیانات اور متعلقہ

پولس و خفیہ پولیس رپورٹ اور مفرور مسمی ودیا دھر گوروجی ساکن

یادگیر کی بیانگاہ سے جو کاغذات اور چھپے ہوئے پرچہ جات برآمد

ہوئے ہیں۔ اس سے ثابت ہوتا ہے کہ مفرور مسمی کانگریس اور مہاتما

گاندھی کی حمایت کے پردہ کی آڑ میں غیر سماجی اور غنڈہ عناصر کو

مشتعل کرتا اور ساتھہ بھولے بھالے عوام کو گمراہ کرتا ہے۔

ہری بھنک اور دیگر مثالیں دے کر اس کو

نیک اور ثواب کا کام بتاتا ان کی تقریر کا مفہوم ہوتا ہے۔

اس شخص سے اس علاقہ کا امن اور امان کو خطرہ محسوس ہو رہا ہے

لہذا۔ اس خطرناک ملزم ~~کی~~ کی سرکوبی اشد ضروری ہے۔

ودیا دھر ~~گوروجی~~ گوروجی جہاں کہیں اور جس حالت میں ہو ن حاضر عدالت

کیجائے۔

منصف

۱ ـــ جناب سرکل انسپکٹر پولیس یادگیر سرکل

۲ ـــ جناب منتظم پولس حلقہ گرمٹکال

۳ ـ پولس اسٹیشن حلقہ سیدہ پور

اسپیشل مجسٹریٹ اضلاع سرکار عالی [signature]

۲

۱ ـ نام درخواست گذار ـ مولوی محمد اسمعیل صاحب وکیل

۲ـ تاریخ ادخال درخواست گذار برائے نقل ۶/خورداد سنه ۱۳۵۷ ف

۳ ـ تاریخ ادخال اجرت

۴ ـ تاریخ تقرر کردہ عدالت بابت حصول نقل ـ ۸/خورداد سنه ۵۷ ف

۵ـ تاریخ تیاری نقل ــــ ۰ ۲/ خورداد سنه ۵۷ ف

۶ـ تاریخ ادخال نقل اجرت

۷ ـ تعداد الفاظ

۸ ـ تعداد اجرت

۹ ـ تعداد فہرست کاغذ


۱۰ ـ تاریخ عطائے نقل ـ ۸ خورداد سنه ۵۷ ف

۱۱ ـ نام کاتب نقل ـ مادھو راؤ

۱۲ ـ نام گوہندہ نقل ـ محمد اسمعیل صاحب وکیل

تاریخ ۱۸/۷/ سنه ۵۷ع

شہ مسل مانک راؤ



सुधीर विद्यार्थी

संपादक : 'संदर्श' साहित्यिक त्रैमासिक
संयोजक : रुहेलखण्ड सांस्कृतिक मोर्चा
राष्ट्रीय पार्षद : जन संस्कृति मंच

"चंदनगंध"
निकट बड़ा पावर हाउस
बीसलपुर–262 201
जिला–पीलीभीत (उ.प्र.)
✆ 05881 - 21292 पी.पी.

दिनांक : 15/6/97

आदरणीय भाई,

काफी दिनों पूर्व आपका एक पत्र आया था जो कहीं रखकर उत्तर देना विस्मृत कर गया। बाद को वह मिला तो अत्यन्त पछतावा हुआ। इधर बीसलपुर जब से आया हूँ तो काम-धाम कुछ यों ही चल रहा है। मनः स्थिति अजीब-सी है। हमारी पत्रिका 'संदर्श' का नया अंक छप कर आया और थोड़ा डिस्पैच भी हुआ। बाकी प्रतियाँ अभी दिल्ली के प्रेस में ही पड़ी हैं। जाने का बन नहीं पाया। वहाँ से आते ही आपको भेजूँगा। उसमें स्वाधीनता आन्दोलन पर महत्वपूर्ण सामग्री है जो आपको पसन्द आयेगी।

4 मई को मैं शहीद भगतसिंह सम्बन्धी एक आयोजन में झुन्झुनू गया था। वहाँ से जयपुर के मित्र लोग एक दिन को खींच ले गए। तत्पश्चात दिल्ली होता हुआ आया था। किसी अवसर पर मैं आपके पास कर्नाटक भी आना चाहता हूँ। एक बार आपने मन्मथनाथ जी और मुझे बुलाया था तब निकल नहीं पाया।

